ಬಿ. ಟಿ. ಲಕ್ಷ್ಮಣ್ ದತ್ತಿನಿಧಿ ಪ್ರಕಟಣೆ

ಗ್ರಾಮೀಣ ಸಮಾಜ ಸಂಸ್ಕೃತಿ

(ಮಾನವಶಾಸ್ತ್ರೀಯ ಬಿಡಿ ಲೇಖನಗಳು)

ಡಾ. ಕೆ. ಜಿ. ಗುರುಮೂರ್ತಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಬಿ.ಟಿ. ಲಕ್ಷ್ಮಣ್ ದತ್ತಿನಿಧಿ ಪ್ರಕಟಣೆ

ಗ್ರಾಮೀಣ ಸಮಾಜ-ಸಂಸ್ಕೃತಿ

(ಮಾನವ ಶಾಸ್ತ್ರೀಯ ಬಿಡಿ ಲೇಖನಗಳು)

ಡಾ. ಕೆ.ಜಿ. ಗುರುಮೂರ್ತಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦೦೧೮

GRAMINA SAMAJA - SAMSKRUTI

By Dr. K.G. Gurumurthy

Published by : **Kannada Sahitya Parishat**

Pampa Mahakavi Road, Chamarajapet, Bangalore - 560018

Pages : x + 129 Price : 50=00 : **2007**

ಪ್ರಥಮ ಮುದ್ರಣ : ೨೦೦೭

ಪ್ರತಿಗಳು : ೧೦೦೦

ಬೆಲೆ : ಐವತ್ತು ರೂಪಾಯಿಗಳು

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕಳೆದ ತೊಂಬತ್ತೆರಡು ವರ್ಷಗಳಿಂದ ನಾಡು-ನುಡಿ-ಸಂಸ ತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ- ಅಕ್ಷರ- ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಅನಿವಾಸಿ ಭಾರತೀಯರಾದ ಶ್ರೀ ಬಿ.ಟಿ. ಲಕ್ಷ್ಮಣ್ ಅವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದೂವರೆ ಲಕ್ಷ ರೂಗಳ ದತ್ತಿನಿಧಿ ಸ್ಥಾಪಿಸಿದ್ದಾರೆ. ಈ ದತ್ತಿನಿಧಿ ಬಡ್ಡಿಯ ಮೊತ್ತದಲ್ಲಿ ಪರಿಷತ್ತು ಪ್ರತಿವರ್ಷ ಗ್ರಾಮೀಣ ಬದುಕು, ಕೃಷಿ, ಪಶುಪಾಲನೆ, ಸಂಸ ತಿ, ಜನಜೀವನಕ್ಕೆ ಸಂಬಂಧಪಟ್ಟ ಅತ್ಯುತ್ತಮವಾದ ಒಂದು ಕೃತಿಯನ್ನು ಮುದ್ರಣ ಮಾಡುತ್ತಿದೆ. ಪ್ರಸ್ತುತ ೨೦೦೭ನೇ ವರ್ಷದಲ್ಲಿ ಡಾ. ಕೆ.ಜಿ.ಗುರುಮೂರ್ತಿ ಅವರು ಬರೆದಿರುವ 'ಗ್ರಾಮೀಣ ಸಮಾಜ-ಸಂಸ ತಿ' ಎಂಬ ಪುಸ್ತಕವನ್ನು ಮುದ್ರಣ ಮಾಡಲಾಗಿದೆ. ಸಹೃದಯ ಸಾಹಿತ್ಯಾಭಿಮಾನಿಗಳು ಆದರದಿಂದ ಈ ಪುಸ್ತಕವನ್ನು ಓದುತ್ತಾರೆಂದು ಆಶಿಸುತ್ತೇವೆ.

ದತ್ತಿದಾನಿಗಳಾದ ಶ್ರೀ ಬಿ.ಟಿ.ಲಕ್ಷ್ಮಣ್ ಅವರಿಗೂ ಮತ್ತು ಈ ಪುಸ್ತಕವನ್ನು ಬರೆದುಕೊಟ್ಟಿರುವ ಲೇಖಕರಿಗೂ ಹಾಗೂ ಈ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿ ಹೊರ ತಂದಿರುವ ಮುದ್ರಣಾಲಯದವರಿಗೂ ಹಾಗೂ ಈ ಕಾರ್ಯದಲ್ಲಿ ಸಹಕಾರ ನೀಡಿದ ಎಲ್ಲರಿಗೂ ನನ್ನ ಕೃತಜ್ಞತೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಪ್ರಸ್ತಾವನೆ

ಕರ್ನಾಟಕ ವಿಶ್ವವಿದ್ಯಾನಿಲಯದ ನನ್ನ ಸುದೀರ್ಘ ಬೋಧನಾ ಅವಧಿಯಲ್ಲಿ ಕರ್ನಾಟಕ ಭಾರತಿ, ಜನಪದ ಸಾಹಿತ್ಯ ಮತ್ತು ಕೆಲವು ಅಭಿನಂದನಾ ಗ್ರಂಥಗಳಿಗೆ ನಾನು ಬರೆದ ಎಂಟು ಲೇಖನಗಳನ್ನು ಇಲ್ಲಿ ಒಂದೆಡೆ ತರಲಾಗಿದೆ. ಮಾನವಶಾಸ್ತ್ರೀಯ ದೃಷ್ಟಿಯಿಂದ ಬರೆದ ಈ ಲೇಖನಗಳಿಗೆ ಅವಶ್ಯಕವಾದ ಮಾಹಿತಿಯನ್ನು ನಾನು ಸಂಶೋಧನೆ ಮಾಡಿದ ಗ್ರಾಮಗಳಿಂದ ಪಡೆಯಲಾಗಿದೆ.

ಗ್ರಾಮೀಣ ಸಮಾಜ-ಸಂಸ್ಕೃತಿ ಎಂಬ ಮೊದಲ ಲೇಖನದಲ್ಲಿ ಆದಿವಾಸಿ, ಜನಪದ, ರೈತಪದ, ವ್ಯವಸಾಯಗಾರಿ ಮತ್ತು ನಗರ ಸಂಸ್ಕೃತಿಗಳಲ್ಲಿಯ ಭಿನ್ನತೆಗಳನ್ನು ಅವರ ಸಮಾಜ-ಸಂಸ್ಕೃತಿಯನ್ನು ತೆಗೆದುಕೊಂಡು ವಿವರಿಸಲಾಗಿದೆ. ಎರಡನೆಯ ಲೇಖನದಲ್ಲಿ ಗ್ರಾಮ ನಿವಾಸ, ಅದರ ಚರಿತ್ರೆ, ಅಲ್ಲಿಯ ಸಾರ್ವಜನಿಕ ಹಾಗೂ ಸ್ವಂತ ಮಾಲಿಕತ್ವದ ಸ್ಥಳಗಳು, ಅಲ್ಲಿ ವಾಸವಾಗಿರುವವರು ಧಾರ್ಮಿಕ, ಸಾಮಾಜಿಕ ಸ್ಥಾನಮಾನಗಳು, ಘನತೆ-ಗೌರವಗಳು ಮತ್ತು ಪಾತ್ರಗಳು ಮುಂತಾದವುಗಳನ್ನು ಚರ್ಚಿಸಲಾಗಿದೆ. ಜೊತೆಗೆ ಗ್ರಾಮದ ಅಗಸೆ, ಕಣಗಳು, ಮನೇದೊಲಗಳು ಮತ್ತು ಗ್ರಾಮದ ಗಡಿ ಮುಂತಾದ ಧಾರ್ಮಿಕ ವಲಯಗಳ ಅಥವಾ ಎಲ್ಲೆಗಳ ಬಗ್ಗೆ, ಇಂದು ಅಲ್ಲಿ ಬಂದಿರುವ ಬದಲಾವಣೆಗಳ ಹಾಗೂ ಹಿನ್ನೆಲೆಯ ಬಗ್ಗೆ ಚರ್ಚಿಸಲಾಗಿದೆ. ಮೂರನೆಯ ಲೇಖನದಲ್ಲಿ ಗ್ರಾಮೀಣ ಸಮಾಜದಲ್ಲಿ ಅಭಿವೃದ್ಧಿ ತರಲು ನಡೆದ ಪ್ರಯತ್ನಗಳ ಬಗ್ಗೆ ಮತ್ತು ಲಭ್ಯವಿರುವ ಸಾಹಿತ್ಯದ ಬಗ್ಗೆ, ಅದರ ನ್ಯೂನ್ಯತೆಗಳ ಬಗ್ಗೆ ಚರ್ಚಿಸಲಾಗಿದೆ. ಅನ್ಯ ಸಂಸ್ಕೃತಿಗೆ ಸೇರಿದ ಅಭಿವೃದ್ಧಿ ಸಾಹಿತ್ಯವನ್ನು ಕುರುಡಾಗಿ ಒಪ್ಪಿ ಪ್ರಚಾರಕ್ಕೆ ಅಳವಡಿಸಿಕೊಂಡಿರುವುದು ಹೇಗೆ ಅಪಾರ್ಥಕ್ಕೆ, ಅನರ್ಥಕ್ಕೆ ಎಡೆ ಮಾಡಿದೆ ಎಂದು ವಿವರಿಸಲಾಗಿದೆ.

ನಾಲ್ಕು, ಐದು ಹಾಗೂ ಆರನೆಯ ಲೇಖನದಲ್ಲಿ ಗ್ರಾಮೀಣ ಅಬಲ ಗುಂಪುಗಳಾದ ಮಕ್ಕಳು, ಮಹಿಳೆಯರು ಮತ್ತು ವೃದ್ಧರ ಸಮಸ್ಯೆಗಳನ್ನು ವಿವರಿಸಲಾಗಿದೆ. ಮಕ್ಕಳು ಒಂದು ದೇಶದ ಭವಿಷ್ಯ ಮತ್ತು ಆಸ್ತಿ. ಅವರ ಆಹಾರ, ನೈರ್ಮಲ್ಯ, ಆರೋಗ್ಯ, ಶಿಕ್ಷಣ, ರಕ್ಷಣೆ ಎಷ್ಟು ಮುಖ್ಯ ಎಂದು ತಜ್ಞರು ಮೇಲಿಂದ ಮೇಲೆ, ಒತ್ತಾಯ ಪೂರಕವಾಗಿ ಹೇಳಿದ್ದರೂ, ಸರಕಾರ ಸಾವಿರಾರು ಕೋಟಿ ರೂಪಾಯಿಗಳನ್ನು ಈ ಮಕ್ಕಳ ಕಲ್ಯಾಣಕ್ಕೆ ಖರ್ಚು ಮಾಡಿದ್ದರೂ ಮತ್ತು ಮಾಡುತ್ತಿದ್ದರೂ, ಇವು ಯಾವೂ ಫಲಾನುಭವಿಗಳಿಗೆ ಸರಿಯಾಗಿ ಮುಟ್ಟುತ್ತಿಲ್ಲ. ಹೀಗಾಗಿ ಇಂದು ಲಕ್ಷಾಂತರ ಮಕ್ಕಳು, ವಿಶೇಷವಾಗಿ ಗ್ರಾಮೀಣ

ಮಕ್ಕಳು, ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸರಕಾರದಲ್ಲಿ ಆಹಾರದ ದಾಸ್ತಾನು ಕೊಳೆಯುತ್ತಿದ್ದರೂ, ಸರಕಾರ ಈ ಮಕ್ಕಳ ಕಲ್ಯಾಣ ಕೆಲಸಕ್ಕೆ ಹಣ ನೀಡಿದ್ದರೂ ಸೂಕ್ತ ವಿತರಣಾ ಸೂತ್ರಗಳಿಲ್ಲದೆ, ನಿಷ್ಠಾವಂತ ಕಾರ್ಯಕರ್ತರಿಲ್ಲದೆ ಇವು ವಿತರಣೆಯಾಗದೆ ಮಕ್ಕಳು ಹಸಿವು, ಅನ್ನಾಂಗಗಳ ಕೊರತೆ, ಅನಕ್ಷರತೆ ಮುಂತಾದವುಗಳಿಂದ ನರಳುತ್ತಿದ್ದಾರೆ. ಹೀಗೆ ರೋಗಗಳ ತವರಾಗಿರುವ ಈ ಮಕ್ಕಳಲ್ಲಿ ಅನೇಕರು ಜೀವನಪರ್ಯಂತ ಅಂಗವಿಕಲರಾಗಿ ಬದುಕುವಂತಾಗಿದೆ. ಪರಿಸ್ಥಿತಿ ಹೀಗೆ ಮುಂದುವರೆದರೆ ದೇಶ ಅಶಕ್ತರ, ಅರೆಬುದ್ಧಿವಂತರ ತವರಾಗುತ್ತದೆ. ಅನಕ್ಷರಸ್ಥರಾದ ಮತ್ತು ಬಡವರಾದ ತಂದೆತಾಯಿಗಳ ಮಕ್ಕಳನ್ನು ಸರಕಾರ ಸರಿಯಾಗಿ ಪಾಲನೆ ಪೋಷಣೆ ಮಾಡದಿದ್ದರೆ ಹೇಗೆ ಎಲ್ಲಾ ಅಭಿವೃದ್ಧಿಕಾರ್ಯಗಳು ಕುಂಠಿತವಾಗುತ್ತವೆ ಎಂದು ವಿವರಿಸಲಾಗಿದೆ.

ಗ್ರಾಮೀಣ ಮಹಿಳೆಯರದೂ ಇದೇ ಪಾಡಾಗಿದೆ. ಲಭ್ಯವಿರುವ ನೀರಾವರಿ, ಶಿಕ್ಷಣ, ಸಾರಿಗೆ ಸೌಲಭ್ಯಗಳಿಂದ ಗ್ರಾಮೀಣ ಪ್ರದೇಶದಲ್ಲಿ ಅಲ್ಪಸ್ವಲ್ಪ ಪ್ರಗತಿಯಾಗಿದ್ದರೂ ಇದರಿಂದ ಮಹಿಳೆಯರಿಗೆ ಯಾವ ಪ್ರಯೋಜನವೂ ಆಗಿಲ್ಲ. ಕಳ್ಳುಬಳ್ಳಿಯಿಂದ ಹೊರಗೆ ಮದುವೆಯಾಗುವುದರಿಂದ, ಸಂಯುಕ್ತ ಕುಟುಂಬಗಳು ಒಡೆದು ಹೋಗಿರುವುದರಿಂದ ಇವರ ಮೇಲೆ ಹೆಚ್ಚು ಭಾರ, ಜವಾಬ್ದಾರಿ ಬಿದ್ದಿದೆ. ಆಧುನಿಕ ವ್ಯವಸಾಯ ಪದ್ಧತಿಯನ್ನು ಅಳವಡಿಸಿಕೊಂಡಿರುವುದರಿಂದಾಗಿ ಕುಟುಂಬದ ಗಂಡಸರು ಬಿತ್ತನೆ ಬೀಜ, ಗೊಬ್ಬರ, ಕ್ರಿಮಿನಾಶಕ ತರಲು ಮತ್ತು ತಾವು ಬೆಳೆದ ದವಸಧಾನ್ಯ, ಹಣ್ಣು-ಕಾಯಿ ಮಾರಲು, ಕಛೇರಿ, ಬ್ಯಾಂಕ್, ಕೋರ್ಟ್, ಪೋಲಿಸ್ ಸ್ಟೇಷನ್ ಹೀಗೆ ಏನಾದರೊಂದು ಕೆಲಸದ ಮೇಲೆ ಸದಾ ಊರಿಂದ ಹೊರಗೆ ಇರುವುದರಿಂದ ಅವರ ಮಹಿಳೆಯರಿಗೆ ಗೃಹಾಂತರ ಕೆಲಸದ ಜೊತೆಗೆ ಹೊಲಮನೆಯ, ದನಕರುಗಳ ಜವಾಬ್ದಾರಿ ಹೆಚ್ಚಾಗಿದೆ. ಜೊತೆಗೆ ಗಂಡುಹೆಣ್ಣು ಎಲ್ಲಾ ಮಕ್ಕಳು ಶಾಲೆಗೆ ಹೋಗುವುದರಿಂದ ಅವರಿಂದ ಯಾವ ಬಗೆಯ ನೆರವು ಸಿಗದಾಗಿದೆ. ಈ ಎಲ್ಲಾ ಜವಾಬ್ದಾರಿಯಿಂದಾಗಿ ಹಬ್ಬ ಹರಿದಿನಗಳಿಗೆ ತೌರೂರಿಗೆ ಹೋಗಿ ನಾಲ್ಕಾರು ದಿನ ವಿರಾಮ ಪಡೆಯುವ ಅವಕಾಶಗಳೂ ಮಹಿಳೆಯರಿಗೆ ಇಲ್ಲವಾಗಿವೆ. ಸರಕಾರದ ಅನಾದರಣೆಯಿಂದಾಗಿ ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಲ್ಲಿ ವೈದ್ಯರು, ತಕ್ಕಷ್ಟು ಔಷಧಗಳು ಮುಂತಾದ ಸೌಲಭ್ಯಗಳಿಲ್ಲ. ಪೌಷ್ಠಿಕತೆ ಇಲ್ಲದ ಕಳಪೆ ಆಹಾರವನ್ನು ಹೊತ್ತುಗೊತ್ತು ತಪ್ಪಿ, ಅದರಲ್ಲೂ ಅರೆಹೊಟ್ಟೆ ತಿಂದು ವಿರಾಮವಿಲ್ಲದೆ ದುಡಿದು ಅವರು ದೈಹಿಕವಾಗಿ ಮತ್ತು ಮಾನಸಿಕವಾಗಿ ರೋಗಿಗಳಾಗಿದ್ದಾರೆ. ಹೀಗಾಗಿ ಹೆರಿಗೆಯಂತಹ ದೊಡ್ಡ ತೊಂದರೆ ಇರಲಿ ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಂದ ರಕ್ಷಿಸಿಕೊಳ್ಳದಾಗಿದ್ದಾರೆ, ಬೇಗ ಮುಪ್ಪಿಗೀಡಾಗುತ್ತಾರೆ ಮತ್ತು ಸಾಯುತ್ತಾರೆ.

ಗ್ರಾಮೀಣ ವೃದ್ಧರ ಪರಿಸ್ಥಿತಿಯೂ ಮಹಿಳೆಯರಿಗಿಂತ ಉತ್ತಮವಾಗಿಲ್ಲ. ಅದರಲ್ಲೂ ವೃದ್ಧ ಮಹಿಳೆಯರ ಸ್ಥಿತಿ ಶೋಚನೀಯ. ಹಿಂದೆ ಸಾಂಕ್ರಾಮಿಕ ರೋಗಗಳ ಜೊತೆಗೆ ಉತ್ತಮವಾದ ಹಾಗೂ ಸಾಕಷ್ಟು ಅನ್ನ ನೀರು ಇರುತ್ತಿರಲಿಲ್ಲವಾದ್ದರಿಂದ ಜನ ಹೆಚ್ಚು ವರ್ಷ ಬದುಕುತ್ತಿರಲಿಲ್ಲ. ಐವತ್ತು, ಅರವತ್ತು ವರ್ಷಗಳು ಬದುಕಿದವರೇ ವಿರಳ. ಇಂದು ಸುಧಾರಿಸಿದ ವೈದ್ಯಕೀಯ ಸವಲತ್ತುಗಳಿಂದಾಗಿ ವೃದ್ಧರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಜೊತೆಜೊತೆಗೆ ಅವರ ಸಮಸ್ಯೆಗಳೂ ಹೆಚ್ಚಾಗುತ್ತಿವೆ. ಶೈಕ್ಷಣಿಕ ದೃಷ್ಟಿಯಿಂದ ವೃದ್ಧರನ್ನು ಅವರ ಜೀವನ ವೆಚ್ಚಕ್ಕೆ ಅನುಕೂಲತೆ ಮತ್ತು ನೋಡಿಕೊಳ್ಳುವವರು ಇದ್ದವರು, ಕೇವಲ ಆರ್ಥಿಕ ಅನುಕೂಲತೆ ಅಥವಾ ನೋಡಿಕೊಳ್ಳುವವರನ್ನು ಮಾತ್ರ ಹೊಂದಿದವರು ಮತ್ತು ಈ ಎರಡೂ ಸೌಲಭ್ಯ ಇಲ್ಲದವರು ಎಂದು ನಾಲ್ಕು ಬಗೆ ಮಾಡುತ್ತಾರೆ. ಹಿಂದೆ ಅವಿಭಕ್ತ ಕುಟುಂಬಗಳು ಮತ್ತು ಕಳ್ಳುಬಳ್ಳಿ ಸಂಬಂಧಗಳು ಬಲವಾಗಿದ್ದಾಗ ಮಕ್ಕಳು ನೌಕರಿ ಮಾಡಲು ಮನೆಯಿಂದ ಹೊರಗೆ ಹೋಗುವ ಅವಶ್ಯಕತೆ ಇಲ್ಲದಿದ್ದಾಗ ವೃದ್ಧರಿಗೆ ಈ ಸಮಸ್ಯೆಗಳಿರಲಿಲ್ಲ. ಇತ್ತೀಚೆಗೆ ವೃದ್ಧರಿಗೆ ಅನೇಕ ತೊಂದರೆಗಳು ಪ್ರಾರಂಭವಾಗಿವೆ.

ಹಿಂದೆ ಹಿರಿಯರಿಗೆ ತಾವು ಅನಾಥರು, ಅನುಪಯುಕ್ತರು ಎಂಬ ಭಾವನೆ ಬರುತ್ತಿರಲಿಲ್ಲ. ಅವರು ಗಂಡಸರು, ಹೆಂಗಸರು ಯಾರೇ ಇರಲಿ ತಮ್ಮ ತಮ್ಮ ಕುಲಕಸುಬಿನಲ್ಲಿ ಪರಿಣಿತರಿರುತ್ತಿದ್ದರು. ವಯಸ್ಸಾದಂತೆ ಭಾರವಾದ ಕೆಲಸ ಬಿಟ್ಟು ಅದರಲ್ಲೇ ಏನಾದರೂ ಕೆಲಸ ಹಾಗೂ ಪಾತ್ರವಿರುತ್ತಿದ್ದವು. ವೃದ್ಧರಲ್ಲಿ ಕೆಲವರು ಪಶುಗಳ ಅಥವಾ ಮಾನವರ ನಾಟಿ ವೈದ್ಯ ಮಾಡುತ್ತಿದ್ದರು. ಜಾನಪದ ಕಲೆಗಳಾದ ಹಾಡುವುದು, ಕುಣಿಯುವುದು, ವಾದ್ಯ ನುಡಿಸುವುದು ಮಾಡುತ್ತಿದ್ದರು. ನ್ಯಾಯ ಪಂಚಾಯಿತಿ ಮಾಡುವುದು, ಹೆಣ್ಣು-ಗಂಡು ಹುಡುಕಿ ಮದುವೆ ಕೂಡಿಸುವುದು, ಪೂಜೆ-ಭಜನೆ ಮಾಡುತ್ತಿದ್ದರು. ಪುರುಷರು ವ್ಯವಸಾಯ ಕೆಲಸದಲ್ಲಿ ಬೇಕಾದ ಹಗ್ಗ, ದಂಡೆ, ಬರಲು, ಮಿಣಿ ಮಾಡಿದರೆ, ಸ್ತ್ರೀಯರು ಬುಟ್ಟಿ, ನೆಲವು, ಚಾಪೆ, ಕೌದಿ, ಕುಲಾವಿ ಹೆಣೆಯುತ್ತಿದ್ದರು. ಕೆಲವರು ಕಾಳುಕಡಿ ಹಸನು ಮಾಡುವುದು, ಹಪ್ಪಳ, ಉಪ್ಪಿನಕಾಯಿ, ಸಂಡಿಗೆ ಹಾಕುವುದು, ಹೀಗೆ ಏನಾದರೊಂದು ನೆರವು ನೀಡಲು ಅವರಿಗೆ ಅವಕಾಶಗಳಿದ್ದವು. ಇನ್ನೂ ಕೆಲವರು ಮಕ್ಕಳು ಮೊಮ್ಮಕ್ಕಳ ಪಾಲನೆ ಪೋಷಣೆ ಮಾಡುತ್ತಿದ್ದರು.

ಇಂದು ಪರಿಸ್ಥಿತಿ ಪೂರ್ಣವಾಗಿ ಬದಲಾಗಿದೆ. ವಿದ್ಯುಚ್ಛಕ್ತಿ ಸೌಕರ್ಯ ಬಂದಿರುವುದರಿಂದ ಜನಪದ ಕಲೆಗಳು ಇಲ್ಲವಾಗಿವೆ ಹಾಗೂ ಆಹಾರ ಪದಾರ್ಥಗಳನ್ನು, ಹಾಸಿಗೆ ಹೊದಿಕೆಗಳನ್ನು ಪೇಟೆಯಿಂದ ಕೊಂಡುತರುತ್ತಾರೆ. ಕುಟುಂಬ ನಿಯಂತ್ರಣದಿಂದಾಗಿ ಮನೆಯಲ್ಲಿ ಒಂದೆರಡು ಮಕ್ಕಳಿರುತ್ತವೆ ಮತ್ತು ಅವರೂ ಶಾಲೆಗೆ ಹೋಗುತ್ತಾರೆ. ಇಂದಿನ ರೈತರು ಪೂರ್ವದ ರೈತರಂತೆ ನವಧಾನ್ಯಗಳನ್ನು ಬೆಳೆಯದೆ ಒಂದೇ ಒಂದು ಬೆಳೆ ಬೆಳೆಯುತ್ತಾರೆ.

ಇದರಿಂದ ರೈತ ಮಹಿಳೆಯರಿಗೆ ಹೆಚ್ಚಿನ ಹೊಲಕಣದ ಕೆಲಸದಿಂದ ಮುಕ್ತಿ ಸಿಕ್ಕಂತಾಗಿದೆ ಮತ್ತು ತಮ್ಮ ಮಕ್ಕಳನ್ನು ತಾವೇ ನೋಡಿಕೊಳ್ಳಲು ವೇಳೆ ಸಿಗುವಂತಾಗಿದೆ. ವೈದ್ಯೋಪಚಾರಕ್ಕೆ ಆಸ್ಪತ್ರೆಗಳು ಮತ್ತು ವೈದ್ಯರಿದ್ದಾರೆ. ವೃದ್ಧ ಮಹಿಳೆಯರಿಗೆ ಸಮಯ ಕಳೆಯಲು ಸೂಕ್ತ ಹಾಗೂ ಸಾಕಷ್ಟು ಅವಕಾಶಗಳಿಲ್ಲವಾಗಿದೆ, ಮಾಡಲು ಸಾಕಷ್ಟು ಕೆಲಸವಿಲ್ಲದಾಗಿದೆ. ಹೀಗಾಗಿ ವೃದ್ಧರಲ್ಲಿ ತಾವು ಅನುಪಯುಕ್ತರು ಎಂಬ ಭಾವನೆ ಬಂದಿದೆ. ಜೊತೆಗೆ ಅವಿಭಕ್ತ ಕುಟುಂಬಗಳು ಒಡೆದುಹೋಗಿರುವುದರಿಂದ ವೃದ್ಧ ತಂದೆತಾಯಿಗಳು ತಾವು ಯಾವ ಮಕ್ಕಳ ಜೊತೆಗೆ ಇರುವುದು, ಅವರು ತಮ್ಮನ್ನು ಸರಿಯಾಗಿ ನೋಡಿಕೊಳ್ಳುವರೆ ಎಂಬ ಭಯ ಆವರಿಸುತ್ತಿದೆ.

ಎಂಟನೆಯ ಹಾಗೂ ಕೊನೆಯ ಲೇಖನದಲ್ಲಿ ಗ್ರಾಮೀಣ ಶ್ರಮಿಕರ ಬಗ್ಗೆ ಚರ್ಚಿಸಲಾಗಿದೆ. ಹಿಂದೆ ಗ್ರಾಮೀಣ ಆರ್ಥಿಕತೆ ಎಂದರೆ ಸಾಂಪ್ರದಾಯಿಕವಾಗಿ ಬಂದ ವ್ಯವಸಾಯದ ಕೆಲಸವಾಗಿತ್ತು. ಎಲ್ಲರೂ ಆಹಾರ ಧಾನ್ಯವನ್ನು ಬೆಳೆಯುತ್ತಿದ್ದರು. ಮೇಲಾಗಿ ಭೂಮಾಲಿಕರು ಮತ್ತು ವ್ಯವಸಾಯ ಕೆಲಸದಲ್ಲಿ ಅವರಿಗೆ ನೆರವಾಗಲು ಮನೆ ಮಕ್ಕಳು, ಆಯದ ಮಕ್ಕಳು, ಆಳು ಮಕ್ಕಳು, ಮ್ಹುಯ್ಯಿ ಆಳುಗಳು ಇರುತ್ತಿದ್ದರು. ಇತ್ತೀಚೆಗೆ ನೀರಾವರಿ ಕಾಲುವೆಗಳು ಬಂದಿರುವುದರಿಂದ, ವಾಣಿಜ್ಯ ಬೆಳೆ ಬೆಳೆಯುವುದರಿಂದಾಗಿ. ಕೆಲವರಿಗೆ ವ್ಯವಸಾಯ ವೃತ್ತಿಯಿಂದ ಹೊರಗೆ ನಗರದಲ್ಲಿ ಕಾರ್ಖಾನೆ ಹಾಗೂ ಕಛೇರಿಗಳಲ್ಲಿ ದುಡಿದು ತಮ್ಮ ಅನ್ನ ಗಳಿಸಲು ಅವಕಾಶವಾಗಿದೆ. ಹೀಗಾಗಿ ಹಿಂದೆ ಜೀವನ ಮಾಡಲು ತಮ್ಮ ಜಾತಿವೃತ್ತಿಯನ್ನು , ಅದರ ಪರಿಣತೆಯನ್ನು ಆಸ್ತಿಯಾಗಿ, ಮಾರ್ಗವಾಗಿ ಹೊಂದಿದ್ದ ಭೂರಹಿತರು, ಕುಶಲಕಲಾ ಹಾಗೂ ಸೇವಾ ಜಾತಿಯವರು ಇಂದು ಭೂ ಮಾಲಿಕರೊಡನಿದ್ದ ತಮ್ಮ ಸಾಂಪ್ರದಾಯಕ ಸಂಬಂಧಗಳಿಂದ ಬಿಡುಗಡೆ ಹೊಂದ ತೊಡಗಿದ್ದಾರೆ. ಆದರೂ ಕೆಲವರು ತಾವು ಆಯದ ಕುಳಗಳೊಡನೆ ಹೊಂದಿದ ಸಾಂಪ್ರದಾಯಿಕವಾಗಿ ಬಂದ ಧಣಿ-ಆಳು, ಆಶ್ರಯದಾತ-ಆಶ್ರಿತ ಬಗೆಯ ಸಂಬಂಧ ಹೊಂದಿದ್ದಾರೆ.

ವ್ಯವಸಾಯದಿಂದ ಹೊರಗೆ ಯಾವ ಬಗೆಯ ಪರಿಣತಿ ಹೊಂದದ ಕೆಲವರಿಗೆ ಈ ಹೊಸ ಸಂಬಂಧಗಳಿಗೆ ಹೊಂದಿಕೊಳ್ಳುವುದು ತೊಂದರೆಯಾಗಿದೆ. ಆದರೂ ಕೆಲವರು ಸ್ವತಂತ್ರರಾಗಿ, ನಗರಗಳಿಗೆ ಹೋಗಿ ಲಾಭದಾಯಕವಾದ ವೃತ್ತಿಗಳಲ್ಲಿ ತೊಡಗಿ ತಮ್ಮ ಜೀವನ ಮಟ್ಟವನ್ನು ಉತ್ತಮ ಪಡಿಸಿಕೊಂಡಿದ್ದಾರೆ. ಕೆಲವೆಡೆ ಈ ಬದಲಾದ ಪರಿಸ್ಥಿತಿಯಿಂದಾಗಿ ಶ್ರಮಿಕರು ಮಾತ್ರವಲ್ಲ ಭೂಮಾಲಿಕರೂ ಸಮಸ್ಯೆಗೊಳಗಾಗಿದ್ದಾರೆ. ಹಿಂದೆ ಭಾರತದಲ್ಲಿ ಸಾಂಪ್ರದಾಯಿಕವಾಗಿ ಬಂದ ಜೀವನ ಸಂಪನ್ಮೂಲಗಳಾದ ಭೂಮಿ, ಕುಶಲಕಲಾ ವೃತ್ತಿಗಳಿಗೆ ಸಂಬಂಧಿಸಿದ ಜ್ಞಾನ ಕೆಲವೇ ಕೆಲವು ಅದರಲ್ಲೂ ಮೇಲಿನ ಜಾತಿಯವರ ಸೊತ್ತಾಗಿದ್ದವು; ಈ ಸಂಪನ್ಮೂಲಗಳ ಜೊತೆಗೆ ಇಂದು ಆಧುನಿಕ ಶಿಕ್ಷಣ, ಅದರಿಂದ ಸಿಗುವ ಸರಕಾರದ

ನೌಕರಿಗಳು, ಸವಲತ್ತುಗಳು ಕೂಡ ಇವರ ಸೊತ್ತಾಗಿವೆ. ಹೀಗಾಗಿ ಇತರರು ಏನಿದ್ದರೂ ಅವರ ಆಶ್ರಯದಾತರಾಗಿ ದುಡಿದು ಜೀವನ ಮಾಡಬೇಕಾಗಿದೆ.

ಭಾರತ ಸ್ವತಂತ್ರವಾದ ನಂತರ, ತಂದುಕೊಂಡ ಸಂವಿಧಾನ ಸಾಮಾಜಿಕ ನ್ಯಾಯದಂತೆ ಮತ್ತು ಕಲ್ಯಾಣ ರಾಜ್ಯದ ತತ್ವದಂತೆ, ಸಂಪನ್ಮೂಲಗಳು ಎಲ್ಲರಲ್ಲೂ ಸಮನಾಗಿ ಹಂಚಿಕೆಯಾಗುತ್ತಿವೆ. ಹೀಗಾಗಿ ಭೂಮಿಯ ಒಡೆತನದ ಮೇಲೆ ಮಿತಿ ಬಂದಿತು, ಉಳುವವನೇ ಒಡೆಯ ಎಂದು ಸಾರುವ ಕಾಯಿದೆ ಬಂದಿದೆ, ಜೀತ ಪದ್ಧತಿ ಹಾಗೂ ಗ್ರಾಮೀಣ ಋಣ ಭಾರದ ಪದ್ಧತಿಗಳು ರದ್ದಾಗಿವೆ. ಎಲ್ಲರಿಗೂ ಶಿಕ್ಷಣಕ್ಕೆ ಹಾಗೂ ದುಡಿಯಲು ಸಮಾನ ಹಕ್ಕು-ಅವಕಾಶಗಳು ಬಂದಿವೆ. ದಿನಗೂಲಿ ನಿಗದಿಯಾಗಿದೆ, ಕೂಲಿಕಾರರ ಮೇಲೆ ದಬ್ಬಾಳಿಕೆಗಳು ನಿಂತಿವೆ. ಹೀಗಾಗಿ ಇಂದು ಭೂ ಮಾಲಿಕರೂ ಅನೇಕ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಕೆಲವರು ಹೊಲಗಳನ್ನು ಉಳಿಸಿಕೊಳ್ಳಲು, ತಮ್ಮ ಮಕ್ಕಳನ್ನು ಶಾಲೆ ಬಿಡಿಸಬೇಕಾಯಿತು. ಭೂ ಹಿಡುವಳಿಯ ಮೇಲೆ ನಿಯಂತ್ರಣ ತಂದಿದ್ದರಿಂದ ಹೆಣ್ಣು ಮಕ್ಕಳಿಗೂ ಆಸ್ತಿಯಲ್ಲಿ ಸಮಾನ ಹಕ್ಕು ಬಂದಿರುವುದರಿಂದ ಸಂಯುಕ್ತ ಕುಟುಂಬಗಳು, ದೊಡ್ಡ ಹಿಡುವಳಿಗಳು ಒಡೆದುಹೋಗಿವೆ. ಗ್ರಾಮೀಣ ಪ್ರದೇಶದಲ್ಲಿ ಬಂದಿರುವ ಇಂತಹ ಬದಲಾವಣೆಗಳನ್ನು, ಸಮಸ್ಯೆಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಈ ಲೇಖನ ಸಂಗ್ರಹವನ್ನು ಹೊರತರುವಲ್ಲಿ ಅನೇಕರು ನೆರವಾಗಿದ್ದಾರೆ. ಮೊದಲನೆಯದಾಗಿ ಈ ಲೇಖನಗಳನ್ನು ಮರುಮುದ್ರಣ ಮಾಡಿಕೊಳ್ಳಲು ಕರ್ನಾಟಕ ವಿಶ್ವವಿದ್ಯಾಲಯದವರು ಪರವಾನಿಗೆ ನೀಡಿದ್ದಾರೆ. ವರ್ಷಗಳ ಹಿಂದೆ ಬರೆದ ಈ ಲೇಖನಗಳನ್ನು ಪರಿಷ್ಕರಿಸಿದ ನಂತರ ದಾವಣಗೆರೆಯಲ್ಲಿ ಪ್ರಿಂ.ಎಸ್.ಟಿ.ಶಿವಪ್ಪನವರು ಓದಿ ಸೂಕ್ತ ಸೂಚನೆ, ಸಲಹೆ ನೀಡಿದ್ದಾರೆ, ಕರಡು ನೋಡಿದ್ದಾರೆ. ಶ್ರೀ ಬಿ.ಎ.ಕೊಟ್ರೇಶ್, ಡ್ರೀಮ್‌ಲ್ಯಾಂಡ್ ಟೆಕ್ನಾಲಜೀಸ್ ಇವರು ಅಕ್ಷರ ಜೋಡಣೆ ಮಾಡಿದ್ದಾರೆ. ಈ ಪುಸ್ತಕವನ್ನು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು., ಇವರು ತಮ್ಮಲ್ಲಿ ಸ್ಥಾಪಿತವಾಗಿರುವ ಅನಿವಾಸಿ ಭಾರತೀಯ ಶ್ರೀ ಬಿ.ಟಿ.ಲಕ್ಷ್ಮಣ ದತ್ತಿನಿಧಿಯಿಂದ ಪ್ರಕಟಿಸಲು ಮುಂದಾಗಿದ್ದಾರೆ. ಇವರೆಲ್ಲರಿಗೂ ಅನಂತ ವಂದನೆಗಳು.

೦೧.೦೫.೨೦೦೭

ದಾವಣಗೆರೆ

ಡಾ.ಕೆ.ಜಿ.ಗುರುಮೂರ್ತಿ

ಪರಿವಿಡಿ

ಪ್ರಸ್ತಾವನೆ

[illegible]

[illegible]

ಲೇಖನ-೧

ಗ್ರಾಮೀಣ ಸಮಾಜ-ಸಂಸ್ಕೃತಿ

ಇತರೆ ಸಾಮಾಜಿಕ ಶಾಸ್ತ್ರಗಳು ಮಾನವನ ವಿವಿಧ ಚಟುವಟಿಕೆಗಳನ್ನು ಅಭ್ಯಾಸ ಮಾಡಿದರೆ ಮಾನವಶಾಸ್ತ್ರವು ಮಾನವನನ್ನೇ ತನ್ನ ಅಭ್ಯಾಸವಸ್ತುವಾಗಿ ಹೊಂದಿದೆ. ಈ ಮಾನವ ಚರಿತ್ರೆಯ ಯಾವುದೇ ಕಾಲಕ್ಕೆ ಮತ್ತು ಪ್ರಪಂಚದ ಯಾವುದೇ ಪ್ರದೇಶಕ್ಕೆ ಸೇರಿದವನಿರಬಹುದು. ಇಂತಹ ವಿಶಾಲವಾದ ಅಭ್ಯಾಸ ವ್ಯಾಪ್ತಿಯುಳ್ಳ ಮಾನವಶಾಸ್ತ್ರವು ಒಂದು ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸ ಹೊಂದಿದೆ. ಈ ಸುದೀರ್ಘ ಅಭ್ಯಾಸ ಅವಧಿಯಲ್ಲಿ ಅದು ಅನೇಕ ಬಗೆಯ ಸಮಾಜ-ಸಂಸ್ಕೃತಿಗಳನ್ನು ಅಭ್ಯಾಸ ಮಾಡಿದೆ. ಇವುಗಳಲ್ಲಿ ಜಾನಪದ, ಆದಿವಾಸಿ, ರೈತ, ಗ್ರಾಮೀಣ, ನಗರ ಹೀಗೆ ಎಲ್ಲಾ ಬಗೆಯ ಸಮಾಜಗಳು ಸೇರಿವೆ. ವಿಶೇಷವಾದ ತಮ್ಮ ಅಭ್ಯಾಸ ಕ್ರಮ, ಸಾಧನ-ಸಲಕರಣೆಗಳನ್ನು ಬಳಸಿ ಅತ್ಯಂತ ಉತ್ತಮವಾಗಿ ಅಭ್ಯಾಸ ಮಾಡಿ ಅವುಗಳನ್ನು ಅರ್ಥಮಾಡಿಕೊಳ್ಳಲು ಸಿದ್ಧವಾಗಿದ್ದಾರೆ. ಇದರಿಂದ ಇಂದು ಆ ಸಮಾಜಗಳ ಹಿನ್ನೆಲೆ, ರಚನೆ, ಕಾರ್ಯವಿಧಾನ ಮುಂತಾದವುಗಳನ್ನು ಅರ್ಥಮಾಡಿಕೊಳ್ಳಲು, ಅವುಗಳಲ್ಲಿ ಬಂದಿರುವ ಬದಲಾವಣೆಗಳನ್ನು, ಸಮಸ್ಯೆಗಳನ್ನು ಅಭ್ಯಾಸಮಾಡಲು, ಅವುಗಳಲ್ಲಿ ಅಭಿವೃದ್ಧಿ ತರಲು ನೆರವಾಗಿದೆ.

೧೮ನೇ ಶತಮಾನದ ಕೊನೆಯ ಭಾಗದಲ್ಲಿ, ವಸಾಹತು ಆಡಳಿತದಲ್ಲಿ ನೆರವಾಗಲೆಂದು ಮಾನವಶಾಸ್ತ್ರವು ಹುಟ್ಟಿ ಬಂದಿತು. ಮೊದಲಿಗೆ ಕುಲಚಿತ್ರಣ, ನಂತರ ಕುಲವಿವರಣಾ ಶಾಸ್ತ್ರವಾಗಿ ಪ್ರಾರಂಭವಾದ ಈ ಅಭ್ಯಾಸಕ್ರಮ ಮುಂದೆ ತನ್ನದೆ ಆದ ಅಭ್ಯಾಸ ವಿಧಿವಿಧಾನಗಳನ್ನು, ಮಾರ್ಗಗಳನ್ನು ರೂಪಿಸಿಕೊಂಡು ಶತಮಾನದ ಅಂತ್ಯದ ವೇಳೆಗೆ ಒಂದು ಶೈಕ್ಷಣಿಕ ಮತ್ತು ಸಂಶೋಧನಾ ಶಾಸ್ತ್ರವಾಗಿ ಸ್ಥಾಪಿತವಾಯಿತು. ಮೊದಲಿಗೆ ಕೇವಲ ಯುರೋಪಿನ ಸಮಾಜ-ಸಂಸ್ಕೃತಿಯ ಅಭ್ಯಾಸಕ್ಕೆ ಸೀಮಿತವಾಗಿದ್ದ ಈ ಶಾಸ್ತ್ರ ವಸಾಹತು ಆಡಳಿತ ಪ್ರಾರಂಭವಾಗುತ್ತಿದ್ದಂತೆ ಅಲ್ಲಿಗೂ ವ್ಯಾಪಿಸಿತು. ಕತ್ತಿ ಬಂದೂಕುಗಳ ಬಳಕೆಯಿಂದ ಗೆದ್ದ ಈ ಅನ್ಯ ಸಂಸ್ಕೃತಿಗಳಿಗೆ ಸೇರಿದ ವಸಾಹತು ನಾಡುಗಳನ್ನು ಅಲ್ಲಿಯವರೆಗೆ ಬಲಪ್ರಯೋಗದಿಂದ ಆಳುತ್ತಿದ್ದರು. ಹೀಗಾಗಿ ಅವರಿಗೆ ಹೆಚ್ಚಿನ ಖರ್ಚು, ಶ್ರಮ ವ್ಯಯವಾಗುವುದರ ಜೊತೆಗೆ ಹೆಚ್ಚಿನ ಪ್ರಾಣ ಹಾನಿಯೂ ಆಗುತ್ತಿದ್ದಿತು. ಈ ಸಮಾಜ-ಸಂಸ್ಕೃತಿಗಳನ್ನು ಸೂಕ್ತವಾಗಿ ಅರ್ಥ ಮಾಡಿಕೊಂಡು ಅವರನ್ನು ಸಾಂಸ್ಕೃತಿಕವಾಗಿ ಆಳುವ ಒಂದು ಪ್ರಯತ್ನಕ್ಕೆ ಮಾನವಶಾಸ್ತ್ರಜ್ಞರು ನೆರವಾದರು.

ಪಾಶ್ಚಿಮಾತ್ಯ ವಸಾಹತುಗಳು ವಿಶೇಷವಾಗಿ ಏಷ್ಯಾ ಮತ್ತು ಆಫ್ರಿಕಾ ಖಂಡಗಳಲ್ಲಿದ್ದು ಇಲ್ಲಿಯ ಹೆಚ್ಚಿನ ನಿವಾಸಿಗಳು ಆದಿವಾಸಿಗಳು, ಜಾನಪದ ಮತ್ತು ಗ್ರಾಮೀಣ ಸಂಸ್ಕೃತಿಗೆ ಸೇರಿದವರಿದ್ದರು. ಅವರ ಸಮುದಾಯಗಳು ಗಾತ್ರದಲ್ಲಿ ಕಿರಿದು, ಸಂಬಂಧಗಳಲ್ಲಿ ಸರಳ ಹಾಗೂ ಪರಸ್ಪರರಲ್ಲಿ ನೇರ ಸಂಬಂಧ ಹೊಂದಿದ್ದವು. ಇಂತಹ ಸಮಾಜ-ಸಂಸ್ಕೃತಿಗಳನ್ನು ಅಭ್ಯಾಸ ಮಾಡಲು ಮಾನವಶಾಸ್ತ್ರಜ್ಞರು ಸೂಕ್ತ ಅಭ್ಯಾಸ ಮಾರ್ಗ, ವಿಧಾನ ಮತ್ತು ಸಾಧನ ಸಲಕರಣೆಗಳನ್ನು ಹೊಂದಿದ ಕ್ಷೇತ್ರಕಾರ್ಯ ಸಂಪ್ರದಾಯ ಒಂದನ್ನು ತಂದುಕೊಟ್ಟರು. ಇವರ ಅಭ್ಯಾಸ ಮಾರ್ಗಗಳೆಂದರೆ ಸಮಾಜ ಅಥವಾ ಸಮುದಾಯಗಳನ್ನು ಇಡಿಯಾಗಿ, ಸಮಗ್ರವಾಗಿ ಅಭ್ಯಾಸ ಮಾಡುವುದು (Wholistic Approach), ವೀಕ್ಷಣೆ, ಸಂದರ್ಶನ, ಸಹಭಾಗಿತ್ವ, ಆಳವಾದ ಅಧ್ಯಯನ (Interview, Observation, Participant Observation, Case Study)ಮುಂತಾದವು. ಇವರು ಅಭ್ಯಾಸಕ್ಕೆ ತೆಗೆದುಕೊಂಡ ಸಮಾಜಗಳು ಕಿರಿಗಾತ್ರದವುಗಳಾದ್ದರಿಂದ ಈ ಅಭ್ಯಾಸ ವಿಧಾನಗಳು ಸೂಕ್ತವಾಗಿ ಹೊಂದಿಕೊಂಡವು.

೧೯ನೇ ಶತಮಾನದ ಪೂರ್ವಾರ್ಧ ಭಾಗದ ವೇಳೆಗೆ ಕೆಲವು ಉತ್ಸಾಹಿ ಹಾಗೂ ಸಾಹಸಿಗಳಾದ ಮಾನವಶಾಸ್ತ್ರಜ್ಞರು ಅನೇಕ ಹೊಸಹೊಸ ಜನಾಂಗ ಗುಂಪುಗಳನ್ನು , ಸಮಾಜ-ಸಂಸ್ಕೃತಿಯನ್ನು ಅಭ್ಯಾಸ ಮಾಡಲು ಜಗತ್ತಿನ ಮೂಲೆ ಮೂಲೆಗಳಿಗೆ ಹೋಗಿ ಬಂದರು. ಹೀಗಾಗಿ ಹಿಂದೆಂದೂ ಕಾಣರಿಯದಂತಹ ಅನೇಕ ಜನಾಂಗಗಳು, ಸಂಸ್ಕೃತಿಗಳು, ಅವರಲ್ಲಿದ್ದ ರೂಢಿ-ಪದ್ಧತಿಗಳು ಹೊರಜಗತ್ತಿಗೆ ತಿಳಿದು ಬಂದವು. ಅವರ ಅನೇಕ ಆಚಾರ-ವಿಚಾರಗಳು, ಪದ್ಧತಿಗಳು ಪ್ರಥಮ ಬಾರಿಗೆ ಪಾಶ್ಚಿಮಾತ್ಯ ಸಮಾಜಕ್ಕೆ ಪರಿಚಯವಾದ್ದರಿಂದ ಅವು ಅವರಿಗೆ ವಿಚಿತ್ರವಾಗಿ ಕಂಡವು. ೨೦ನೇ ಶತಮಾನದ ಮಧ್ಯಭಾಗದಿಂದ ವಸಾಹತುಗಳ ಆಳ್ವಿಕೆ ಕೊನೆಗೊಳ್ಳುತ್ತಾ ಬಂದಿತು. ಅಲ್ಲಿಂದ ಮುಂದೆ ಅಲ್ಲಿಯ ಜನರನ್ನು ವಸಾಹತು ಆಳ್ವಿಕೆಯ ದೃಷ್ಟಿಯಿಂದ ಅಭ್ಯಾಸ ಮಾಡುವುದು ಕೊನೆಗೊಂಡು ಅವರ ಸಮಾಜ-ಸಂಸ್ಕೃತಿಗಳನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಅಭ್ಯಾಸ ಮಾಡುವುದು ಪ್ರಾರಂಭವಾಯಿತು.

ಎರಡನೆಯ ಮಹಾಯುದ್ಧದ ನಂತರ ಲಭ್ಯವಾದ ವೈಜ್ಞಾನಿಕ ಹಾಗೂ ತಾಂತ್ರಿಕ ಬೆಳವಣಿಗೆಯ ನೆರವಿನಿಂದಾಗಿ ಈ ಸಮಾಜಗಳು ಹೊರಜಗತ್ತಿನೊಂದಿಗೆ ಹೆಚ್ಚು ಹೆಚ್ಚು ಸಂಪರ್ಕ ಹೊಂದತೊಡಗಿದವು. ಯುದ್ಧ ಮತ್ತು ಸಮತಾವಾದದ ಕ್ರಾಂತಿಯಿಂದಾಗಿ ಹುಟ್ಟಿಕೊಂಡ ಪ್ರಜಾಪ್ರಭುತ್ವ, ಸ್ವಯಮಾಡಳಿತ ಮುಂತಾದವು ಅವರಲ್ಲಿ ತಮ್ಮ ಸಮಾಜ-ಸಂಸ್ಕೃತಿಗಳ ಹಾಗೂ ರಾಷ್ಟ್ರದ ಬಗೆಗೆ ಅಭಿಮಾನ ಹೊಂದುವಂತೆಯೂ ಮಾಡಿದವು. ಆ ಕಾಲಕ್ಕೆ ಸಂಭವಿಸಿದ ರಾಜಕೀಯ ಚಳುವಳಿಗಳಿಂದ ಬಂದ ಇಂತಹ

ಸ್ವಾಭಿಮಾನವನ್ನು ಉಪಯೋಗಿಸಿಕೊಂಡು ಅನೇಕ ರಾಷ್ಟ್ರಗಳು ಸ್ವತಂತ್ರ ಹೊಂದಿದವು. ಈ ಪೂರ್ವದ ವಸಾಹತುಗಳಲ್ಲಿ ಆಗ ತಮ್ಮನ್ನು ಪೂರ್ವದ ವಸಾಹತುಗಾರರ, ಪಾಶ್ಚಿಮಾತ್ಯರ ದೃಷ್ಟಿಯಿಂದ ನೋಡುವವರನ್ನು ಮತ್ತು ಅಭ್ಯಾಸ ಮಾಡುವವರನ್ನು ದ್ವೇಷಿಸುವ ಮನೋಭಾವನೆ ಬೆಳೆದಿದ್ದರಿಂದ ಮಾನವಶಾಸ್ತ್ರಜ್ಞರು ತಮ್ಮ ಅಭ್ಯಾಸ ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕಾಯಿತು. ಜೊತೆಗೆ ಆ ದಿನಗಳಲ್ಲಿ ಪಾಶ್ಚಿಮಾತ್ಯರು ಈ ನಾಡುಗಳಿಗೆ ಅಭ್ಯಾಸಕ್ಕೆ ಹೋಗುವುದು ಸುರಕ್ಷಿತವಾಗಿರಲಿಲ್ಲ. ಆದ್ದರಿಂದ ಸ್ಥಳೀಯರಿಗೆ ಮಾನವಶಾಸ್ತ್ರದಲ್ಲಿ ತರಬೇತಿ ನೀಡಿದರು. ಈ ಸ್ಥಳೀಯರು ಹೊಸದಾಗಿ ಸ್ವಾತಂತ್ರ್ಯ ಹೊಂದಿದ ತಮ್ಮಲ್ಲಿಯ ಆದಿವಾಸಿಗಳನ್ನು ಅಭ್ಯಾಸ ಮಾಡಿದ ನಂತರ ಅವರ ಅಭಿವೃದ್ಧಿಗೆ ಪೂರಕವಾದ ವಿಚಾರಗಳನ್ನು, ನಂತರ ಅಲ್ಲಿಯ ಇತರೆ ಸರಳ ಸಮಾಜ-ಸಂಸ್ಕೃತಿಗಳಾದ ಜಾನಪದ ಮತ್ತು ಗ್ರಾಮೀಣ ಸಮಾಜಗಳನ್ನು ಅಭ್ಯಾಸ ಮಾಡತೊಡಗಿದರು. ವಸಾಹತುಗಳಲ್ಲಿನ ಈ ಕಿರುಗಾತ್ರದ ಹಾಗೂ ಸರಳ ಸಮಾಜಗಳನ್ನು ಅಭ್ಯಾಸ ಮಾಡುವ ಮಾನವಶಾಸ್ತ್ರಜ್ಞರ ಈ ದೃಷ್ಟಿ ಮತ್ತು ಅನುಭವಗಳು ಜಾನಪದ ಸಮಾಜ ಸಂಸ್ಕೃತಿಯ ಅಭ್ಯಾಸಕ್ಕೆ ಸೂಕ್ತವೆನಿಸಿದವು. ಈ ಅಭ್ಯಾಸಗಳಿಂದಾಗಿ ಮಾನವಶಾಸ್ತ್ರಜ್ಞರು ಮತ್ತು ಗ್ರಾಮೀಣ ಮುಂತಾದ ಸರಳ ಸಮಾಜ-ಸಂಸ್ಕೃತಿಗಳ ಅಭ್ಯಾಸಕ್ಕೆ ಗಾಢವಾದ ನಂಟು ಬೆಳೆಯಿತು.

ಆದಿವಾಸಿ, ಜಾನಪದ ಹಾಗೂ ಗ್ರಾಮೀಣ ಸಮಾಜಗಳು ತಮ್ಮ ಆಕಾರ ಮತ್ತು ರಚನೆಯಲ್ಲಿ ಒಂದೇ ರೀತಿಯಾಗಿ ಕಂಡರೂ, ಅವುಗಳಲ್ಲಿ ಅನೇಕ ಸಾಮ್ಯತೆಗಳಿದ್ದರೂ, ಇವು ಅನೇಕ ರೀತಿಯಲ್ಲಿ ಒಂದರಿಂದ ಮತ್ತೊಂದು ಭಿನ್ನವಾಗಿವೆ. ಜಾನಪದರು ಸಂಪ್ರದಾಯಸ್ಥರು, ಧಾರ್ಮಿಕ ಪ್ರವೃತ್ತಿ ಉಳ್ಳವರು, ತಮ್ಮ ತಮ್ಮಲ್ಲಿ ಮುಖಾಮುಖಿ ಮತ್ತು ನೇರ ಸಂಬಂಧ ಉಳ್ಳವರು. ಇಲ್ಲಿ ಒಂದು ಗ್ರಾಮ ಸಮುದಾಯದಿಂದ ಇನ್ನೊಂದಕ್ಕೆ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸಂಬಂಧಗಳಿರುತ್ತವೆ. ಇಲ್ಲಿ ಕಳ್ಳುಬಳ್ಳಿ ಸಂಬಂಧಗಳಿಗೆ ಹೆಚ್ಚಿನ ಬೆಲೆ ಇದೆ. ವ್ಯವಹಾರಿಕ ಸಂಬಂಧಗಳಿಲ್ಲ. ಇಲ್ಲಿ ಕಾಲ ನಿಧಾನಗತಿಯಿಂದ ಸಾಗುತ್ತದೆ. ಎಲ್ಲೆಲ್ಲೂ ಸಹಕಾರ, ಪರೋಪಕಾರ, ನ್ಯಾಯ-ನಿಷ್ಠೆ, ನೈತಿಕತೆ ಮುಂತಾದವು ಎದ್ದು ಕಾಣುತ್ತವೆ.

ಜಾನಪದ ಸಮಾಜದ ಮೇಲಿನ ಮಾನವಶಾಸ್ತ್ರಜ್ಞರ ಅಭ್ಯಾಸಗಳು, ಇತರರ ಅಭ್ಯಾಸದಿಂದ ಅನೇಕ ರೀತಿಯಲ್ಲಿ ಭಿನ್ನವಾಗಿವೆ. ಮೊದಲನೆಯದಾಗಿ ಅವರು ಸಮಾಜಗಳನ್ನು, ಸಂಸ್ಕೃತಿಯನ್ನು ನಾಗರೀಕತೆಯ ಆಧಾರದ ಮೇಲೆ ಆದಿವಾಸಿ, ಜಾನಪದ, ರೈತ, ವ್ಯವಸಾಯಗಾರಿ ಮತ್ತು ನಗರ ಸಮಾಜಗಳೆಂದು ಬಗೆ ಮಾಡುತ್ತಾರೆ. ಇವೆಲ್ಲವೂ ಸಮಗ್ರವಾಗಿ ಮಾನವ ಸಂಸ್ಕೃತಿಯ ವಿವಿಧ ಹಂತಗಳೆಂದೂ, ಬದಲಾವಣೆ ಅಥವಾ ಅಭಿವೃದ್ಧಿ ಹೊಂದಿದಂತೆ ಅವುಗಳ ಗಾತ್ರ, ವ್ಯವಸ್ಥೆ, ಕಾರ್ಯ, ಮೌಲ್ಯ, ಸಂಬಂಧಗಳಲ್ಲಿ

ಬದಲಾವಣೆಗಳು ಬಂದಿವೆ ಎಂದು ಹೇಳುವುದರ ಮೂಲಕ ಇತರೆ ಸಾಮಾಜಿಕಶಾಸ್ತ್ರಜ್ಞರಿಂದ ಭಿನ್ನವಾಗಿದ್ದಾರೆ.

ಮಾನವಶಾಸ್ತ್ರಜ್ಞರಲ್ಲಿ ಮುಖ್ಯವಾಗಿ ಕ್ರಿಯಾವಾದಿಗಳು, ಜಾನಪದ ಸಂಸ್ಕೃತಿಯಲ್ಲಿಯ ಆಚಾರ ವಿಚಾರಗಳ, ಮೌಲ್ಯ-ನಂಬಿಕೆಗಳ ಬಗ್ಗೆಯೂ ಹೆಚ್ಚಿನ ಮಾಹಿತಿ ನೀಡಿದ್ದಾರೆ. ಉದಾಹರಣೆಗೆ ಜಾನಪದಿಗಳು ಹೊಲಕಣಗಳಲ್ಲಿ ದುಡಿಯುವಾಗ ಹಾಡುವುದು, ಅವರಲ್ಲಿಯ ನಗೆಚಾಟಿಕೆ ಸಂಬಂಧಗಳು, ಹಬ್ಬಗಳು ಆಚಾರ-ವಿಚಾರಗಳು, ಹೀಗೆ ಎಲ್ಲವೂ ತಮ್ಮದೇ ಆದ ಕಾರ್ಯವನ್ನು ಹೊಂದಿವೆ. ಇದೇ ರೀತಿ ಸಾಮಾಜಿಕ ಸಂಸ್ಥೆಗಳ ಮತ್ತು ಸ್ಥಾನಗಳ ಕಾರ್ಯ, ಕರ್ತವ್ಯ ಮತ್ತು ಹಕ್ಕುಗಳ ಬಗೆಗೆ ವಿವರಿಸಿದ್ದಾರೆ. ಇಲ್ಲಿಯ ಅನೇಕ ವಿಚಾರಗಳಾದ ಕಳ್ಳುಬಳ್ಳಿ, ನೆರೆಹೊರೆ, ಗ್ರಾಮ, ನಾಡು, ದೇಶ, ರಕ್ತಸಂಬಂಧಿಕರು ಮತ್ತು ಬೀಗರು ಮತ್ತಿತರರ ನಡುವಿನ ಸಂಬಂಧ, ಅವರ ಹಕ್ಕು, ಕರ್ತವ್ಯಗಳ ಬಗೆಗೂ ವಿವರಿಸಿದ್ದಾರೆ. ಈ ಸಂಬಂಧಗಳು ಮುಂದೆ ರಾಜಕೀಯ ಚಟುವಟಿಕೆ, ಅಭಿವೃದ್ಧಿ ಮುಂತಾದ ರಂಗಗಳಲ್ಲಿ ಯಾವ ಬಗೆಯ ಕಾರ್ಯ ಮಾಡುತ್ತವೆಂದೂ ವಿವರಿಸಿದ್ದಾರೆ.

೧೮೮೦ರ ದಶಕದಲ್ಲಿ ಮೊದಲ ಬಾರಿಗೆ ಕುಲವಿವರಣಾಶಾಸ್ತ್ರಜ್ಞರು (Ethnologists) ಜಾನಪದ ಸಮಾಜದ ಮೇಲೆ ಅಭ್ಯಾಸ ಪ್ರಾರಂಭಿಸಿದರು. ಅವು ಮುಖ್ಯವಾಗಿ ಜಾನಪದ ಸಂಸ್ಕೃತಿಯ ವಿವಿಧ ಪ್ರಕಾರಗಳಾದ ರೂಢಿ, ಪದ್ಧತಿ, ಆಚರಣೆ, ಹಬ್ಬ, ಹಾಡು, ಚಿತ್ರ, ಗಾದೆಮಾತು, ಒಗಟು, ಆಟಗಳು ಮುಂತಾದವುಗಳನ್ನು ಕಲೆ ಹಾಕುವುದಕ್ಕೆ, ವಿವರಿಸುವುದಕ್ಕೆ ಸೀಮಿತವಾಗಿದ್ದವು. ನಂತರ ಮಾನವಶಾಸ್ತ್ರದ ಪ್ರಭಾವದಿಂದಾಗಿ ಜಾನಪದ ನಡವಳಿಕೆ, ವ್ಯಕ್ತಿತ್ವ ಮುಂತಾದವುಗಳನ್ನು ಅಭ್ಯಾಸ ಮಾಡಲಾಯಿತು. ೧೯೩೦ರ ದಶಕದಲ್ಲಿ ರಚನಾವಾದಿಗಳ ಪ್ರಭಾವದಿಂದಾಗಿ ಜಾನಪದ ಸಮಾಜದಲ್ಲಿಯ ಅನೇಕ ಬಗೆಯ ಗೌರವ ಹಾಗೂ ಸ್ಥಾನಮಾನ ಹೊಂದಿದ ವ್ಯಕ್ತಿಗಳ ಅಭ್ಯಾಸ ಮಾಡಿ ಇವು ಸಮಾಜದ ಅಸ್ತಿತ್ವಕ್ಕೆ ಹೇಗೆ ಸಹಕರಿಸಿವೆ, ಇವು ಆ ಜನರ ನಡವಳಿಕೆಗಳನ್ನು ಹೇಗೆ ತಂದಿವೆ ಅಥವಾ ನಿಯಂತ್ರಿಸುತ್ತವೆ ಎಂದೂ ತಿಳಿಯುವ ಪ್ರಯತ್ನಗಳು ನಡೆದವು.

ಮುಂದೆ ೧೯೫೦ರ ದಶಕದಲ್ಲಿ, ಮಲಿನೋವಾಸ್ಕಿ ಎಂಬ ಮಾನವಶಾಸ್ತ್ರಜ್ಞರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದ ಕ್ರಿಯಾವಾದಿಗಳು, ಜಾನಪದ ಆಚಾರ-ವಿಚಾರಗಳ ಕ್ರಿಯೆಗಳನ್ನು ತಿಳಿಯಲು ಪ್ರಯತ್ನಿಸಿದರು. ಇವುಗಳ ಅವಶ್ಯಕತೆ ಸಮಾಜಕ್ಕೆ ಇರುವುದರಿಂದಲೇ ಇವು ಆಚರಣೆಯಲ್ಲಿವೆ, ಇಲ್ಲದಿದ್ದರೆ ಸಂಸ್ಕೃತಿ ಇವನ್ನು ಕೈಬಿಡುತ್ತಿತ್ತು ಎಂಬುದು ಇವರ ವಾದ. ಇದೇ ರೀತಿ ಕೆಲವೊಂದು ವಸ್ತುಗಳ ಕ್ರಿಯೆಯು ಕಾಲಕಾಲಕ್ಕೆ ಬದಲಾಗಬಹುದು. ಹೀಗಾದಾಗ ದಿನನಿತ್ಯ ಬಳಕೆಯಲ್ಲಿ ಒಂದು ವಿಚಾರ ಅಥವಾ ವಸ್ತು ತನ್ನ ಉಪಯುಕ್ತತೆಯನ್ನು ಕಳೆದುಕೊಂಡರೂ ಅದು ಅದನ್ನು ಹೊಂದಿದ ಜನರ ನಂಬಿಕೆಗಳಲ್ಲಿ,

ಆಚರಣೆಗಳಲ್ಲಿ ಉಳಿದುಬಂದಿರುತ್ತದೆ. ಹೀಗೆ ಒಂದು ಗುಂಪಿನಲ್ಲಿ ಆಚರಣೆಯಲ್ಲಿರುವ ರೂಢಿ ಪದ್ಧತಿಗಳು ಯಾವ ರೀತಿಯಲ್ಲಿ ಕಾರ್ಯಮಾಡುತ್ತವೆ, ಇವುಗಳ ಕಾರ್ಯವೇನು ಎಂಬುದನ್ನು ಮಲಿನೋವಾಸ್ಕಿರವರು ತಿಳಿಸಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಶಾಂತಮಹಾಸಾಗರದ ದ್ವೀಪ ನಿವಾಸಿಗಳಲ್ಲಿನ "ಕುಳ" ಪದ್ಧತಿಯನ್ನು ತೆಗೆದುಕೊಂಡು ಅಭ್ಯಾಸ ಮಾಡಿದ್ದಾರೆ. ಈ ಮಾರ್ಗದಲ್ಲೇ ಈ ಮೊದಲಿಗೆ ರಿವರ್ಸ್ ಎನ್ನುವವರು (೧೯೦೫) ನೀಲಗಿರಿಯ ತೋಡರನ್ನು ನಂತರ, ರೇಮಂಡ್ ಫರ್ಥ್ ಎನ್ನುವವರು ಮಲೇಷ್ಯಾದ ಮೀನುಗಾರರನ್ನು (೧೯೫೧) ಅಭ್ಯಾಸ ಮಾಡಿದ್ದಾರೆ.

ಜನಪದರ-ರೈತರ ಮೇಲಿನ ಬಹು ಮುಖ್ಯ ಹಾಗೂ ಪ್ರಸಿದ್ಧ ಅಭ್ಯಾಸಗಳೆಂದರೆ ೧೯೩೦ರ ದಶಕದಲ್ಲಿ ರಾಬರ್ಟ್ ರೆಡ್‌ಫಿಲ್ಡ್‌ರವರು ನಡೆಸಿದ ಮಾಯಾ ಇಂಡಿಯನರ ಮೇಲಿನ ಅಭ್ಯಾಸಗಳು. ಇವರು ಮೆಕ್ಸಿಕೋ ದೇಶದ ವ್ಯವಸಾಯಗಾರರಾದ ಜನಪದರೊಂದಿಗೆ ಕೆಲವಾರು ತಿಂಗಳು ವಾಸಮಾಡಿ, ಸಂಶೋಧನೆ ಮಾಡಿ ಅವರ ಜೀವನದ ಎಲ್ಲಾ ಅಂಗರಂಗಗಳನ್ನು ಕೂಲಂಕಶವಾಗಿ ಅಭ್ಯಾಸ ಮಾಡಿದರು. ಪರಿಣಾಮವಾಗಿ ಇವರು ಕೆಲವಾರು ಅತ್ಯಂತ ಮಹತ್ವದ ಮತ್ತು ಉಪಯುಕ್ತ ಗ್ರಂಥಗಳನ್ನು ಬರೆದರು. ಇವುಗಳಲ್ಲಿ ಆ ಜನರು ಹೇಗೆ ಜೀವನ ಮಾಡುತ್ತಾರೆ, ಅವರು ವಾಸ ಮಾಡುವ ನೆಲ ಮತ್ತು ಪ್ರಕೃತಿಗಳೊಂದಿಗೆ ಎಂತಹ ಸಂಬಂಧ ಹೊಂದಿದ್ದಾರೆ, ಅವರ ನಡುವಿನ ಸಂಬಂಧಗಳಾವು, ಪರಸ್ಪರರು ನೀಡುವ ಸಹಕಾರ ಸಂಬಂಧಗಳು, ನಂಬಿಕೆ, ಆಚರಣೆಗಳು ಯಾವು ಯಾವು ಎನ್ನುವುದನ್ನು ಬಹು ವಿದ್ವತ್‌ಪೂರ್ಣವಾಗಿ ಚಿತ್ರಿಸಿದ್ದಾರೆ.

ಇವರ ಬಹುಮುಖ್ಯ ಕೊಡುಗೆ ಎಂದರೆ ಜಾನಪದ-ನಗರ ಸಾತಿತ್ಯದ ಕಲ್ಪನೆ. ಅಂದರೆ ಜಾನಪದ ಸಮಾಜ ತಾನು ಹೊರ ಜಗತ್ತಿನೊಂದಿಗೆ ಹೆಚ್ಚು ಸಂಪರ್ಕ ಹೊಂದಿದಂತೆ ತನ್ನಲ್ಲಿ ಬದಲಾವಣೆ ತಂದುಕೊಂಡು ಮುಂದೆ ನಗರ ಸಂಸ್ಕೃತಿಯಾಗುತ್ತದೆ. ಹೀಗೆ ಒಂದು ತುದಿಯಿಂದ ಇನ್ನೊಂದು ತುದಿಯನ್ನು ಮುಟ್ಟಲು ಅದು ಅನೇಕ ಹಂತಗಳನ್ನು ದಾಟಬೇಕು ಮತ್ತು ಆಯಾ ಹಂತಗಳ ಮೌಲ್ಯಗಳನ್ನು, ಸಂಸ್ಕೃತಿಯನ್ನು ಅಳವಡಿಸಿಕೊಳ್ಳಬೇಕು. ರೆಡ್‌ಫೀಲ್ಡ್‌ರ ಮತ್ತೊಂದು ವಿವರಣೆ ಎಂದರೆ ಒಂದು ಸಮಾಜದಲ್ಲಿ ಜಾನಪದದಿಂದ ಹಿಡಿದು ನಗರ ನಾಗರೀಕತೆಯವರೆಗಿನ ಸಂಸ್ಕೃತಿಯನ್ನು ಹೊಂದಿದ ಎಲ್ಲಾ ಹಂತಗಳಿರುತ್ತವೆ. ಇವು ಸಾಂಸ್ಕೃತಿಕವಾಗಿ ಪ್ರತ್ಯೇಕ ಗುಂಪುಗಳೂ ಹೌದು ಮತ್ತು ತಮ್ಮ ಅನೇಕ ಅವಶ್ಯಕತೆಗಳಿಗೆ ಹೊರ ಜಗತ್ತಿನೊಂದಿಗೆ ಸಂಪರ್ಕ ಸಂಬಂಧ ಹೊಂದಿರುವುದರಿಂದ ಅವುಗಳ ಭಾಗವೂ ಹೌದು. ಹೀಗಾಗಿ ಇಂದು ಕೂಡ ನಗರವಾಸಿಗಳಲ್ಲಿ ಕೆಲವರು ಇನ್ನೂ ಜಾನಪದ ಮಟ್ಟದಲ್ಲಿರಬಹುದು ಮತ್ತು ಜಾನಪದ ಸಮಾಜದಲ್ಲಿಯ ಮೇಲ್ವರ್ಗದವರು (Elites) ನಗರ ಸಂಸ್ಕೃತಿಯ ವಿಚಾರಗಳನ್ನು ಹೊಂದಿರಬಹುದು. ಇಂತಹ ಸ್ಥಿತಿಯನ್ನು ವಿವರಿಸಲು ರೆಡ್‌ಫೀಲ್ಡ್‌ರವರು

ಭಾಗ, ಸಮಗ್ರ ಸಮಾಜದ ಭಾಗ ಮತ್ತು ಸಮಗ್ರ ಸಮಾಜ ಎಂದು ಹೇಳಿದ್ದಾರೆ(Part, Part of a Whole and the Whole Society) (೧೯೬೯).

ರೆಡ್‌ಫೀಲ್ಡ್‌ರು ಜಾನಪದರನ್ನು, ನಿಸರ್ಗ ದೈವಗಳಲ್ಲಿ ಗಾಢವಾದ ಭಕ್ತಿ ಉಳ್ಳವರು, ಪರೋಪಕಾರಿಗಳು, ನ್ಯಾಯ, ಧರ್ಮ ಮುಂತಾದ ನೈತಿಕ ವಿಚಾರಗಳಿಗೆ ಅಂಜಿ ನಡೆಯುವವರು ಎಂದು ವರ್ಣಿಸಿದ್ದಾರೆ. ಇವರ ನಂತರ ಜಾನಪದರನ್ನು ಅಭ್ಯಾಸ ಮಾಡಿದವರಲ್ಲಿ ಕೆಲವರು ಇದರಿಂದ ಭಿನ್ನವಾದ ಅಭಿಪ್ರಾಯ ತಂದರು. ಇವರಲ್ಲಿ ರೆಡ್‌ಫೀಲ್ಡ್‌ರ ವಿದ್ಯಾರ್ಥಿಯಾದ ಆಸ್ಕರ್ ಲೂಯಿಸ್(೧೯೫೧) ಎಂಬುವರು ಪ್ರಮುಖರು. ಇವರು ತಮ್ಮ ವಿದ್ಯಾಗುರುಗಳು ಅಭ್ಯಾಸ ಮಾಡಿದ ಮಾಯಾ ಇಂಡಿಯನರ ಅದೇ ಗುಂಪನ್ನು ಹತ್ತು ವರ್ಷದ ನಂತರ, ಮರು ಅಭ್ಯಾಸ ಮಾಡಿ, ಅವರಿಂದ ಭಿನ್ನವಾದ, ಕೆಲವೊಂದು ವಿಚಾರದಲ್ಲಿ ತದ್ವಿರುದ್ಧವಾದ, ಮಾಹಿತಿಯನ್ನು ತಂದರು. ಇವರ ಅಭ್ಯಾಸದಿಂದ ತಿಳಿದು ಬರುವುದೇನಂದರೆ ಜಾನಪದಿಯರು ರೆಡ್‌ಫೀಲ್ಡ್‌ರು ವಿವರಿಸಿದಂತೆ ಅತ್ಯುತ್ತಮ ನಡಾವಳಿಯುಳ್ಳ ಅನಾಗರೀಕನಾಗಿರದೆ (Noble Savage), ಅವರಲ್ಲಿಯೂ ಅಧುನಿಕ ನಗರಗಳಲ್ಲಿಯ ಜನರಂತೆ ಮೋಸ, ಕಳ್ಳತನ, ವೈರತ್ವ ಭಾವನೆ ಮುಂತಾದವು ತುಂಬಿವೆ. ಇಂತಹ ಒಂದು ಪರಿಸ್ಥಿತಿ ಬಹುಶಃ ಇತ್ತೀಚಿನದಿದ್ದು ಇದಕ್ಕೆ ಈ ಸಮಾಜದಲ್ಲಿ ಬದಲಾವಣೆ ಬಂದಿರುವುದೇ ಕಾರಣವಿದೆ. ಇದೇ ರೀತಿ ಜಾನಪದ ಸಮಾಜಗಳು ಬದಲಾವಣೆ ಹೊಂದಿದಂತೆ ಕಾಲಾನುಕ್ರಮದಲ್ಲಿ ಅವು ಬೃಹತ್ ಹಾಗೂ ಕ್ಲಿಷ್ಟ ಸಮಾಜಗಳಾಗುತ್ತವೆ. ಇತ್ತೀಚೆಗೆ ಜಾನಪದ ಸಮಾಜದಲ್ಲಾಗುತ್ತಿರುವ ಆರ್ಥಿಕ, ರಾಜಕೀಯ, ಸಾಮಾಜಿಕ ಬದಲಾವಣೆಗಳನ್ನು ಮತ್ತು ಅವುಗಳ ಪರಿಣಾಮಗಳನ್ನು ಅಭ್ಯಾಸ ಮಾಡಲಾಗುತ್ತಿದೆ. ಅವರಲ್ಲಿರುವ ಅನೇಕ ಸಮಸ್ಯೆಗಳಾದ ಶೋಷಣೆ, ಅನಾಯಕತ್ವ, ಬಡತನ, ವಲಸೆ ಮುಂತಾದವುಗಳನ್ನು ಅಭ್ಯಾಸ ಮಾಡಿ ಇದರಿಂದ ಬಂದ ಮಾಹಿತಿಯನ್ನು ಜಾನಪದರ ಲಾಭಕ್ಕೆ ಉಪಯೋಗಿಸಲಾಗುತ್ತದೆ.

ಜಾನಪದ ಸಮಾಜ-ಸಂಸ್ಕೃತಿಗಳ ಬಗೆಗೆ ಇದ್ದ ಅನೇಕ ತಪ್ಪು ತಿಳುವಳಿಕೆಗಳನ್ನು ನಿವಾರಿಸಲೂ ಮಾನವಶಾಸ್ತ್ರಜ್ಞರು ನೆರವಾಗಿದ್ದಾರೆ. ಜಾನಪದ ಸಂಸ್ಕೃತಿ ಹೊಂದಿದ ಒಂದು ಗ್ರಾಮೀಣ ಗುಂಪಿಗೆ ಅವರ ಜೀವನ ವಿಧಾನ ಒಂದು ಗುಂಪು ಜೀವನವಲ್ಲ, ಅದೊಂದು ಬಗೆಯ ನಾಗರಿಕತೆ ಎಂಬುದನ್ನು ಮೊದಲಿಗೆ ಕಂಡುಕೊಂಡವರು ಮಾನವಶಾಸ್ತ್ರಜ್ಞರು. ಜಾನಪದರ ಜೀವನದ ಎಲ್ಲಾ ಚಟುವಟಿಕೆಗಳಲ್ಲಿಯೂ ಅವರ ಈ ಸಂಸ್ಕೃತಿ ಎದ್ದು ಕಾಣುತ್ತದೆ. ಉದಾಹರಣೆಗೆ ಅವರು ಒಂದು ನೆಲಕ್ಕೆ ಅಂಟಿಕೊಂಡ ಜನ. ಅಂದರೆ ತಮ್ಮ ಅನ್ನಕ್ಕೆ, ಬೆಂಬಲಕ್ಕೆ, ಧರ್ಮಾಚರಣೆಗೆ, ಘನತೆ-ಗೌರವಕ್ಕೆ ವ್ಯವಸಾಯದ ಭೂಮಿಯನ್ನು ನಂಬಿದವರು. ಹೀಗಾಗಿ ಭೂಮಿಯನ್ನು ಕೇವಲ ತಮ್ಮ ಜೀವನಾಧಾರಕ್ಕೆ ಮಾರ್ಗವಾಗಿ ಹೊಂದಿದ

ರೈತವರ್ಗದಿಂದ ಇವರು ಭಿನ್ನರಾಗುತ್ತಾರೆ. ಭೂಮಿ ಮತ್ತು ವ್ಯವಸಾಯಗಾರರ ನಡುವಿನ ಸಂಬಂಧವೂ ಭಿನ್ನವಾಗಿರುತ್ತದೆ. ರೈತ ವರ್ಗದವರು ಭೂಮಿಯನ್ನು ತಮ್ಮ ತಾಯಿ ಎಂದು ಭಾವಿಸುವರು. ಅಲ್ಲದೆ ಈ ತಾಯಿಯ ಸೇವೆ ಮಾಡುವವರೇ ಧರ್ಮಿಷ್ಟರು, ನೀತಿವಂತರು ಎಂದು ಭಾವಿಸುತ್ತಾರೆ. ಭೂಮಿ ತಾಯಿಯನ್ನು ಯಾವ ಕಾರಣಕ್ಕೂ ಆಳವಾಗಿ ಗೆಯ್ಮೆ ಮಾಡಿಯೂ ನೋಯಿಸಬಾರದು, (ರಸಗೊಬ್ಬರ ಮುಂತಾದ) ಅಪವಿತ್ರ ವಸ್ತುಗಳನ್ನು ಹಾಕಿ ಮೈಲಿಗೆ ಮಾಡಬಾರದು ಎಂದು ನಂಬುತ್ತಾರೆ. ತಾವೇ ರೈತರಾಗಿರುವಾಗ ತಮಗೆ ಅವಶ್ಯಕವಾಗಿ ಬೇಕಾದ ದವಸಧಾನ್ಯಗಳನ್ನು ಇತರರಿಂದ ಕೊಳ್ಳುವುದು ಅವಮಾನವೆಂದು ಭಾವಿಸುತ್ತಾರೆ. ಹೀಗಾಗಿ ತಮಗೆ ಬೇಕಾದ ಸಕಲ ಧಾನ್ಯಗಳನ್ನು ತಾವೇ ಬೆಳೆದುಕೊಳ್ಳುತ್ತಾರೆ. ಅಲ್ಲದೆ ಆಹಾರ ಧಾನ್ಯ ಬೆಳೆಯುವ ತಾನು ಜಗತ್ತಿಗೆ ಅನ್ನ ನೀಡುವವನು ಎಂದು ಅಭಿಮಾನಪಟ್ಟು ಹೊಲಕಣಗಳಲ್ಲಿ ಪ್ರಾಣಿ-ಪಕ್ಷಿಗಳು ಈ ದವಸಧಾನ್ಯಗಳನ್ನು ಫಸಲನ್ನು ತಿಂದರೆ ಅವರು ದುಃಖ ಪಡುವುದಿಲ್ಲ.

ಇದಕ್ಕೆ ವಿರುದ್ಧವಾದ ನಂಬಿಕೆ ಹೊಂದಿದವರು ವ್ಯವಸಾಯಗಾರರು. ಇವರು ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇರುವ ಬೆಳೆಗಳನ್ನು ಮಾತ್ರ ಬೆಳೆದು ಲಾಭ ಪಡೆಯಲು ಮುಂದಾಗುತ್ತಾರೆ. ಇದಕ್ಕಾಗಿ ರಸಗೊಬ್ಬರ, ಕ್ರಿಮಿನಾಶಕಗಳನ್ನು ಬಳಸುತ್ತಾರೆ. ಆದರೆ ಹೊಲ ಹೂಳುವುದು, ವ್ಯವಸಾಯ, ಪಶುಪಾಲನೆ, ತೋಟಗಾರಿಕೆ ಮುಂತಾದವು ರೈತ ವರ್ಗದವರಿಗೆ ಒಂದು ಬಗೆಯ ಜೀವನ ಕ್ರಮವನ್ನು ತಂದುಕೊಡುತ್ತವೆ. ಇವು ತಮ್ಮ ಧರ್ಮಾಚರಣೆಗೆ ನೆರವಾಗುತ್ತವೆ ಎಂದೂ ನಂಬುತ್ತಾರೆ. ಈ ನಂಬಿಕೆಯಿಂದ ತಮ್ಮ ಕೆಲಸದ ಪ್ರತಿ ಹಂತಗಳಲ್ಲಿ ಇವರು ಅನೇಕ ಪೂಜಾ-ವಿಧಿಗಳನ್ನು ಆಚರಿಸುತ್ತಾರೆ. ಇದರಿಂದ ತಮ್ಮ ಪೈರಿಗೆ, ಗಿಡಮರಗಳಿಗೆ, ಪಶುಪಕ್ಷಿಗಳಿಗೆ ಫಲಶಕ್ತಿ ಬರುತ್ತದೆ, ರೋಗಗಳಿಂದ ರಕ್ಷಿಸುತ್ತವೆ ಎಂದು ನಂಬುತ್ತಾರೆ. ಹೀಗೆ ಸದಾ ಒಂದಲ್ಲಾ ಒಂದು ದೈವವನ್ನು ಪೂಜಿಸುವುದು, ಪರೋಪಕಾರ ಮಾಡುವುದು, ಸತ್ಯವನ್ನೇ ಹೇಳುವುದು ಇವರ ಗುಣಲಕ್ಷಣ.

ಗ್ರಾಮೀಣ ಹಾಗೂ ಜಾನಪದ ಸಮಾಜ-ಸಂಸ್ಕೃತಿಯ ಅಭ್ಯಾಸಕ್ಕೆ ಮಾನವಶಾಸ್ತ್ರದ ಮತ್ತೊಂದು ಕೊಡಿಗೆ ಎಂದರೆ ಅದರ ಬಗೆಗೆ ಇದ್ದ ಅನೇಕ ತಪ್ಪು ತಿಳುವಳಿಕೆಗಳನ್ನು ತೊಡೆದು ಹಾಕಿದ್ದು. ಉದಾಹರಣೆಗೆ ಗ್ರಾಮಸ್ಥರ ಜೀವನ ಕ್ರಮವನ್ನು ತಿಳಿಯದ ಕೆಲವು ಸಾಮಾಜಿಕಶಾಸ್ತ್ರಜ್ಞರು ಇವರನ್ನು ಸೋಮಾರಿಗಳು, ಶ್ರಮದ ಬೆಲೆ ತಿಳಿಯದ ಹೆಡ್ಡರು ಎಂದು ತೆಗಳಿ ಅವರಲ್ಲಿಯ ಬಡತನ, ಅನಾರೋಗ್ಯ ಮುಂತಾದ ಸಮಸ್ಯೆಗಳಿಗೆ ಅವರೇ ಕಾರಣವೆಂದು ಹೇಳುತ್ತಿದ್ದರು. ಇದು ನಿಜವಲ್ಲ. ಗ್ರಾಮೀಣ ಜನರ ಸಂಸ್ಕೃತಿಯಲ್ಲಿ ಶ್ರಮ, ವಿರಾಮ ಮತ್ತು ಮನರಂಜನೆಗೆ ಬೇರೆಯೇ ಆದ ಅರ್ಥ, ಬೆಲೆ ಇದೆ. ಉದಾಹರಣೆಗೆ ಬಿತ್ತನೆ ಕಾಲ, ಕೊಯ್ಲು, ಕಣಸುಗ್ಗಿ ಮುಂತಾದ ಕಾಲದಲ್ಲಿ ಅವರು ದಿನದಲ್ಲಿ

ಹತ್ತು ಏಕೆ ಹನ್ನೆರಡು ಹದಿನಾರು ಗಂಟೆಗಳ ಕಾಲ ಸತತವಾಗಿ ವಾರಗಟ್ಟಲೆ, ಆ ಕೆಲಸ ಮುಗಿಯುವವರೆಗೆ ದುಡಿಯುತ್ತಾರೆ. ಏಕೆಂದರೆ ಇವರ ಈ ಜೀವನ ಚಟುವಟಿಕೆಗಳು ಪ್ರಕೃತಿಯಲ್ಲಾಗುವ ಬದಲಾವಣೆಗೆ, ನಿಯಮಕ್ಕೆ ಒಳಗಾದವುಗಳು. ಮಳೆ ಬಂದರೆ ಇವರಿಗೆ ಕೆಲಸ, ಇಲ್ಲದಿದ್ದರೆ ಇಲ್ಲ. ಹೆಚ್ಚು ಮಳೆ ಬಂದರೆ ಬಿತ್ತುವ ಕೆಲಸ, ಕೊಯ್ಲಿನ ಕೆಲಸ ಕೆಡುತ್ತದೆ. ಇದರಿಂದ ಅವರ ಇಡೀ ವರ್ಷದ ಬದುಕು ಕೆಡುತ್ತದೆ. ಇದನ್ನು ತಮ್ಮ ತಲತಲಾಂತರದ ಅನುಭವದಿಂದ ಅವರು ತಿಳಿದಿರುತ್ತಾರೆ. ಹೀಗೆ ಕೆಲಸ ಇದ್ದಾಗ ಹಗಲು-ರಾತ್ರಿ ಎನ್ನದೆ ದುಡಿಯುತ್ತಾರೆ, ಕೆಲಸವಿಲ್ಲದಿದ್ದರೆ ಇಲ್ಲ. ಹೀಗಾಗಿ ಕೆಲವೊಮ್ಮೆ ಇವರು ಕೆಲಸವೆಂಬುದು ಇಲ್ಲದೆ ಕೂಡುವುದು ಇವರ ತಪ್ಪಲ್ಲ, ಪ್ರಕೃತಿಯ ಆಟ. ಇವರು ಕೆಲಸ ಮಾಡುವ ಕಾಲ ಮತ್ತು ವಿಧಾನಗಳೂ ಭಿನ್ನವಾಗಿರುತ್ತವೆ. ಬೇಸಿಗೆಯಲ್ಲಿ ಬಿಸಿಲಿನ ಜಳದಿಂದಾಗಿ ಹೊಲಗೆಲಸವನ್ನು ಮುಂಜಾನೆ ಆದಷ್ಟು ಬೇಗ ಅವರಿಗೆ ಮತ್ತು ಅವರ ಎತ್ತುಗಳಿಗೆ ಬಿಸಿಲು ಚುರುಕಾಗುವ ಮುನ್ನ ಮುಗಿಸಬೇಕು. ಬಿತ್ತನೆಯಾದ ನಂತರ, ಪೈರು ಕಳೆ ಅಥವಾ ಕೊಯ್ಲಿಗೆ ಬರುವವರೆಗೆ ಕಾದು ಕುಳಿತಿರಬೇಕು. ಹಡದಿ ದನ, ಹಕ್ಕಿಪಕ್ಷಿಗಳಿಂದ, ಕಳ್ಳಕಾಕರಿಂದ ಪೈರನ್ನು ರಕ್ಷಿಸಬೇಕು. ಇವೂ ಕೆಲಸಗಳೆ. ಆದರೆ ಇದಾವುದನ್ನೂ ತಿಳಿಯದ ನಗರವಾಸಿಗಳು, ಅಧಿಕಾರಿಗಳು ತಮ್ಮ ಕಛೇರಿ ವೇಳೆಯಲ್ಲಿ ಹಳ್ಳಿಗೆ ಹೋದಾಗ ಗುಡಿ, ಕಟ್ಟೆಗಳ ಮೇಲೆ ಅಥವಾ ಹೊಲದ ಬದುವಿನಲ್ಲಿರುವ ಮರದ ನೆರಳಲ್ಲಿ ಹರಟೆ ಹೊಡೆಯುತ್ತಾ ಕುಳಿತ ಗ್ರಾಮಸ್ಥರನ್ನು ನೋಡಿ ಇವರು ಕೆಲಸವಿಲ್ಲದವರು, ಸೋಮಾರಿಗಳು ಎಂದು ಹೀಯಾಳಿಸಿದ್ದಾರೆ.

ಅಲ್ಲದೆ ಜಾನಪದರರಲ್ಲಿ ಶ್ರಮ, ವಿರಾಮ ಮತ್ತು ಮನರಂಜನೆಗೆ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ. ಇವರ ಅನೇಕ ಕೆಲಸಗಳು ಶ್ರಮದ ಆಧಾರದ ಮೇಲೆ ಮಾಡುವ ಚಟುವಟಿಕೆಗಳು. ಜೊತೆಗೆ ಒಂದೇ ಬಗೆಯ ಕೆಲಸವನ್ನು ಪದೇಪದೆ ಮಾಡುವುದರಿಂದ ಬೇಸರಿಕೆ ಬರುತ್ತದೆ. ಇವುಗಳನ್ನು ಮಾಡಲು ಶ್ರಮಕ್ಕಿಂತ ಕಾಲದ ವ್ಯಯ ಹೆಚ್ಚು. ಬುದ್ಧಿ ಮತ್ತು ಏಕಾಗ್ರತೆಗಿಂತ ಭೌತಿಕವಾಗಿ ಅವರು ಅಲ್ಲಿರುವುದು ಮುಖ್ಯ. ಉದಾಹರಣೆಗೆ ಅವರು ಹೊಲ-ಕಣ-ಮನೆಗಳನ್ನು ಕಾಯುವುದಿರುತ್ತದೆ. ಈ ಕೆಲಸ ಮಾಡುವಾಗಲೂ ಬೇಸರಿಕೆ ಕಳೆಯಲು ಅವರು ಹಾಡುತ್ತಾರೆ, ಹರಟುತ್ತಾರೆ, ನಗುತ್ತಿರುತ್ತಾರೆ. ಹೊರಗಿನವರು ಇದನ್ನು ಅಪಾರ್ಥ ಮಾಡಿಕೊಂಡು ಇವರು ಹರಟೆಮಲ್ಲರು, ಸೋಮಾರಿಗಳು ಎಂದು ಹೇಳಿದ್ದಾರೆ. ಜಾನಪದಿಗಳು ಮಾಡುವ ಕೆಲಸಗಳು ಅಷ್ಟಾಗಿ ಮನಸ್ಸಿನ ಏಕಾಗ್ರತೆ ಬೇಕಿಲ್ಲದವುಗಳಿದ್ದು ಮುಖ್ಯವಾಗಿ ದೈಹಿಕ ಶ್ರಮ ಬಳಸಿ, ಕೈಮುಟ್ಟಿ ಮಾಡುವಂತಹ ಕೆಲಸಗಳು. ಅಲ್ಲದೆ ಪ್ರತಿನಿತ್ಯ ಮತ್ತು ಇಡೀ ದಿನ ಹತ್ತಿ ಬಿಡಿಸುವುದು, ಕಳೆ ಕೀಳುವುದು, ಕುಟ್ಟುವುದು, ಬೀಸುವುದು ಮಾಡುವುದು ಬೇಸರಿಕೆ ತರುತ್ತದೆ. ಇದನ್ನು ಕಳೆಯಲು, ಕೆಲಸಕ್ಕೆ ಹುಮ್ಮಸ್ಸು ಮತ್ತು ತಾಳ-ಗತ್ತು ತರಲು ಅವರು ಹಾಡುತ್ತಾರೆ, ಹರಟುತ್ತಾರೆ. ಕೆಲವೊಂದು ಹಾಡುಗಳು ಅವರು ಮಾಡುವ

ಕೆಲಸದ ವಿವಿಧ ಹಂತಗಳನ್ನು ಗುರುತಿಸಲು, ಕ್ರಮವರಿತು ಕೆಲಸ ಮಾಡಲು ನೆರವಾಗುತ್ತವೆ. ಉದಾಹರಣೆಗೆ ಬೀಸುವಾಗ, ಕಳೆ ತೆಗೆಯುವಾಗ, ಕೊಯ್ಲು ಮಾಡುವಾಗ, ಹಂತಿ ಕಟ್ಟುವಾಗ, ತೇರು ಕಟ್ಟುವಾಗ, ಬಲೆ ಹೆಣೆಯುವಾಗ ಹಾಡಲು ಸೂಕ್ತ ಪದಗಳಿವೆ. ಇವುಗಳನ್ನು ಹಾಡಿ ತಮ್ಮ ಬೇಸರ ಮತ್ತು ದಣಿವನ್ನು ನಿವಾರಿಸಿಕೊಳ್ಳುವುದರ ಜೊತೆಗೆ ಕೆಲಸಕ್ಕೆ ಹುರುಪು ಪಡೆಯುತ್ತಿದ್ದರು. ಗ್ರಾಮಸ್ಥರ ಈ ಹಾಡು ಕುಣಿತಗಳಿಗೆ ಇರುವ ಕಾರ್ಯವನ್ನು, ಅರ್ಥವನ್ನು ಹೊರಜಗತ್ತಿಗೆ ತಿಳಿಸಿ ಅವರ ಬಗೆಗೆ ಇದ್ದ ತಪ್ಪು ಅಭಿಪ್ರಾಯಗಳನ್ನು ತೊಡೆದು ಹಾಕುವಲ್ಲಿ ಮಾನವಶಾಸ್ತ್ರಜ್ಞರು ನೆರವಾಗಿದ್ದಾರೆ.

ಗ್ರಾಮಸ್ಥರಲ್ಲಿ ಬಂಡವಾಳ ಇಲ್ಲದಿರುವುದಕ್ಕೆ ಅವರಲ್ಲಿ ಉಳಿತಾಯ ಮತ್ತು ಸಂಪತ್ತು ನಗದು ಹಣದ ರೂಪದಲ್ಲಿ ಇಲ್ಲದೆ ಇರುವುದಕ್ಕೆ, ಅನೇಕ ಕಾರಣಗಳಿವೆ. ಆಧುನಿಕ ಸಮಾಜದಲ್ಲಿ ಉಳಿತಾಯವೆಂದರೆ ಬ್ಯಾಂಕಿನಲ್ಲಿ ನಗದು ರೂಪದಲ್ಲಿರುವ ಹಣ. ಗ್ರಾಮೀಣ ಸಮಾಜದಲ್ಲಿ ಕೇವಲ ಹಣಕ್ಕೆ ಯಾವ ಬೆಲೆಯೂ ಇಲ್ಲ. ಆದ್ದರಿಂದ ಇವರು ನಗದು ರೂಪದಲ್ಲಿ ಉಳಿತಾಯ ಮಾಡಿರುವುದಿಲ್ಲ. ಬದಲಿಗೆ ಶ್ರಮದಿನಗಳ, ಋಣದ ರೂಪದಲ್ಲಿ ಉಳಿತಾಯ ಮಾಡುತ್ತಾರೆ. ಅಂದರೆ ಅವರ ನೆರೆಹೊರೆಯಲ್ಲಿ, ಊರಲ್ಲಿ, ಜಾತಿಯಲ್ಲಿ ಯರಾದರೂ ವಿವಾಹ, ನಾಮಕರಣ, ಶವಸಂಸ್ಕಾರ ಮುಂತಾದ ಕ್ರಿಯಾವಿಧಿಗಳನ್ನು ಆಚರಿಸುತ್ತಿದ್ದರೆ ಇತರರು ಅವರಿಗೆ ನೆರವು ನೀಡುತ್ತಾರೆ. ಈ ನೆರವಿನ ದಿನಗಳು ಮತ್ತು ಮುಯ್ಯಿ ಹಣ ಉಳಿತಾಯವಾಗುತ್ತದೆ. ದಿನನಿತ್ಯ ಜೀವನದಲ್ಲಿ, ವಿವಾಹ ಮುಂತಾದ ವಿಶೇಷ ಸಂದರ್ಭಗಳಲ್ಲಿ ಗ್ರಾಮಸ್ಥರು ಒಬ್ಬರಿಗೊಬ್ಬರು ನೆರವಾಗುತ್ತಾರೆ. ಇಲ್ಲಿ ಸಹಾಯವನ್ನು ಕೇಳಿ ಪಡೆಯಬೇಕೆಂದಿಲ್ಲ, ಇತರರ ಅವಶ್ಯಕತೆ ತಿಳಿದು ಹಿಂದೆ ಇವರಿಂದ ನೆರವು ಪಡೆದವರು ಹಾಗೂ ವಿರಾಮ ವೇಳೆ ಇರುವವರು, ಸ್ವತಃ ತಾವೇ ಹೋಗಿ ಸಹಾಯ ಮಾಡುತ್ತಾರೆ. ಇದರಿಂದ ಸ್ವಲ್ಪ ಸ್ವಲ್ಪವಾಗಿ ಶ್ರಮದ ದಿನಗಳು, ಪ್ರಸಂಗಗಳು ಮತ್ತು ಹಣ ಕೂಡುತ್ತಾ ಉಳಿತಾಯವಾಗುತ್ತಾ ಹೋಗುತ್ತದೆ. ಹೀಗೆ ನೀಡುವವರಿಗೆ ಅವಶ್ಯಕತೆ ಬಿದ್ದಾಗ ಅವರು ವಾಪಾಸು ಮಾಡುತ್ತಾರೆ. ಜಾನಪದ ಸಮಾಜದಲ್ಲಿ ಇಂಥ ಸಂದರ್ಭಗಳಲ್ಲಿ ಕೂಲಿಗಾಗಿ ಕೆಲಸ ಮಾಡುವವರು ಸಿಗುವುದಿಲ್ಲ. ಹೀಗಾಗಿ ಎಲ್ಲರೂ ಮುಂದೆ ತಮಗೇ ಈ ನೆರವು ಬೇಕಾಗಬಹುದೆಂದು ಇತರರಿಗೆ ನೆರವು ನೀಡುತ್ತಾ ಹೋಗುತ್ತಾರೆ. ಒಂದು ವಿಧದಲ್ಲಿ ಹಣಕ್ಕಿಂತ ಮುಖ್ಯವಾಗಿ ಜನರನ್ನು ಗಳಿಸುತ್ತಾ ಹೋಗುತ್ತಾರೆ.

ಜಾನಪದ ಸಂಸ್ಕೃತಿಯಲ್ಲಿ ನಗದು ಹಣದ ಉಳಿತಾಯದ ಆಶಯ ಕಡಿಮೆ. ಏಕೆಂದರೆ ಇವರದು ಸದಾ ಅಭಾವದ ಸಂಸ್ಕೃತಿ. ಯಾರಲ್ಲಾದರೂ ಸ್ವಲ್ಪ ಹಣ ಸಿಕ್ಕಿದರೆ ಅದನ್ನು ಹಿಂದೆಂದೋ ಬೇಕೆಂದು ಕೇಳಿದ್ದ ಸಂಬಂಧಿಕರಿಗೆ, ಸ್ನೇಹಿತರಿಗೆ ತಾವೇ [illegible]

ಕೈಗಡ ಅಥವಾ ಸಹಾಯವಾಗಿ ಕೊಟ್ಟು ಬಿಡುತ್ತಾರೆ ಅಥವಾ ಕೊಡಬೇಕಾಗುತ್ತದೆ. ಏಕೆಂದರೆ ಕಿರುಗಾತ್ರದ ಮುಖಾಮುಖಿ ಸಂಬಂಧವುಳ್ಳ ಈ ಸಮಾಜದಲ್ಲಿ ತಮ್ಮಲ್ಲಿ ಮಿಕ್ಕಿದ್ದನ್ನು ಇತರರಿಗೆ ತಿಳಿಯದಂತೆ ಗುಪ್ತವಾಗಿಡಲು, ಮುಚ್ಚಿಡಲು ಬರುವುದಿಲ್ಲ. ಬದಲಿಗೆ ಕಷ್ಟದಲ್ಲಿರುವವರಿಗೆ, ಅವಶ್ಯಕತೆ ಇರುವವರಿಗೆ ಹೀಗೆ ಕೊಡುವುದರಿಂದ ಈ ಉಳಿತಾಯದ ಮೊತ್ತ ಉಳಿತಾಯವಾಗುವುದರ ಜೊತೆಗೆ ಸಾರ್ಥಕವೂ ಆಗುತ್ತದೆ. ಜೊತೆಗೆ ಈ ಉಳಿತಾಯವಾದದ್ದು ಅನ್ನ ಆಹಾರದಂತಹ ವಸ್ತುಗಳಾದರೆ ಇವರಲ್ಲಿದ್ದರೂ ಕೆಟ್ಟು ಹೋಗುತ್ತವೆ. ಬದಲಿಗೆ ಅವುಗಳ ಇತರರಿಗೆ ನೆರವೆಂದು ಕೊಡುತ್ತಾರೆ.

ಮಿಗಿಲಾಗಿ ಯಾರಾದರೂ ಹಣ ಅಥವಾ ಇಂತಹ ಬಳಕೆಯ ವಸ್ತುಗಳನ್ನು ಉಳಿಸಿದ್ದರೆ ಇದರಿಂದ ಅವರಿಗೆ ಘನತೆ ಗೌರವ ಬರುವುದಿಲ್ಲ; ಬದಲಿಗೆ ಜಿಪುಣರು ಅಥವಾ ಯಾರಿಗೊ ಮೋಸ ಮಾಡಿ ಇದನ್ನು ಗಳಿಸಿದ್ದಾರೆಂದು, ಉಳಿಸಿದ್ದಾರೆಂದು ಕೆಟ್ಟ ಹೆಸರು ಬರುತ್ತದೆ. ಏಕೆಂದರೆ ಅದೇ ಊರಲ್ಲಿ, ಅದೇ ವೃತ್ತಿ ಮಾಡಿ, ಅಷ್ಟೇ ಕಷ್ಟಪಟ್ಟು ದುಡಿದರೂ ಉಳಿಸಲಾಗದಿದ್ದುದನ್ನು ಇವರು ಹೇಗೆ ಸಾಧಿಸಿದರೆಂದು, ಇದ್ರಲ್ಲಿ ಏನೋ ಮೋಸ ನಡೆದಿದೆ ಎಂದು ತಿಳಿಯುತ್ತಾರೆ ಮಾತ್ರವಲ್ಲ ಗುಲ್ಲು ಮಾಡುತ್ತಾರೆ. ಹೀಗಾಗಿ ಜಾನಪದ ಸಮಾಜದಲ್ಲಿ ಹಣಸ್ಥರಿಗೆ ಇತರರು ಹೆದರಬಹುದೇ ವಿನಃ ಗೌರವ ಕೊಡುವುದಿಲ್ಲ. ಬದಲಿಗೆ ಅವಕಾಶ ಸಿಕ್ಕಾಗ ಒಮ್ಮೆ ಅವರನ್ನು ಸಾಹುಕಾರ ಎಂದು ಕರೆದು, ಎಂಜಲು ಕೈಯಿಂದ ಕೂಡ ಕಾಗೆ ಹೊಡೆಯದ, ರೊಟ್ಟಿಯ ನೆರಳು ನೆಕ್ಕುವ ಜಿಪುಣ ಎಂದೆಲ್ಲಾ ಹೇಳಿ ಗೇಲಿ ಮಾಡುತ್ತಾರೆ. ಅವರಲ್ಲಿಯ ಹಣ ನಾಯಿ ಮೊಲೆಯಲ್ಲಿಯ ಹಾಲಿನಂತೆ ಎಂದು ದೂರುತ್ತಾರೆ.

ಗ್ರಾಮೀಣ ಸಮಾಜದಲ್ಲಿ ಮನರಂಜನೆಗೆ ಇರುವ ಅನೇಕ ಅವಕಾಶಗಳಲ್ಲಿ ಹರಟೆಯೂ ಒಂದು. ಇಲ್ಲಿ ಹರಟೆ ಕಾಡು ಹರಟೆಯಲ್ಲ, ಇದರಿಂದಲೂ ಸಮಾಜಕ್ಕೆ ಉಪಯೋಗವಿದೆ. ಯಾವುದಾದರೂ ಸಾರ್ವಜನಿಕ ಜಾಗಗಳಾದ ಗುಡಿ, ಕಟ್ಟೆ, ಬಡಗಿ ಹಟ್ಟಿ ಮುಂತಾದ ಕಡೆ ಜನ ಕೂಡಿದಾಗ ಕಾಲಕ್ಷೇಪಕ್ಕೆ ಹರಟೆ ಹೊಡೆಯುವುದು ಸಾಮಾನ್ಯ. ಆದರೆ ಹೀಗೆ ನಾಲ್ಕಾರು ಜನರಿರುವ ಕಡೆ ಹರಟೆಗೆ ಬರುವ ವಿಷಯಗಳೂ ಯಾರೊಬ್ಬರ ವೈಯಕ್ತಿಕ ವಿಷಯವಾಗಿರದೆ, ಎಲ್ಲರೊಟ್ಟಿಗೆ ನಕ್ಕು ನಲಿಯುವ ವಿಷಯಗಳಿರುತ್ತವೆ. ಇಲ್ಲಿ ವಿಷಯದ ಮೇಲೆ ಕೂಲಂಕಷವಾಗಿ, ನಿಷ್ಪಕ್ಷಪಾತವಾಗಿ, ಸಾರ್ವಜನಿಕವಾಗಿ ಚರ್ಚೆ ನಡೆಯುತ್ತದೆ. ಕೆಲವರು ವಿಷಯದ ಪರವಾಗಿ, ಉಳಿದವರು ವಿಷಯದ ವಿರುದ್ದವಾಗಿ ಚರ್ಚೆಗೆ ನಿಲ್ಲುತ್ತಾರೆ. ಇಲ್ಲಿ ಬಂದು ಕೂಡಲು ಆ ಭಾಗದ ಗ್ರಾಮದ ಎಲ್ಲರಿಗೂ ಮುಕ್ತ ಅವಕಾಶವಿದ್ದರೂ ಹಿರಿಯರು ಮಾತ್ರ ಮಾತಾಡುವ ಗೌರವ ಹೊಂದಿರುತ್ತಾರೆ. ಕಿರಿಯರು ಅಲ್ಲಿ ನಡೆದ ಪರ-ವಿರೋಧದ ಚರ್ಚೆ ಕೇಳಿ ಅನೇಕ ವಿಚಾರಗಳನ್ನು ತಿಳಿಯಬಹುದು. ಇದರಿಂದ ಸೂಕ್ತ ರೀತಿಯಲ್ಲಿ ನಡೆದುಕೊಳ್ಳದಿದ್ದರೆ ನಾವು ಕೂಡ ಹೀಗೆ ಸಮಾಜದಲ್ಲಿ ಇತರರ ಹರಟೆಯ

ವಸ್ತುವಾಗುತ್ತೇವೆ ಎಂಬುದನ್ನು ಅವರು ಅರಿಯುತ್ತಿದ್ದರು. ಹರಟೆಯ ಗುಂಪುಗಳು ಗ್ರಾಮಸ್ಥರಲ್ಲಿ ವಿಚಾರ ವಿನಿಮಯ, ಅರಿವು, ಮನರಂಜನೆ, ಸಾರ್ವಜನಿಕ ಅಭಿಪ್ರಾಯ ಮೂಡಿಸುವುದು ಹೀಗೆ ಅನೇಕ ಕಾರ್ಯಗಳನ್ನು ಮಾಡುತ್ತಿದ್ದವು. ಇಂತಹ ಒಂದು ಉಪಯುಕ್ತ ಕಾರ್ಯಮಾಡುತ್ತಿರುವ ಅಥವಾ ಉದ್ದೇಶ ಹೊಂದಿರುವ ಹರಟೆ ಗುಂಪುಗಳ ಬಗ್ಗೆ ತಪ್ಪಾಗಿ ತಿಳಿದಿದ್ದವರಿಗೆ ಮಾನವಶಾಸ್ತ್ರಜ್ಞರು ಸೂಕ್ತ ವಿವರಣೆ ನೀಡುವುದರ ಮೂಲಕ ತಿಳಿಸಿಕೊಟ್ಟಿದ್ದಾರೆ.

ಗ್ರಾಮಸ್ಥರಲ್ಲಿ ತಮ್ಮ ಸಂಸ್ಕೃತಿಗೆ ಅನುಗುಣವಾಗಿ ಅವರದೇ ಆದ ಭಾವನೆಗಳು ಇರುತ್ತವೆ. ಇವನ್ನು ಅವರ ನಡಾವಳಿಗಳಲ್ಲಿ, ಆಚಾರ-ವಿಚಾರಗಳಲ್ಲಿ, ನಂಬಿಕೆಯಲ್ಲಿ ಕಾಣಬಹುದು. ಅವರು ತಮ್ಮದೆನ್ನುವುದಕ್ಕೆ ಹೆಚ್ಚಿನ ಬೆಲೆ ಕೊಡುತ್ತಾರೆ. ಈ ಕಾರಣದಿಂದ ಅವರು ತಮ್ಮ ಊರು, ಊರದೇವರು, ನೆಲ ನೀರು, ಹಾಲು-ತುಪ್ಪ, ದವಸ ಧಾನ್ಯ ಹೀಗೆ ಎನೆಲ್ಲಾ ವಸ್ತುಗಳಿಗೆ ಭಾವನಾತ್ಮಕ ಸ್ಥಾನ ನೀಡುತ್ತಾರೆ. ಇದರಂತೆ ಅವರ ನಾಡಿನ ಹವಾಮಾನ, ಸ್ತ್ರೀಪುರುಷರು ಕೂಡ ಉತ್ತಮ ಅಥವಾ ನೀಚ ಎಂದು ಭಾಗಮಾಡುತ್ತಾರೆ. ಆದ್ದರಿಂದ ಇಂತಲ್ಲಿಂದಲ್ಲೇ ಹೆಣ್ಣು, ಎಮ್ಮೆ, ಎತ್ತು ತರಬೇಕು ಅಥವಾ ತರಬಾರದು ಎಂಬ ಅಭಿಪ್ರಾಯ ಅವರಲ್ಲಿರುತ್ತದೆ. ಜೊತೆಗೆ ತಮ್ಮದಲ್ಲದ ಪ್ರದೇಶದಿಂದ ಬಂದ ವಸ್ತುಗಳು ರುಚಿ ಇರುವುದಿಲ್ಲ, ವ್ಯಕ್ತಿಗಳು ಕೆಟ್ಟವರು, ಆಲಸಿಗಳು, ಪುಂಡರು ಮುಂತಾದ ಭಾವನೆ ಇರುತ್ತದೆ. ವ್ಯವಹಾರ, ವಿವಾಹ ಸಂಬಂಧ ಮಾಡುವಾಗ ಇವರಿಂದ ದೂರವಿರುತ್ತಾರೆ. ಗ್ರಾಮೀಣ ಜನರ ಮತ್ತೊಂದು ಭಾವನೆ ಎಂದರೆ ಹಣ ಹಾಗೂ ಇತರೆ ಯಾವುದೇ ಭೌತ ವಸ್ತುವಿನಂತೆ ಪ್ರೀತಿ, ಸ್ನೇಹತನ, ಅಧಿಕಾರ ಸ್ಥಾನ ಮುಂತಾದವು ವಿರಳ ಎಂಬುದು. ಇವನ್ನು ತಾವೇ ಹೊಂದಲು ಮತ್ತು ತಮ್ಮಲ್ಲೇ ಉಳಿಸಿಕೊಳ್ಳಲು ಇಲ್ಲದ ಶ್ರಮ ವಹಿಸುತ್ತಾರೆ. ಹೀಗಾಗಿ ತಮ್ಮ ಹತ್ತಿರದ ಸಂಬಂಧಿ ಅಥವಾ ಸ್ನೇಹಿತನೊಬ್ಬ ತಮಗೆ ಆಗದವರೊಡನೆ ಅಥವಾ ಎದುರಾಳಿಗಳೊಡನೆ ವ್ಯವಹಾರಿಕ ಸಂಬಂಧ ಹೊಂದಿದರೂ ಇವರು ಅವನ ಸ್ನೇಹ ನಿಷ್ಠೆಯ ಬಗೆಗೆ ಶಂಕಿಸುತ್ತಾರೆ. ಅವರಲ್ಲಿಯ ಇಂತಹ ಕುರುಡು ಪ್ರೀತಿಯಿಂದಾಗಿ ತಂದೆ ಮಕ್ಕಳಲ್ಲಿ, ಅತ್ತೆ ಸೊಸೆಯರಲ್ಲಿ ಜಗಳಗಳು ಬರುತ್ತವೆ. ಉದಾಹರಣೆಗೆ, ತಮ್ಮ ಮಗಳನ್ನು ಸರಿಯಾಗಿ ನೋಡಿಕೊಳ್ಳಲೆಂದು ಅಳಿಯನಿಗೆ ಅತೀ ಹೆಚ್ಚಿನ ಆದರ ಆಮಿಷ ತೋರಿಸಿ ತಮ್ಮ ಗಂಡು ಮಕ್ಕಳನ್ನೇ ದೂರ ಮಾಡಿಕೊಂಡಿರುವವರನ್ನು ಕಾಣುತ್ತೇವೆ.

ಜಾನಪದರ ಇನ್ನೂ ಒಂದು ಹುಚ್ಚು ಆಸೆ ಎಂದರೆ ಹಬ್ಬ-ಜಾತ್ರೆಗಳಿಗೆ ಹೋಗುವುದು. ಇದು ತಮ್ಮ ಅಥವಾ ಹತ್ತಿರದ ಯಾವುದೇ ಊರಲ್ಲಿ ಆಚರಿಸಲ್ಪಡುವ ಜಾತ್ರೆ ಇರಬಹುದು; ಎಷ್ಟೇ ಕಷ್ಟವಾದರೂ ಆ ಜಾತ್ರೆಗಳಿಗೆ ತಪ್ಪದೇ ಹೋಗಿಬಿಡುತ್ತಾರೆ. ಅಲ್ಲಿಯ ಸಂಬಂಧಿಕರು ಇವರನ್ನು ಆಹ್ವಾನಿಸಲಿ ಬಿಡಲಿ, ವಿರಾಮವಿರಲಿ ಇಲ್ಲದಿರಲಿ, ಇವರು ಮಾತ್ರ

ಜಾತ್ರೆಗೆ ಹೋಗಲೇಬೇಕು. ಅಂದು ಎಂಥ ಕೆಲಸವಿದ್ದರೂ ಇದನ್ನು ಬಿಟ್ಟು ಹೊರಡುವರು. ಮುಂದೂಡಲಾರದಂತಹ ಕೆಲಸವಿದ್ದರೆ ಅದನ್ನು ಇಡೀ ರಾತ್ರಿ, ಕಾಡಿ ಬೇಡಿ ಇತರರ ನೆರವನ್ನು ತೆಗೆದುಕೊಂಡಾದರೂ ಮುಗಿಸಿಯೇ ಹೊರಡುತ್ತಾರೆ. ಯಾವುದಾದರೂ ಕಾರಣಕ್ಕೆ ಈ ಕೆಲಸವನ್ನು ಮುಗಿಸದಾಗದಿದ್ದರೆ ಹಿರಿಯರ ಒಪ್ಪಿಗೆಯನ್ನೂ ಪಡೆಯದೆ, ಇದಕ್ಕೆ ಮುಂದೆ ಸಿಗುವ ಶಿಕ್ಷೆಯನ್ನೂ ಲಕ್ಷಿಸದೆ ಹೋಗಿಬಿಡುತ್ತಾರೆ. ವಾಪಾಸು ಬಂದ ನಂತರ ಸಿಗುವ ಶಿಕ್ಷೆಯನ್ನು ಸಂತೋಷದಿಂದ ಅನುಭವಿಸುತ್ತಾರೆ.

ಜಾತ್ರೆಗಳ ಬಗೆಗೆ ಅವರಲ್ಲಿ ಇಂತಹ ಒಂದು "ಹುಚ್ಚು" ಇರುವುದಕ್ಕೆ ಕಾರಣಗಳಿಲ್ಲದಿಲ್ಲ. ಮೊದಲನೆಯದಾಗಿ ಜಾತ್ರೆಗೆ ಹೋಗುವುದರಿಂದ ದಿನನಿತ್ಯ ಜೀವನ ಚಕ್ರದಿಂದ ಅವರಿಗೆ ಸ್ವಲ್ಪವಾದರೂ ಬಿಡುಗಡೆ ಸಿಗುತ್ತದೆ. ಮನರಂಜನೆಗೆ ಸಾಕಷ್ಟು ಅವಕಾಶವಿಲ್ಲದ ಗ್ರಾಮ ಸಮಾಜದಲ್ಲಿ ಇದು ಅವಶ್ಯಕ. ಎರಡನೆಯದಾಗಿ ಅಲ್ಲಿ ಜಾತ್ರೆಗೆ ಇತರೆ ಊರುಗಳಿಂದ ಸಮವಯಸ್ಕ ಬಂಧುಗಳು ಮತ್ತು ಸ್ನೇಹಿತರು ಬಂದಿರುತ್ತಾರೆ. ಅವರೊಡನೆ ಹರಟೆ ಹೊಡೆಯುವುದು, ಕುಣಿತ-ನಾಟಕ ನೋಡುವುದು, ಹೆಚ್ಚಿನ ಮೋಜು ತರುತ್ತದೆ. ಮೂರನೆಯದಾಗಿ ವರ್ಷಕ್ಕೆ ಒಮ್ಮೆ ಬರುವ ಹಬ್ಬಕ್ಕೆ ಸ್ನೇಹಿತರ ಹಾಗೂ ನೆಂಟರ ಮನೆಯಲ್ಲಿ ಏನೆಲ್ಲಾ ತಿಂಡಿ, ಸಿಹಿ ಅಡಿಗೆ ಮಾಡುತ್ತಾರೆ. ಈ ಮೂರೂ ವಿಷಯಗಳು ನಂತರ ಅವರಲ್ಲಿ ಇಡೀ ವರ್ಷ ಚರ್ಚೆಯ ಸವಿನೆನಪಿನ ವಿಷಯಗಳಾಗಿ ಉಳಿಯುತ್ತವೆ. ತಾನು ಜಾತ್ರೆಗೆ ಹೋಗದಿದ್ದರೆ ಇವುಗಳಿಂದ ವಂಚಿತನಾಗುವುದರ ಜೊತೆಗೆ ಗ್ರಾಮದಲ್ಲಿ ಇತರರು ಈ ವಿಷಯದ ಮೇಲೆ ಚರ್ಚಿಸುವಾಗಲೂ ತಾನು ಈ ವಿಷಯಗಳಿಂದ, ಅವರಿಂದ ಹೊರಗೆ ಉಳಿಯುತ್ತೇನೆ ಎಂದು ಭಾವಿಸುತ್ತಾರೆ. ಹೀಗಾಗಿ ಇಂತಹ ಯಾವ ಅವಕಾಶವನ್ನೂ ಕಳೆದುಕೊಳ್ಳುವುದಿಲ್ಲ. ಎಂತಹ ತೊಂದರೆ, ಅಡ್ಡಿ-ಆತಂಕಗಳು ಬಂದರೂ ಲಕ್ಷಿಸದೆ ಜಾತ್ರೆಗೆ ಹೋಗಿ ಬಂದು ಬಿಡುತ್ತಾರೆ. ಇಂದಿಗೂ ಗ್ರಾಮೀಣ ಸಂಸ್ಕೃತಿಯ ನೆರಳಲ್ಲಿರುವ ಅನೇಕ ನಗರವಾಸಿಗಳೂ ಆಗಾಗ ರಜ ಹಾಕಿ, ರಜವಿಲ್ಲದಿದ್ದರೆ ಅರ್ಜಿ ಹಾಕದೆ, ಹಣವಿಲ್ಲದಿದ್ದರೆ ಸಾಲ ಪಡೆದಾದರೂ ಹಬ್ಬ, ಜಾತ್ರೆಗಳಿಗೆ ತಮ್ಮ ಹಳ್ಳಿಗಳಿಗೆ ಹೋಗಿ ಬಿಡುತ್ತಾರೆ. ಇವು ಅವರಲ್ಲಿ ಜಾನಪದ ಮೌಲ್ಯಗಳು ಇನ್ನೂ ಉಳಿದುಕೊಂಡಿರುವುದನ್ನು ತೋರಿಸುತ್ತವೆ.

ಇಂದು ರಾಜಕೀಯ ರಂಗದಲ್ಲಿ ಗ್ರಾಮಸ್ಥರ ಭಾವನೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಕಂಡು ಬರುತ್ತದೆ. ಇವರಲ್ಲಿಯ ಕಳ್ಳುಬಳ್ಳಿ, ಪ್ರಾದೇಶಿಕ ಮನೋಭಾವನೆ, ಜಾತೀಯತೆ ಹೀಗೆ ಯಾವುದಾದರೊಂದು ವಿಚಾರವನ್ನು ಬಳಸಿಕೊಂಡು ರಾಜಕಾರಣಿಗಳು ತಮ್ಮ ಕೆಲಸ ಸಾಧಿಸಕೊಳ್ಳುತ್ತಿರುವುದು ಕಂಡು ಬರುತ್ತದೆ. ಉದಾಹರಣೆಗೆ ಚುನಾವಣೆಯ ಸಂದರ್ಭದಲ್ಲಿ ಸಾಮಾನ್ಯವಾಗಿ ಜಾನಪದರು ಅಭಿಮಾನ ಪಡುವ ವಿಚಾರಗಳನ್ನು ಬಳಸಿಕೊಂಡು ತಮ್ಮ ಗುರಿ ಸಾಧಿಸಿಕೊಂಡುಬಿಡುತ್ತಾರೆ. ಅಲ್ಲದೆ ಜಾನಪದರು

ತಮ್ಮ ಕುಟುಂಬ, ಜಾತಿ ಅಥವಾ ಗ್ರಾಮ ಮಟ್ಟದ ಹಿರಿಯರ ನಿಷ್ಠೆ ಹಾಗೂ ನಿಯಂತ್ರಣದಲ್ಲಿರುತ್ತಾರೆ. ಈ ಹಿರಿಯರನ್ನು ಒಪ್ಪಿಸಿದರೆ ಇಡೀ ಗುಂಪಿನ ಮತಗಳು ಸಿಗುತ್ತವೆ ಎಂಬುದು ಅವರಿಗೆ ಗೊತ್ತಿರುತ್ತದೆ. ಈ ಕಾರಣದಿಂದಾಗಿ ಇಂತಹ ಮತದಾರರನ್ನು "ಓಟಿನ ಬ್ಯಾಂಕ್" ಎಂದು ಕರೆದಿದ್ದಾರೆ. ಗುಂಪಿನ ಹಿರಿಯರಿಗೆ ಗುಡಿ-ಕಟ್ಟೆ ಕಟ್ಟಲು ಅವರು ಕೇಳಿದಷ್ಟು ಹಣವನ್ನು ಕೊಟ್ಟು ಬದಲಿಗೆ ಅವರಿಂದ ಹುಂಡೆಯಾಗಿ ಈ ಮತಗಳನ್ನು ಪಡೆಯುತ್ತಾರೆ. ಇಂತಹ ಪರಿಸ್ಥಿತಿ ಇನ್ನೂ ಜಾನಪದ ಸಂಸ್ಕೃತಿಯನ್ನು ಹೊಂದಿರುವ ಸಮಾಜದಲ್ಲಿ ಮಾತ್ರ ಕಂಡುಬರುತ್ತದೆ ಮತ್ತು ಇದನ್ನು ಅವರಲ್ಲಿಯ ಒಗ್ಗಟ್ಟಿನ ಕುರುಹು ಎಂದು ತಪ್ಪಾಗಿ ಹೇಳಲಾಗುತ್ತಿದೆ.

ಮಾನವಶಾಸ್ತ್ರಜ್ಞರ ಮತ್ತೊಂದು ಕೊಡಿಗೆ ಎಂದರೆ ಒಂದು ಸಂಸ್ಕೃತಿಗೆ ಸೇರಿದವರಲ್ಲಿ ಯಾವ ವಿಷಯಕ್ಕೆ ನಾಚಿಕೆ ಅಥವಾ ಅಪರಾಧ ಭಾವನೆ ಬರುತ್ತದೆ ಎನ್ನುವುದನ್ನು ತಿಳಿಸಿಕೊಟ್ಟಿರುವುದು. ಇಂದು ಗ್ರಾಮೀಣ ಸಮಾಜದಲ್ಲಿ ಸಂಭವಿಸುವ ಆತ್ಮಹತ್ಯೆ, ಕೊಲೆ ಮುಂತಾದವನ್ನು ತೆಗೆದುಕೊಂಡರೆ ಇವು ಅವರ ಸಂಸ್ಕೃತಿಯ ನಿಜವಾದ ಹಿನ್ನೆಲೆಯನ್ನು ತಿಳಿಸುತ್ತವೆ. ಜಾನಪದ ಸಂಸ್ಕೃತಿಗೆ ಸೇರಿದ ತರುಣನೊಬ್ಬ ಓದಲು ನಗರಕ್ಕೆ ಹೋದರೆ ಅವನ ಕುಟುಂಬವೇಕೆ, ಇಡೀ ಕಳ್ಳುಬಳ್ಳಿ ಗುಂಪಿನವರು, ಜಾತಿಯವರು ಮತ್ತು ಗ್ರಾಮದವರು ಅವನ ಈ ಪ್ರಗತಿಯ ಬಗ್ಗೆ ಹೆಮ್ಮೆ ಪಡುತ್ತಾರೆ. ಮನೆಯವರು ತಮ್ಮ ಎಲ್ಲಾ ಕಷ್ಟಗಳನ್ನು ಬದಿಗೊತ್ತಿ ಇವನ ವೆಚ್ಚಕ್ಕೆ ಹಣ ಕೊಡುತ್ತಾರೆ ಮತ್ತು ಇವನೇ ತಮ್ಮ ಭವಿಷ್ಯದ ಆಧಾರವೆಂದು ನಂಬುತ್ತಾರೆ. ಅವನು ಹಳ್ಳಿಯಲ್ಲಿ, ಜಾತಿಯಲ್ಲಿ ಎಲ್ಲಾ ತರುಣರಿಗೆ ದಾರಿ ದೀಪವಾಗಿರುತ್ತಾನೆ. ಅವನೇನಾದರೂ ಈ ಎಲ್ಲರ ನಿರೀಕ್ಷೆಗೆ ತಪ್ಪಿ ನಡೆದರೆ, ತಮ್ಮ ಹುಡುಗ ಹಾಗೆ, ಹೀಗೆ ಎಂದು ಹಾದಿ ಹೊಗಳುತ್ತಿದ್ದ ಎಲ್ಲರಿಗೂ ನಿರಾಶೆಯಾಗುತ್ತದೆ. ನಂತರ ಈ ತರುಣನೂ ಕೂಡ ಇದಕ್ಕೆ ತಾನೇ ಕಾರಣ, ನನ್ನ ಸಕಲ ಶಕ್ತಿಗಳನ್ನು ಬಳಸಿ ನಾನು ಸರಿಯಾಗಿ ಓದಲಿಲ್ಲವೆಂದು ಅವನಲ್ಲಿ ಅಪರಾಧ ಭಾವನೆ ಬರುತ್ತದೆ.

ಇಂತಹ ಮನೋಭಾವ ಸಾಮಾನ್ಯವಾಗಿ ಅಭಿಮಾನಿಗಳಾದ ಜಾನಪದರಲ್ಲಿ ಮಾತ್ರ ಬರುತ್ತದೆ. ತನ್ನ ಪರಾಜಯಕ್ಕೆ ಅನೇಕ ಕಾರಣಗಳಿವೆ, ಈ ಸಣ್ಣ ತಪ್ಪಿಗೆ ತಾನು ನಾಚಿಕೆ ಪಡಬೇಕಲ್ಲದೆ ಅಪರಾಧ ಭಾವನೆ ತಾಳಬಾರದು ಎಂದು ತಿಳಿಯುವುದಿಲ್ಲ. ಹೀಗಾಗಿ ಅನೇಕರು ವೈರಾಗ್ಯ ತಾಳಿ ಮನೆಯಿಂದ ಓಡಿಹೋಗುತ್ತಾರೆ ಅಥವಾ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇದೇ ರೀತಿ ತನ್ನ ಕುಟುಂಬಕ್ಕೆ ಬಂದ ಸಮಸ್ಯೆಯ ನಿವಾರಣೆಗೆ ಕೊಲೆ ಮಾಡಿದವನೊಬ್ಬ ಸೆರೆವಾಸ ಅನುಭವಿಸುವಾಗ ತನ್ನ ಕೃತ್ಯಕ್ಕೆ ಸಂತಾಪ ಅಥವಾ ದುಃಖ ಪಡದೆ ತನ್ನ ಕುಟುಂಬದ ಕಡೆಗಿನ ಕರ್ತವ್ಯವೊಂದನ್ನು ಮಾಡಿದವನಂತೆ ಹೆಮ್ಮೆ ಪಡುತ್ತಾನೆ. ತಮ್ಮ ಮನೆತನದ ಗೌರವ, ಘನತೆಗೆ ಕುತ್ತು ತಂದವರನ್ನು ಅವರು ಕ್ಷಮಿಸುವುದಿಲ್ಲ. ಯಾರಾದರೂ

ತಪ್ಪು ಮಾಡಿದ್ದರೆ ಅವರನ್ನು ಕೊಲೆ ಮಾಡಿ ಜೈಲಿಗೆ ಅಥವಾ ನೇಣುಗಂಬಕ್ಕೆ ಹೋಗಲು ಹಿಂಜರಿಯುವುದಿಲ್ಲ. ಇಂತಹ ವ್ಯಕ್ತಿಯ ಬಗೆಗೆ ಕುಟುಂಬವು ಹೆಮ್ಮೆ ತಾಳುತ್ತದೆ ಮತ್ತು ಅವನು ಅವರಿಗೆ ಪೂಜಾರ್ಹನಾಗುತ್ತಾನೆ.

ಗ್ರಾಮಸ್ಥರಲ್ಲಿಯ ಇಂತಹ ಭಾವನೆಗಳನ್ನು ಅಭ್ಯಾಸ ಮಾಡುವುದರಿಂದ ಅವರು ಜೀವನದ ಉಳಿದ ರಂಗಗಳಲ್ಲಿ ಬರುವ ಸೋಲು ಗೆಲವುಗಳನ್ನು ಹೇಗೆ ತೆಗೆದುಕೊಳ್ಳುತ್ತಾರೆಂದು ತಿಳಿಯಬಹುದು. ಇಂದು ಸರಕಾರ ಗ್ರಾಮಸ್ಥರ ಆರ್ಥಿಕ ಅಭಿವೃದ್ಧಿಗಾಗಿ ಅನೇಕ ಹೊಸ ಹೊಸ ಯೋಜನೆಗಳನ್ನು ತರುತ್ತಿದೆ. ಇವುಗಳನ್ನು ಅಳವಡಿಸಿಕೊಂಡು ಬದಲಾವಣೆ ತರಲು ಕೆಲವೊಂದು ಪ್ರಯತ್ನಗಳು ನಡೆದಿವೆ. ಈ ಯೋಜನೆಗಳು ಫಲಿಸದಾದಾಗ, ಸೋತಾಗ ಜಾನಪದರಲ್ಲಿ ಅಪರಾಧ ಭಾವನೆ ಬರುತ್ತದೆ. ಅಲ್ಲಿಂದ ಮುಂದೆ ಅವರು ಮತ್ತೆ ಯಾವ ಹೊಸ ಕಾರ್ಯಕ್ರಮಗಳನ್ನೂ ಒಪ್ಪಿಕೊಳ್ಳದಿರಬಹುದು ಅಥವಾ ಆತ್ಮಹತ್ಯೆ ಮಾಡಿಕೊಳ್ಳಬಹುದು. ಹೀಗೆ ಯಾವುದು ಅಪರಾಧ ಭಾವನೆ ತರುವ ವಿಚಾರ, ಯಾವುದು ನಾಚಿಕೆ ಪಡುವ ವಿಚಾರ ಎಂಬುದನ್ನು ಮಾನವಶಾಸ್ತ್ರಜ್ಞರು ಮುಂದಾಗಿಯೇ ತಿಳಿದು ಸೂಕ್ತ ಪರಿಹಾರಗಳನ್ನು ಮತ್ತು ವಿವರಣೆಗಳನ್ನು ನೀಡಿದ್ದಾರೆ. ಇವರಿಂದ ಸಮಾಜದಲ್ಲಿ ಬದಲಾವಣೆ ತರಬಹುದಾದ ಅನೇಕ ಸಮಸ್ಯೆಗಳನ್ನು ಮುಂದಾಗಿಯೇ ಅರ್ಥ ಮಾಡಿಕೊಂಡು ಅವುಗಳನ್ನು ನಿವಾರಿಸಲು ಸೂಕ್ತ ಸಲಹೆ ನೀಡಬಹುದು.

ಹೊರ ಜಗತ್ತಿನೊಂದಿಗೆ ಹೆಚ್ಚು ಹೆಚ್ಚು ಸಂಪರ್ಕ ಹೊಂದಿದಂತೆ ಗ್ರಾಮಸ್ಥರಲ್ಲಿ ಪ್ರತಿಭಟನಾಕಾರಿ ಮನೋಭಾವನೆ ಬೆಳೆಯುತ್ತಿದೆ. ತಮ್ಮಲ್ಲಿ ಆರ್ಥಿಕ, ಸಾಮಾಜಿಕ ಹೀಗೆ ಯಾವ ಪ್ರಗತಿಯೂ ಆಗದೆ ಇರುವುದಕ್ಕೆ ಅವರು ಕಾರಣ ತಿಳಿಯದೆ ಸೋತು ಹೋಗಿದ್ದಾರೆ. ಕೆಲವರು ಜೀವನದಲ್ಲಿ ಜಿಗುಪ್ಸೆತಾಳಿದ್ದಾರೆ. ಇದನ್ನೂ ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡಿರುವುದರಿಂದ ಈಗಾಗಲೇ ಅನೇಕ ಚಳುವಳಿಗಳು ಪ್ರಾರಂಭವಾಗಿವೆ. ಕೆಲವು ರಕ್ತಕ್ರಾಂತಿಗಳೂ ಆದವು. ಉದಾಹರಣೆಗೆ ರಷ್ಯಾ ಮತ್ತು ಚೀನಾ ದೇಶಗಳಲ್ಲಿ ಕ್ರಾಂತಿಗಳು ನಡೆದಾಗ ಅಲ್ಪಸಂಖ್ಯೆಯಲ್ಲಿದ್ದ ಕಾರ್ಖಾನೆಗಳ ಕೆಲಸಗಾರರು ಜಮೀನ್ದಾರರ ಶೋಷಣೆಗೆ ಗುರಿಯಾಗಿದ್ದ ರೈತರನ್ನು ತಮ್ಮ ಆಂದೋಲನದಲ್ಲಿ ಸೇರಿಸಿಕೊಂಡರು. ಆದರೆ ಹೆಚ್ಚು ಕ್ರಾಂತಿಕಾರಿ ವಿಚಾರಗಳನ್ನು ಹೊಂದಿದ ಕೂಲಿಕಾರರು ರೈತರಿಂದ ತಮ್ಮ ಆಂದೋಲನಕ್ಕೆ ಸಾಕಷ್ಟು ನೆರವಾಗಲಿಲ್ಲ ಎಂದು ತಿಳಿದಾಗ ಅವರನ್ನು ಅಲ್ಲೇ ಬಿಟ್ಟು ಮುಂದೆ ಹೋದರು. ಇದಕ್ಕೆ ಕೂಲಿಕಾರರನ್ನು ತೆಗಳುವ ಕಾರಣವಿರಲಿಲ್ಲ. ಏಕೆಂದರೆ ಸಾವಿರಾರು ಹಳ್ಳಿಗಳಲ್ಲಿ ಹಂಚಿಹೋಗಿದ್ದ, ಅನಕ್ಷರಸ್ಥರಾದ, ಹೊರ ಜಗತ್ತಿನೊಡನೆ ಹೆಚ್ಚು ಸಂಪರ್ಕ ಹೊಂದದ, ಕೇವಲ ಪ್ರಾದೇಶಿಕ ಮನೋಭಾವನೆಯುಳ್ಳ, ಸದಾ ಅಸೂಯೆ, ವೈಮನಸ್ಸುಗಳಿಂದ ತುಂಬಿದ್ದ

ರೈತವರ್ಗದಲ್ಲಿ ಕೊನೆಯವರೆಗೂ ಒಗ್ಗಟ್ಟು, ಒಮ್ಮತ ಬರಲಿಲ್ಲ. ಅವರ ಆಸೆ ಆಕಾಂಕ್ಷೆಗಳು ಮತ್ತು ಗುರಿಗಳೂ ಸ್ಪಷ್ಟವಾಗಿರಲಿಲ್ಲ. ಹೀಗಾಗಿ ಆಗಲೇ ಸಂಘಟಿತರಾಗಿದ್ದ ಕಾರ್ಖಾನೆಯ ಕೆಲಸಗಾರರು ರೈತರನ್ನು ಹಿಂದೆ ಬಿಟ್ಟು ಹೋಗಬೇಕಾಯಿತು.

ಇದೇ ರೀತಿ ಹೊಸದಾಗಿ ಸ್ವಾತಂತ್ರ್ಯ ಗಳಿಸಿದ ರಾಷ್ಟ್ರಗಳು ರೈತರಿಗೆ ರಾಜಕೀಯವಾಗಿ ಹೆಚ್ಚಿನ ಅಧಿಕಾರ ನೀಡಲು ಚುನಾವಣೆಗಳಲ್ಲಿ ಎಲ್ಲರಿಗೂ ಮತ ನೀಡುವ ಹಕ್ಕನ್ನು ನೀಡಿದರು. ಆದರೆ ಇವರ ಮನೋದೌರ್ಬಲ್ಯವನ್ನು ತಿಳಿದಿದ್ದ ರಾಜಕೀಯ ಧುರೀಣರು ರೈತರ ಹೆಸರಿನಲ್ಲಿ ಅವರ ಪವಿತ್ರ ವಸ್ತುಗಳಾದ ನೇಗಿಲು, ತೆನೆ, ಬಂಡಿ ಅಥವಾ ಎತ್ತು-ಆಕಳುಗಳನ್ನು ತಮ್ಮ ಪಕ್ಷದ ಚಿನ್ಹೆಯಾಗಿ ತೆಗೆದುಕೊಂಡು ಮತ್ತು ರೈತರಿಗೆ ಪ್ರಿಯವಾದ ವಿಷಯದ ಮೇಲೆ ಘೋಷಣೆಯೊಂದನ್ನು ನೀಡಿ ಅವರನ್ನು ಸುಲಭವಾಗಿ ಮೋಸ ಮಾಡಿದರು. ಇದರಿಂದ ನೊಂದ ರೈತರು ಇಂದು ತಮ್ಮದೇ ಆದ ಚಳುವಳಿಗಳನ್ನು ಪ್ರಾರಂಭಿಸಿದ್ದಾರೆ. ಇದಕ್ಕೆ ಉದಾಹರಣೆಯಾಗಿ ನಕ್ಸ್‌ಲೈಟ್ಸ್, ಬಿಸ್ರಾ, ಕಿಸಾನ ಮತ್ತು ಬ್ರಾಹ್ಮಣರ ಮತ್ತು ಜಮೀನ್ದಾರರ ವಿರುದ್ಧದ ಚಳುವಳಿಗಳನ್ನು ತೆಗೆದುಕೊಳ್ಳಬಹುದು. ಒಂದು ವಿಧದಲ್ಲಿ ಜಾನಪದರು ನಡೆಸಿದ ಚಳುವಳಿಗಳ ಫಲವಾಗಿ ಇಂದು ಜಮೀನ್ದಾರಿ, ಜೀತ, ಗೇಣಿ ಮುಂತಾದ ಪದ್ಧತಿಗಳು ರದ್ದಾಗಿವೆ. ಈ ಚಳುವಳಿಗಳನ್ನು ಸರಿಯಾಗಿ ನಿಯಂತ್ರಿಸುವವರು ಇಲ್ಲದ ಕಡೆ ಅಂದರೆ ಮುಂದಾಳತ್ವವಿಲ್ಲದ ಕಡೆ, ರಕ್ತಪಾತವಾಗಿರುವುದು ಕಂಡು ಬಂದಿದೆ.

ಜಾನಪದರ ಸದ್ಯದ ಸಮಸ್ಯೆ ಎಂದರೆ ಅವರ ತರುಣರು ತಮ್ಮ ಹಳ್ಳಿಗಳನ್ನು ಬಿಟ್ಟು ವಲಸೆ ಹೋಗುತ್ತಿರುವುದು. ಗ್ರಾಮೀಣ ಬಡತನ, ದಬ್ಬಾಳಿಕೆ, ಸಾಲ-ಶೋಷಣೆ ಮುಂತಾದವು ಅವರನ್ನು ಹೀಗೆ ಗ್ರಾಮೀಣ ಪ್ರದೇಶದಿಂದ ಹೊರಗೆ ಹೋಗುವಂತೆ ಮಾಡುತ್ತಿವೆ. ಈ ವಲಸೆಯ ವಿಶೇಷತೆ ಎಂದರೆ ನಗರ ಸಂಸ್ಕೃತಿ ತಲುಕಿನದು, ಅಲ್ಲಿಯ ಜನ ಮೋಸಗಾರರು, ಪರತಂತ್ರ ಜೀವಿಗಳು ಎಂದು ತಿಳಿದಿದ್ದರೂ ಗ್ರಾಮಸ್ಥರು ಇಂದು ಅಪಾರ ಸಂಖ್ಯೆಯಲ್ಲಿ ನಗರಮುಖವಾಗಿ ವಲಸೆ ಹೋಗುತ್ತಿರುವುದು. ಹಳ್ಳಿಯಲ್ಲಿಯ ಈ ಹೊರದೂಡುವಿಕೆಯ ಹಾಗೂ ನಗರದ ಆಕರ್ಷಣೆ(Pushes and Pulls) ಈ ಎರಡೂ ಸೆಳೆತಕ್ಕೆ ಸಿಕ್ಕು ಗ್ರಾಮಸ್ಥರು ನಗರದ ಕಡೆಗೆ ಏಕಮುಖವಾಗಿ, ವಲಸೆ ಪ್ರಾರಂಭಿಸಿದ್ದಾರೆ.

ಹೀಗೆ ನಗರಕ್ಕೆ ವಲಸೆ ಹೋಗುವವರನ್ನು ತಾತ್ಕಾಲಿಕವಾಗಿ ಮತ್ತು ಹಳ್ಳಿಯನ್ನು ತ್ಯಜಿಸಿ ವಲಸೆ ಹೋಗುವವರು ಎಂದು ಎರಡು ಬಗೆ ಮಾಡಿ ಅಭ್ಯಾಸ ಮಾಡಬಹುದು. ತಮ್ಮ ಸಾಲಗಳನ್ನು ತೀರಿಸಲು, ಸೋದರ-ಸೋದರಿಯರ ಮದುವೆಗೆ, ಮನೆ ಕಟ್ಟಲು ಹಣ ಕೂಡಿಸಲೆಂದು ಹೊರ ಹೊರಟವರು ಮೊದಲ ಗುಂಪಿನವರು. ದುಡಿದು ಹಣ ಗಳಿಸಲು ನಗರದಲ್ಲಿ ಅವಕಾಶಗಳು ಹೆಚ್ಚು ಎಂದು ಇವರಿಗೆ ತಿಳಿದಿರುತ್ತದೆ. ಪೂರ್ಣವಾಗಿ ಹಳ್ಳಿಗಳನ್ನು ತ್ಯಜಿಸಿ ನಗರಕ್ಕೆ ಹೊರಟವರ ಸಮಸ್ಯೆಗಳು ಕಠೋರವಾಗಿರುತ್ತವೆ. ನಗರಕ್ಕೆ ಬಂದಾಗ ವಾಸಕ್ಕೆ

ಅಲ್ಲಿ ಅವರಿಗೆ ಜಾಗ ಸಿಗುವುದು ಕೊಳಚೆ ಪ್ರದೇಶದಲ್ಲಿ. ಅಲ್ಲಿ ವಾಸಕ್ಕೆ ಸೂಕ್ತ ಮನೆ, ನೀರು, ದೀಪಗಳಿಲ್ಲದೆ, ಕೂಲಿನಾಲಿ ಮಾಡಿ ಬಹುಕಷ್ಟದಿಂದ ಜೀವಿಸುತ್ತಾರೆ. ಕಾಲಕ್ರಮೇಣದಲ್ಲಿ ಪರಿಸ್ಥಿತಿ ಸರಿಹೋಗಬಹುದು ಎಂದು ಹೋರಾಟ ಮಾಡುತ್ತಾರೆ.

ಪರಿಸ್ಥಿತಿ ಸುಧಾರಿಸದಿದ್ದರೆ ಕ್ರಮೇಣ ಇವರಲ್ಲಿ ಈ ಬಡತನಕ್ಕೆ, ಕೊಳೆಗೇರಿ ಜೀವನಕ್ಕೆ ಹೊಂದಿಕೊಳ್ಳುವ ಪ್ರವೃತ್ತಿ ಬೆಳೆದು, ಮುಂದೆ "ದಾರಿದ್ರ್ಯದ ಸಂಸ್ಕೃತಿ"ಗೆ (Culture of Poverty) ಸೇರಿ ಹೋಗಿಬಿಡುತ್ತಾರೆ. ಹೀಗೆ ಕೊಳಚೆ ಪ್ರದೇಶಗಳು ಬೆಳೆಯಲು ಗ್ರಾಮೀಣ ವಲಸೆಗಾರರು ಕಾರಣರಾಗುತ್ತಾರೆ. ಇಲ್ಲಿಯ ಜನಸಂಖ್ಯೆ ಬೆಳೆದಂತೆ ನಗರದಲ್ಲಿ ಕಳ್ಳತನ, ನಿರುದ್ಯೋಗ, ಕೊಲೆ, ಸೂಳೆಗಾರಿಕೆ, ಮನೆಬಿಟ್ಟು ಅಲೆಯುವ ಮಕ್ಕಳು ಹೆಚ್ಚಾಗುತ್ತಾರೆ. ಹೀಗೆ ಅವರು ನಗರಕ್ಕೆ ವಲಸೆ ಬರುವುದು ಅವರಿಗೆ ಮಾತ್ರವಲ್ಲ, ನಗರವಾಸಿಗಳಿಗೂ ಸಮಸ್ಯೆಗಳನ್ನು ತರುತ್ತದೆ. ಅವರ ಜೀವನ ಹಾಗೂ ಸಮಸ್ಯೆಗಳನ್ನು ಮಾನವಶಾಸ್ತ್ರಜ್ಞರು ಬಹು ಆಳವಾಗಿ ಅಭ್ಯಾಸ ಮಾಡಿದ್ದಾರೆ. ಆಸ್ಕರ್ ಲೂಯಿಸ್ (೧೯೧೫, ೧೯೫೯, ೧೯೬೪, ೧೯೬೮)ಎಂಬ ಮಾನವಶಾಸ್ತ್ರಜ್ಞರು ದಾರಿದ್ರ್ಯದ ಸಂಸ್ಕೃತಿಯ ಮೇಲಿನ ತಮ್ಮ ನಾಲ್ಕು ಪುಸ್ತಕ ಬರೆಯಲು ಮೆಕ್ಸಿಕೋದ ಗ್ರಾಮಗಳಿಂದ ಉತ್ತರ ಅಮೇರಿಕಾದ ನಗರಗಳಿಗೆ ವಲಸೆ ಬಂದವರನ್ನು ಹಿಂಬಾಲಿಸಿ ಹೋಗಿ ಅಭ್ಯಾಸ ಮಾಡಿ, ಅವರು ತಮ್ಮ ಪೂರ್ವದ ಗ್ರಾಮವನ್ನು ಬಿಟ್ಟ ಕಾರಣ, ನಗರಕ್ಕೆ ಬರಲು ಸಹಾಯ ಮಾಡಿದ ಸಂಬಂಧಿಕರು ಹಾಗೂ ಗ್ರಾಮದ ಸ್ನೇಹಿತರು, ನಗರಗಳಲ್ಲಿ ಅವರ ಜೀವನ, ಸಣ್ಣ ನಗರದಿಂದ ಮುಂದೆ ದೊಡ್ಡ ನಗರಕ್ಕೆ ವಲಸೆ, ಈ ದೊಡ್ಡ ನಗರದಲ್ಲಿಯ ಕೊಳಚೆ ಪ್ರದೇಶಗಳ ಬೆಳವಣಿಗೆಗೆ ಇವರ ಕೊಡಿಗೆ ಮುಂತಾದ ಅನೇಕ ಮುಖಗಳನ್ನು ಅಭ್ಯಾಸ ಮಾಡಿದ್ದಾರೆ. ಇದೇ ಮಾದರಿಯಲ್ಲಿ ಇನ್ನೂ ಅನೇಕ ಮಾನವಶಾಸ್ತ್ರಜ್ಞರು ಬಹು ಹಿಂದಿನಿಂದಲೂ ಜಗತ್ತಿನಾದ್ಯಂತ ನಗರಗಳಲ್ಲಿ ನೆಲಸಿರುವ ಗ್ರಾಮೀಣ ವಲಸೆಗಾರರನ್ನು ಅಭ್ಯಾಸ ಮಾಡಿದ್ದಾರೆ.

ಗ್ರಂಥಋಣ

1. Firth, Raymond. 1951. **Malayan Fisherman : Their Peasant Economy.** London : Oxford University Press.

2. Lewis, Oscar. 1951. **Life in a Mexican Village - Tepoztlan revisited.** Illinois : University of Illinois.

3. ....1959. **Five Families : Mexican case studies in the culture of Poverty.** New York : Basic Books.

4. ....1964. **Pedro Martinez : Mexican Peasant and His Family Drawings.** London : Seeket and Warbury.

5. ....1966. **Children of the Sanchez : Autobiography of Mexican Family.** Penguin.

6. ....1968. **La Vida : Pentro Recan Family in the Culture of Poverty.** San Juna and New York : Vintage Books.

7. Malinowski, M.J.B. 1982. **Organauts of the Western Pasific: Accounts of natives of enterprise and adventure in Pasific.** New York : E.P.Dalton Press.

8. Redfield, Robert. 1954. **The Little Community and Peasant Society and Culture.** Chicago : University of Chicago Press.

★ ★ ★ ★

ಲೇಖನ - ೨

ಗ್ರಾಮ ನಿವಾಸ ಸ್ಥಳ

ಭಾರತದ ಗ್ರಾಮೀಣ ಸಮುದಾಯವನ್ನು ಅರ್ಥಮಾಡಿಕೊಳ್ಳಲು ಅದರ ನಿವಾಸ ಪ್ರದೇಶಕ್ಕೆ ಅಂದರೆ ಗ್ರಾಮ ಠಾಣಾಕ್ಕೆ ಇರುವ ಧಾರ್ಮಿಕ ಮತ್ತು ಸಾಮಾಜಿಕ ಸ್ಥಾನವನ್ನು ತಿಳಿಯುವುದು ಅವಶ್ಯಕ. ಇದನ್ನು ಅಭ್ಯಾಸ ಮಾಡಿದ ತಜ್ಞರು ಅಲ್ಲಿಯ ಕೆಲವೊಂದು ಭಾಗಗಳಿಗೆ ಮತ್ತು ಅಲ್ಲಿಯ ನಿವಾಸಿಗಳಿಗೆ ಒಂದು ವಿಶೇಷವಾದ ಸ್ಥಾನವಿರುವುದನ್ನು ತಿಳಿಸಿದ್ದಾರೆ. ಉದಾಹರಣೆಗೆ ಶ್ರೀನಿವಾಸ್ (೧೯೬೦:೩೦)ರವರು ಮೈಸೂರು ಜಿಲ್ಲೆಯ ರಾಂಪುರ ಎಂಬ ಹಳ್ಳಿಯಲ್ಲಿ ಕೆಳಜಾತಿಗಳಿಗೆ ಸೇರಿದವರ ಕೇರಿಗಳನ್ನು ಇತರೆ ಜಾತಿಯವರ ಕೇರಿಗಳಿಂದ ಪ್ರತ್ಯೇಕಿಸಲು ಗಡಿಕಲ್ಲುಗಳಿದ್ದ ಬಗ್ಗೆ ಹೇಳಿದ್ದಾರೆ. ಕೋನ್ (೧೯೬೧:೫೫) ಎಂಬ ಆಂಗ್ಲ ಮಾನವಶಾಸ್ತ್ರಜ್ಞರೂ ಕೂಡ ತಾವು ಅಭ್ಯಾಸ ಮಾಡಿದ ಪಂಜಾಬಿನ ಹಳ್ಳಿಯಲ್ಲಿ ಠಾಕೂರ್ ಮತ್ತಿತರ ಮೇಲಿನ ಜಾತಿಗೆ ಸೇರಿದವರ ಮನೆಗಳು ಗ್ರಾಮ ಠಾಣದ ಮಧ್ಯದಲ್ಲಿ, ಎತ್ತರವಾದ ಪ್ರದೇಶದಲ್ಲಿ ಇದ್ದುದನ್ನು ಗಮನಿಸಿದ್ದಾಗಿ ಹೇಳಿದ್ದಾರೆ. ಇದೇ ರೀತಿ ಈಶ್ವರನ್ನರು (೧೯೬೬:೩೩-೩೪) ಶಿವಪುರ ಎಂಬ ಉತ್ತರ ಕರ್ನಾಟಕದಹಳ್ಳಿಯಲ್ಲಿ ಮಧ್ಯದಲ್ಲಿ ಮತ್ತು ಹೊರವಲಯದಲ್ಲಿ ವಾಸಮಾಡುವವರ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳು ಭಿನ್ನವಾಗಿದ್ದುದನ್ನು ಕಂಡುದಾಗಿ ಹೇಳಿದ್ದಾರೆ. ಈ ತಜ್ಞರು ನೀಡಿರುವ ಮಾಹಿತಿಯನ್ನು ಅವಲೋಕಿಸಿದರೆ ಗ್ರಾಮ ನಿವಾಸ ಸ್ಥಳಗಳನ್ನು ಹಾಗೂ ಅಲ್ಲಿ ವಾಸಮಾಡುವವರನ್ನು ಅವರು ಕೇವಲ ಧಾರ್ಮಿಕ ಆಧಾರದ ಮೇಲೆ ವರ್ಗೀಕರಣ ಮಾಡಿದ್ದಾರೆಂದು ತಿಳಿದುಬರುತ್ತದೆ.

ಇನ್ನೂ ಕೆಲವು ವಿದ್ವಾಂಸರು ಈ ವರ್ಗೀಕರಣವನ್ನು ಅಲ್ಲಿ ವಾಸವಾಗಿರುವವರ ಸ್ಥಳೀಯತೆಯ ಆಧಾರದ ಮೇಲೆ ವಿವರಿಸಿದ್ದಾರೆ(ಗುರುಮೂರ್ತಿ, ೧೯೭೧, ೧೯೭೬). ಇವರು ಕಂಡುಕೊಂಡಂತೆ ಗ್ರಾಮಗಳು ಪೂರ್ವದಲ್ಲಿ ಅಲ್ಲಿಗೆ ಮೊದಲು ಬಂದು ನೆಲಸಿದವರ ನೆಲೆಗಳಿದ್ದು, ಅವರು ಇಲ್ಲಿಗೆ ಬಂದ ನಂತರ ಮೊದಲು ತಮ್ಮ ಆರಾಧ್ಯ ದೈವಕ್ಕೆ ಒಂದು ತಾಣ ಸ್ಥಾಪಿಸಿ ಅದರ ಸುತ್ತ ಚಂದ್ರಾಕೃತಿಯಲ್ಲಿ ಮನೆಗಳನ್ನು ಕಟ್ಟಿಕೊಂಡರು. ವ್ಯವಸಾಯಗಾರರಿದ್ದ ಇವರು ಫಲವತ್ತಾದ ಭೂಮಿಯನ್ನು ಹುಡುಕುತ್ತಾ ಬಂದಿದ್ದರು. ಅವರ ಮನೆಗಳ ಹಿಂಭಾಗಕ್ಕೆ ಪೈರನ್ನು ಒಕ್ಕಲು ಕಣಗಳನ್ನು ಮತ್ತು ಇವುಗಳ ನಂತರ ಹೊಲಗಳನ್ನು ಮಾಡಿಕೊಂಡಿದ್ದರು. ನಂತರ ಇವರು ತಮ್ಮ ವೃತ್ತಿಯಲ್ಲಿ ನೆರವಾಗಲೆಂದು, ಗ್ರಾಮ ಜೀವನದಲ್ಲಿ ಬೆಂಬಲಿಸಲೆಂದು

ತಮ್ಮ ಸಂಬಂಧಿಕರನ್ನು, ಸಹಾಯಕರನ್ನು ಕರೆತಂದರು. ಇವರು ಈ ಮೂಲ ನಿವಾಸಿಗಳ ಕಣಗಳಲ್ಲಿ ಮತ್ತು ಮನೆ ಹಿಂದಲ ಹೊಲದಲ್ಲಿ ತಮ್ಮ ವಸತಿಗಳನ್ನು ಕಟ್ಟಿಕೊಂಡರು. ಮುಂದೆ ಜನಸಂಖ್ಯೆ ಹೆಚ್ಚಿದಂತೆ ಪೂರ್ವದ ನಿವಾಸ ಪ್ರದೇಶ ಹಂತಹಂತವಾಗಿ ಚಕ್ರಾಕೃತಿಯಲ್ಲಿ ಹಿಗ್ಗುತ್ತಾ ಹೋಯಿತು. ಇದಕ್ಕಾಗಿ ಹೊಲಗಳ ಹಿಂದೆ ಇದ್ದ ಕಾಡನ್ನು ಕಡಿದು ಸಾಗುವಳಿ ಮಾಡುತ್ತಾ ಹೋದರು. ಆದರೆ ಒಂದು ಅವಶ್ಯಕತೆಯಾಗಿ ಈ ಹೊಲಗಳ ಮತ್ತು ಊರಗಡಿಯ ನಡುವೆ ಸ್ವಲ್ಪ ಪಾಳು ಭೂಮಿಯನ್ನು ಬಿಟ್ಟುಕೊಂಡರು. ಹೀಗೆ ಒಂದು ಗ್ರಾಮದ ನಿವಾಸ ಪ್ರದೇಶ ವೃತ್ತವೃತ್ತವಾಗಿ ಬೆಳೆಯುತ್ತಾ ಹೋದಂತೆ ಹೊಸ ವೃತ್ತಗಳು ಹುಟ್ಟಿಕೊಂಡಂತೆ, ಪೂರ್ವದಿಂದ ಬಂದ ವೃತ್ತಗಳಿಗೆ, ಅಲ್ಲಿಯ ದೈವಗಳಿಗೆ ಮತ್ತು ನಿವಾಸಿಗಳಿಗೆ ಹೆಚ್ಚಿನ ಸ್ಥಾನಮಾನಗಳು ಬಂದವು.

ಇಲ್ಲಿಯವರೆಗೆ ಭಾರತದ ಹಳ್ಳಿಗಳನ್ನು ಅಭ್ಯಾಸ ಮಾಡಿದವರು ಜಾತಿಗಳ ಏಣಿ ಶ್ರೇಣಿಯ ಆಧಾರದ ಮೇಲೆ ನಿವಾಸ ಪ್ರದೇಶವನ್ನು ಅಭ್ಯಾಸ ಮಾಡಿದ್ದಾರೆ. ಆದರೆ ಪೂರ್ವದಿಂದಲೂ ಒಂದು ಜಾತಿಯವರಲ್ಲೇ "ಮೂಲ ನಿವಾಸಿಗಳು" ಮತ್ತು "ವಲಸೆ ಬಂದವರು" ಎಂಬ ಎರಡು ಭೇದಗಳಿವೆ. ನಂತರ ಭಾರತದ ಮೇಲೆ ಹೊರಗಿನಿಂದ ವಿಶೇಷವಾಗಿ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಿಗೆ ಸೇರಿದವರ ರಾಜ್ಯಾಡಳಿತ ಬಂದ ಪರಿಣಾಮವಾಗಿ ಈ ಗ್ರಾಮಗಳ ಆಡಳಿತದಲ್ಲಿ ಮತ್ತು ಅವುಗಳ ನಿವಾಸ ಪ್ರದೇಶದಲ್ಲಿ ಅಪಾರವಾದ ಬದಲಾವಣೆಗಳು ಬಂದವು. ರಾಜಕೀಯ ದಬ್ಬಾಳಿಕೆಯಿಂದಾಗಿ ಜನ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಶರಣಾರ್ಥಿಗಳಾಗಿ ಹೋಗುವುದು ಹೆಚ್ಚಾಯಿತು. ಹೀಗೆ ಬಂದವರ ಮತ್ತು ಮೂಲ ನಿವಾಸಿಗಳ ಹಾಗೂ ಅವರು ಹೊಂದಿದ ಆಸ್ತಿಗಳ ಸ್ಥಾನಮಾನದಲ್ಲಿ ಭಿನ್ನತೆ ಹುಟ್ಟಿಕೊಂಡಿತು. ಈ ಹಿನ್ನೆಲೆಯಲ್ಲಿ ಜಾತಿ, ಮನೆತನ, ಕುಲ, ಮೂಲ ನಿವಾಸ ಮುಂತಾದವುಗಳನ್ನು ಅಭ್ಯಾಸ ಮಾಡಿದರೆ ಇದು ತಿಳಿಯುತ್ತದೆ.

ಈ ಲೇಖನಕ್ಕೆ ಬೇಕಾದ ಮಾಹಿತಿಯನ್ನು ಮುಖ್ಯವಾಗಿ ಕರ್ನಾಟಕದ ಕಲ್ಲಾಪುರ ಎಂಬ ಗ್ರಾಮದಿಂದ ಪಡೆಯಲಾಗಿದೆ. ಕಲ್ಲಾಪುರ ಗ್ರಾಮ ೩೨೧೩ ಎಕರೆ ವಿಸ್ತೀರ್ಣ ಹೊಂದಿದೆ ಮತ್ತು ದಕ್ಷಿಣ ಕರ್ನಾಟಕದ ಇತರೆ ಯಾವುದೇ ದೊಡ್ಡ ಗ್ರಾಮಗಳಂತೆ ಸುಮಾರು ಐದುನೂರು ವರ್ಷಗಳ ಇತಿಹಾಸ ಹೊಂದಿದೆ. ಗ್ರಾಮವನ್ನು ಸಾಂಪ್ರದಾಯಕವಾಗಿ "ಊರು" ಮತ್ತು "ಅಡವಿ" ಎಂದು ಎರಡು ಭಾಗಮಾಡಲಾಗುತ್ತದೆ. ಇದರಲ್ಲಿ ೩೨ ಎಕರೆಯನ್ನು ಊರಾಗಿ ಅಂದರೆ ಗ್ರಾಮಸ್ಥರ ನಿವಾಸದ ಉದ್ದೇಶಕ್ಕೆ, ಉಳಿದ ಪ್ರದೇಶವನ್ನು ಹೊಲ, ಕೆರೆ, ಹಳ್ಳ-ಸರ ಮತ್ತು ರಸ್ತೆಗಳಿಗಾಗಿ ಬಳಕೆಮಾಡಲಾಗಿದೆ. ಸಾಂಪ್ರದಾಯಕವಾಗಿ ಮೂಲನಿವಾಸಿಗಳು ಗ್ರಾಮ ನಿವಾಸದ ಮಧ್ಯದಲ್ಲಿ ವಾಸವಾಗಿದ್ದಾರೆ ಮತ್ತು ನಿವಾಸ ಸ್ಥಳದ ಹತ್ತಿರ ವ್ಯವಸಾಯ ಭೂಮಿಯನ್ನು ಹೊಂದಿದ್ದಾರೆ. ಇವರು ಗ್ರಾಮದ ಗೌಡಾಳಿಕೆ ವಂಶಕ್ಕೆ

ಸೇರಿದವರಿದ್ದು ಉಳಿದವರು ಅವರಿಗೆ ದುಡಿಯಲು ಕರೆತಂದ ರೈತರು, ಕುಶಲ ಹಾಗೂ ಸೇವಾ ಜಾತಿಗಳಿಗೆ ಸೇರಿದವರು. ಇವರು ಗ್ರಾಮದ ಉಳಿದ ಪ್ರದೇಶವನ್ನು ಹೊಂದಿದ್ದಾರೆ.

ಗ್ರಾಮದ ರಕ್ಷಣೆ

ಮಾನವನಿಗೆ ನಿಸರ್ಗದಲ್ಲಿ ತನಗೆ ತಾನಾಗಿ ಬೆಳೆದ ಆಹಾರ ಸಿಗದಾದಾಗ ಅವನು ತನ್ನ ಅಲೆಮಾರಿ ಜೀವನವನ್ನು ಬಿಟ್ಟು ಒಂದೆಡೆ ನೆಲೆ ನಿಂತನು. ಇದಕ್ಕಾಗಿ ಅವನು ನೀರಿನ ಅನುಕೂಲತೆ ಹಾಗೂ ಕಾಡುಪ್ರಾಣಿಗಳಿಂದ, ನೆರೆಯಿಂದ ರಕ್ಷಣೆ ಹೊಂದಿದ ಮತ್ತು ಫಲವತ್ತಾದ ಒಂದು ಪ್ರದೇಶವನ್ನು ಹುಡುಕಿಕೊಂಡ. ಹೀಗೆ ಮಾನವ ವ್ಯವಸಾಯ, ತೋಟಗಾರಿಕೆ ಮಾಡಿ ತನ್ನ ಆಹಾರವನ್ನು ಉತ್ಪಾದಿಸಲು ಪ್ರಾರಂಭಿಸಿದಾಗ ಅವನ ನಿವಾಸ ನೆಲೆಗಳು ಅಂದರೆ ಗ್ರಾಮಗಳು ಹುಟ್ಟಿ ಬಂದವು. ಮಾನವರು ಅಲೆಮಾರಿ ಸ್ಥಿತಿಯಲ್ಲಿದ್ದಾಗ ದೈಹಿಕ ಬಲಕ್ಕೆ ಹೆಚ್ಚಿನ ಬೆಲೆ ಕೊಡುತ್ತಿದ್ದುದರಿಂದ ಒಬ್ಬ ಬಲಶಾಲಿ ಅವರ ಮುಖ್ಯಸ್ಥನಿದ್ದ. ನಂತರ ನೆಲೆ ನಿಂತಾಗ ನೈಸರ್ಗಿಕ ಸಂಪನ್ಮೂಲಗಳ ಹಾಗೂ ಹವಾಮಾನದ ಬಗ್ಗೆ ಹೆಚ್ಚು ತಿಳಿದಿರುವುದು ಅವಶ್ಯಕ ಇದ್ದುದರಿಂದ ಈ ಅನುಭವ ಹೊಂದಿದ ಒಬ್ಬ ಹಿರಿಯ ವ್ಯಕ್ತಿ (ವೃದ್ಧ)ಯನ್ನು ತಮ್ಮ ನಾಯಕನನ್ನಾಗಿ ಮಾಡಿಕೊಂಡರು. ಆಗ ಬುದ್ಧಿಬಲಕ್ಕೆ ಹೆಚ್ಚಿನ ಬೆಲೆ ಬಂದಿತು.

ಒಂದು ಕುಲ ಗುಂಪಿನವರು ಅಡವಿಯಾಗಿದ್ದ ಒಂದು ಪ್ರದೇಶದಲ್ಲಿ ತಮ್ಮ ನಿವಾಸವನ್ನು ಕಟ್ಟಿಕೊಂಡು ವ್ಯವಸಾಯ ಮಾಡಲು ಪ್ರಾರಂಭಿಸಿದಾಗ ಇವರಿಗೆ ಮುಖ್ಯವಾಗಿ ಮಾನವರು, ಕಾಡು ಪ್ರಾಣಿಗಳು ಮತ್ತು ದುಷ್ಟ ಶಕ್ತಿಗಳು ಹೀಗೆ ಮುಖ್ಯವಾಗಿ ಮೂರು ಮೂಲಗಳಿಂದ ಅಪಾಯಗಳು ಬರುತ್ತಿದ್ದವು. ಇವುಗಳಿಂದ ರಕ್ಷಣೆ ಪಡೆಯಲು ಅವರು ಭದ್ರವಾದ ಮನೆಗಳನ್ನು, ಅವುಗಳ ಸುತ್ತ ಎತ್ತರವಾದ ಬೇಲಿ ಅಥವಾ ಗೋಡೆಯನ್ನು ಕಟ್ಟಿಕೊಂಡರು. ನಂತರ ಜನಸಂಖ್ಯೆ ಹೆಚ್ಚಾದಂತೆ, ಇನ್ನೂ ಕೆಲವರು ಬಂದು ಈ ಸುರಕ್ಷಿತ ಪ್ರದೇಶದೊಳಗೆ ಸೇರಿಕೊಂಡಂತೆ, ಈ ಗ್ರಾಮ ನೆಲೆಗಳು ಬೆಳೆಯಲು ಪ್ರಾರಂಭಿಸಿದವು. ಹೀಗೆ ಬದಲಾವಣೆ ಬಂದಂತೆ ಗ್ರಾಮದ ನಿವಾಸ ಪ್ರದೇಶದ ವಿಸ್ತಾರವೂ ಬದಲಾಯಿತು ಮತ್ತು ಆಗ ಅವರ ರಕ್ಷಣೆಗೆ ಇದ್ದ ಬೇಲಿ ಆಗಾಗ ಸ್ಥಳಾಂತರಗೊಳ್ಳುತ್ತಿತ್ತು. ಆದರೆ, ಸಾಂಪ್ರದಾಯಕವಾಗಿ ಬಂದ ಪ್ರದೇಶಗಳಿಗೆ ಇದ್ದ ಗೌರವ, ಸ್ಥಾನಗಳು ಪೂರ್ವದ ರೀತಿಯಲ್ಲೇ ಮುಂದುವರೆದವು ಮತ್ತು ವಲಸೆ ಬಂದವರನ್ನು ಮೂಲ ನಿವಾಸಿಗಳಿಂದ ಭಿನ್ನವಾಗಿ ಕಾಣುವುದು ಮುಂದುವರೆಯಿತು. ನಿಷೇಧಗಳ ಹೆಸರಿನಲ್ಲಿ ಈ ವಲಸೆ ಬಂದವರನ್ನು ಅವರ ದೈವಗಳನ್ನು , ಆಯುಧಗಳನ್ನು , ಉಪಕರಣಗಳನ್ನು ಮತ್ತು ಪ್ರಾಣಿಗಳನ್ನು ಈ

ಪ್ರದೇಶದೊಳಗೆ ಬರಲು ಅವಕಾಶ ನೀಡಲಿಲ್ಲ. ನಂತರ ಇದೇ ಒಂದು ಪದ್ಧತಿಯಾಗಿ ಮುಂದುವರೆಯಿತು.

ಗ್ರಾಮಾಡಳಿತದ ಉಗಮ

ಭಾರತದ ಗ್ರಾಮಗಳ ಚರಿತ್ರೆಯನ್ನು ಅವು ಜಾನಪದ (ಅಥವಾ ಆದಿವಾಸಿ), ಹಿಂದೂ (ವೈದಿಕ) ಹಾಗೂ ಭಾರತ ಜನ್ಯ ಇತರೆ ಧರ್ಮಗಳಾದ ಜೈನ ಮತ್ತು ಬೌದ್ಧ ಧಾರ್ಮಿಕ ಘಟಕವಾದಾಗಿನ ಮತ್ತು ನಂತರ ಹೊರಗಿಂದ ಬಂದ ಅನ್ಯ ಧರ್ಮೀಯರ ಆಡಳಿತಕ್ಕೆ ಬಂದಾಗಿನವು -ಎಂದು ಮೂರು ಹಂತಗಳಾಗಿ ಅಭ್ಯಾಸ ಮಾಡಬಹುದು. ಇನ್ನೂ ಒಂದು ರೀತಿಯಲ್ಲಿ ಹೇಳುವುದಾದರೆ ಅವು ಸ್ವಯಂ (ಜಾನಪದ-ಆದಿವಾಸಿ) ಆಡಳಿತ ಘಟಕಗಳಾಗಿದ್ದಾಗಿನ ಮತ್ತು ನಂತರ ಒಂದು ರಾಜ್ಯದ ಆಡಳಿತದ ಭಾಗವಾದಾಗಿನ -ಎಂದು ಎರಡು ಹಂತಗಳಾಗಿಯೂ ಅಭ್ಯಾಸ ಮಾಡಬಹುದು. ಮೊದಲನೆಯ ಹಂತದಲ್ಲಿ ಬೇಡನ್ ಪೌಲ್ (೧೮೯೬) ಎಂಬುವವರು ಹೇಳಿರುವಂತೆ ಭಾರತದ ಗ್ರಾಮಗಳು ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಆಡಳಿತಾತ್ಮಕ - ಹೀಗೆ ಎಲ್ಲಾ ವಿಚಾರದಿಂದಲೂ ಸ್ವಯಂ ಪರಿಪೂರ್ಣ ಪ್ರಜಾತಂತ್ರಾತ್ಮಿಕ ಗಣರಾಜ್ಯವಾಗಿದ್ದವು.

ಸಾಂಪ್ರದಾಯಕವಾಗಿ ಒಂದು ಗ್ರಾಮದ ಗಡಿಯೊಳಗೆ ಸಿಗುವ ಪ್ರಕೃತಿ ಸಂಪನ್ಮೂಲಗಳಾದ ಕಲ್ಲು, ಮಣ್ಣು, ಮರ, ನೀರು, ಪ್ರಾಣಿ-ಪಕ್ಷಿ, ಫಲಪುಷ್ಪ ಹೀಗೆ ಎಲ್ಲವೂ ಆ ಗ್ರಾಮದ ಪ್ರಧಾನ ಮಾತೃದೇವತೆಯ ವರಗಳಿದ್ದು ಇವು ಅಲ್ಲಿಯ ನಿವಾಸಿಗಳ ಅನುಭೋಗಕ್ಕೆ ಮಾತ್ರ ಇರುತ್ತಿದ್ದವು. ಹೊರಗಿನವರು ಯಾರಾದರೂ ಇವುಗಳನ್ನು ಬಳಸಬಯಸಿದರೆ ಇದಕ್ಕೆ ಗ್ರಾಮಸ್ಥರ ಒಪ್ಪಿಗೆ ಪಡೆಯಬೇಕು ಮತ್ತು ಗ್ರಾಮ ದೈವಕ್ಕೆ ಕಪ್ಪಕಾಣಿಕೆಗಳನ್ನು ಕೊಡಬೇಕು. ಇದೇ ರೀತಿ ಒಂದು ಗ್ರಾಮದ ಗಡಿಯೊಳಗೆ ಏನೇ ಜಗಳ, ಕಳ್ಳತನ ನಡೆದರೂ ಇದರ ನ್ಯಾಯವನ್ನು ನಿರ್ಣಯಿಸುವ ಹಕ್ಕು ಮತ್ತು ಕರ್ತವ್ಯ ಈ ಗ್ರಾಮದ ಹಿರಿಯರಿಗೆ ಸೇರಿದ್ದು. ಹಬ್ಬ, ಜಾತ್ರೆಗೆ ಬಂದ ಬೇರೆ ಬೇರೆ ಊರಿನವರು ಮಾಡಿಕೊಂಡ ಜಗಳಗಳನ್ನು ತೀರ್ಮಾನಿಸುವವರೂ ಇವರೇ. ಆದರೆ ಇಂತಹ ಪ್ರಕರಣಗಳು ಎರಡು ಊರುಗಳ ಧಾರ್ಮಿಕ ಗಡಿಯಿಂದ ಹೊರಗಿನ ಪ್ರದೇಶದಲ್ಲಿ ಸಂಭವಿಸಿದರೆ ಇವುಗಳನ್ನು ತೀರ್ಮಾನಿಸುವವರು ಆ ಎರಡೂ ಗ್ರಾಮಗಳ ಹಿರಿಯರು. ಹೀಗೆ ತಲತಲಾಂತರದಿಂದ ಮಾನ್ಯತೆ ಪಡೆದ ಒಂದು ಗ್ರಾಮದ ಧಾರ್ಮಿಕ ಗಡಿ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ.

ಒಂದು ಗ್ರಾಮವನ್ನು ಉಂಬಳಿಯಾಗಿ ಪಡೆದಿದ್ದ ವ್ಯಕ್ತಿ ಅಥವಾ ಧಾರ್ಮಿಕ ಸಂಸ್ಥೆ ಅಲ್ಲಿಯ ನಿವಾಸಿಗಳಿಗೆ ಶಾರೀರಿಕ ಹಾಗೂ ಧಾರ್ಮಿಕ ರಕ್ಷಣೆ ನೀಡುತ್ತಿದ್ದ ಅಥವಾ ನೀಡುತ್ತಿತ್ತು.

ಆಗ ಗ್ರಾಮಗಳು ಧಾರ್ಮಿಕ ಘಟಕಗಳಾಗಿದ್ದುದರಿಂದ ಇದಕ್ಕೆ ಪ್ರತಿಯಾಗಿ ಈ ನಿವಾಸಿಗಳು ತಾವು ಬೆಳೆದ ಧಾನ್ಯದಲ್ಲಿ ಸ್ವಲ್ಪ ಭಾಗವನ್ನು ಕಾಣಿಕೆಯಾಗಿ ನೀಡುತ್ತಿದ್ದವು. ಇದು ಆ ವರ್ಷದ ಮಳೆ-ಬೆಳೆಯನ್ನು ಆಧರಿಸಿ ಕೊಡಮಾಡಲ್ಪಡುತ್ತಿತ್ತು. ನಂತರ ಗ್ರಾಮಗಳು ಸ್ಥಳೀಯ ಆಡಳಿತಗಾರರ ಅಧೀನಕ್ಕೆ ಬಂದಾಗ ರಾಜ್ಯಾಡಳಿತದ ಭಾಗವಾಗಿ ಧಾರ್ಮಿಕ ಸಂಸ್ಥೆಗಳಿಗೆ ಕಾಣಿಕೆ ಕೊಡುವುದರ ಜೊತೆಗೆ ರಾಜನಿಗೆ ಕಪ್ಪಕೊಡಲು ಪ್ರಾರಂಭಿಸಿದರು. ಇದನ್ನು ರೈತರು ತಾವು ಹೊಂದಿದ ಎತ್ತುಗಳ ಸಂಖ್ಯೆಯ ಆಧಾರದ ಮೇಲೆ ನೀಡುತ್ತಿದ್ದರು. (ಬಿತ್ತುವಾಗ ಒಂದು ಜೊತೆ ಎತ್ತುಗಳು ಒಂದು ದಿನದಲ್ಲಿ ಕ್ರಮಿಸುವ ಭೂಮಿಯನ್ನು ಒಂದು ಕೂರಿಗೆ ಎಂದು ಗಣಿಸಲಾಗುತ್ತದೆ. ಇದು ಸುಮಾರು ನಾಲ್ಕು ಎಕರೆ ಆಗುತ್ತದೆ.) ಆಯಾ ಗ್ರಾಮದ ಗೌಡರು ಇದನ್ನು ಕಟ್ಟುನಿಟ್ಟಾಗಿ ರೈತರಿಂದ ವಸೂಲಿ ಮಾಡಿ ಉಂಬಳಿದಾರರಿಗೆ ನೀಡುತ್ತಿದ್ದರು. ಇವರು ತಮ್ಮ ಅಧೀನದಲ್ಲಿದ್ದ ಊರುಗಳ ಲೆಕ್ಕದ ಮೇಲೆ ಅರಸರಿಗೆ ತೆರಿಗೆ ನೀಡುತ್ತಿದ್ದರು.

ಕೆಳದಿ, ವಿಜಯನಗರ ಮತ್ತು ಮರಾಠ ಅರಸರು ತಮ್ಮ ಪ್ರಜೆಗಳಿಂದ ಭೂ ಕಂದಾಯವನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಿಗದಿ ಮಾಡಿದ್ದರೆಂಬ ಪ್ರತೀಕವಿದೆ. ಆಗ ಅವರು ಅಳತೆಗೆ ತೆಗೆದುಕೊಂಡದ್ದು ಉಳುಮೆಯಾದ ಭೂಮಿಯನ್ನು ಮಾತ್ರ. ಹೀಗಾಗಿ ಒಂದು ಗ್ರಾಮ ಪ್ರದೇಶಕ್ಕೆ ಎಷ್ಟು ಎಕರೆ ಭೂಮಿ ಸೇರಿದೆ ಎಂದು ತಿಳಿದಿರಲಿಲ್ಲ. ಜೊತೆಗೆ ಈ ಉಳುಮೆಯಾದ ಹೊಲಗಳ ನಡುವೆ ಗುಡ್ಡ, ಹಳ್ಳ-ಸರ, ಬಂಡೆ, ಕಾಡು ಇದ್ದ ಪ್ರದೇಶವನ್ನು ಪಾಳು ಎಂದು ಹಾಗೇ ಬಿಟ್ಟಿದ್ದರು. ಅಕ್ಕ ಪಕ್ಕದವರು ತಮ್ಮ ಹೊಲಗಳ ಬದುವಿನಲ್ಲಿದ್ದ ಇಂತಹ ನೈಸರ್ಗಿಕ ವಸ್ತುಗಳನ್ನು ತಮ್ಮ ಹೊಲಗಳ ಗಡಿಗಳಾಗಿ ಗುರುತಿಸಿಕೊಂಡಿದ್ದರು. ಈ ಪಾಳು (ಖರಾಬ್) ಪ್ರದೇಶವನ್ನು ಯಾರೂ ತಮ್ಮದೆಂದು ಹಕ್ಕು ಸಾಧಿಸಲಿಲ್ಲವಾದ್ದರಿಂದ ಅದು ದೇವರ ಅಥವಾ ಸರಕಾರದ ಹೆಸರಿನಲ್ಲೇ ಉಳಿದಿತ್ತು. ಹೀಗಾಗಿ ಅದರ ಮೇಲೆ ಕಂದಾಯ ಹಾಕಲು ಬರುತ್ತಿರಲಿಲ್ಲ. ಇಂತಹ ಸಾಕಷ್ಟು ಭೂಮಿಯಿದ್ದು ರೈತರು ಇಲ್ಲಿ ದನಕರು ಮೇಯಿಸುತ್ತಿದ್ದರು, ಗಿಡಮರಗಳಿಂದ ಹಣ್ಣು-ಹಂಪಲುಗಳನ್ನು , ಮರಮುಟ್ಟುಗಳನ್ನು ಪಡೆಯುತ್ತಿದ್ದರು. ಆಗ ಅವರಲ್ಲಿ ಜಗಳಗಳೂ ಬರುತ್ತಿದ್ದವು.

ಜೊತೆಗೆ ಇಡೀ ರಾಜ್ಯದ ನೆಲವೂ ಅಳತೆಯಾಗಿರಲಿಲ್ಲ ಆದ್ದರಿಂದ ಆಳರಸರಿಗೂ ತಮ್ಮ ಆಳ್ವಿಕೆಯಲ್ಲಿ ಎಷ್ಟು ಪ್ರದೇಶವಿದೆ ಎಂಬುದು ನಿಖರವಾಗಿ ತಿಳಿದಿರಲಿಲ್ಲ. ಅವರು ಗುಡ್ಡ ಹಾಗೂ ನದಿಗಳನ್ನು ತಮ್ಮ ರಾಜ್ಯದ ಗಡಿಗಳಾಗಿ ಗುರುತಿಸಿಕೊಂಡಿದ್ದರು. ರೈತರು ಹೊಂದಿದ ಭೂಮಿಯ ದಾಖಲೆ ಅವರಲ್ಲಾಗಲಿ, ಸರಕಾರದಲ್ಲಾಗಲಿ ಇರಲಿಲ್ಲ. ಸಾಂಕ್ರಾಮಿಕ ರೋಗಗಳಾದ ಪ್ಲೇಗು, ಕಾಲರ ಮುಂತಾದವು, ನೆರೆಬರ ಮತ್ತು ರಾಜ್ಯಾಡಳಿತದಲ್ಲಿ ಗೊಂದಲ ಬಂದಾಗ ಪ್ರಜೆಗಳೂ ಆಗಾಗ ಒಂದು ಊರಿನಿಂದ, ಪ್ರದೇಶದಿಂದ ಇನ್ನೊಂದಕ್ಕೆ ವಲಸೆ ಹೋಗುತ್ತಿದ್ದರು. ಜನಸಂಖ್ಯೆ ಕಡಿಮೆ ಇದ್ದು ವ್ಯವಸಾಯದ ಭೂಮಿಯ ಮೇಲೆ ಹೆಚ್ಚಿನ

ಒತ್ತಡವೂ ಇರಲಿಲ್ಲವಾದ್ದರಿಂದ ಅವರು ವಲಸೆ ಹೋದ ಊರಿನಲ್ಲಿಯೂ ಸಾಕಷ್ಟು ಉಳುಮೆಯಾಗದ ಭೂಮಿ ಇರುತ್ತಿತ್ತು. ಅಲ್ಲದೆ ಆಗ ರೈತರು ಕೇವಲ ಆಹಾರಧಾನ್ಯಗಳನ್ನು ಬೆಳೆಯುತ್ತಿದ್ದುದರಿಂದ ತಮಗೆ ಸಾಕಾಗುವಷ್ಟು ಧಾನ್ಯಗಳನ್ನು ಮಾತ್ರ ಬೆಳೆದುಕೊಳ್ಳುತ್ತಿದ್ದರು. ಮಿಕ್ಕಿದರೆ ಬಂಧುಬಾಂಧವರಿಗೆ, ಆಯಗಾರರಿಗೆ ನೀಡಿಬಿಡುತ್ತಿದ್ದರು.

ಭಾರತ ಜನ್ಯ ಧರ್ಮಗಳಿಗೆ ಸೇರಿದ ರಾಜರು ತಾವು ಆಳುತ್ತಿದ್ದ ಭೂಮಿಯನ್ನು ತಮ್ಮದೆಂದು ಹಕ್ಕು ಸಾಧಿಸದೆ ಇದು ದೇವರ ಸೃಷ್ಟಿ, ತಾವು ಏನಿದ್ದರೂ ಇದರ ರಕ್ಷಕರು-ಎಂಬ ಒಂದು ಸೇವಾ ಭಾವನೆಯಿಂದ ಆಳುತ್ತಿದ್ದರು. ನಂತರ ಭಾರತ ಜನ್ಯವಲ್ಲದ ಧರ್ಮೀಯರಾದ ಮುಸಲ್ಮಾನ ಅರಸರ ಆಳ್ವಿಕೆ ಬಂದಾಗ ಅವರು ಧಾರ್ಮಿಕ ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗಳಿಗೆ ಅನುಭವಕ್ಕೆ ನೀಡಲ್ಪಟ್ಟಿದ್ದ ಉಂಬಳಿಗಳನ್ನು ಹಿಂತೆಗೆದುಕೊಂಡು, ತಮ್ಮ ಪರ ಇದ್ದವರಿಗೆ ಉಂಬಳಿಯಾಗಿ ಅಥವಾ ಬಾಡಿಗೆಯ ಆಧಾರದ ಮೇಲೆ ನೀಡಿದರು. (ಪರ್ಷಿಯನ್ ಪದ ಬಾಡ್ ಎಂದರೆ ಬಾಡಿಗೆ ಅಥವಾ ಗುತ್ತಿಗೆ ಎಂದು. ಹೀಗೆ ಬಾಡಿಗೆದಾರರು ಪಡೆದ ಅಗ್ರಹಾರಗಳು, ನಗರಗಳು ನಂತರ ಬಾಡ ಎಂದು ಹೆಸರು ಪಡೆದವು.) ಆದಾಯವನ್ನು ಗಮನದಲ್ಲಿಟ್ಟುಕೊಂಡು ಇವುಗಳನ್ನು ಬಾಡಿಗೆ ಕೊಟ್ಟಿದ್ದರಿಂದ ಆಳರಸರು ತಮಗೆ ಬರಬೇಕಾದ ಹಣವನ್ನು ಕಟ್ಟುನಿಟ್ಟಿನಿಂದ ವಸೂಲಿ ಮಾಡುವುದಿತ್ತು. ಈ ಕೆಲಸವನ್ನು ಸಾಂಪ್ರದಾಯಕವಾಗಿ ಬಂದ ಗ್ರಾಮದ ಗೌಡರು ಸಮರ್ಪಕವಾಗಿ ಮಾಡದಾದಾಗ ಅವರ ಬದಲಿಗೆ ಹೊರಗಿನವರನ್ನು ಪಟೇಲರು (ಹೊಲಗಳ ಮಾಲಿಕರ ಪಟ್ಟಿ ಉಳ್ಳವ) ಎಂದು ಒಬ್ಬ ಗ್ರಾಮಾಧಿಕಾರಿಯನ್ನು ನೇಮಿಸಿದರು. ಕೆಲವು ಉಂಬಳಿದಾರರು, ಗುತ್ತಿಗೆದಾರರು ತಮ್ಮ ಜಾತಿ ಹಾಗೂ ಕಳ್ಳುಬಳ್ಳಿಯವರನ್ನೇ ಈ ಪದವಿಗಳಿಗೆ ನೇಮಿಸಿದ್ದರಿಂದ ಕೆಲವು ಗೌಡರೂ ಈ ಸ್ಥಾನಗಳನ್ನು ಪಡೆದರು. ಹೀಗೆ ಗ್ರಾಮಗಳ ಧಾರ್ಮಿಕ- ಸಾಮಾಜಿಕ ಬಗೆಯ ಕರ್ತವ್ಯ ನಿರ್ವಹಿಸಲು ಮತ್ತು ಅಧಿಕಾರ ಚಲಾಯಿಸಿ ಕರ ವಸೂಲಿ ಮಾಡಲು ಎಂದು ಇಬ್ಬರು ಮುಖಂಡರು ಕಾರ್ಯಮಾಡಲು ಪ್ರಾರಂಭಿಸಿದರು.

೧೮ನೇ ಶತಮಾನದಲ್ಲಿ ಆಂಗ್ಲರ ಕಂಪನಿ ಸರಕಾರ ಭಾರತವನ್ನು ಗೆದ್ದುಕೊಂಡಾಗ ಈ ಆಡಳಿತ ಪದ್ಧತಿ ಅನುಕೂಲಕರ ಮತ್ತು ಲಾಭದಾಯಕವಾಗಿ ಕಂಡದ್ದರಿಂದ ಅದನ್ನೇ ಮುಂದುವರೆಸಿತು. ನಂತರ ೧೯ನೇ ಶತಮಾನದಲ್ಲಿ ಆಂಗ್ಲರ ವಸಾಹತು ಸರಕಾರ ಕಂದಾಯ ಇಲಾಖೆಯನ್ನು ತೆರೆದು ವ್ಯವಸಾಯದ ಭೂಮಿಯನ್ನು ಮತ್ತು ಗ್ರಾಮಗಳನ್ನು ನಿಖರವಾಗಿ ಅಳತೆ ಮಾಡಿ ಇದರ ಲೆಕ್ಕವನ್ನು ದಾಖಲೆಗಳಾಗಿ ತಾಲ್ಲೂಕು ಕಛೇರಿಯಲ್ಲಿ ನೊಂದಾಣಿಕೆ ಮಾಡುವುದನ್ನು ಪ್ರಾರಂಭಿಸುವವರೆಗೆ ಈ ಇಬ್ಬರೂ ಗ್ರಾಮಾಧಿಕಾರಿಗಳು ನಿರ್ವಹಿಸಿದ ಗ್ರಾಮ ಅಥವಾ ಹಳ್ಳಿ ಪೂರ್ವದಿಂದಲೂ ಬಂದ ಧಾರ್ಮಿಕ ಘಟಕವಾಗಿತ್ತು.

ತಮ್ಮ ಆಡಳಿತದಲ್ಲಿದ್ದ ಭೂಮಿಯನ್ನು ಮೊದಲ ಬಾರಿಗೆ ಅಳತೆ ಮಾಡಿಸಿದವರು ಆಂಗ್ಲ ವಸಾಹತು ಸರಕಾರದವರು. ಹೀಗೆ ಅಳತೆ ಮಾಡಿಸಿದ್ದಕ್ಕೆ ಅನೇಕ ಉದ್ದೇಶಗಳಿದ್ದವು. ಮೊದಲನೆಯದಾಗಿ ಇದರಿಂದ ಸರಕಾರಕ್ಕೆ, ಉಳುಮೆಯಾಗಿ ರೈತರ ವಶದಲ್ಲಿರುವ ಮತ್ತು ಕಾಡಾಗಿರುವ ಭೂಮಿ ಎಷ್ಟಿದೆ, ಎಲ್ಲಿದೆ ಎಂಬ ಮಾಹಿತಿ ಸಿಗುವಂತಾಯಿತು. ಸ್ವಂತ ಮಾಲಿಕತ್ವದಲ್ಲಿಲ್ಲದ ಈ ಭೂಮಿಯನ್ನು ಸರಕಾರದ್ದು ಎಂದು ಸಾರಿ ಅದನ್ನು ತಮಗೆ ಬೇಕಾದವರಿಗೆ ಕೊಟ್ಟು ವಾಣಿಜ್ಯ ಬೆಳೆಗಳಾದ ಕಾಫಿ, ಟೀ, ಅಡಕೆ, ರಬ್ಬರ್ ಮತ್ತು ಮಸಾಲೆ ಪದಾರ್ಥಗಳನ್ನು ಬೆಳೆಯಲು ಮತ್ತು ಕಂದಾಯ ವಸೂಲಿ ಮಾಡಲು ಅನುಕೂಲ ಮಾಡಿಕೊಂಡರು. ಜೊತೆಗೆ ಅರಣ್ಯದಲ್ಲಿಯ ಮರ, ಬಿದಿರು, ಖನಿಜ ಮುಂತಾದವುಗಳನ್ನು ವಾಣಿಜ್ಯ ಉದ್ದೇಶಕ್ಕೆ ಸಾಗಿಸಲು ವಸಾಹತು ಸರಕಾರಕ್ಕೆ ಯಾರ ತಡೆಯೂ ಇಲ್ಲದಂತಾಯಿತು.

ನಂತರ ಆಂಗ್ಲ ವಸಾಹತು ಸರಕಾರ ಆಡಳಿತದಲ್ಲಿ ಬಿಗಿ ತರಲು ತಮ್ಮ ರಾಜ್ಯವನ್ನು ಜಿಲ್ಲೆ, ತಾಲ್ಲೂಕ್ ಮತ್ತು ಗ್ರಾಮಗಳಾಗಿ ಭಾಗ ಮಾಡಿತು. ಅಲ್ಲಿಂದ ಮುಂದೆ ವ್ಯವಸ್ಥಿತವಾಗಿ ಮತ್ತು ಸಾಕಷ್ಟು ಕರ, ತೆರಿಗೆ ವಸೂಲಿ ಮಾಡಲು ಆಯಾ ಮಟ್ಟದ ಅಧಿಕಾರಿಗಳನ್ನು ನೇಮಿಸಿದರು ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಾಗಾಟಮಾಡಲು ವ್ಯವಸ್ಥೆ ಮಾಡಿಕೊಂಡರು. ಈ ಅಧಿಕಾರಿಗಳ ಮತ್ತು ಅವರ ಸಹಾಯಕರ ಸಂಬಳ ಹಾಗೂ ಕಛೇರಿ ಖರ್ಚುಗಳಿಗೆ ಬೇಕಾದ ಹಣಕ್ಕೆ ಅನೇಕ ಮಾರ್ಗಗಳನ್ನು ತಂದರು. ಇವುಗಳಲ್ಲಿ ಭೂಮಿಯನ್ನು ಅದರ ರಚನೆ, ಬಣ್ಣ ಮತ್ತು ಫಲವತ್ತತೆಯ ಆಧಾರದ ಮೇಲೆ ಕಂದಾಯ ವಿಧಿಸಿದ್ದೂ ಒಂದು. ಇದನ್ನು ವಸೂಲಿ ಮಾಡಲು ಗ್ರಾಮ ಮಟ್ಟದ ಅಧಿಕಾರಿಯನ್ನು ನೇಮಿಸಿ ಅವರಿಗೆ ಈ ಕೆಲಸದ ಜೊತೆ ಜೊತೆಗೆ ಕಾನೂನು ಮತ್ತು ಶಾಂತಿ ಪಾಲನೆ ಮಾಡುವ (ಮುಲ್ಕಿ ಮತ್ತು ಪೋಲಿಸ್) ಎರಡೂ ಅಧಿಕಾರ ನೀಡಿದರು.

ಎರಡನೆಯದಾಗಿ ಅನ್ಯ ಧರ್ಮೀಯರಾದ ಆಂಗ್ಲ ಮತ್ತು ಮುಸಲ್ಮಾನ ದೊರೆಗಳಂತೆ ಗ್ರಾಮಗಳನ್ನು ಹಿಂದೂ ಧಾರ್ಮಿಕ ಘಟಕಗಳೆಂದು ಪರಿಗಣಿಸದೆ ಸರಕಾರಕ್ಕೆ ಆದಾಯ ತರುವ ರೆವಿನ್ಯೂ (ಕಂದಾಯ) ಘಟಕಗಳಾಗಿ ಪರಿಗಣಿಸಿದರು. ಇಂತಹ ಒಂದು ಘಟಕಕ್ಕೆ ಒಬ್ಬ ಆಡಳಿತಾಧಿಕಾರಿಯನ್ನು (ಪಾಟೀಲನನ್ನು) ನೇಮಿಸಿದಾಗ ಅವನಿಗೆ ತನ್ನ ಅಧಿಕಾರವ್ಯಾಪ್ತಿ ಎಲ್ಲಿಯವರೆಗೆ ಬರುತ್ತದೆ ಎಂದು ತಿಳಿಸಲು ಊರಗಡಿಗಳನ್ನು ನಿಗದಿ ಮಾಡುವುದು ಅವಶ್ಯಕವಾಯಿತು. ಈ ಗಡಿ ಧಾರ್ಮಿಕ ಗಡಿಯಿಂದ ಬೇರೆಯದೇ ಆದ ರೆವಿನ್ಯೂ ಗಡಿಯಾಗಿತ್ತು. ಮೂರನೆಯದಾಗಿ ಆಂಗ್ಲರು ಬರುವುದಕ್ಕೆ ಮುನ್ನ ರೈತರು ಉಳುಮೆ ಮಾಡುತ್ತಿದ್ದ ಹೊಲಗಳ ನಿಖರವಾದ ಅಳತೆಯಾಗಿರಲಿಲ್ಲ. ಆಕಾರ ಮತ್ತು ಚಕ್ ಬಂಧಿಗಳೂ ಇರಲಿಲ್ಲ. ಹೀಗಾಗಿ ಪ್ರತಿವರ್ಷ ಹೊಲಗಳ ಮಾಲಿಕರು ಉಳುಮೆ ಮಾಡಲು ಪ್ರಾರಂಭಿಸಿದಾಗ ಒಮ್ಮೆ ಜಗಳಗಳು ಬರುತ್ತಿದ್ದವು. ಇದರಿಂದ ಗ್ರಾಮೀಣ ಪ್ರದೇಶದಲ್ಲಿ

ಶಾಂತಿ ಕಲಕುತ್ತಿತ್ತು. ಇದನ್ನು ತಪ್ಪಿಸಲು ವಸಾಹತು ಸರಕಾರ ಕಂದಾಯ ಇಲಾಖೆಯಲ್ಲಿ ಭೂ ಮಾಪನ ಮತ್ತು ಭೂ ದಾಖಲೆ ನೊಂದಾಣಿಕೆ ಎಂಬ ಮತ್ತೆ ಎರಡು ಉಪವಿಭಾಗಗಳನ್ನು ತಂದು ಕಾರ್ಯ ಪ್ರಾರಂಭಿಸಿತು.

ಇದಕ್ಕಾಗಿ ಒಂದು ಊರಿನ ನಿವಾಸಿಗಳು ಇವು ತಮ್ಮ ಸ್ವಾಧೀನದಲ್ಲಿರುವ ಹೊಲಗಳು ಎಂದು ತೋರಿಸಿದವನ್ನು ಒಂದು ಕಡೆಯಿಂದ ಅಳತೆ ಮಾಡಿ ಅವುಗಳಿಗೆ ಒಂದೊಂದು ಕ್ರಮ ಸಂಖ್ಯೆ ನೀಡಿದರು[೨]. ಅವುಗಳ ಆಕಾರ ಹಾಗೂ ಚಕ್ ಬಂಧಿಗಳನ್ನು ಅಂದರೆ ನಾಲ್ಕೂ ಕಡೆ ಇರುವ ಹೊಲಗಳ ರೆವಿನ್ಯೂ ಸಂಖ್ಯೆ, ಮಾಲಿಕರ ಹೆಸರು ಮುಂತಾದ ವಿವರ ನೀಡುವ ಮಾಹಿತಿಯನ್ನು ದಾಖಲಾತಿಸಿದರು. ಇದನ್ನು ನೊಂದಾಯಿಸಿ ಹಕ್ಕು ಮತ್ತು ಕಂದಾಯ ಇಲಾಖೆಯಲ್ಲಿ ಕಾಯ್ದಿಡುವುದರ ಜೊತೆಗೆ ಮಾಲಿಕನಿಗೂ ಇದರ ಒಂದು ಪ್ರತಿಯನ್ನು ನೀಡಿದರು. ಇದರಿಂದ ಸರಕಾರಕ್ಕೆ ಎರಡು ಲಾಭಗಳಾದವು. ಮೊದಲನೆಯದು ಭೂಮಿ ಸರಕಾರ ಅಥವಾ ಬೇರೆ ಯಾರಾದರೊಬ್ಬರು ಖಾತೆಯಲ್ಲಿರುವುದು ಕಡ್ಡಾಯವಾಯಿತು. ಎರಡನೆಯದಾಗಿ ಪ್ರತಿಯೊಬ್ಬ ರೈತನಿಂದ ಅವನ ಅನುಭವದಲ್ಲಿದ್ದ ಭೂಮಿಯಿಂದ ನಿಗದಿತವಾದ ಕಂದಾಯ ವಸೂಲಿ ಮಾಡಲು ನೆರವಾಯಿತು. ಒಬ್ಬ ರೈತ ತನ್ನ ಹೆಸರಿನಲ್ಲಿದ್ದ ಭೂಮಿಯನ್ನು ಉಳುಮೆ ಮಾಡದೆ ಬಿಟ್ಟಾಗ ಅಥವಾ ಅದಕ್ಕೆ ನಿಗದಿ ಮಾಡಿದ ಕಂದಾಯ ಕೊಡದಿದ್ದಾಗ ಅದನ್ನು ಪೂರ್ವದ ಪರಿಪಾಠದಂತೆ ಬೇಕಾಬಿಟ್ಟಿ ಬಿಟ್ಟು ಹೋಗದಂತಾಯಿತು. ಅಂದರೆ ಅದನ್ನು ಅವನು ಬೇರೆ ಯಾರಿಗಾದರೂ ಮಾರಿ ಅಥವಾ ದಾನ (ಪಾಲು) ಮಾಡಿಕೊಡುವುದರ ಮೂಲಕ ಅದರ ಮೇಲಿನ ತನ್ನ ಮಾಲಿಕತ್ವದ ಹಕ್ಕನ್ನು ಕಳೆದುಕೊಳ್ಳಬೇಕಾಗುತ್ತಿತ್ತು. ಇಲ್ಲದಿದ್ದರೆ ಸರಕಾರಕ್ಕೆ ಬರುವ ಆದಾಯ ತಪ್ಪುತ್ತಿದ್ದು ಈ ಕಂದಾಯದ ಬಾಕಿಗೆ ಆ ಹೊಲವನ್ನು ಅಥವಾ ಮಾಲಿಕನ ಮತ್ತಾವುದಾದರೂ ಚರಾಸ್ತಿಯನ್ನು ಹರಾಜು ಹಾಕುವುದು ಪ್ರಾರಂಭವಾಯಿತು. ಜೊತೆಗೆ ಪ್ರತಿಸಾರಿ ಹೀಗೆ ಭೂಮಾಲಿಕರು ಬದಲಾದಾಗ ಈ ಮಾಹಿತಿಯನ್ನು ನೊಂದಾಣಿಕಾ ಕಛೇರಿಯಲ್ಲಿ ನೊಂದಾಯಿಸಿ ದಾಖಲಾತಿ ಮಾಡಿಸುವುದು ಕಡ್ಡಾಯವಾಯಿತು. ಇದರಿಂದಲೂ ಶುಲ್ಕದ ರೂಪದಲ್ಲಿ ಸರಕಾರಕ್ಕೆ ಆದಾಯ ಬರಲು ಪ್ರಾರಂಭಿಸಿತು[೩].

೨೦ನೇ ಶತಮಾನದಲ್ಲಿ ಆಂಗ್ಲ ವಸಾಹತು ಸರಕಾರ ಹಳ್ಳಿಗಳನ್ನು ಹೀಗೆ ರಾಜ್ಯದ ಆಡಳಿತದ ಭಾಗ ಮಾಡಿಕೊಂಡಾಗ ಈ ಗ್ರಾಮ ಘಟಕಗಳ ಅಧಿಕಾರ ವ್ಯಾಪ್ತಿಯನ್ನು ನಿಗದಿ ಪಡಿಸಲು ಇಡೀ ಗ್ರಾಮದ ಭೂಮಿಯನ್ನು ಅಂದರೆ ಒಂದು ಊರಿನ ಗಡಿಯಿಂದ ಇನ್ನೊಂದು ಊರ ಗಡಿಯವರೆಗೆ ಅಳತೆ ಮಾಡಿಸಿದಾಗ ಎರಡು ಗ್ರಾಮಗಳ ನಡುವೆ ಏನೊಂದೂ ಜಾಗ ಬಿಡದೆ ಗಡಿ ನಿಗದಿ ಮಾಡಿದರು. ಆಗ ಅಸ್ತಿತ್ವಕ್ಕೆ ಬಂದದ್ದು ರೆವಿನ್ಯೂ ಗ್ರಾಮ ಮತ್ತು ಗಡಿ. ಇದರಿಂದಾಗಿ ಅಕ್ಕಪಕ್ಕದ ಎರಡು ಗ್ರಾಮಗಳ ಗಡಿಗಳು ತಾಗಿರುವಂತಾಗಿ ಅವುಗಳ ನಡುವೆ

ಏನೂ ಜಾಗ ಇಲ್ಲವಾಯಿತು. ಹೀಗೆ ಗ್ರಾಮಗಳ ಗಡಿಗಳನ್ನು ನಿಗದಿ ಮಾಡಿದ್ದರಿಂದ ಒಂದು ಗ್ರಾಮದ ರೆವಿನ್ಯೂ ಪ್ರದೇಶ ಧಾರ್ಮಿಕ ಪ್ರದೇಶದಿಂದ ಸ್ವಲ್ಪ ವಿಶಾಲವಾಗಿರುತ್ತದೆ.

ಊರು ಪ್ರದೇಶದಲ್ಲಿರುವ ಧಾರ್ಮಿಕ ವಲಯಗಳು

ಒಂದು ಧಾರ್ಮಿಕ ಘಟಕ ಗ್ರಾಮವನ್ನು ಸಾಂಪ್ರದಾಯಕವಾಗಿ ನಿವಾಸ ಪ್ರದೇಶ ಮತ್ತು ಅಡವಿ ಎಂದು ಮುಖ್ಯವಾಗಿ ಎರಡು ಭಾಗ ಮಾಡಲಾಗಿದೆ. ಇವುಗಳ ನಡುವಿನ ಪ್ರದೇಶವನ್ನು ಹೊಲಗಳು ಎಂದು ಹೆಸರಿಸಲಾಗಿದೆ. ಇವು ಮತ್ತೆ ಒಟ್ಟು ಒಂಬತ್ತು ಉಪಭಾಗಗಳಾಗಿ ಮಾಡಲ್ಪಟ್ಟಿವೆ. ಇವುಗಳಲ್ಲಿ ಐದು ಊರು ಪ್ರದೇಶದಲ್ಲಿ, ಉಳಿದ ನಾಲ್ಕು ತಲಾ ಎರಡೆರಡರಂತೆ ಉಳಿದ ಎರಡು ಭಾಗದಲ್ಲಿ ಬರುತ್ತವೆ. ಊರು ಅಥವಾ ನಿವಾಸ ಭಾಗದಲ್ಲಿ ಬರುವ ವಲಯಗಳೆಂದರೆ; (೧) ಗ್ರಾಮ ದೇವರ ಗುಡಿ ಮತ್ತು ಅದರ ಸುತ್ತ ಇರುವ ಪ್ರದೇಶ (ಗುಡಿ ಪೌಳಿ), (೨) ಒಳಕೇರಿ, (೩) ಹೊರ ಕೇರಿ, (೪) ಕಣಗಳು ಮತ್ತು (೫) ಪಹರಿ ಬೇಲಿ (ಅಗಸೆ ಬಾಗಿಲು). ಹೊಲದ ಭಾಗದಲ್ಲಿ (೬) ಮನೇದೊಲಗಳು ಮತ್ತು (೭) ಹೊಲಗಳು ಬರುತ್ತವೆ. ಕೊನೆಗೆ (೮) ಊರ ಧಾರ್ಮಿಕ ಗಡಿ ಮತ್ತು (೯) ಅಡವಿ ಬರುತ್ತವೆ.

ಈ ಮೂರು ಭಾಗಗಳು ತಾವು ಹೊಂದಿರುವ ಭೌತಿಕ ಮತ್ತು ಧಾರ್ಮಿಕ ಸ್ಥಾನದಿಂದಾಗಿ ಅನೇಕ ಪಾತ್ರಗಳನ್ನು ಹೊಂದಿವೆ. ರಕ್ಷಣೆ, ಬೆಲೆ, ಫಲವತ್ತತೆ ಹಾಗೂ ಪ್ರಾಚೀನತೆಯ ದೃಷ್ಟಿಯಿಂದ ಒಳಭಾಗ ಅತ್ಯಂತ ಮಹತ್ವದ್ದಾದರೆ ತೀರಾ ಹೊರಗಿನ ಪ್ರದೇಶಕ್ಕೆ ಈ ಯಾವ ಮೌಲ್ಯವಿಲ್ಲ. ಇದು ಕಾಡು ಪ್ರಾಣಿಗಳಿಂದ, ದುಷ್ಟ ಶಕ್ತಿಗಳಿಂದ, ವೈರಿಗಳಿಂದ ಸುಲಭವಾಗಿ ಅಪಾಯ ಬರಬಹುದಾದ ಜಾಗ. ಹೀಗಾಗಿ ಮಾನವರು ನಿರ್ಭಯವಾಗಿ ಹಾಗೂ ಹೆಚ್ಚು ಸಮಯ ಇಲ್ಲಿ ಇರುವುದಿಲ್ಲ. ಬದಲಿಗೆ ನಿವಾಸ ಭಾಗದಲ್ಲಿ ಮಾನವರು ಸುರಕ್ಷಿತರು. ಇಲ್ಲಿ ಅವರ ಆಶ್ರಯದಾತರು, ರಕ್ಷಕರು ಆದ ದೈವಗಳಿರುತ್ತವೆ. ಹೀಗಾಗಿ ಹಗಲು ಮತ್ತು ರಾತ್ರಿ ಎರಡೂ ವೇಳೆಯಲ್ಲಿ ಅಲ್ಲಿ ಅವರು ಸುರಕ್ಷಿತರು. ಈ ಊರು ಮತ್ತು ಅಡವಿಯ ನಡುವಿನ ಹೊಲಗಳು ಅತ್ತ ಅಪಾಯಕಾರಿಯೂ ಅಲ್ಲದ, ಸುರಕ್ಷಿತವೂ ಅಲ್ಲದ ಪ್ರದೇಶ. ಮಾನವರು ಇಲ್ಲಿಗೆ ಬಿತ್ತಲು, ಕಳೆಕೊಯ್ಲು ಮಾಡಲು ಬರಬಹುದು. ಆದರೆ ಅಲ್ಲವರು ಎಚ್ಚರಿಕೆಯಿಂದ ಇರಬೇಕು ಮತ್ತು ಸಂಜೆಯಾಗುತ್ತಿದ್ದಂತೆ, ಅಲ್ಲಿಂದ ಹೊರಡಬೇಕು. ಹೀಗೆ ಈ ಮೂರು ಭಾಗಗಳೂ ತಮ್ಮದೇ ಆದ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಾನಗಳನ್ನು ಹೊಂದಿವೆ. ಈಗ ಈ ವಲಯಗಳನ್ನು ಒಂದೊಂದಾಗಿ ತೆಗೆದುಕೊಂಡು ಚರ್ಚಿಸುವ.

೧. ಗುಡಿಪೌಳಿ

ಒಂದು ಗ್ರಾಮ ದೈವದ ಗುಡಿ ಮತ್ತು ಅದರ ಸುತ್ತಲಿನ ಜಾಗ (ಪೌಳಿ) ಧಾರ್ಮಿಕ ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಯಿಂದ ಬಹುಮುಖ್ಯವಾದ ವಲಯ. ಈ ಗುಡಿ ಗ್ರಾಮ ದೇವರ ತಾಣವಾಗಿರುವುದರ ಜೊತೆಗೆ ನಿರಾಶ್ರಿತರ, ಅನಾಥರ, ಪ್ರವಾಸಿಗಳ, ಪ್ರವಾಸ ಬಂದ ಅಧಿಕಾರಿಗಳ ತಂಗುದಾಣ. ಗುಡಿಯ ಸುತ್ತಲಿನ ಜಾಗ ಪೌಳಿ. ಅದರ ಎಲ್ಲೆಯನ್ನು ಗುರುತಿಸಲು ನಾಲ್ಕು ದಿಕ್ಕುಗಳಲ್ಲಿ ನಾಲ್ಕು (ಲಿಂಗ ಮುದ್ರೆ) ಕಲ್ಲುಗಳನ್ನು ನೆಟ್ಟಿರುತ್ತಾರೆ. ಇದು ಒಂದು ಗ್ರಾಮದ ನಟ್ಟ ನಡುವಿನ ಮತ್ತು ವಿಶೇಷವಾದ ಜಾಗ. ಹೀಗಾಗಿ ನಿಷೇಧಿತ ಸ್ಥಿತಿಯಲ್ಲಿರುವ ಮಾನವರು, ಪ್ರಾಣಿಗಳು ಮತ್ತು ಪಕ್ಷಿಗಳು ಇಲ್ಲಿಗೆ ಬರುವುದನ್ನು ನಿಷೇಧಿಸಲಾಗಿರುತ್ತದೆ. ಈ ನೇಮ ಉಲ್ಲಂಘಿಸಿದರೆ ಊರು ಮೈಲಿಗೆಯಾಗುವುದರಿಂದ ಗ್ರಾಮ ದೈವ ತನ್ನ ಶಕ್ತಿ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ. ಆಗ ಮಾನವರಿಗೆ ಮತ್ತು ಅವನ ಪ್ರಾಣಿ-ಪಕ್ಷಿಗಳಿಗೆ, ಗಿಡ-ಮರ-ಬಳ್ಳಿಗಳಿಗೆ ರೋಗಗಳನ್ನು ಮತ್ತು ಬರ, ನೆರೆ ಮತ್ತಿತರ ತೊಂದರೆಗಳನ್ನು ತರುವ ದುಷ್ಟ ಶಕ್ತಿಗಳು ಗ್ರಾಮ ನಿವಾಸದೊಳಗೆ ಪ್ರವೇಶ ಮಾಡಿ ತೊಂದರೆ ಕೊಡುತ್ತವೆ. ಈ ಸಂಕಷ್ಟಗಳಿಂದ ಪಾರಾಗಲು ಗ್ರಾಮಸ್ಥರು ಮೊದಲು ಗ್ರಾಮ ದೈವವನ್ನು, ಅದರ ಗುಡಿ ಪೌಳಿಯನ್ನು ಜಡ ಸ್ಥಿತಿಯಿಂದ ಹೊರ ತರಬೇಕು. ಆಗ ದೈವಕ್ಕೆ ಶಕ್ತಿ ಸಾಮರ್ಥ್ಯಗಳು ಮರಳಿ ಬರುತ್ತವೆ. ಇದಕ್ಕಾಗಿ ಗ್ರಾಮಸ್ಥರು ಪೂಜೆ, ಎಡೆ, ಕಾವುಕಟ್ಟುಗಳನ್ನು ಮಾಡಬೇಕು[೫].

೨. ಒಳಗೇರಿ

ಇದು ಗುಡಿ ಪೌಳಿಯ ಹೊರ ಸುತ್ತಲಿರುವ ಪ್ರದೇಶವಿದ್ದು ಇಲ್ಲಿ ಕರಿಗಲ್ಲು, ಅಗಸೆ ಬಾಗಿಲು, ಮಾರಿಕಟ್ಟೆ, ಬರಮಣ್ಣ ದೇವರ ಗುಡಿ ಮುಂತಾದ ಅನೇಕ ಪವಿತ್ರ ತಾಣಗಳಿರುತ್ತವೆ. ಊರ ಹೊರಗಿನಿಂದ ಈ ಭಾಗಕ್ಕೆ ಬರುವವರು "ಅಗಸೆ" ಬಾಗಿಲನ್ನು ದಾಟಿಯೇ ಬರಬೇಕು. ಹೀಗಾಗಿ ನಿಷೇಧಕ್ಕೊಳಗಾದ ವ್ಯಕ್ತಿಗಳು ಮತ್ತು ವಸ್ತುಗಳು ಇಲ್ಲಿಗೆ ಸುಲಭವಾಗಿ ಬರುವುದಿಲ್ಲ. ಇಲ್ಲಿ ಸಾಮಾನ್ಯವಾಗಿ ಗ್ರಾಮದ ಮೂಲ ನಿವಾಸಿಗಳು ವಾಸಮಾಡುತ್ತಾರೆ. ಇವರು ತಮ್ಮ ಈ ನಿವಾಸ ಪ್ರದೇಶದ ಬಗ್ಗೆ ಭಾವನಾತ್ಮಕ ಸಂಬಂಧ ಹೊಂದಿರುತ್ತಾರೆ. ಹೀಗಾಗಿ ಇಲ್ಲಿಂದ ಹೊರಗೆ ಹೋಗಿ ಮನೆ ಮಠ ಕಟ್ಟಿಕೊಂಡು ವಾಸಮಾಡಲು ಅವರು ಸುಲಭವಾಗಿ ಒಪ್ಪುವುದಿಲ್ಲ. ಇವರೆಲ್ಲರೂ ಅನ್ನ, ನೀರು, ಕಸ, ಬೆಂಕಿ ಮತ್ತು ತಾವು ಸಾಕುವ ಪ್ರಾಣಿಗಳ ಬಗ್ಗೆ ಹಾಗೂ ತಮ್ಮ ನಡಾವಳಿಯ ಬಗ್ಗೆ ಕೆಲವೊಂದು ನೇಮ ನಿಷೇಧಗಳನ್ನು ಪಾಲಿಸುತ್ತಾರೆ. ಊರಗೌಡರು ಈ ಪ್ರದೇಶದಲ್ಲೇ ವಾಸ ಮಾಡಬೇಕೆಂಬುದು ಪದ್ಧತಿ. ಈ ಎಲ್ಲಾ ಮೌಲ್ಯಗಳಿಂದಾಗಿ ಮೂಲನಿವಾಸಿಗಳು ಇಲ್ಲಿಯ

ತಮ್ಮ ಭಾಗದ ಆಸ್ತಿಯನ್ನು ಮಾರಬಯಸುವುದಿಲ್ಲ. ಅವರ ಮಕ್ಕಳೆಲ್ಲರೂ ಒಂದು ಹಕ್ಕಾಗಿ, ಈ ಆಸ್ತಿಯಲ್ಲಿ ಪಾಲು ಕೇಳುವುದರಿಂದ ಹಾಗೂ ಪಡೆಯುವುದರಿಂದ, ಎಲ್ಲರೂ ಇಲ್ಲೇ ವಾಸ ಮಾಡುತ್ತಾರೆ. ಹೀಗಾಗಿ ಇಲ್ಲಿ ಜನಸಾಂದ್ರತೆ ಹೆಚ್ಚು ಮತ್ತು ಇಲ್ಲಿಯ ಮನೆಗಳು ಚಿಕ್ಕವು, ಹಳೆಯ ಮಾದರಿಯವು. ರಸ್ತೆಗಳೂ ಅಂಕುಡೊಂಕು ಮತ್ತು ಕಿರಿದಾಗಿರುತ್ತವೆ. ಹೀಗಾಗಿ ಇವುಗಳನ್ನು ಸಂಧಿಗಳು ಎನ್ನುತ್ತಾರೆ. ಈ ಪ್ರದೇಶದೊಳಗೆ ನೊಗ ಹೊತ್ತ ಎತ್ತುಗಳು ಹಾಗೂ ಚಕ್ಕಡಿಗಳು ಬರುವುದಿಲ್ಲ.

ಗ್ರಾಮ ದೈವದ ವಾರ್ಷಿಕ ಹಬ್ಬಕ್ಕಾಗಿ ಗ್ರಾಮ ನಿವಾಸದೊಳಗೆ ಪ್ರವೇಶವನ್ನು ನಿಷೇಧಿಸುವ ವಿಧಿಗಳನ್ನು ಆಚರಿಸುವ ಗ್ರಾಮದ ಮೂರು ಸ್ಥಳಗಳಲ್ಲಿ ಒಳಕೇರಿಯೂ ಒಂದು. ಈ ಹಬ್ಬಕ್ಕೆ ಪ್ರಕಟಣೆ (ಸಾರು) ಹಾಕಿದ ನಂತರ ನಿಷೇಧಿತ ಸ್ಥಿತಿಯಲ್ಲಿರುವ ವ್ಯಕ್ತಿಗಳು ಇಲ್ಲಿಗೆ ಬರುವಂತಿಲ್ಲ. ಗ್ರಾಮ ದೈವವು ಊರಾಡಲು ಹೊರಟಾಗ ಒಳಕೇರಿಯಲ್ಲಿ ಮಾತ್ರ ಸಾಗುತ್ತದೆ. ನವದಂಪತಿಗಳನ್ನು ಮೆರವಣಿಗೆಯಲ್ಲಿ ತಂದಾಗ ಇಲ್ಲಿ ಮಾತ್ರ ಕರೆತರುತ್ತಾರೆ ಮತ್ತು ಇಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗುವವರು ತಮ್ಮ ದೈವದವರಿಗೆ ಒಂದು ವಿಶೇಷವಾದ ಊಟ (ಊರ ಊಟ) ಹಾಕಬೇಕು.

ಇಂದು ಜನಸಂಖ್ಯಾ ಹೆಚ್ಚಳದಿಂದಾಗಿ ಮೂಲವಾಸಿಗಳಲ್ಲಿ ಕೆಲವು ಕುಟುಂಬಗಳು ಈ ವಲಯದಿಂದ ಹೊರಗೆ ಹೋಗಿ ನೆಲಸಿವೆ. ಆದರೆ ಈ ಪೂರ್ವದ ನಿವಾಸಸ್ಥಳಗಳ ಮೇಲಿನ ಅವರ ಅಭಿಮಾನ ಕಡಿಮೆಯಾಗಿಲ್ಲವಾದ್ದರಿಂದ ಇವುಗಳನ್ನು ಬೇರೆಯವರಿಗೆ ಮಾರುವುದಿಲ್ಲ ಮತ್ತು ಪಂಜಾಬಿನ ಗ್ರಾಮವೊಂದರ ಬಗ್ಗೆ ಎಗ್ಲರ್ (೧೯೬೦:೨೧-೨೨) ರವರು ಹೇಳುವಂತೆ ಕರ್ನಾಟಕದ ಈ ಜಾನಪದಿಗಳೂ ಮುಂದೆ ತಮ್ಮ ವಂಶಸ್ಥರಲ್ಲಿ ಯಾರಾದರೂ ಹೋಗಿ ಅಲ್ಲಿ ವಾಸ ಮಾಡಬರುತ್ತದೆ ಎಂಬ ಆಸೆ ಇಟ್ಟುಕೊಂಡಿರುತ್ತಾರೆ.

೨. ಹೊರಕೇರಿ

ಒಳಕೇರಿಯಿಂದ ಹೊರಗಿನ ನಿವಾಸ ಪ್ರದೇಶವನ್ನು ಹೊರಕೇರಿ ಎಂದು ಕರೆಯುತ್ತಾರೆ. ಒಳಕೇರಿಗೆ ಹೋಲಿಸಿದರೆ ಇದು ಇತ್ತೀಚೆಗೆ ಕಟ್ಟಿಕೊಂಡ ನಿವಾಸ ಪ್ರದೇಶ. ಒಳಕೇರಿಯಲ್ಲಿಯ ಭದ್ರವಾದ ಹಾಗೂ ಹಳೆಯ ಶೈಲಿಯ ಮನೆಗಳಿಗೆ ಹೋಲಿಸಿದರೆ ಇಲ್ಲಿಯ ಮನೆಗಳು ಇತ್ತೀಚೆಗೆ ಕಟ್ಟಿದವು. ಇವುಗಳಿಗೆ ಸಾಂಪ್ರದಾಯಕವಾಗಿ ಬಂದ ಮೌಲ್ಯದ ಮರ-ಮುಟ್ಟು ಬಳಸಿರುವುದಿಲ್ಲ. ಇಲ್ಲಿ ವಲಸೆ ಬಂದ ಮೂಲನಿವಾಸಿಗಳ ಬಂಧು-ಬಳಗದವರು, ಆಶ್ರಿತರು ಮತ್ತು ಆಯಗಾರರಾದ ಕುಶಲಕರ್ಮಿಗಳು, ಸೇವಾ ವೃತ್ತಿಯವರು ವಾಸ ಮಾಡುತ್ತಾರೆ. ಇವರಿಗೆ ಸಾಂಪ್ರದಾಯಕವಾಗಿ ಬಂದ ಗ್ರಾಮಮಟ್ಟದ ಯಾವ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳು ಹಕ್ಕು ಕರ್ತವ್ಯಗಳಿಲ್ಲ.

ಆಯಾ, ಬಾರಾಬಲೂತಿ ಒಕ್ಕೂಟದಲ್ಲಿ ಪಾತ್ರಗಳು ಇಲ್ಲ. ಹೀಗಾಗಿ ಗ್ರಾಮ ಮಟ್ಟದ ಹಬ್ಬ-ಆಚರಣೆಗಳಲ್ಲಿ ಮತ್ತು ಮದುವೆ ಮುಂತಾದ ವಿಧಿಕಾರ್ಯಗಳಲ್ಲಿ ಇವರು ಕೇವಲ ಅತಿಥಿಗಳಾಗಿ, ಪ್ರೇಕ್ಷಕರಾಗಿ ಮಾತ್ರ ಭಾಗವಹಿಸಬಹುದು. ಹೀಗಾಗಿ ಗ್ರಾಮದ ಸಾಂಪ್ರದಾಯಕ ಚಟುವಟಿಕೆಗಳಲ್ಲಿ ಅವರಿಗೆ ಎರಡನೆಯ ದರ್ಜೆಯ ನಾಗರೀಕರ ಸ್ಥಾನಮಾನವಿರುತ್ತದೆ.

ಹೊರಕೇರಿ ಭಾಗದಲ್ಲಿ ಪೂರಾ ದಕ್ಷಿಣದ ಪ್ರದೇಶವು ಹೊಲೆಮಕ್ಕಳ(ಹರಿಜನರ) ನಿವಾಸ ಸ್ಥಳ. ಸಾಮಾನ್ಯವಾಗಿ ಗ್ರಾಮದೇವರು, ಮೇಲಿನ ಜಾತಿಯವರು ಮತ್ತು ಅವರ ಮದುಮಕ್ಕಳು ಈ ಪ್ರದೇಶದೊಳಗೆ ಹೋಗುವುದಿಲ್ಲ. ಹೋದರೆ ಮೈಲಿಗೆ ತಾಗುವುದರಿಂದ ಅವರು ಒಂದು ಮಂಗಳ ಸ್ನಾನ ಮಾಡಬೇಕಾಗುತ್ತದೆ.

೪. ಕಣಗಳು

ಹೊರಕೇರಿಯ ವೃತ್ತದ ನಂತರ ಕಣಗಳ ಸಾಲು ಬರುತ್ತದೆ. ಪ್ರತಿ ರೈತ ಕುಟುಂಬ ತನ್ನದೇ ಆದ ಕಣವನ್ನು ಹೊಂದಿರುತ್ತದೆ. ಇವುಗಳನ್ನು ಒಳಸುತ್ತಿನ ಮತ್ತು ಹೊರಸುತ್ತಿನ ಕಣಗಳು ಎಂದು ಎರಡು ಬಗೆ ಮಾಡುತ್ತಾರೆ. ಒಳಕಣಗಳನ್ನು ಒಕ್ಕಲು ಮಾಡಲು ಮಾತ್ರ ಬಳಸುತ್ತಾರೆ. ಇಲ್ಲಿ ಸಾಕಷ್ಟು ಮರಗಳು ಬೆಳೆದಿರುತ್ತವೆಯಾದ್ದರಿಂದ, ಸಾಕಷ್ಟು ಗಾಳಿ ಬೀಸುವುದಿಲ್ಲವಾದ್ದರಿಂದ, ಇಲ್ಲಿ ಧಾನ್ಯಗಳನ್ನು ತೂರಲು ಬರುವುದಿಲ್ಲ. ಆಗ ಧಾನ್ಯ ಮಿಶ್ರಿತ ಹೊಟ್ಟನ್ನು ಪಹರಿ ಬೇಲಿಯಿಂದ ಹೊರಗಿನ ಹೊರಕಣಗಳಿಗೆ ಸಾಗಿಸಿ ತೂರಿಕೊಳ್ಳಬೇಕು. ಕಾರಣ ಇವುಗಳನ್ನು ಒಳಕಣಗಳು ಎಂದೂ ಕರೆಯುತ್ತಾರೆ. ಇವುಗಳ ಸುತ್ತ ಎತ್ತರವಾದ ಬೇಲಿ ಇರುತ್ತದೆ. ಈ ಬೇಲಿಯ ಹೊರಭಾಗವನ್ನು ವಿಶೇಷವಾಗಿ, ಸಾಕಷ್ಟು ಎತ್ತರವಾಗಿ, ಕಳ್ಳಿ-ಮುಳ್ಳು ಹಾಕಿ ಭದ್ರ ಮಾಡಿರುತ್ತಾರೆ. ಇಲ್ಲಿ ಫಸಲಿನ ಹಾಗೂ ದನಗಳ ಮೇವಿನ ಹುಲ್ಲಿನ, ಅಡಿಗೆ ಮನೆಯ ಒಲೆಗೆ ಬೇಕಾಗುವ ಉರುವಲಿನ ಮತ್ತು ಕುಳ್ಳಿನ ಬಣವೆಗಳಿರುತ್ತವೆ. ಸಾಂಪ್ರದಾಯಕವಾಗಿ ಇದು ಮಾನವರ ಮತ್ತು ಅವರ ಸಾಕು ಪ್ರಾಣಿಗಳ ವಾಸಕ್ಕೆ ಸೂಕ್ತವಾದ ಸ್ಥಳವಲ್ಲ.

ಒಂದು ಕಣವನ್ನು ಮಾನವರಿಗೆ, ಪ್ರಾಣಿಗಳಿಗೆ ಮತ್ತು ಹೊಲಗಳಿಗೆ (ತಿಪ್ಪೆಗೆ, ಒಲೆಗೆ) ಬೇಕಾದ ವಸ್ತುಗಳನ್ನು ಶೇಖರಿಸಿಡುವ ಸ್ಥಳಗಳು ಎಂದು, ದವಸ ತುಂಬಿದ ಪೈರನ್ನು ಶೇಖರಿಸಿಡುವ, ಅದನ್ನು ಒಕ್ಕುವ ಮತ್ತು ಸತ್ತ ಹುಲ್ಲನ್ನು ಬಣವೆಯಾಗಿ ಹೊಟ್ಟುವ ಎಂದು ಹೀಗೆ ಅಲ್ಲಿ ನಡೆಯುವ ಚಟುವಟಿಕೆಗಳ ಆಧಾರದ ಮೇಲೆ ಮೂರು ಮೂರು ಭಾಗ ಮಾಡಲಾಗಿದೆ. ಇಡೀ ವ್ಯವಸಾಯ ಚಟುವಟಿಕೆಯನ್ನು ಒಂದು ಫಲೋತ್ಪತ್ತಿಯ ಪ್ರಕ್ರಿಯೆ ಎಂದು ಗಣಿಸಿದರೆ ಕಣದಲ್ಲಿ ನಡೆಯುವ ಚಟುವಟಿಕೆಗಳು ಅದರ ಅಣಕ ಆಚರಣೆಗಳು.

ಹೀಗಾಗಿ ಕಣದಲ್ಲಿ ಫಸಲನ್ನು ಒಕ್ಕುವುದು ಅಂದರೆ ಕಣವನ್ನು ಸಿದ್ಧಪಡಿಸುವುದು ಮತ್ತು ಬಳಸುವುದು ರೈತರಿಗೆ ಬಹು ಮುಖ್ಯವಾದ ಚಟುವಟಿಕೆಗಳು, ವಿಚಾರಗಳು. ಒಂದು ಕಣದಲ್ಲಿ ಪೂರ್ವಕ್ಕೆ ಮುಖ ಮಾಡಿ ನಿಂತಾಗ ಅದರ ಎಡಭಾಗ ಸ್ವಲ್ಪ ಎತ್ತರವಾಗಿರುವುದು ಕಂಡು ಬರುತ್ತದೆ. ಇದನ್ನು ಬಣವೆ ದಿಬ್ಬ ಎಂದು ಕರೆಯುತ್ತಾರೆ ಮತ್ತು ಇಲ್ಲಿ ಮೇವಿನ ಬಣವೆಗಳನ್ನು ಹಾಕುತ್ತಾರೆ. ಬಲಭಾಗವನ್ನು ತಿಪ್ಪೆ ಹಾಕುವ ಭಾಗವೆಂದು ಮತ್ತು ನಡುವಿನ ಭಾಗವನ್ನು ಒಕ್ಕುಕಣವೆಂದು ಕರೆಯುತ್ತಾರೆ.

ವರ್ಷದ ಸುಗ್ಗಿಗೆ ಕಣವನ್ನು ಅಣಿಮಾಡಲು ಮೊದಲಿಗೆ ಅದರಲ್ಲಿಯ ಕಸಕಡ್ಡಿ ಕಳೆಯನ್ನು ಕೆತ್ತಿ ತೆಗೆದು ಗುಡಿಸಿ ಸ್ವಚ್ಛ ಮಾಡುತ್ತಾರೆ. ನಂತರ ಅದರ ನಟ್ಟ ನಡುವೆ ಒಂದು ಒಣಗಿದ ಮರದ, ದುಂಡನೆಯ ಗೂಟವನ್ನು ಭದ್ರವಾಗಿ ನೆಟ್ಟು "ಮೇಟಿ" ಎಂದು ಪೂಜಿಸುತ್ತಾರೆ. ಒಕ್ಕಲು ಕೆಲಸಕ್ಕೆ ನೆಲವನ್ನು "ಗಟ್ಟಿಸಲು" ಮೇಟಿಯ ಸುತ್ತಲಿನ ಭಾಗವನ್ನು ಅಂದು ರಾತ್ರಿ ಸಾಕಷ್ಟು (ಮಳೆ ಬಂದುದರ ಸಂಕೇತದಲ್ಲಿ) ನೀರು ಹಾಕಿ ನೆನೆಸುತ್ತಾರೆ. ಮರುದಿನ ಬೆಳಗ್ಗೆ ಸರಿಹೊತ್ತಿನಿಂದ ಎತ್ತು ಮತ್ತು ದನಕರುಗಳನ್ನು ದವಣಿ ಕಟ್ಟಿ ತುಳಿಸುತ್ತಾರೆ. ಇದು ಒಂದು ಹಂತಕ್ಕೆ ಬಂದ ನಂತರ ಅದರಲ್ಲಿ ಮೂಡಿದ ಹೆಜ್ಜೆ ಗುರುತುಗಳನ್ನು ಸಮತಟ್ಟು ಮಾಡಲು ಕುಂಟೆ ದಿಂಡು ಹೊಡೆಯುತ್ತಾರೆ. ನಂತರ ಒಣಗಿ ಕಣ ಬಿರಿಯುವ ಮುನ್ನ ಅದನ್ನು ದಪ್ಪನೆಯ ಸಗಣಿ ನೀರಿನಿಂದ (ದಬಡು) ಬಳಿಯುತ್ತಾರೆ. ಕೊನೆಗೆ ನೀರಿನಲ್ಲಿ(ಕರಿ-ಹೋಳಿ ಕಾಮನನ್ನು ಸುಟ್ಟಾಗ ಬಂದ ಸಂಕೇತದ) ಬೂದಿಯನ್ನು ಕದಡಿಕೊಂಡು ಮೇಟಿಯನ್ನು ಮಧ್ಯಕ್ಕೆ ಮಾಡಿಕೊಂಡು, ಕಣದ ಸುತ್ತಲೂ ದಂಡಿಗುಂಟಿ ಪೂರ್ಣ ಚಂದ್ರಾಕೃತಿಯಲ್ಲಿ ಮತ್ತು ಅಡ್ಡ-ಬಡ್ಡ ಗೆರೆಗಳನ್ನು (ಕರಿ) ಹಾಕುತ್ತಾರೆ. ಇದರಿಂದ ಸಾಂಕೇತಿಕವಾಗಿ ಕಣ(ಪ್ರಕೃತಿ ವರ್ಷ ನಾಲ್ಕು ಋತುಗಳಾಗಿ) ನಾಲ್ಕು ಹೋಳಾಗಿ (ಉಳುವ, ಬಿತ್ತುವ, ಕೊಯ್ಲು ಮಾಡುವ, ಒಕ್ಕುವ ಹೀಗೆ ನಾಲ್ಕು ಚಟುವಟಿಕೆಯ ತಾಣವಾಗಿ) ಕಾಣುತ್ತದೆ.

ಈ ವೇಳೆಗೆ ಕೊಯ್ಲು ಮಾಡಿ ತಂದು ಕಣದಲ್ಲಿ ಒಂದು ಕಡೆ ತಾತ್ಕಾಲಿಕ ಬಣವೆಯಾಗಿ ಶೇಖರಿಸಿದ ಪೈರು ಒಕ್ಕಲು ಅನುಕೂಲವಾಗುವಷ್ಟು ಒಣಗಿರುತ್ತದೆ. ನಂತರ ಇದನ್ನು ಕಣದಲ್ಲಿ ಮೇಟಿಯ ಸುತ್ತ ಹರಡಿ ರೋಣಗಲ್ಲು ಹೊಡೆದು ಅಥವಾ ದನಗಳಿಂದ ತುಳಿಸಿ, ಒಕ್ಕಲು ಪ್ರಾರಂಭಿಸುತ್ತಾರೆ. ಕಾಳು ಮಿಶ್ರಿತ ಹೊಟ್ಟನ್ನು ಎತ್ತರದಿಂದ (ಗಾಳಿಗೆ) ತೂರಿ ಧಾನ್ಯವನ್ನು ಬೇರ್ಪಡಿಸುತ್ತಾರೆ. ನಂತರ ಧಾನ್ಯವನ್ನು ಒಂದೆಡೆ ರಾಶಿಯಾಗಿ ಮತ್ತು ಸತ್ತ ಹುಲ್ಲನ್ನು ಇನ್ನೊಂದು ಕಡೆ ಮೆದೆಯಾಗಿ ಹಾಕುತ್ತಾರೆ.

ಮನೆಯಂತೆ ಕಣ ಸುರಕ್ಷಿತವಾದ ಸ್ಥಳವಲ್ಲವಾದ್ದರಿಂದ ಧಾನ್ಯ ಸಂಪತ್ತನ್ನು ಆದಷ್ಟು ಬೇಗ ಇಲ್ಲಿಂದ ಹೊರಗೆ ಸಾಗಿಸಬೇಕು. ಇದಕ್ಕೂ ಮುನ್ನ ರಾಶಿಹಬ್ಬ ಮಾಡಿ ಈ ಸಂಪತ್ತನ್ನು ನೀಡಿದ ನಿಸರ್ಗ ದೈವಗಳಿಗೆ ಪೂಜೆ-ಎಡೆ ನೀಡಬೇಕು. ಊರ ದೈವಕ್ಕೆ, ಕುಟುಂಬದ

ಗುರುಗಳಿಗೆ, ಆಯಗಾರರಿಗೆ ಅವರವರ ಬಾಬತ್ತಿನ ಕಾಣಿಕೆ, ಆಯ, ಉಲುಪಿ, ಖುಷಿ ಕೊಡಬೇಕು. ರೈತರು ಮತ್ತು ಆಯಗಾರರು ಅತ್ಯಂತ ಸಡಗರದಿಂದ, ಸಂತೋಷದಿಂದ ಆಚರಿಸುವ ಹಬ್ಬಗಳಲ್ಲಿ (ಕಣ) ಸುಗ್ಗಿಹಬ್ಬ ಅಥವಾ ರಾಶಿ ಪೂಜೆ ವಿಶೇಷವಾದದ್ದು. ಇದನ್ನು ರೈತರು ತಮ್ಮ ಪ್ರಮುಖ ಆಹಾರ ಧಾನ್ಯವನ್ನು ಒಕ್ಕುವುದು ಮುಗಿದ ನಂತರ ಆಚರಿಸುತ್ತಾರೆ. ಪೂಜೆಗೆ ಧಾನ್ಯವನ್ನು ಓರಣವಾಗಿ ರಾಶಿ ಮಾಡಿ ಅದರ ಮೂಡ ಮುಖದಲ್ಲಿ ನೆಲದ ಮೇಲೆ ಮೂರು ಬಂಟಗಳನ್ನು ಇಟ್ಟು ಹೂ ಹಾಗೂ ಗರಿಕೆ ಪತ್ರೆಗಳಿಂದ ಸಿಂಗರಿಸುತ್ತಾರೆ. ಕುಟುಂಬದ ಪರೋಹಿತರು ಬರುತ್ತಿದ್ದಂತೆ ಧಾನ್ಯ ದೇವತೆಗೆ ಪೂಜೆ, ಎಡೆಗಳು ನಡೆಯುತ್ತವೆ. ತಮ್ಮ ಸಂತೋಷ ಹಾಗೂ ಸಂತುಷ್ಟತೆಗಳನ್ನು ತೋರಿಸಲು ಈ ಸಂದರ್ಭದಲ್ಲಿ ರೈತರು ಬಂಧುಬಾಂಧವರಿಗೆ, ಆಯಗಾರರಿಗೆ ಅನ್ನ ಸಂತರ್ಪಣೆ ಮಾಡುತ್ತಾರೆ. ಮರೆಯದೆ ಬಡಬಗ್ಗರಿಗೆ ದಾನಧರ್ಮ ಮಾಡುತ್ತಾರೆ. ನಂತರ ಉಳಿದುದನ್ನು ತಮ್ಮ ಮನೆಗಳಿಗೆ ಸಾಗಿಸುತ್ತಾರೆ.

ರಾಶಿ ಹಬ್ಬದ ನಂತರ ರೈತ ತನ್ನ ಇತರೆ ಅವಶ್ಯಕತೆಗಳಾದ ದನಕರುಗಳಿಗೆ ಮೇವು ಹಾಗೂ ಅಡಿಗೆಯ ಮನೆಯ ಒಲೆಯ ಉರವಲಿನ ಅಗತ್ಯದ ಕಡೆಗೆ ಗಮನ ಕೊಡುತ್ತಾನೆ. ಹಾಲು-ಹೈನಿಗಾಗಿ, ಹೊಲ ಉಳಲು, ಸಗಣಿ ಗೊಬ್ಬರಕ್ಕಾಗಿ, ಚರ್ಮ ಮಾಂಸಕ್ಕಾಗಿ ದನಕರುಗಳನ್ನು ಸಾಕುತ್ತಾನೆ. ಇವುಗಳ ಮೇವಿನ ಅವಶ್ಯಕತೆಯನ್ನೂ ಗಮನದಲ್ಲಿಟ್ಟುಕೊಂಡು ಜೋಳ, ರಾಗಿ, ಭತ್ತ, ನವಣೆ ಮುಂತಾದ ಆಹಾರ ಧಾನ್ಯಗಳನ್ನು, ತೊಗರಿ, ಅವರೆ, ಪುಂಡಿ ಮುಂತಾದ ಅಕ್ಕಡಿ ಕಾಳುಗಳನ್ನು ಹುರುಳಿ, ಅಲಸಂದಿ, ಹೆಸರು ಮುಂತಾದ ಮಿಶ್ರ ಬೆಳೆಗಳನ್ನು, ನೆಲಗಡಲೆ, ಹತ್ತಿ, ಕಬ್ಬು ಮುಂತಾದ ಆರ್ಥಿಕ ಬೆಳೆಗಳನ್ನು ಬೆಳೆಯುತ್ತಾನೆ. ಇವುಗಳ ಹುಲ್ಲು ಹಾಗೂ ಹೊಟ್ಟನ್ನು ಬೇರೆ ಬೇರೆಯಾಗಿ ಅಥವಾ ಒಟ್ಟಾಗಿ ಬಣವೆ ಹಾಕುತ್ತಾನೆ.

ಒಲೆಗೆ ಉರವಲಾಗಿ ತೊಗರಿ, ಹತ್ತಿ ಕಡ್ಡಿಗಳನ್ನು ಹಾಗೂ ದನಗಳ ಸಗಣಿ ತಟ್ಟಿ ಕುಳ್ಳಿನ ಬಣವೆಗಳನ್ನೂ ಹಾಕುತ್ತಾರೆ. ಇವುಗಳನ್ನು ಕಳ್ಳರಿಂದ, ತುಡುಗು ದನಗಳಿಂದ, ಗಿದ್ದಲು ಹುಳುಗಳಿಂದ, ಬೆಂಕಿ-ಬಿರುಗಾಳಿಯಿಂದ ರಕ್ಷಿಸಲು ಆಗಾಗ ಕಣಕ್ಕೆ ಬಂದು ಹೋಗುವುದರ ಜೊತೆಗೆ ಇವುಗಳ ರಕ್ಷಕ ದೈವಗಳಿಗೆ ಹರಕೆ ಹೊತ್ತು, ಪೂಜೆ-ಕಾಣಿಕೆ-ಆಹುತಿ ನೀಡಿ, ಚರಗ ಚೆಲ್ಲಿ ರಕ್ಷಣೆ ಬೇಡುತ್ತಾರೆ. ತಾವೂ ನೈತಿಕವಾದ, ಧರ್ಮ ಸಮ್ಮತವಾದ ಜೀವನ ಮಾಡುತ್ತಾರೆ.

ಕಣಗಳನ್ನು ಒಳಸಾಲಿನ ಮತ್ತು ಹೊರಸಾಲಿನ ಕಣಗಳು ಎಂದು ಎರಡು ಬಗೆ ಮಾಡಲಾಗಿದೆ. ಅವುಗಳ ಮಾಲಿಕರ ಸ್ಥಳೀಯತೆಯ ಆಧಾರದ ಮೇಲೆ ಮೂಲನಿವಾಸಿಗಳ ಮತ್ತು ವಲಸೆ ಬಂದವರ ಕಣಗಳೆಂದೂ ಭಾಗ ಮಾಡಬರುತ್ತದೆ. ನಿವಾಸ ಪ್ರದೇಶದಲ್ಲಿ ಹೊರಕೇರಿ ಮುಗಿದ ತಕ್ಷಣ ಬರುವ ಅಂದರೆ ಒಳಸಾಲಿನ ಕಣಗಳು ಸಾಮಾನ್ಯವಾಗಿ ಗ್ರಾಮದ ಮೂಲನಿವಾಸಿಗಳಿಗೆ ಸೇರಿರುತ್ತವೆ. ಇವು ಸ್ವಲ್ಪ ವಿಶಾಲವಾಗಿರುತ್ತವೆ ಮತ್ತು ಇವುಗಳನ್ನು

ತಲೆಮಾರುಗಳಷ್ಟು ಹಿಂದೆ ಕಟ್ಟಿಕೊಂಡಿರುವುದರಿಂದ ಅವುಗಳ ಬೇಲಿಯಲ್ಲಿ ಸಾಕಷ್ಟು ದೊಡ್ಡ ಮರಗಳು ಬೆಳೆದಿರುತ್ತವೆ. ಇಲ್ಲಿಯ ಬೇಲಿಗೆ ಹಾಕಿದ ಕಳ್ಳಿ ಮರವಾಗಿ ಬೆಳೆದಿರುತ್ತದೆ. ನಂತರ ವಲಸೆ ಬಂದವರ ಕಣಗಳು ಬರುತ್ತವೆ. ಇವು ಅಳತೆಯಲ್ಲಿ ಚಿಕ್ಕವು. ಹೊಸದಾಗಿ ಕಟ್ಟಿಕೊಂಡ ಇವುಗಳಲ್ಲಿ ಮರಗಳು ಸಣ್ಣವಿರುತ್ತವೆ ಅಥವಾ ಅವು ಇನ್ನೂ ಬೆಳೆದಿರುವುದಿಲ್ಲ. ಹೊಟ್ಟನ್ನು ತೂರಿ ಧಾನ್ಯವನ್ನು ಬೇರ್ಪಡಿಸಲು ಒಳಕಣದಲ್ಲಿ ಸಾಕಷ್ಟು ಗಾಳಿ ಇಲ್ಲದಾಗ ಅದನ್ನು ಇಲ್ಲಿ ತಂದು ತೂರುತ್ತಾರೆ. ಆದರೆ ಧಾನ್ಯವನ್ನು ಇಲ್ಲಿ ರಾಶಿ ಮಾಡಿ ಪೂಜಿ ಮಾಡಬರುವುದಿಲ್ಲ ಮತ್ತು ಆಯಗಾರರಿಗೆ, ಗುಡಿಮಠಗಳಿಗೆ ಕೊಡಿಗೆ, ದಾನ ಕೊಡಬರುವುದಿಲ್ಲ. ಹೀಗಾಗಿ ತೂರುವುದು ಮುಗಿಯುತ್ತಿದ್ದಂತೆ ಧಾನ್ಯಗಳನ್ನು ಒಳಕಣಕ್ಕೆ ಸಾಗಿಸುತ್ತಾರೆ.

ರೈತನಿಗೆ ಕಣ ಬಹುಮುಖ್ಯವಾದ ಸ್ಥಳ. ತಾಯಿಯಿಂದ ಅಂದರೆ ಬೆಳೆಯಿಂದ, ಧಾನ್ಯಗಳನ್ನು ಬೇರ್ಪಡಿಸಿ ಇವುಗಳಲ್ಲಿ ಕೆಲವನ್ನು ಬೀಜ ಸಂಪತ್ತನ್ನಾಗಿ, ಉಳಿದವುಗಳನ್ನು ಅನ್ನ ಸಂಪತ್ತಾಗಿ ಪರಿವರ್ತನೆ ಮಾಡುವ ಭಾಗವಾದ ಕಣ ಅತ್ತ ಆಹಾರದ ಉತ್ಪಾದನೆ, ಇತ್ತ ಭುಂಜನೆ ಆಗದ ಒಂದು ಮಧ್ಯದ ಸ್ಥಾನ ಹೊಂದಿದೆ. ದುಂಡನೆಯ ಆಕಾರದ ಒಕ್ಕಲು ಕಣ ಫಲದೇವತೆಯ, ಇದರಲ್ಲಿ ನೆಟ್ಟ ಮೇಟಿ ಪುರುಷ ದೇವರ ಸಂಕೇತವಾದರೆ ಒಕ್ಕುವುದು ಫಲೋತ್ಪತ್ತಿ ಕ್ರಿಯೆಯ ಸಂಕೇತ. ಕಣಸುಗ್ಗಿ ಮುಗಿದ ನಂತರ ಮೇಟಿಯನ್ನು ಮತ್ತೊಮ್ಮೆ ಪೂಜಿಸಿ ನೆಲದಿಂದ ಕಿತ್ತು ತೆಗೆದು ಇಡುತ್ತಾರೆ. ಅಂದರೆ ಪುರುಷ ದೇವರನ್ನು ವಿಧಿವತ್ತಾಗಿ ಮರಳಿ ಕಳುಹಿಸಿಕೊಡುತ್ತಾರೆ. ಇಲ್ಲಿಂದ ಮುಂದೆ ಕಣದಲ್ಲಿ ಒಕ್ಕುವುದಕ್ಕೆ (ಫಲೋತ್ಪತ್ತಿಗೆ) ಸಂಬಂಧಿಸಿದಂತೆ ಯಾವ ಕೆಲಸ-ಕಾರ್ಯಗಳೂ ನಡೆಯುವುದಿಲ್ಲ.

ಇಲ್ಲಿಂದ ಮುಂದೆ ಕಣದಲ್ಲಿ, ಪಶುಗಳಿಗೆ, ಒಲೆಗೆ ಮತ್ತು ಹೊಲಗಳಿಗೆ ಆಹಾರವಾದ ಮೇವು, ಉರವಲು ಮತ್ತು ತಿಪ್ಪೆಯ ಗೊಬ್ಬರಗಳು ಮಾತ್ರ ಇರುತ್ತವೆ. ಇವುಗಳನ್ನು ರಕ್ಷಿಸುವ ಹೊಣೆ ಕಣದ ಬೇಲಿಯದು; ಅಂದರೆ ಅಲ್ಲಿಯ ಬಂಟ ದೇವರದು. ಭೌತಿಕವಾಗಿ ಮತ್ತು ದುಷ್ಟ ಶಕ್ತಿಗಳಿಂದ ರಕ್ಷಣೆ ಪಡೆಯಲು ಕಣಗಳಿಗೆ ಹಾಕುವ ಬೇಲಿ ಬಹುಮುಖ್ಯವಾದದ್ದು. ಪ್ರತಿವರ್ಷ ಕಣಸುಗ್ಗಿ ಪ್ರಾರಂಭವಾಗುವ ಮುನ್ನ ಅಥವಾ ಗ್ರಾಮ ದೈವದ ಹಬ್ಬದ ಸಂದರ್ಭದಲ್ಲಿ, ಅದರಲ್ಲಿಯ ಹಳೆಯ ಕಳ್ಳಿಮುಳ್ಳಿನ ಬೆನ್ನಿಗೆ ಹೊಸದು ಹಾಕುತ್ತಾರೆ. ಅಲ್ಲಿ ಸದಾ ರಕ್ಷಣೆ ಸಿಗುವುದರಿಂದ, ಆದರಗುಂಟಿ ಪಶುಪಕ್ಷಿಗಳು ತಿಂದು ಉದುರಿಸಿದ ಬೀಜಗಳು ಬೀಳುವುದರಿಂದ ಅಲ್ಲಿ ರೈತ ಉಪಯೋಗಿಯಾದ ಜಾಲಿ, ಬೇವು, ಹುಣಸೆ ಮುಂತಾದ ಮರಗಳು ತಾವಾಗೇ ಬೆಳೆದಿರುತ್ತವೆ. ಕೆಲವೊಂದು ಪುರಾತನ ಹಳ್ಳಿಗಳಲ್ಲಿ ಇವು ಹೆಚ್ಚಿನ ಸಂಖ್ಯೆಯಲ್ಲಿ ಮತ್ತು ದೊಡ್ಡದಾಗಿ ಬೆಳೆದಿರುತ್ತವೆ. ಹೀಗಾಗಿ ಹೊರಗಿಂದ ಬರುವವರಿಗೆ ಊರಲ್ಲಿಯ ಮನೆಗಳು ಕಾಣದೆ ಇದೊಂದು ಗಿಡಮರಗಳ ತೋಪಿನಂತೆ ಕಾಣುತ್ತದೆ. ಇಂತಹ

ಕಣವನ್ನು ರಕ್ಷಿಸುವವರು ಪುರುಷ ದೇವರ ಪ್ರತಿನಿಧಿಯಾದ ಬಂಟದೇವರು. ಅವನಿಂದ ಈ ಅಭಯ ಪಡೆಯಲು ಪೂಜೆ ಎಡೆ ಅರ್ಪಿಸಿ ಚರಗ ಪಡೆದು ಕಣದಲ್ಲಿಯ ಎಲ್ಲಾ ವಸ್ತುಗಳ ಮೇಲೆ ಪ್ರೋಕ್ಷಿಸುತ್ತಾರೆ.

೫. ಪಹರಿ ಬೇಲಿ

ಪೂರ್ವದಲ್ಲಿ ಗ್ರಾಮಸ್ಥರು ತಮ್ಮನ್ನು ಕಳ್ಳರಿಂದ, ದರೋಡೆಕೋರರಿಂದ, ದುಷ್ಟಮೃಗಗಳಿಂದ ಮತ್ತು ದುಷ್ಟ ಶಕ್ತಿಗಳಿಂದ ರಕ್ಷಿಸಿಕೊಳ್ಳಲು ಕಣಗಳ ಹೊರಬೇಲಿಯನ್ನು ಎತ್ತರವಾಗಿ ಮತ್ತು ಭದ್ರವಾಗಿ ಹಾಕಿಕೊಳ್ಳುತ್ತಿದ್ದರು. ಇದಕ್ಕೆ "ಪಹರಿ ಬೇಲಿ" ಎಂಬ ಸಾಂಪ್ರದಾಯಕವಾಗಿ ಬಂದ ಹೆಸರಿದೆ[2]. ಗ್ರಾಮಗಳು ಧಾರ್ಮಿಕ ಘಟಕಗಳಾಗಿದ್ದಾಗ ಅವುಗಳಿಗೆ ಅನುಕೂಲಕರ ದೈವಶಕ್ತಿಗಳ ರಕ್ಷಣೆಯಿತ್ತು. ಆಗ ಪಹರಿ ಬೇಲಿಗುಂಟೆ ಅಲ್ಲಲ್ಲಿ ಗ್ರಾಮದ ಗಡಿ ರಕ್ಷಿಸುವ ದೈವಗಳ ತಾಣಗಳನ್ನು ಸ್ಥಾಪಿಸಿ ರಕ್ಷಣೆ ಪಡೆಯುತ್ತಿದ್ದರು. ಈ ದೈವಗಳಿಗೆ ಸಾಂಪ್ರದಾಯಕವಾಗಿ ಬಂದ ಗೌಡರ ನೇತೃತ್ವದಲ್ಲಿ ಪೂಜೆ, ಎಡೆ, ಅರ್ಪಿಸುತ್ತಿದ್ದರು.

ಬೇರೆ ಬೇರೆ ಕುಟುಂಬಗಳು ತಮ್ಮ ಕಣಗಳಿಗೆ ಹಾಕಿಕೊಂಡ ಈ ಜಾಲಿ ಮುಳ್ಳಿನ ಬೇಲಿಯು ಪಹರಿ ಬೇಲಿ ಎಂಬ ಸ್ಥಾನ ಹೊಂದಿ ಇಡೀ ಗ್ರಾಮದ ಭೌತಿಕ ಮತ್ತು ಧಾರ್ಮಿಕ ರಕ್ಷಣೆಯ ಸ್ಥಾನ ಹೊಂದಿದ್ದಿತು. ಹೀಗಾಗಿ ಗ್ರಾಮದ ಧರ್ಮಾಧಿಕಾರಿಗಳಾದ ಗೌಡರು ಇದನ್ನು ಭದ್ರವಾಗಿ ಇಡಲು ಪ್ರತಿವರ್ಷ ಹೊಸ ಕಳ್ಳಿ ಮುಳ್ಳನ್ನು ಹಾಕುವಂತೆ ಅಲ್ಲಿಯ ದೈವಗಳಿಗೆ ಪೂಜೆ ಎಡೆ ಅರ್ಪಿಸುವಂತೆ ಗ್ರಾಮಸ್ಥರನ್ನು ಎಚ್ಚರಿಸುತ್ತಿದ್ದರು. ಇದರ ಮೇಲ್ವಿಚಾರಣೆಯ ಕರ್ತವ್ಯ ಹೊಂದಿದ್ದ ಸಾಂಪ್ರದಾಯಕವಾಗಿ ಬಂದ ಗ್ರಾಮದ ಕಾವಲುಗಾರರಾದ ತಳವಾರರು ಈ ಬೇಲಿಯನ್ನು ಸುಸ್ಥಿತಿಯಲ್ಲಿಡಲು ಕಣಗಳ ಮಾಲಿಕರಿಗೆ ಹೇಳುತ್ತಿದ್ದರು ಮತ್ತು ಈ ವಿಷಯವನ್ನು ಗ್ರಾಮಾಧಿಕಾರಿಗಳ ಗಮನಕ್ಕೂ ತರುತ್ತಿದ್ದರು.

ಒಂದು ಗ್ರಾಮದ ಕರಿಗಲ್ಲು ಇರುವ ಗಡಿ ರೇಖೆ ಮೂಲನಿವಾಸಿಗಳ ಮತ್ತು ವಲಸೆ ಬಂದವರ ನಿವಾಸ ಪ್ರದೇಶಗಳನ್ನು ಪ್ರತ್ಯೇಕಿಸುವ ಗಡಿಯಾದರೆ ಪಹರಿ ಬೇಲಿ ಗ್ರಾಮದ ನಿವಾಸ ಪ್ರದೇಶವನ್ನು ಅಡವಿ(ಹೊಲ)ಯಿಂದ ಪ್ರತ್ಯೇಕಿಸುತ್ತದೆ. ಗ್ರಾಮಸ್ಥರು ತಮ್ಮ ಅನುಕೂಲಕ್ಕೆ, ಪಕ್ಕದ ಊರುಗಳಿಗೆ ಹೋಗುವ ದಾರಿಗಳ ಕಡೆ ಮಾತ್ರ ಈ ಬೇಲಿಯಲ್ಲಿ ಕೆಲ ಭಾಗವನ್ನು ತೆರೆದಿಡುತ್ತಿದ್ದರು. ಇದೇ ಊರ ಅಗಸೆ ಬಾಗಿಲು. ಪೂರ್ವದಲ್ಲಿ ಇಲ್ಲಿ ಇಡೀ ದಿನ ತಳವಾರರು ಕಾವಲಿರುತ್ತಿದ್ದು ಗ್ರಾಮದ ಒಳಹೊರ ಹೋಗುವ ವೇಷಗಾರರು, ಭಿಕ್ಷುಕರು, ವರ್ತಕರು, ಪ್ರಯಾಣಿಕರು ಹೀಗೆ ಎಲ್ಲರನ್ನು ಮತ್ತು ಎಲ್ಲಾ ಸರಕುಗಳನ್ನು ತನಿಖೆ ಮಾಡಿ ಬಿಡುತ್ತಿದ್ದರು. ಯಾರಾದರೂ ಅನುಮಾನಾಸ್ಪದ ವ್ಯಕ್ತಿಗಳು ಬಂದರೆ ಈ ವಿಷಯವನ್ನು ಗ್ರಾಮಾಧಿಕಾರಿಗಳಿಗೆ ತಿಳಿಸುತ್ತಿದ್ದರು. ಗ್ರಾಮದ ಹಿರಿಯರು ಯಾವುದಾದರೂ ವಸ್ತುಗಳ

ಅಥವಾ ಬೆಳೆಗಳ ಮೇಲೆ ಕೆಲವು ಕಾಲ ನಿರ್ಬಂಧ ಹಾಕಿದಾಗ ಅದನ್ನು ಇಲ್ಲಿಯ ಕಾವಲುಗಾರರು ಕಟ್ಟುನಿಟ್ಟಿನಿಂದ ಪಾಲಿಸುವಂತೆ ಮಾಡುತ್ತಿದ್ದರು.

ಗ್ರಾಮಸ್ಥರಿಗೆ, ಅವರ ಬೆಳೆ, ಮರಗಿಡಗಳು ಮತ್ತು ಪಶುಪಕ್ಷಿಗಳಿಗೆ ರೋಗ ತರುವ ದುಷ್ಟಶಕ್ತಿಗಳನ್ನು ತಡೆಯುವ ಕಾರ್ಯವೂ ಪಹರಿ ಬೇಲಿಗೆ ಇದ್ದಿತು. ಈ ಬೇಲಿ ಮತ್ತು ಅಗಸೆ ಬಾಗಿಲುಗಳು ಧಾರ್ಮಿಕವಾಗಿ ಭದ್ರವಾಗಿರುವವರೆಗೆ ಗ್ರಾಮಕ್ಕೆ ಯಾವ ತೊಂದರೆಗಳೂ ಬರುತ್ತಿರಲಿಲ್ಲ. ಏಕೆಂದರೆ ಗ್ರಾಮಕ್ಕೆ ಕೆಡಕು ತರುವ ದುಷ್ಟ ಶಕ್ತಿಗಳನ್ನು ನಿಯಂತ್ರಿಸುವ ಶಕ್ತಿಗಳು, ಈ ಬೇಲಿಗುಂಟೆ ಇರುತ್ತಿದ್ದವು. ಅಕ್ಕಪಕ್ಕದ ಯಾವುದಾದರೂ ಊರಿನಲ್ಲಿ ಇಂತಹ ಒಂದು ದುಷ್ಟ ಶಕ್ತಿಯಿಂದ ತೊಂದರೆ ಬಂದಿರುವುದು ತಿಳಿಯುತ್ತಿದ್ದಂತೆ ಗ್ರಾಮಸ್ಥರು ಕೂಡಲೇ ತಮ್ಮ ಊರಿನ ಅಗಸೆ ಬಾಗಿಲಿನ ಹತ್ತಿರ "ಕಾವು ಕಟ್ಟು" ಮಾಡಿಸಿ ರಕ್ಷಣೆ ಪಡೆಯುತ್ತಿದ್ದರು[೮].

ಗ್ರಾಮ ದೈವದ ಹಬ್ಬಕ್ಕೆ ಪ್ರಕಟಣೆ (ಸಾರು) ಹಾಕುವ ಮುನ್ನ ಪರ ಊರಿನವರು ಯಾರೂ ಆ ಊರಿನ ಪಹರಿ ಬೇಲಿಯ ಒಳಗಡೆ ಇರಬಾರದೆಂಬ ಒಂದು ನಿಯಮವೂ ಇದೆ. ಒಂದು ಪಕ್ಷ ಯಾರಾದರೂ ಬಂಧು-ಬಾಂಧವರು ಇದ್ದರೆ ಅವರು ಹಬ್ಬ ಮುಗಿಯುವವರೆಗೆ ಅಲ್ಲಿಂದ ಹೊರಹೋಗುವಂತಿಲ್ಲ. ಜೊತೆಗೆ ಈ ಪ್ರಕಟಣೆ ಹೊರಡಿಸಿದ ನಂತರ ಗ್ರಾಮದ ಪಹರಿ ಬೇಲಿಯಿಂದ ಹೊರಗೆ ದವಸಧಾನ್ಯ, ಪಶುಪಕ್ಷಿ, ಗೊಬ್ಬರ ಹೀಗೆ ಯಾವ ವಸ್ತುವನ್ನೂ ತೆಗೆದುಕೊಂಡು ಹೋಗಬಾರದೆಂಬ ನಿಯಮವೂ ಇದೆ. ಏಕೆಂದರೆ ಗ್ರಾಮದ ಫಲಶಕ್ತಿ ಅವರೊಡನೆ ಹೋಗಿಬಿಡುತ್ತದೆ ಎಂಬ ನಂಬಿಕೆ ಇದೆ[೯]. ಆದರೆ ಹೊರಗಿನವರು ಯಾರಾದರೂ ಊರೊಳಗೆ ಬರಲು ಮತ್ತು ಯಾವ ವಸ್ತುವನ್ನಾದರೂ ತರಲು ಅಭ್ಯಂತರವಿರುವುದಿಲ್ಲ. ಹಬ್ಬಕ್ಕೆ ಪ್ರಕಟಣೆ ಹಾಕಿದ ನಂತರ ಗ್ರಾಮಸ್ಥರು ತಮ್ಮ ಜೀವನ ವೃತ್ತಿಯಲ್ಲಿಯೂ ತೊಡಗಿಸಿಕೊಳ್ಳುವಂತಿಲ್ಲ[೧೦].

ಅಡವಿ ಪ್ರದೇಶದಲ್ಲಿರುವ ಧಾರ್ಮಿಕ ವಲಯಗಳು

ಕರಿಗಲ್ಲಿನಿಂದ ಒಳಗಿನ ಪ್ರದೇಶವು ಮಾನವರ ಮತ್ತು ಅವನ ಸಾಕು ಪ್ರಾಣಿಗಳ ನಿವಾಸಸ್ಥಳವಾದರೆ ಇದರ ಮತ್ತು ಅಡವಿಯ ನಡುವಿನ ಕಣ ಒಂದು ವಿಚಿತ್ರವಾದ, ಒಳ್ಳೆಯದು-ಕೆಟ್ಟದ್ದು ಅಲ್ಲದ ಮಧ್ಯದ ಸ್ಥಾನ ಹೊಂದಿದೆ. ಇದು ಮಾನವರ ಮತ್ತು ಅವನ ಸಾಕು ಪ್ರಾಣಿಗಳ ವಾಸಕ್ಕೆ ಸೂಕ್ತವಾದ ಪ್ರದೇಶವಲ್ಲ. ಆದರೆ ಕಣಸುಗ್ಗಿ ನಡೆದಾಗ ಅಲ್ಲಿ ಮೇಟಿಯ ರೂಪದಲ್ಲಿ ದೇವರು ಇರುವುದರಿಂದ, ಆಗ ಮಾತ್ರ ಅಲ್ಲಿ ಮಾನವರು ಮತ್ತು ಅವರ ಸಾಕು ಪ್ರಾಣಿಗಳು ಇರಲು ನಿಷೇಧವಿಲ್ಲ. ಆದರೂ ಇದೊಂದು ಉತ್ತಮ-ನೀಚ, ವಾಸ ಮಾಡಬಹುದಾದ ಮತ್ತು ಮಾಡಲುಬಾರದ, ಹೊಲದಂತೆ ಆಹಾರದ

ಉತ್ಪಾದನೆಯಾಗದ, ಆದರೆ ತಾತ್ಕಾಲಿಕವಾದ ಆಹಾರಧಾನ್ಯ ಇಡಬಹುದಾದ ಜಾಗ. ಆಹಾರವನ್ನು ಇಲ್ಲಿಯೂ ಉಣ್ಣಬಹುದು. ಆದರೆ ಊಟದ ತಟ್ಟೆಯನ್ನು ನೆಲದ ಮೇಲಿಟ್ಟುಕೊಂಡು ಊಟಮಾಡಬಾರದು; ಕೈಯಲ್ಲಿ, ಅಡ್ಡಣಿಗೆ ಅಥವಾ ಮಣೆಯ ಮೇಲೆ ಇಟ್ಟುಕೊಂಡು ಊಟ ಮಾಡಬೇಕು.

ಇದೇ ರೀತಿ ಪಹರಿ ಬೇಲಿ ಮತ್ತು ಗ್ರಾಮದ ಗಡಿಯ ನಡುವಿನ ಪ್ರದೇಶ ಅಡವಿ ಒಂದು ಮಹತ್ತರವಾದ ನಡುವಣ ಸ್ಥಾನ ಹೊಂದಿವೆ. ಇದು ಮಾನವನ ವಾಸಕ್ಕೆ ನಿಷೇಧಿತವಾದ ಸ್ಥಳ. ಆದರೆ ಮಾನವನಿಗೆ ಅವಶ್ಯಕವಾದ ಆಹಾರದ ಕಚ್ಚಾವಸ್ತುಗಳು ಇಲ್ಲಿ ಉತ್ಪಾದನೆಯಾಗುತ್ತವೆ. ಇವು ಅಲ್ಲಿಯ ಕಾಡಿನಲ್ಲಿ ತಾನೇ ತಾನಾಗಿ ಬೆಳೆದ ಮತ್ತು ಹೊಲದಲ್ಲಿ ಮಾನವ ಬೆಳೆಸಿದ ಮರಗಿಡಗಳ ಹಾಗೂ ಬಿತ್ತನೆಯಾದ ಬೆಳೆಗಳ ರೂಪದಲ್ಲಿ ಇರಬಹುದು. ಗ್ರಾಮದ ಗಡಿ ರೇಖೆಯನ್ನು ಬಿಟ್ಟರೆ ಇದಕ್ಕೆ ಮತ್ತಾವ ರಕ್ಷಣೆಯೂ ಇಲ್ಲವಾದ್ದರಿಂದ ಇಲ್ಲಿ ದುಷ್ಟ ಶಕ್ತಿಗಳು ಸದಾ ಸಂಚರಿಸುತ್ತವೆ. ಹೀಗಾಗಿ ಹಗಲು ಮತ್ತು ರಾತ್ರಿ ಎರಡೂ ವೇಳೆಯಲ್ಲಿ ಇಲ್ಲಿ ಮಲಗಲು ಮತ್ತು ಯಾವುದೇ ಬಗೆಯ ವಿಧಿಕಾರ್ಯಗಳನ್ನು ಆಚರಿಸಲು ಇದು ಸುರಕ್ಷಿತವಾದ ಮತ್ತು ಯೋಗ್ಯವಾದ ಸ್ಥಳವಲ್ಲ. ಅಡವಿ ಎಂದು ಹೆಸರಿಸಿರುವ ಪ್ರದೇಶದಲ್ಲಿ ಬರುವ ವೃತ್ತಗಳು ಹೀಗಿವೆ:

೬. ಮನೇದೊಲಗಳು

ಪಹರಿ ಬೇಲಿಗೆ ಹತ್ತಿದಂತೆ ಇರುವ, ಉಳುಮೆ ಮಾಡಲಾದ ಪ್ರದೇಶದಲ್ಲಿ ಈ ಹೊಲಗಳಿರುತ್ತವೆ. ಇವುಗಳನ್ನು ಮನೇದೊಲಗಳು ಎನ್ನುತ್ತಾರೆ. ಪೂರ್ವದಲ್ಲಿ ಇವು ಮನೆಯ ಹಿಂದೆ ಇರುತ್ತಿದ್ದುದರಿಂದ ಇವುಗಳಿಗೆ "ಮನೆಯ ಹಿಂದಲ" ಹೊಲಗಳು, ಮನೇದೊಲಗಳು ಎಂದು ಹೆಸರು ಬಂದಿದೆ. ಇವು ಮೂಲತಃ ಗ್ರಾಮದ ಮೂಲ ನಿವಾಸಿಗಳಾದ ಗೌಡಾಳಿಕೆ ಮನೆತನದವರಿಗೆ ಸೇರಿದ ಹೊಲಗಳಿದ್ದು ಅವರು ಈ ಹಳ್ಳಿಗೆ ಬಂದ ಹೊಸದರಲ್ಲಿ ಉಳುಮೆ ಮಾಡಲಾದ ಪ್ರದೇಶದಲ್ಲಿವೆ. ವ್ಯವಸಾಯಕ್ಕೆ ಸಂಬಂಧಪಟ್ಟ ಎಲ್ಲಾ ಪೂಜಾ ವಿಧಿಗಳು ಇಲ್ಲಿ ಮಾತ್ರ ಆಚರಿಸಲ್ಪಡುತ್ತವೆ. ಈ ಒಂದು ಪ್ರತೀಕ ಹಾಗೂ ಅವುಗಳನ್ನು ತಲತಲಾಂತರದಿಂದ ಗೇಯ್ಮೆ ಮಾಡಲಾಗುತ್ತಿರುವುದರಿಂದ ಬಂದಿರುವ ಫಲವತ್ತತೆ, ಇವುಗಳಿಗೆ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಮೌಲ್ಯ ಮತ್ತು ಮಹತ್ವ ಬಂದಿವೆ[೧೧]. ಮನೇದೊಲಗಳಲ್ಲಿ ಮೂಲ ನಿವಾಸಿಗಳ ಪಿತೃಗಳ (ಹಾಗೂ ಕೆಲವೊಮ್ಮೆ ಮನೆತನಕ್ಕಾಗಿ ಬಹುಕಾಲ ದುಡಿದು ಹೆಸರಾದ ಎತ್ತುಗಳ) ಸಮಾಧಿಗಳು ಇರುತ್ತವೆ. ಈ ಹೊಲಗಳನ್ನು ಪಾಲು ಮಾಡಿಕೊಳ್ಳುವಾಗ ಮಕ್ಕಳು ಎಲ್ಲರೂ ಈ ಆಸ್ತಿಯಲ್ಲಿ ಪಾಲು ಬೇಕೆಂದು ಬಯಸುವುದರಿಂದ ಇವು ಸಣ್ಣಸಣ್ಣ ಹಿಡುವಳಿಗಳಾಗಿ ಹೋಗಿವೆ. ಗ್ರಾಮ ದೈವದ ಹಬ್ಬಕ್ಕಾಗಿ ಊರನ್ನು ಅಣಿ ಮಾಡಲು

ಆಚರಿಸಲ್ಪಡುವ ಪೂಜಾವಿಧಿಗಳು ಇಲ್ಲಿ ಮಾತ್ರ ನಡೆಯುತ್ತವೆ ಮತ್ತು ಗ್ರಾಮದ ಫಲಶಕ್ತಿಯ ಸಂಕೇತವಾದ ಊರಹಬ್ಬದಿಂದ ಬಂದ ಚರಗದ ಅನ್ನವನ್ನು ಇಲ್ಲಿ ಮಾತ್ರ ಚೆಲ್ಲುತ್ತಾರೆ. ಹೀಗಾಗಿ ಈ ಹೊಲಗಳಿಗೆ ಮತ್ತು ಇವುಗಳ ಮಾಲಿಕರಿಗೆ ಒಂದು ಗೌರವಾನ್ವಿತ ಸ್ಥಾನವಿದ್ದು ಇವುಗಳನ್ನು ಮಾರಲು ಯಾರೂ ಇಚ್ಚಿಸುವುದಿಲ್ಲ. ಮಾರಲೇಬೇಕಾದ ಪ್ರಸಂಗ ಬಂದರೆ ತಮ್ಮ ವಂಶಸ್ಥರಿಗೆ ಪ್ರಥಮ ಆದ್ಯತೆ ನೀಡುತ್ತಾರೆ. ಈ ಹೊಲಗಳು ಊರಪಕ್ಕದಲ್ಲೇ ಇರುವುದರಿಂದ ಇವುಗಳಲ್ಲಿಯ ಬೆಳೆಯನ್ನು ಕಾಪಾಡಲು, ಸಾಗಿಸಲು ತೊಂದರೆ ಇರುವುದಿಲ್ಲ.

೭. ಹೊಲಗಳು

ಮನೇದೊಲಗಳ ಮತ್ತು ಊರಗಡಿಯ ನಡುವಿನ ಪ್ರದೇಶದಲ್ಲಿ ಈ ಹೊಲಗಳಿರುತ್ತವೆ. ಮನೇದೊಲಗಳಿಗೆ ಹೋಲಿಸಿದರೆ ಇವುಗಳಿಗೆ ಸಮುದಾಯ ಮಟ್ಟದ ಯಾವ ಧಾರ್ಮಿಕ ಆಚರಣೆಗಳಲ್ಲಿಯೂ ಪಾತ್ರಗಳಿಲ್ಲ. ಇವು ನಿವಾಸ ಪ್ರದೇಶದಿಂದ ದೂರ ಇರುವುದರಿಂದ ಇವುಗಳನ್ನು ಮುಟ್ಟಲು ಉತ್ತಮವಾದ ಮತ್ತು ಸರಕಾರಕ್ಕೆ ಸೇರಿದ (ರೆವಿನ್ಯೂ) ರಸ್ತೆ ಇಲ್ಲ. ಹೊಲದಲ್ಲಿ ಫಸಲು ಇಲ್ಲದಾಗ ಮಾತ್ರ ಅವರಿವರ ಮರ್ಜಿ ಹಿಡಿದು, ಅವರ ಹೊಲಗಳಲ್ಲಿ ಹಾಯ್ದು, ಹಳ್ಳ ಕೊಳ್ಳಗಳನ್ನು, ದಿನ್ನೆಗಳನ್ನು ದಾಟಿ ತಮ್ಮ ಹೊಲಗಳನ್ನು ಮುಟ್ಟಬೇಕು. ಹೀಗಾಗಿ ಫಸಲು ಮತ್ತು ಗೊಬ್ಬರಗಳನ್ನು ಸಾಗಿಸಲು ತೊಂದರೆಯಾಗುತ್ತದೆ. ಈ ಹೊಲಗಳಲ್ಲಿ ಹೆಚ್ಚಿನವು ಗ್ರಾಮಕ್ಕೆ ವಲಸೆ ಬಂದವರ ಮನೆತನಗಳಿಗೆ ಸೇರಿರುತ್ತವೆ. ಜೊತೆಗೆ ಇವುಗಳಿಗೆ ಒಂದು ಸಾಮಾಜಿಕವಾದ ಮೌಲ್ಯವಿಲ್ಲ. ಉಬ್ಬುತಗ್ಗಾದ, ಬಂಜರು ಭೂಮಿಯಾದ ಇದನ್ನು ತೀರಾ ಇತ್ತೀಚಿನವರೆಗೆ ಅಡವಿಯಾಗಿ ಅಂದರೆ ದನಕರುಗಳ ಮೇವಿಗೆ ಎಂದು ಬೀಳು ಬಿಟ್ಟಿದ್ದರು. ಜನಸಂಖ್ಯೆಯ ಹೆಚ್ಚಳದಿಂದ ಇತ್ತೀಚೆಗೆ ಉಳುಮೆಯಾಗಿದೆ ಮತ್ತು ಇದು ಫಲವತ್ತಾದ ಭೂಮಿಯಲ್ಲ. ಹೀಗಾಗಿ ಈ ಹೊಲಗಳಿಗೆ ಹೆಚ್ಚಿನ ಆರ್ಥಿಕ ಮೌಲ್ಯವೂ ಇಲ್ಲ.

ಮನೆಗಳ ಹಿಂದಲ ಭಾಗದಲ್ಲಿ ಸಾಕಷ್ಟು ಫಲವತ್ತಾದ ಹೊಲಗಳನ್ನು ಹೊಂದಿದ್ದರೂ ಕೆಲವು ಗೌಡಳಿಕೆ ಮನೆತನಗಳಿಗೆ ಸೇರಿದವರು ತಾವು ದೊಡ್ಡ ಜಮೀನ್ದಾರರು, ಊರಿನ ನಾಲ್ಕು ದಿಕ್ಕಿನಲ್ಲಿ ಹೊಲ ಉಳ್ಳವರು ಎಂಬ ಘನತೆ ಹೊಂದಲು ಇಲ್ಲಿ ಜಮೀನು ಹೊಂದಿರಬಹುದು. ಆದರೆ ಇವುಗಳನ್ನು ತಾವೇ ಉಳುಮೆ ಮಾಡದೆ ಬೇರೆಯವರಿಗೆ ಕೋರಿಗೆ, ಕೊಟ್ಟಿರುತ್ತಾರೆ. ಈ ಹೊಲಗಳಲ್ಲಿ ಮೊದಲ ಬಿತ್ತನೆಯ ಪೂಜೆಯನ್ನು ಬಿಟ್ಟರೆ ಮತ್ತಾವ ಪೂಜೆಗಳೂ ನಡೆಯುವುದಿಲ್ಲ. ಹೀಗೆ ಧಾರ್ಮಿಕ ಮತ್ತು ಸಾಮಾಜಿಕವಾಗಿ ಮಹತ್ವವಿಲ್ಲದ ಈ ಹೊಲಗಳ ಮೇಲೆ ಮಾಲಿಕರಿಗೆ ಯಾವ ಭಾವನಾತ್ಮಕ ಸಂಬಂಧವಿರುವುದಿಲ್ಲ. ಹೀಗಾಗಿ ಅವರು ಇವುಗಳನ್ನು ಆಗಾಗ ಒತ್ತೆ, ಮಿಟ್ಟ ಹಾಕುವುದು,

ಮಾರುವುದು ಮಾಡುತ್ತಾರೆ. ಊರ ಧಾರ್ಮಿಕ ಗಡಿಯನ್ನು ದಾಟಿದ ನಂತರ ದುಷ್ಟ ಶಕ್ತಿಗಳು ಮೊದಲು ಈ ಪ್ರದೇಶದಲ್ಲಿ ಆಶ್ರಯ ಪಡೆಯುತ್ತವೆಯಾದ್ದರಿಂದ ಇಲ್ಲಿ ಒಂದಲ್ಲಾ ಒಂದು ದುಷ್ಟ-ಶಕ್ತಿಗಳು ಸದಾ ಇರುತ್ತವೆ ಎಂಬ ಸಾಂಪ್ರದಾಯಕವಾಗಿ ಬಂದ ನಂಬಿಕೆ ಇದೆ. ಇವು ಮಾನವನಿಗೆ ವ್ಯವಸಾಯದ ಉಪಕರಣಗಳನ್ನು ಬಡಿಸಿ, ಮರ-ಗಿಡ ಮತ್ತು ಬಂಡಿಗಳಿಂದ ಬೀಳಿಸಿ ಗಾಯಮಾಡಿ, ತಮ್ಮ ರಕ್ತದಾಹ ತೀರಿಸಿಕೊಳ್ಳುತ್ತವೆ ಅಥವಾ ಸಾವನ್ನೇ ತರುತ್ತವೆ ಎಂಬ ನಂಬಿಕೆಯೂ ಇದೆ. ಈ ಎಲ್ಲಾ ಕಾರಣದಿಂದ ಈ ಹೊಲಗಳು ಮಾನವನ ಹಾಗೂ ಅವನ ಸಾಕು ಪ್ರಾಣಿಗಳ ವಾಸಕ್ಕೆ ಸುರಕ್ಷಿತವಾದ ಸ್ಥಳಗಳಲ್ಲ ಎಂಬ ಪ್ರತೀಕವಿದೆ.

೮. ಊರಗಡಿ

ಒಂದು ಊರನ್ನು ಅದರ ಅಕ್ಕಪಕ್ಕದ ಊರುಗಳಿಂದ ಧಾರ್ಮಿಕವಾಗಿ ಮತ್ತು ಆಡಳಿತಾತ್ಮಕವಾಗಿ ಪ್ರತ್ಯೇಕಿಸುವ ಎಲ್ಲೆ ಎಂದರೆ ಊರಗಡಿ. ಒಂದು ಸಾಕಷ್ಟು ಹಳೆಯ ಊರಿಗೆ ಧಾರ್ಮಿಕ ಹಾಗೂ ರೆವಿನ್ಯೂ ಹೀಗೆ ಎರಡು ಗಡಿಗಳಿರುತ್ತವೆ. ಸಾಂಪ್ರದಾಯಕವಾಗಿ ಧಾರ್ಮಿಕ ಗಡಿ ರೇಖೆಯ ಹತ್ತಿರ, ಅಕ್ಕಪಕ್ಕದ ಊರುಗಳಿಗೆ ಹೋಗುವ ದಾರಿಗಳ ಎಡಬಲದಲ್ಲಿ, ಕೆಲವೊಂದು ಅನುಕೂಲಕರ ಶಕ್ತಿಗಳ ತಾಣಗಳಿರುತ್ತವೆ. ಗ್ರಾಮಸ್ಥರು ಇವುಗಳಿಗೆ ಕಾಲಕಾಲಕ್ಕೆ ವಿಶೇಷವಾಗಿ ಗ್ರಾಮ ದೈವದ ಹಬ್ಬದ ಸಂದರ್ಭದಲ್ಲಿ ಪೂಜೆ, ಎಡೆ ಅರ್ಪಿಸಿ, ಸಂತುಷ್ಟ ಪಡಿಸಿ ರಕ್ಷಣೆ ಬೇಡುತ್ತಾರೆ. ಇವು ಮಾನವರಿಗೆ ಮತ್ತು ಅವನ ಗಿಡಮರ ಮತ್ತು ಪ್ರಾಣಿಪಕ್ಷಿಗಳಿಗೆ ಪಕ್ಕದ ಊರುಗಳಿಂದ ಬರುವ ಸಾಂಕ್ರಾಮಿಕ ರೋಗಗಳನ್ನು ತರುವ ಮತ್ತು ಗ್ರಾಮದ ಫಲಶಕ್ತಿಯನ್ನು ಕಳೆಯುವ ದುಷ್ಟ ಶಕ್ತಿಗಳನ್ನು ತಡೆಯುತ್ತವೆ ಎಂಬ ನಂಬಿಕೆ ಇದೆ. ಹೀಗಾಗಿ ಪಕ್ಕದ ಊರುಗಳಲ್ಲಿ ಇಂತಹ ಯಾವುದಾದರೂ ರೋಗಗಳು ಕಾಣಿಸಿಕೊಂಡರೆ ಇವು ತಮ್ಮ ಊರಿಗೂ ಬರದಂತೆ ತಡೆಯಲು ಗ್ರಾಮದ ಹಿರಿಯರು ಕೂಡಲೇ ಈ ಅನುಕೂಲಕರ ದೈವಗಳನ್ನು ಸಂತುಷ್ಟ ಪಡಿಸಲು ಪೂಜೆ, ಕಾವು ಕಟ್ಟು ಮಾಡಿಸುವುದು ಮುಂತಾದ ವಿಧಿಗಳನ್ನು ಆಚರಿಸುತ್ತಾರೆ. ಊರೊಳಗೆ ಆಗಲೇ ಬಂದಿರುವ ದುಷ್ಟ ಶಕ್ತಿಗಳನ್ನು ಗ್ರಾಮದೈವ ಅಥವಾ ಅದರ ನಿಯಂತ್ರಣದಲ್ಲಿರುವ ಅನುಕೂಲಕರ ಶಕ್ತಿಗಳ ನೆರವಿನಿಂದ ಸೆರೆ ಹಿಡಿದು ಅಥವಾ ನಿಷ್ಕ್ರಿಯಗೊಳಿಸಿ, ಊರಗಡಿಯಿಂದ ಆಚೆ ದೂಡಲು ಒಂದು ಪೂಜೆ ಆಚರಿಸುತ್ತಾರೆ. ಈ ದುಷ್ಟ ಶಕ್ತಿಗಳು ಮತ್ತೆ ಊರೊಳಗೆ ಬರದಂತೆ ತಡೆಯುವ ಶಕ್ತಿಯೂ ಈ ಗಡಿಯಲ್ಲಿಯ ದೈವಗಳಿಗಿದೆ ಎಂದೂ ನಂಬುತ್ತಾರೆ.

ಅಕ್ಕಪಕ್ಕದ ಎರಡು ಊರುಗಳ ಧಾರ್ಮಿಕ ಗಡಿಗಳು ಒಂದಕ್ಕೊಂದು ಹತ್ತಿಕೊಂಡಿರುವುದಿಲ್ಲ ಎಂದು ಈಗಾಗಲೇ ಹೇಳಿದ್ದೇವೆ. ಅಂದರೆ ಈ ಗಡಿಗಳ ನಡುವೆ ಎರಡೂ ಊರಿನವರು ಸ್ವಲ್ಪ ಜಾಗ ಬಿಟ್ಟಿರುತ್ತಾರೆ. ಇದೇ ಅಡವಿ. ಸಾಂಪ್ರದಾಯಕವಾಗಿ

ಪ್ರತಿವರ್ಷ ಗ್ರಾಮದೈವಗಳು ತಾವು ರಕ್ಷಣೆ ಮಾಡಲಿರುವ ಗ್ರಾಮದ ವ್ಯಾಪ್ತಿಯನ್ನು ಗುರುತಿಸಿಕೊಳ್ಳುತ್ತವೆ. ಹೀಗಾಗಿ ಧಾರ್ಮಿಕ ಗಡಿ ಪ್ರತಿವರ್ಷ ತನ್ನ ವ್ಯಾಪ್ತಿಯಲ್ಲಿ ಬದಲಾಗುತ್ತದೆ[೧೮]. ಧಾರ್ಮಿಕ ಗಡಿಗೆ ಇರುವ ಇನ್ನೂ ಒಂದು ಮಹತ್ವದ ಕಾರ್ಯವೆಂದರೆ ಗ್ರಾಮದ ಫಲಶಕ್ತಿ(ಹುಲುಸು) ಯನ್ನು ರಕ್ಷಿಸುವುದು. ಕರಿ ಹಬ್ಬದ ಸಂದರ್ಭದಲ್ಲಿ ಹರಿಯುವ "ಕರೆ ಬಳ್ಳಿ" ಮತ್ತು ಗ್ರಾಮ ದೈವದ ಹಬ್ಬದ ಸಂದರ್ಭದಲ್ಲಿ ಸಿದ್ಧಪಡಿಸುವ "ಚರಗದ ಅನ್ನ" ಒಂದು ಗ್ರಾಮದ ಫಲಶಕ್ತಿಯ ಸಂಕೇತಗಳು (ಗುರುಮೂರ್ತಿ ೧೯೭೦, ೧೯೭೩). ಇವುಗಳನ್ನು ಒಂದು ಊರಿನವರು ಇನ್ನೊಂದು ಊರಿಗೆ "ಕಳೆದುಕೊಂಡರೆ" ಅದರ ನೆಲ, ಗಿಡಮರ ಹಾಗೂ ಪಶುಪಕ್ಷಿಗಳು ತಮ್ಮ ಫಲಶಕ್ತಿಯನ್ನು ಕಳೆದುಕೊಳ್ಳುತ್ತವೆ. ಅಂದರೆ, ಅದನ್ನು ಕದ್ದವರ ಊರಿಗೆ ಇದು ಸ್ಥಳಾಂತರವಾಗುತ್ತದೆ ಎಂಬ ನಂಬಿಕೆ ಇದೆ (ಗುರುಮೂರ್ತಿ ೧೯೭೦).

ಕದಿಯಬಯಸುವವರಿಂದ ಫಲಶಕ್ತಿಯನ್ನು ಕಾಪಾಡಲು ಗ್ರಾಮಸ್ಥರು ಕತ್ತಿ, ಕೊಡಲಿ, ಕುಡುಗೋಲು, ಕಣಗೆ ಮುಂತಾದ ಆಯುಧಗಳನ್ನು ಹಿಡಿದು ನಿಂತಿರುತ್ತಾರೆ. ಮುಂಜಾಗ್ರತಾ ಕ್ರಮವಾಗಿ ಪರೂರಿನವರು ಯಾರಾದರೂ ಹಬ್ಬಕ್ಕೆ ಬಂದಿದ್ದರೆ ಅವರನ್ನು ಈ ಪವಿತ್ರ ವಸ್ತುಗಳಿಂದ ದೂರ ಇರುವಂತೆ ಊರ ತಳವಾರನಾಯಕ ಎಚ್ಚರಿಕೆ ನೀಡುತ್ತಾನೆ. ಒಂದು ಊರಿನ ಫಲಶಕ್ತಿಯನ್ನು ಇನ್ನೊಂದು ಊರಿನವರು ಕದ್ದೊಯ್ಯುವುದು ಎಂದರೆ ಅದನ್ನು ಕದ್ದು ಮುಚ್ಚಿ ಒಯ್ಯುವುದಲ್ಲ, ಗೆದ್ದುಕೊಂಡು ಹೋಗಬೇಕು. ಅಂದರೆ ಇಂತಹ ಊರಿನವನಾದ ನಾನು "ನಿಮ್ಮ ಊರಿನ ಫಲಶಕ್ತಿಯನ್ನು ಒಯ್ಯುತ್ತಿದ್ದೇನೆ" ಎಂದು ಪದ್ಧತಿಯಂತೆ ಸಾರ್ವಜನಿಕವಾಗಿ ಕೂಗಿ(ಘೋಷಿಸಿ) ಅದರೊಂದಿಗೆ ಓಡಿಹೋಗಿ ಆ ಊರಿನ ಧಾರ್ಮಿಕ ಗಡಿಯನ್ನು ದಾಟಬೇಕು. ಆಗ ಮಾತ್ರ ಅದಕ್ಕೆ ಶಕ್ತಿ, ಬೆಲೆ ಬರುತ್ತದೆ. ಈ ಪವಿತ್ರ ವಸ್ತುವಿನೊಂದಿಗೆ ಅವನು ತನ್ನ ಊರ ಕಡೆ ಹೊರಡುತ್ತಿದ್ದಂತೆ, ಈ ಊರವರು ಅದನ್ನು ತಡೆಯಲು ಅವನನ್ನು ಬೆನ್ನತ್ತಿ ಹೋಗುವರು. ಅವನೇನಾದರೂ ಊರ ಗಡಿಯೊಳಗೆ ಸಿಕ್ಕರೆ ಅಲ್ಲೇ ಕಡಿದು ಹಾಕಬೇಕೆಂಬ ನಂಬಿಕೆ ಇದೆ. ಆದರೆ ಒಮ್ಮೆ ಅವನು ಊರ ಗಡಿ ದಾಟಿದನೆಂದರೆ ಅಲ್ಲಿಂದ ಮುಂದೆ ಅವನಿಗೆ ಧಾರ್ಮಿಕವಾಗಿ ರಕ್ಷಣೆ ಸಿಗುತ್ತದೆ. ಊರಗಡಿಯಿಂದ ಆಚೆ ಅವನು ಸಿಕ್ಕರೂ ಅವನಿಗೆ ಏನೂ ಮಾಡುವಂತಿಲ್ಲ, ಯಾವ ರೀತಿಯಿಂದಲೂ ಹಿಂಸಿಸಲು ಬರುವುದಿಲ್ಲ. ಹಿಂಸಿಸಿದರೆ ನಾಡ ಪಂಚಾಯಿತಿಯವರು ತಪ್ಪಿತಸ್ಥರಿಗೆ ಬಹಿಷ್ಕಾರ, ದಂಡ ಹಾಕಿ ಶಿಕ್ಷಿಸುತ್ತಾರೆ (ನೋಡಿ: ಗುರುಮೂರ್ತಿ, ೧೯೭೦). ಗ್ರಾಮದ ಫಲಶಕ್ತಿಯನ್ನು ಮರಳಿ ಪಡೆಯಬೇಕೆಂದರೆ, ಈ ಊರಿನವರೂ ಅದನ್ನು ಅಲ್ಲಿಂದ "ಕದ್ದು" ತರಬೇಕು. ಪದ್ಧತಿಯಂತೆ ಅಲ್ಲಿಯವರೆಗೆ, ಈ ಗ್ರಾಮ ದೇವರ ಹಬ್ಬವನ್ನು ಆಚರಿಸುವಂತಿಲ್ಲ.

ಇಂದು ಭೌತಿಕವಾಗಿ ಗ್ರಾಮದ ಗಡಿಗಳ ಈ ವಿಭಜನೆ ಸ್ಪಷ್ಟವಾಗಿ ಕಾಣಸಿಗುವುದಿಲ್ಲ. ಏಕೆಂದರೆ ಕಾಲಕ್ರಮೇಣದಲ್ಲಿ ಜನಸಂಖ್ಯೆಯ ಹೆಚ್ಚಳದಿಂದಾಗಿ, ನಿವಾಸಸ್ಥಳಕ್ಕೆ ಅಭಾವ ಬಂದುದರಿಂದ, ನಿವಾಸಿಗಳು ಈ ಗಡಿಗಳನ್ನು ದಾಟಿ ಹೋಗಿ ತಮ್ಮ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಪೂರ್ವದಲ್ಲಿ ಅಂದರೆ ಗ್ರಾಮದ ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಇನ್ನೂ ವರ್ಗೀಕರಣವಾಗಿ ಅಳತೆಯಾಗಿ ದಾಖಲಾಗುವುದಕ್ಕೆ ಮುನ್ನ, ಊರು ಮತ್ತು ಅಡವಿ (ಅಥವಾ ರೆವಿನ್ಯೂ ಮತ್ತು ಪಂಚಾಯಿತಿ) ಭಾಗಗಳಿಂದು ವರ್ಗೀಕರಣವಾಗುವುದಕ್ಕೆ ಮುನ್ನ, ಒಂದು ಗ್ರಾಮಕ್ಕೆ ವಲಸೆ ಬಂದವರು ತಮ್ಮ ಧಣಿ ಅಥವಾ ಸಂಬಂಧಿಕರಿಗೆ ಸೇರಿದ ಆಸ್ತಿಯಲ್ಲಿ ಮುಕ್ತವಾಗಿ ಮನೆಕಣಗಳನ್ನು ಕಟ್ಟಿಕೊಳ್ಳುತ್ತಿದ್ದರು. ನಂತರ ೧೯೩೦ಳರಲ್ಲಿ, ವ್ಯವಸಾಯದ ಭೂಮಿ ವರ್ಗೀಕರಣಗೊಂಡು ಅಳತೆಯಾದ ನಂತರ, ಇದರ ಮೇಲೆ ತಡೆ ಬಂದಿದೆ.

ಇಂದು ಆಧುನಿಕತೆಯ ಪ್ರಭಾವದಿಂದಾಗಿ ಒಂದು ಗ್ರಾಮದಲ್ಲಿಯ ಈ ಎಲ್ಲಾ ಪ್ರದೇಶಗಳಿಗೆ ಇದ್ದ ಕಾರ್ಯಗಳು, ನಂಬಿಕೆಗಳು ಕಳೆದುಹೋಗಿವೆ. ಜೊತೆಗೆ ಸಂಬಂಧಪಟ್ಟ ಎಲ್ಲಾ ಆಚರಣೆಗಳು, ನಂಬಿಕೆಗಳು ಕಳೆದುಹೋಗಿವೆ. ಹೀಗಾಗಿ ಗ್ರಾಮ ಗ್ರಾಮಗಳಲ್ಲಿ, ಅಂತರಗ್ರಾಮಗಳಲ್ಲಿ ಒಗ್ಗಟ್ಟು, ಒಮ್ಮತ ಇಲ್ಲವಾಗಿದೆ, ಅನ್ಯಾಯ ಹೆಚ್ಚಾಗಿದೆ ಎಂದು ಸಾಂಪ್ರದಾಯಸ್ಥ ಗ್ರಾಮಸ್ಥರು ನಂಬುವರು. ಇಂದು ಗ್ರಾಮದ ನೆಲೆಗಳು ತಮ್ಮ ಸಾಂಪ್ರದಾಯಕ ಎಲ್ಲೆಗಳನ್ನು ಮೀರಿ ಬೆಳೆದಿವೆ. ಮೂಲ ನಿವಾಸಿಗಳೂ ಸಾಂಪ್ರದಾಯಕವಾಗಿ ಬಂದ ತಮ್ಮ ನಿವಾಸ ಪ್ರದೇಶವನ್ನು ಕೆಲವೊಮ್ಮೆ ತಮ್ಮ ಗ್ರಾಮವನ್ನೇ ಬಿಟ್ಟು ಹೊರಗೆ ಬಂದಿದ್ದಾರೆ. ಉಳಿದವರೂ ಪೂರ್ವದ ತಮ್ಮ ಗ್ರಾಮ ನಿವಾಸದಿಂದ ಹೊರಗೆ ಬರುತ್ತಿದ್ದಾರೆ. ಹೀಗಾಗಿ ಧಾರ್ಮಿಕ ವಲಯಗಳ ಇರುವು ಮತ್ತು ಅವುಗಳಿಗೆ ಇದ್ದ ಪ್ರಾಮುಖ್ಯತೆಗಳು ಬದಲಾಗಿ ಹೋಗಿವೆ. ಇದರಿಂದಾಗಿ ಇಂದು ನಿವಾಸ ಪ್ರದೇಶದ ಮತ್ತು ನಿವಾಸಿಗಳ ಸ್ಥಾನಮಾನದಲ್ಲಿ ಹೆಚ್ಚಿನ ಬದಲಾವಣೆಗಳೂ ಬಂದಿವೆ. ಸುಧಾರಿತ ಸಾರಿಗೆ ಸಂಪರ್ಕ, ನೀರಾವರಿ ಕಾಲುವೆಗಳು, ವಾಣಿಜ್ಯ ಬೆಳೆಗಳು ಮತ್ತು ವ್ಯವಸಾಯ ಪದ್ಧತಿಗಳು ಗ್ರಾಮಸ್ಥರನ್ನು ತಮ್ಮ ಊರಿನಿಂದ ಹೊರಗೆ ಹೋಗಿ ತಮಗೆ ಅನುಕೂಲವಾದ ಕಡೆ ಹೊಲ-ತೋಟ ಮಾಡಿಕೊಳ್ಳುವರೆತೆ ಮಾಡಿವೆ. ಇದರಿಂದಲೂ ಗ್ರಾಮ ನಿವಾಸ, ಅದರ ವಿವಿಧ ಧಾರ್ಮಿಕ ವಲಯಗಳು, ಅವುಗಳನ್ನು ನಿಯಂತ್ರಿಸುತ್ತಿದ್ದ ವಿಚಾರಗಳು ಬದಲಾಗಿವೆ. ಈ ಬದಲಾವಣೆಗಳು ಗ್ರಾಮನಿವೇಶನ ಪ್ರದೇಶದ ಭೌಗೋಳಿಕ ವಿಚಾರಕ್ಕೆ ಮಾತ್ರ ಸೀಮಿತವಾಗಿರದೆ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಕೆಲವೊಮ್ಮೆ ಆಡಳಿತಾತ್ಮಕ ವಿಚಾರದಲ್ಲಿಯೂ ಬಂದಿವೆ.

ಅಡಿ ಟಿಪ್ಪಣಿಗಳು

[೧]ಮರಾಠಿ ಪದ 'ಗಾವ್ ಕಿ ವೃದ್ದ' ಅಥವಾ 'ಗೋವೃಂದ' ನಂತರ 'ಗಾವುಂದ'ವಾಗಿ ಮುಂದೆ 'ಗೌಡ' ಎಂದಾಗಿರಲೂ ಬಹುದು ಎಂಬ ಅಭಿಪ್ರಾಯವಿದೆ (ನೋಡಿ: ಹೆನ್ರಿ ಓರಿನ್‌ಸ್ಟೈನ್, ೧೯೬೫). ಮುಂದೆ ನಾಡಿನ ರಾಜರು ಅಥವಾ ಮಹಾಜನರು ಗ್ರಾಮಗಳನ್ನು ಆಡಳಿತ ಘಟಕಗಳನ್ನಾಗಿ ಪರಿಗಣಿಸಿ ಅಲ್ಲಿಂದ ತೆರಿಗೆ (ಕರ) ವಸೂಲಿ ಮಾಡಲು ಪ್ರಾರಂಭಿಸಿದಾಗ, ಅಲ್ಲಿಯ ಶಾಂತಿಪಾಲನೆ, ನ್ಯಾಯ ನಿರ್ಣಯ ಮತ್ತು ಕರವಸೂಲಿ ಮಾಡುವ ಕೆಲಸವನ್ನು ಈ ಗ್ರಾಮ ವೃದ್ದನಿಗೆ ಅಥವಾ ಅವರ ಮನೆತನದವರಿಗೆ ನೀಡಿದರು. ಈ ಸೇವೆಗೆ ಪ್ರತಿಫಲವಾಗಿ ಕೆಲವು ಎಕರೆ ಜಮೀನನ್ನೂ ಉಂಬಳಿಯಾಗಿ ನೀಡಿದರು. ಅಂದಿನಿಂದ ಈ ಅಧಿಕಾರಸ್ಥಾನ ವಂಶಪಾರಂಪರಿಕವಾಯಿತು ಮತ್ತು ಆ ಗ್ರಾಮಾಧಿಕಾರಿಯ ವಂಶಸ್ಥರೆಲ್ಲರನ್ನೂ ಗೌಡಕಿ ಅಧಿಕಾರಕ್ಕೆ ಹಕ್ಕುದಾರರು, ಈ ಉಂಬಳಿ ಭೂಮಿಗೆ ಪಾಲುದಾರರು ಎಂಬ ಅರ್ಥದಲ್ಲಿ "ಗೌಡರು" ಎಂದು ಹೆಸರಿಸಿದ್ದಾರೆ.

[೨]ನಂತರ ೧೮೬೪ ರ ದಶಕದಲ್ಲಿ ಆಂಗ್ಲರ ಅಳತೆಗೋಲುಗಳಾದ ಎಕರೆ, ಗುಂಟೆ(ಸೆಂಟ್) ಲೆಕ್ಕದಲ್ಲಿ ಮತ್ತು ಅದು ಬಳಕೆಯಾದ ಉದ್ದೇಶಕ್ಕೆ ಅನುಗುಣವಾಗಿ ಅಂದರೆ ನಿವಾಸಸ್ಥಳ, ತರಿ, ತೋಟ, ಖುಷ್ಕಿ, ಬೀಳು ಎಂದು ವರ್ಗೀಕರಣ ಮಾಡಿ ಅಳತೆ ಮಾಡಲಾಯಿತು. ಅಲ್ಲಿಂದ ಮುಂದೆ ಭೂಮಿಯನ್ನು ರೈತರು ತಮ್ಮ ತಮಗೆ ಬೇಕಾದ ರೀತಿಯಲ್ಲಿ ಬಳಸುವುದರ ಮೇಲೆ ತಡೆಗಳು ಬಂದವು ಮತ್ತು ಹೀಗೆ ಬದಲಾಯಿಸಬಯಸುವವರು ಸರಕಾರಕ್ಕೆ ಈ ಬಗ್ಗೆ ಮಾಹಿತಿ ನೀಡುವುದು ಕಡ್ಡಾಯವಾಯಿತು. ಇದರಂತೆ ನಿವಾಸ ಪ್ರದೇಶಬಿಟ್ಟು ಹೊರಗೆ ಹೋಗಿ, ಮನೆ ಕಟ್ಟಿಕೊಳ್ಳಲು ಸರಕಾರದ ಅನುಮೋದನೆ ಪಡೆಯಬೇಕೆಂಬ ಕಾನೂನು ತಂದರು. ಇದಕ್ಕೆ ಸರಕಾರದ ಅನೇಕ ಇಲಾಖೆಗಳಿಂದ ಅನುಮೋದನೆ ಪಡೆಯಬೇಕಾಗುತ್ತಿತ್ತು. ಇದಕ್ಕೆ ಹೆಚ್ಚು ಹಣ ಮತ್ತು ವೇಳೆ ಖರ್ಚಾಗುತ್ತಿದ್ದಿತು. ಹೀಗೆ ಭೂಮಿ ತಮ್ಮದಾದರೂ ಮಾಲಿಕರು ಅದನ್ನು ತಮಗೆ ಬೇಕಾದ ರೀತಿಯಲ್ಲಿ ಬಳಸುವ ಹಕ್ಕು ಕಳೆದುಕೊಂಡರು (ನೋಡಿ: ಸಿದ್ದಪ್ಪ, ೧೯೯೧:೪೪-೪೬).

[೩]ಗ್ರಾಮಗಳು ಧಾರ್ಮಿಕ ಘಟಕಗಳಾಗಿದ್ದಾಗ ಎರಡು ಅಕ್ಕ-ಪಕ್ಕದ ಗ್ರಾಮಗಳ (ಧಾರ್ಮಿಕ) ಗಡಿಗಳ ನಡುವಿನ ನೆಲ ಯಾವ ಊರಿಗೂ ಸೇರದ ಪಾಳು ಭೂಮಿಯಿದ್ದು ಇದನ್ನು ಸ್ಮಶಾನ ಭೂಮಿಯಾಗಿ, ದುಷ್ಟ ಶಕ್ತಿಗಳನ್ನು ಕಳುಹಿಸಿಕೊಡುವ ಪ್ರದೇಶವಾಗಿ ಬಳಸಲ್ಪಡುತ್ತಿತ್ತು. ಶವಸಂಸ್ಕಾರಕ್ಕೆ ತಮ್ಮದೆನ್ನುವ ಭೂಮಿ ಇಲ್ಲದವರ, ಅಸಹಜವಾಗಿ, ಭೀಕರವಾಗಿ ಸಾವಿಗೀಡಾದವರ, ತೊನ್ನು, ಕ್ಷಯ, ಕುಷ್ಟ ರೋಗಗಳಿಂದ ಸತ್ತವರ, ಬಸಿರಿಬಾಣಂತಿಯರ ಶವಗಳನ್ನು ಇಲ್ಲಿ ಹೂಳುತ್ತಿದ್ದರು ಅಥವಾ ಸುಡುತ್ತಿದ್ದರು. ಊರುಗಳ ನಡುವೆ ಇಂತಹ

ಪ್ರದೇಶವಿಲ್ಲದಿದ್ದರೆ ಒಂದು ಹಳ್ಳಿಯಿಂದ ಹೊರಹಾಕಲ್ಪಟ್ಟ ದುಷ್ಟ ಶಕ್ತಿಗಳು ಅಕ್ಕಪಕ್ಕದ ಊರೊಳಗೆಪ್ರವೇಶ ಮಾಡಿ ಅಲ್ಲಿ ವಾಸವಾಗಿರುವ ಇವರ ಬಂಧು-ಬಾಂಧವರಿಗೆ ತೊಂದರೆ ಮತ್ತು ನಷ್ಟ ತರುತ್ತವೆ. ಇದರಿಂದ ಆ ಊರುಗಳ ಜನರ ನಡುವೆ ಜಗಳಗಳು ಬರುತ್ತವೆ ಎಂದು ನಂಬಿಕೆ ಇದೆ. ಹೀಗಾಗಿ ಕೆಲ ಪ್ರದೇಶವನ್ನು ಇದಕ್ಕಾಗಿ ತೆರವು ಬಿಡುತ್ತಿದ್ದರು.

೪ ಉಳುಮೆಗೆ ಒಳಗಾಗದ ಭೂಮಿಯಿಂದ ಮಾತ್ರ ಕಂದಾಯದ ರೂಪದಲ್ಲಿ, ಸರಕಾರಕ್ಕೆ ಆದಾಯ(ರೆವಿನ್ಯೂ) ಬರುತ್ತಿತ್ತು. ಆದ್ದರಿಂದ ಭೂಮಿ ವ್ಯವಸಾಯೇತರ ಉದ್ದೇಶಕ್ಕೆ ಬಳಕೆಯಾಗುವುದನ್ನು ತಡೆಯಲು ವಸಾಹತು ಸರಕಾರ ಒಂದು ಕಾನೂನು ತಂದಿತು. ಇದರಂತೆ ಭೂಮಿ ವ್ಯವಸಾಯೇತರ ಉದ್ದೇಶಕ್ಕೆ ಬೇಕಾದರೆ ಮಾಲಿಕರು ಮೊದಲು ಇದನ್ನು ತನ್ನ ಖಾತೆಯಿಂದ ಬಿಡುಗಡೆ ಮಾಡಬೇಕೆಂದು ಕಂದಾಯ ಇಲಾಖೆಯನ್ನು ಕೋರಬೇಕಾಗುತ್ತದೆ. ಆದಾಯ ತರುವ ಭೂಮಿಯನ್ನು ಹೀಗೆ ಬಿಟ್ಟುಕೊಡುವ ಮುನ್ನ ಸರಕಾರ ಈ ಬೇಡಿಕೆಯು ಸೂಕ್ತವೇ ಎಂಬುದನ್ನು ತಿಳಿದು ನಂತರ ಒಪ್ಪಿಗೆ ನೀಡುತ್ತದೆ. ಇದರಿಂದ ಸರಕಾರಕ್ಕೆ ನಿರಂತರವಾದ ನಷ್ಟವಾಗುವುದರಿಂದ, ಹೀಗೆ ಬಿಡುಗಡೆಯಾದ ಭೂಮಿಯ ಮೇಲಿನ ವಾರ್ಷಿಕ ಕಂದಾಯದ ಇಪ್ಪತ್ತು ಪಟ್ಟು ಮೊತ್ತವನ್ನು ಒಂದೇ ಕಂತಿನಲ್ಲಿ, ಭೂಮಿಯ ಮಾಲಿಕ ಸರಕಾರಕ್ಕೆ ಕೊಡಬೇಕಾಗುತ್ತದೆ.

ವಸಾಹತು ಸರಕಾರದ ಭೂ ಮಾಲಿಕತ್ವದ ಕಾನೂನಿನ್ವಯ ಭೂಮಿ ಭೂಪತಿಯಾದ ರಾಜನಿಗೆ ಸೇರಿರುತ್ತಿತ್ತು. ನಂತರ ರಾಷ್ಟ್ರವಾದ ಭಾರತವು ಪ್ರಜಾಪ್ರಭುತ್ವ ನಂತರ ಸರಕಾರಕ್ಕೆ ಸೇರಿತು. ಹೀಗಾಗಿ ಇಂದು ತಾವು ಈ ಹೊಲ ಅಥವಾ ಜಾಗದ ಮಾಲಿಕರು ಎಂದು ಹೇಳಿಕೊಳ್ಳುವವರು ಅದರಿಂದ ಬರುವ ಉತ್ಪನ್ನಕ್ಕೆ ಮಾತ್ರ ಬಾಧ್ಯಸ್ಥರು. ಅದರಲ್ಲಿ ನಾಲ್ಕು ಅಡಿಗಳಿಗಿಂತ ಕೆಳಗೆ ಸಿಗುವ ಏನೆಲ್ಲಾ ಖನಿಜ, ನಗನಾಣ್ಯ, ನಿಕ್ಷೇಪ ಮುಂತಾದವು ಸರಕಾರಕ್ಕೆ ಸೇರಿರುತ್ತವೆ. ಹೀಗಾಗಿ ತನ್ನ ಹೊಲದಲ್ಲಿ ಒಂದು ಬಾವಿ ತೋಡಲು, ಮನೆ ಕಟ್ಟಲು ಕೂಡ ಹೊಲದ ಮಾಲಿಕ ಸರಕಾರದ ಅಂದರೆ ಆ ಜಾಗದ ನಿಜ ಮಾಲಿಕರ, ಅನುಮೋದನೆ ಪಡೆಯಬೇಕು.

೫ ಇದಕ್ಕಾಗಿ ಗ್ರಾಮಸ್ಥರು ಅಗಸೆ ಬಾಗಿಲಿನ ಹತ್ತಿರ ಇರುವ ಗ್ರಾಮದ ಕರಿ(ಕರಿಗಲ್ಲು) ಕಲ್ಲಿಗೆ ೧೦೧ ಕೊಡ ನೀರು ಹಾಕಿ ಶುದ್ಧೀಕರಣದ ವಿಧಿ ಆಚರಿಸುವರು. ಇದರಿಂದ ಗ್ರಾಮ ದೈವ ತನ್ನ ಶಕ್ತಿಯನ್ನು ಮರಳಿ ಪಡೆದು ಗ್ರಾಮಕ್ಕೆ ಕೇಡು ತಂದ ದುಷ್ಟ ಶಕ್ತಿಗಳನ್ನು ಸೆರೆ ಹಿಡಿದು ಗ್ರಾಮದ ಧಾರ್ಮಿಕ ಗಡಿಯಿಂದ ಹೊರಗೆ ದೂಡುತ್ತದೆ ಎಂಬ ನಂಬಿಕೆ ಇದೆ. ಇದನ್ನೇ ಜಾನಪದರು "ಅಮ್ಮನನ್ನು ಕಳುಹಿಸುವುದು" - ಎನ್ನುತ್ತಾರೆ. ಗ್ರಾಮ ದೈವದ ಗುಡಿಗೆ ಒಂದು ವಿಶೇಷವಾದ ಸ್ಥಾನವಿದ್ದು ಗ್ರಾಮವನ್ನು ಶುದ್ಧಿ ಮಾಡದೆ ಅಲ್ಲಿ ಯಾವ ಧಾರ್ಮಿಕ ಚಟುವಟಿಕೆಗಳನ್ನೂ ಆಚರಿಸಬರುವುದಿಲ್ಲ. ಹೀಗಾಗಿ ಈ ಅವಧಿಯಲ್ಲಿ ಗ್ರಾಮದೈವದ ಗುಡಿಯಲ್ಲಿ ಯಾವ ವಿಶೇಷ ಪೂಜೆ, ಭಜನೆಗಳು ಮತ್ತು ನ್ಯಾಯ ಪಂಚಾಯಿತಿಗಳು ನಡೆಯುವುದಿಲ್ಲ.

[೬] ರೈತ ಪಾಲಿಸುವ ಕೆಲವೊಂದು ನೇಮಗಳೆಂದರೆ ಅಂದಿನ ಅಡಿಗೆ ಒಲೆಯ ಬೂದಿಯನ್ನು ಅಂದೇ ತಿಪ್ಪೆಗೆ ಹಾಕದೆ ಒಂದು ದಿನ ಮನೆಯ ಮುಂದಿನ ಬೂದಿಯ ಗುಂಡಿಯಲ್ಲಿ ಹಾಕಿ ಅದು ತನ್ನ 'ಬಿಸಿ ಬೂದಿ' ಎಂಬ ಸ್ಥಿತಿಯಿಂದ 'ಸತ್ತ ಬೂದಿ' ಯಾದಾಗ, ಮರುದಿನ, ಅದನ್ನು ತಿಪ್ಪೆಗೆ ಸಾಗಿಸುತ್ತಾರೆ. ಇದೇ ರೀತಿ ಕಣವನ್ನು ಜೂಜು, ವ್ಯಭಿಚಾರ, ಮಾದಕ ವಸ್ತುಗಳ ಸೇವನೆ ಮುಂತಾದ ಚಟುವಟಿಕೆಗಳಿಗೆ ಬಳಸಬಾರದೆಂಬ ನೇಮವನ್ನು ಪಾಲಿಸುತ್ತಾರೆ. ಮೂರನೆಯದಾಗಿ ಯಾರಾದರೂ ಅದರಲ್ಲೂ ಪರಸ್ಥಳದವರು, ಯಾತ್ರಿಕರು ತಮ್ಮ ಪಶುಗಳಿಗೆ ಮೇವು (ಬಸವನ ಪತ್ರೆ) ಬೇಕೆಂದು ಕೇಳಿದರೆ ಇಲ್ಲವೆನ್ನದೆ ಕೊಡುತ್ತಾರೆ. ಈ ಎಲ್ಲಾ ನಡವಳಿಕೆಗಳು ಅವನ ನೈತಿಕತೆಯನ್ನು ಹೆಚ್ಚಿಸುತ್ತವೆ ಮತ್ತು ಇವು ಅವನ ಕಣವನ್ನು ರಕ್ಷಿಸುತ್ತವೆ ಎಂಬ ನಂಬಿಕೆ ಇದೆ.

[೭] ಪಹರಿ ಎಂಬುದು ಪರ್ಶಿಯನ್ ಪದವಿದ್ದು ಇದಕ್ಕೆ ಗಸ್ತಿ, ಕಾವಲು, ರಕ್ಷಣೆ ಎಂಬ ಅರ್ಥಗಳಿವೆ. ಕನ್ನಡ ಪದ 'ಅಗಸೆ' ಗೆ ಇದೇ ಅರ್ಥಗಳಿರಬೇಕು. ಆದರೆ ಭಾರತದ ಹಳ್ಳಿಗಳು ಧಾರ್ಮಿಕ ಘಟಕಗಳಾದ್ದರಿಂದ ಇಲ್ಲಿ ಇವು ನೀಡುತ್ತಿದ್ದ ಅಥವಾ ಬೇಡುತ್ತಿದ್ದ ರಕ್ಷಣೆ ದುಷ್ಟ ಶಕ್ತಿಗಳಿಂದಾಗಿರುತ್ತಿತ್ತು. ಪಹರಿ ಬೇಲಿಯಿಂದ ಒಳಗೆ ಶವಸಂಸ್ಕಾರ ಮಾಡ ಬರುವುದಿಲ್ಲ. ಸಾಮಾನ್ಯ ದಿನಗಳಲ್ಲಿಯೂ ಯಾರಾದರೂ ಗ್ರಾಮಸ್ಥರು ಅಗಸೆ ಬಾಗಿಲಿನಿಂದ ಹೊರಗೆ ಸತ್ತರೆ ಅವರ ಹೆಣವನ್ನು ಕರಿಗಲ್ಲಿನಿಂದ ಒಳಗೆ ತರದೆ ಅವರ ಕಣ ಅಥವಾ ಮತ್ತಾವುದಾದರೂ ಸ್ಥಳದಲ್ಲಿಟ್ಟು ಪೂಜೆ ಪುನಸ್ಕಾರ ಮುಗಿಸಿ, ಅಲ್ಲಿಂದಲೇ ಶವಸಂಸ್ಕಾರಕ್ಕೆ ತೆಗೆದುಕೊಂಡು ಹೋಗುತ್ತಾರೆ.

[೮] ಅಗಸೆ ಬಾಗಿಲ ಬಳಿ ರಸ್ತೆಯ ಎರಡೂ ಕಡೆ ಎರಡು ಬೊಂಬುಗಳನ್ನು ನೆಟ್ಟು, ಅಡ್ಡಲಾಗಿ ಒಂದು ಗಳವನ್ನು ಕಟ್ಟಿ ಅದಕ್ಕೆ ಒಂದು ತುಂಡು ಹೊಸ ಬಟ್ಟೆಯಲ್ಲಿ ಈ ಕಾವು ಕಟ್ಟಿನ ವಸ್ತುವನ್ನು ಕಟ್ಟುತ್ತಿದ್ದರು. ಜೊತೆಗೆ ಗ್ರಾಮದೊಳಗೆ ಬರುವ ಎಲ್ಲರನ್ನೂ ಮತ್ತು ಎಲ್ಲಾ ವಸ್ತುಗಳನ್ನೂ ಅದರ ಕೆಳಗೆ ಹಾಯ್ದು ಬರುವಂತೆ ಮಾಡುತ್ತಿದ್ದರು. ಇದರಿಂದ ಗ್ರಾಮದೊಳಗೆ ಬರಲು ಹವಣಿಸುತ್ತಿರುವ ದುಷ್ಟಶಕ್ತಿಗಳು ಹೊರಗೆ ತಡೆಯಲ್ಪಡುತ್ತಿದ್ದವು.

[೯] ಅವರು ಹೊರಹೋಗಲೇಬೇಕಾದ ಪ್ರಸಂಗ ಬಂದರೆ ಹೋಗಬಹುದು. ಆದರೆ ಹಬ್ಬದ ಹಿಂದಿನ ದಿನ ವಾಪಾಸು ಬರಬೇಕೆಂಬ ನಿಯಮವಿರುತ್ತದೆ. ಇದಕ್ಕೆ ಅವರು ತಮ್ಮಲ್ಲಿಯ ಹಣ ಅಥವಾ ಒಡವೆಯನ್ನು ಅಡವಾಗಿ ಇಟ್ಟು ಹೋಗಬೇಕು ಅಥವಾ ಅವರ ಸಂಬಂಧಿಕರು ಯಾರಾದರೂ ಇದಕ್ಕೆ ಆಧಾರವಾಗಿ ನಿಲ್ಲಬೇಕು. ಅವರು ವಾಪಾಸು ಬಂದರೆ ಸರಿ. ಬರದಿದ್ದರೆ ಅವರೊಟ್ಟಿಗೆ ಹೋದ ಗ್ರಾಮದ ಹುಲುಸನ್ನು ಮರಳಿ ಪಡೆಯಲು ಗ್ರಾಮಸ್ಥರು ಮತ್ತೊಮ್ಮೆ ಪೂಜಾವಿಧಿಯನ್ನು ಆಚರಿಸಬೇಕಾಗುತ್ತದೆ. ಈ

ಖರ್ಚಿಗೆ ಪರ ಊರಿನವರು ಇಟ್ಟ ಅಡವನ್ನು ಮುಟ್ಟಗೋಲು ಹಾಕಿಕೊಳ್ಳುವುದರ ಮೂಲಕ ದಂಡ ವಿಧಿಸುತ್ತಾರೆ.

೧೦ ಈ ವಿರಾಮದ ದಿನಗಳಲ್ಲಿ ಕಣದ ಬೇಲಿ, ವಾಸದ ಮನೆ, ಊರ ರಸ್ತೆ ಮುಂತಾದವುಗಳನ್ನು ಸರಿಪಡಿಸಿಕೊಳ್ಳುತ್ತಾರೆ ಮತ್ತು ತಗ್ಗು-ಗುಂಡಿ ಮುಚ್ಚಿಕೊಳ್ಳಲು, ಗರಡಿಮನೆ ಕಟ್ಟಲು ಕಲ್ಲು ಮಣ್ಣು ಮರ ತರುತ್ತಾರೆ, ಬೀಗರು ನೆಂಟರನ್ನು ಆಹ್ವಾನಿಸಲು ಬಳಸುತ್ತಾರೆ. ಇಂತಹ ನೇಮನಿಷೇಧಗಳನ್ನು ಗ್ರಾಮದ ಎಲ್ಲರೂ ತಪ್ಪದೆ ಪಾಲಿಸುವುದು ಅವರಲ್ಲಿ ಒಮ್ಮತ, ಒಗ್ಗಟ್ಟು ತರುತ್ತಿತ್ತು ಮತ್ತು ಇಡೀ ಗ್ರಾಮ ಒಂದು ಕುಟುಂಬದೋಪಾದಿಯಲ್ಲಿ ನಡೆದುಕೊಳ್ಳುತ್ತಿತ್ತು. ಆಗ ಯಾವುದೇ ಜಾತಿಯ ಯಾವುದೇ ಕುಟುಂಬದಲ್ಲಿ ಸಾವು ಸಂಭವಿಸಿದರೂ ಇದರಿಂದ ಗ್ರಾಮ ನಿವಾಸ ಸ್ಥಳ ಮೈಲಿಗೆಯಾಗುತ್ತದೆ ಎಂಬ ನಂಬಿಕೆ ಇತ್ತು. ಆಗ ಗ್ರಾಮವನ್ನು ಮತ್ತೊಮ್ಮೆ ಶುದ್ದೀಕರಣ ಮಾಡಬೇಕಾಗುತ್ತದೆ (ಗುರುಮೂರ್ತಿ, ೧೯೭೩).

೧೧ ಹೀಗಾಗಿ ಇಂದು ಕೂಡ ಗ್ರಾಮಗಳಲ್ಲಿ ಯಾರನ್ನಾದರೂ ಹಣಸ್ಥ ಎಂದು ಹೇಳುವುದಿದ್ದರೆ "ಗೌಡಾಳಿಕೆ (ದೇಶಗತ್ತಿ) ಮನೆತನಗಳಿಗೆ ಸೇರಿದ ಹೊಲ ಹಿಡಿಯುವ ತಾಕತ್ತು ಇರುವುದು ಅವನೊಬ್ಬನಿಗೇ" - ಎಂದು ಹೊಗಳುತ್ತಾರೆ.

೧೨ ತಮ್ಮ ಗ್ರಾಮ ದೈವವು ಈ ವರ್ಷ ಎಲ್ಲಿಗೆ ತನ್ನ ಧಾರ್ಮಿಕ ಅಧಿಕಾರ ವ್ಯಾಪ್ತಿಯನ್ನು ಗುರುತಿಸಿಕೊಂಡಿತು ಎಂಬುದನ್ನು ತಿಳಿಯಲು ಗ್ರಾಮಸ್ಥರು ಒಂದು ಪೂಜಾವಿಧಿಯನ್ನು ಆಚರಿಸುತ್ತಾರೆ. ಇದಕ್ಕಾಗಿ ಗ್ರಾಮದಲ್ಲಿ "ಗಡಿ ದೀಪ" ಎಂಬ ಒಂದು ಪ್ರಣತಿ ಇರುತ್ತದೆ ಮತ್ತು ಇದು ಗ್ರಾಮ ದೇವರ ಗುಡಿಯಲ್ಲಿರುತ್ತದೆ. ಗ್ರಾಮೀಣ ಸಮುದಾಯಗಳನ್ನು ಅಭ್ಯಾಸ ಮಾಡಿದ ಕೆಲವು ವಿದ್ವಾಂಸರು ಇದನ್ನು ತಪ್ಪಾಗಿ "ಗುಡಿ ದೀಪ" ಎಂದೂ ಕರೆದಿದ್ದಾರೆ. ಆದರೆ ಇದು ಗುಡಿಯಲ್ಲಿಯ ನಂದಾದೀಪವಲ್ಲ; ಗ್ರಾಮದ ಧಾರ್ಮಿಕ ಗಡಿಯನ್ನು ಗುರುತಿಸಲು ಬಳಸಲಾಗುತ್ತಿದ್ದ ಒಂದು ಪ್ರತ್ಯೇಕವಾದ ಪ್ರಣತಿ. ಇದೂ ತನ್ನ ಆಕಾರದಲ್ಲಿ ಸಾಮಾನ್ಯ ಪ್ರಣತಿಯಂತಿದ್ದರೂ ಸ್ವಲ್ಪ ದೊಡ್ಡದಿರುತ್ತದೆ. ಗಡಿ ಗುರುತಿಸುವ ವಿಧಿ ಆಚರಿಸುವ ದಿನ ಈ ಗಡಿ ದೀಪವನ್ನು ಗರ್ಭ ಗುಡಿಯಿಂದ ಹೊರತಂದು ಗುಡಿಯಲ್ಲೇ ಒಂದು ವಿಶೇಷವಾದ ವೇದಿಕೆ ಸಿದ್ಧಪಡಿಸಿ ಅದರ ಮೇಲಿಡುವರು. ಆಗ ಗ್ರಾಮಸ್ಥರು ಈ ಉದ್ದೇಶಕ್ಕೆ ಎಂದು ಮೀಸಲು ಹಿಡಿದು ಸಂಗ್ರಹಿಸಿದ ತುಪ್ಪವನ್ನು ತಂದು ಇದಕ್ಕೆ ಅರ್ಪಿಸುತ್ತಾರೆ. ಎಲ್ಲಾ ಸಿದ್ಧತೆಗಳು ಮುಗಿದ ನಂತರ ದೀಪವನ್ನು ಬೆಳಗಿಸಿ ಪೂಜಿಸುವರು. ಮುಂದೆ ಇದನ್ನು ಗಡಿಯ ತನಕ ಹೊರಲು ಆಯ್ಕೆಯಾದ (ಮಾದರ ಜಾತಿಯ) ಬ್ರಹ್ಮಚಾರಿ(ಕೋರು) ಹುಡುಗನನ್ನು ಹಲಗೆ ಮೇಳದ ಮೆರವಣಿಗೆಯಲ್ಲಿ ಕರೆತರುವರು. ನುಣ್ಣಗೆ ಬೋಳಿಸಿದ ಅವನ ತಲೆಯ ಮೇಲೆ ಗೋಧಿ ಹಿಟ್ಟಿನ ಕಣಕದ ಬಾನಿ ಮಾಡಿಟ್ಟು, ಅದರಲ್ಲಿ ಈ ಗಡಿ ದೀಪವನ್ನು ಇಟ್ಟು,

ಆಗ ಗಡಿ ಗುರುತಿಸಬೇಕಾಗಿರುವ ಊರಿನ ದಾರಿಗುಂಟ ಹೊರಡುವಂತೆ ಅವನಿಗೆ ಹೇಳುವರು. ಅವನ ಮುಂದೆ ಹಲಗೆ ಮತ್ತು ಉರ್ಮೆ ಮೇಳದವರು, ಹಿಂದೆ ಗ್ರಾಮದ ದೈವ ಮತ್ತು ಊರ ಹಿರಿಯರು ಹೊರಡುವರು. ಈ ಗಡಿ ದೀಪ ನಂದಿದ ಸ್ಥಳವನ್ನು ಆ ವರ್ಷಕ್ಕೆ ಊರಿನ ಧಾರ್ಮಿಕ ಗಡಿ ಎಂದು ಗುರುತಿಸಲಾಗುವುದು.

ಗ್ರಂಥಋಣ

1. Bedon Powell, B.H. 1896. Indian Village Community, London, Longmans-Greens and Com,
2. Chone, Barnard, 1961. "The changing status of a Dippressed Caste". **In**, McKim Marriott (Ed) **Village India**, Bombay, Asia.
3. Eglar, Zekya, 1960. **A Punjabi Village in Pakistan**, New York, Columbia University Press.
4. Gurumurthy.K.G, 1970. "Socio-Economic and Religious Significances of Kara Habba", **Karnataka Bharathi**. 3:1:34-44. 1970 (Kannada).
5. ....1971. "Ritual circles in a Mysore Village". **Sociological Bulletin**. 20:1:24-38. 1971.
6. ....1973. "Fertility Festivals and Village Unity". **Society and Culture**. 4:1:111-120. 1973.
7. ....1976. **Kallapura: A South Indian Village**, Dharwad, Karanataka University Press.
8. Ishwaran,K. 1966. Tradition and Economy in Village India, Bombay, Allied, 1966.
9. Orenstein, Henry, 1965. **Goan : Conflict and Cohesion in an Indian Village**, Princeton, Princeton University Press.

10. Siddappa, G.B. 1991. "The Road Map of states Land Survey Department". **The 3rd National Land Survey Celebration** (The commemonative volume). Bangalore, The Land Survey, Revenue and Land Record Department, Karanataka, 1991. pp.44-46. (Kannada).

11. Srinivas, M.N. 1960. "The Social Structure of a Mysore Village". In, M.N.Srinivas(Ed) **Indian's Villages**, Bombay, Asia.

12. ....1961. "The Social systems of a Mysore Vil lage". In, Mcopim marriott(Ed) **Village India,** Bombay, Asia.

★★★★

ಲೇಖನ - ೩

ಗ್ರಾಮೀಣ ಅಭಿವೃದ್ಧಿ ಸಾಹಿತ್ಯ

ಬರೆದುದೆಲ್ಲಾ ಹೇಗೆ ಸಾಹಿತ್ಯವಾಗುವುದಿಲ್ಲವೋ ಹಾಗೆ ಗ್ರಾಮೀಣ ಪ್ರದೇಶದ ಬಗೆಗೆ ಪ್ರಕಟಿಸಿದುದೆಲ್ಲಾ ಅಭಿವೃದ್ಧಿ ಸಾಹಿತ್ಯವಾಗಲಾರದು. ಗ್ರಾಮೀಣ ಸಮಾಜದ ಆರ್ಥಿಕ ಮಾಹಿತಿಯನ್ನು ಒಳಗೊಂಡ, ಸರ್ವತೋಮುಖ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸೃಷ್ಟಿಸಿದ್ದು ಅಭಿವೃದ್ಧಿ ಸಾಹಿತ್ಯವಾಗಬಹುದು. ಗ್ರಾಮೀಣ ಸಾಮಾಜಿಕ ಹಾಗೂ ಭೌತಿಕ ಪರಿಸರವೇನು, ಅದು ಹೇಗೆ ಅಭಿವೃದ್ಧಿಗೆ ಪೂರಕವಾಗಿದೆ, ಆಗಿರದಿದ್ದರೆ ಅದರಲ್ಲಿಯ ನ್ಯೂನ್ಯತೆಗಳಾವು, ನಿಜ ಪರಿಸ್ಥಿತಿ ಏನು ಎಂಬುದನ್ನು ನಿಷ್ಪಕ್ಷಪಾತವಾಗಿ ಮೂಡಿಸುವದೇ ನಿಜವಾದ ಗ್ರಾಮೀಣ ಅಭಿವೃದ್ಧಿ ಸಾಹಿತ್ಯ. ಗ್ರಾಮೀಣ ಪ್ರದೇಶದ ನೆಲ, ಜಲ, ಹವಾಮಾನ, ಪ್ರಕೃತಿ ಸಂಪತ್ತು ಮುಂತಾದವು ಭೌತಿಕ ಪರಿಸರಕ್ಕೆ ಸಂಬಂಧಿಸಿದರೆ ಗ್ರಾಮೀಣ ಆರ್ಥಿಕತೆ, ಧಾರ್ಮಿಕತೆ, ಮಾನಸಿಕ, ರಾಜಕೀಯ, ಸಾಂಸ್ಕೃತಿಕ ಮುಂತಾದ ವಿಚಾರಗಳು ಸಾಮಾಜಿಕ ಪರಿಸರದ ಮೇಲಿನ ಸಾಹಿತ್ಯವಾಗುತ್ತದೆ. ಇಂದು ಗ್ರಾಮೀಣ ಪರಿಸರ ಹಾಗೂ ಅಭಿವೃದ್ಧಿ ಕುರಿತು ಸಾಹಿತ್ಯ ಸಾಕಷ್ಟು ಇದೆ. ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಅನೇಕ ಭಾಷೆಗಳಲ್ಲಿ ಬರೆದ ಸಾಹಿತ್ಯವೂ ನಮಗೆ ಲಭ್ಯವಿದೆ. ಆದರೆ ಇದು ಸಾಂಪ್ರದಾಯಕತೆಯಿಂದ ತುಂಬಿದ ನಮ್ಮ ಗ್ರಾಮೀಣ ಸಮಾಜದ ಅಭಿವೃದ್ಧಿಗೆ ಸಮರ್ಪಕವಾಗಿಲ್ಲ ಎಂಬ ಕೂಗೂ ಇದೆ. ಈ ನನ್ನ ಪ್ರಬಂಧದಲ್ಲಿ ಇದು ಹೀಗೇಕೆ ಮತ್ತು ಇದಕ್ಕೆ ಕಾರಣವೇನು ಮುಂತಾಗಿ ಚರ್ಚಿಸಿಲಾಗಿದೆ.

ಪರಿಸರವನ್ನು ಗ್ರಾಮೀಣ ಮತ್ತು ನಗರ, ಭೌತಿಕ ಮತ್ತು ಸಾಮಾಜಿಕ-ಸಾಂಸ್ಕೃತಿಕ ಪರಿಸರವೆಂದು ಭಾಗ ಮಾಡಲಾಗಿದೆ. ಸಾಮಾನ್ಯವಾಗಿ ಗ್ರಾಮೀಣ ಭೌತಿಕ ಪರಿಸರವು ಮೋಟಾರು ವಾಹನಗಳ ಸದ್ದುಗದ್ದಲವಿಲ್ಲದೆ ಕಾರ್ಖಾನೆಗಳ ಹೊಗೆ, ಕೊಳಕು ವಾಸನೆಗಳಿಲ್ಲದೆ ಶುದ್ಧವಾಗಿರುತ್ತದೆ. ಇತ್ತೀಚಿಗೆ ಅಲ್ಲಿಯೂ ಕೆಲವೆಡೆ ಅನೇಕ ಬಗೆಯ ಮಾಲಿನ್ಯತೆ ಕಂಡು ಬರುತ್ತದೆ. ಆಧುನಿಕತೆ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಅಲ್ಲಿಯೂ ಅನೇಕ ಚಟುವಟಿಕೆಗಳು ನಡೆದಿರುವುದೇ ಇದಕ್ಕೆ ಕಾರಣವಿದೆ. ಗ್ರಾಮಗಳಲ್ಲಿ ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದೆ ಹಳ್ಳ ಹಾಗೂ ತಿಪ್ಪೆ ಗುಂಡಿಗಳಲ್ಲಿ ನೀರು ನಿಂತು ಮಲೆತಿರುತ್ತದೆ. ರಸಗೊಬ್ಬರ ಕ್ರಿಮಿನಾಶಕಗಳನ್ನು ಅವೈಜ್ಞಾನಿಕವಾಗಿ ಬಳಸಿದ್ದರಿಂದಾಗಿ ಅಲ್ಲಿಯೂ ನೆಲ, ನೀರು ಮತ್ತು ವಾತಾವರಣಗಳು ಮಲಿನಗೊಂಡಿವೆ. ಎಲ್ಲೆಂದರಲ್ಲಿ ಮಲಮೂತ್ರ ವಿಸರ್ಜನೆಯಾಗಿ,

ಕಸ-ಸಗಣಿ ಶೇಖರಣೆಯಾಗಿ ಪರಿಸರ ಮಲಿನವಾಗಿದೆ. ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆಗೆ ಅನ್ನ-ವಸತಿ ಒದಗಿಸಲು ಹೆಚ್ಚು ಹೆಚ್ಚು ಭೂಮಿಯನ್ನು ಉಳುಮೆ ಮಾಡುವ ಅವಶ್ಯಕತೆ ಬಂದಿದ್ದರಿಂದ ಅಲ್ಲಿಯ ಗಿಡಮರಗಳನ್ನು ಕಡಿದು ಬಯಲು ಮಾಡಲಾಗಿದೆ. ಇವೆಲ್ಲವೂ ಗ್ರಾಮೀಣ ಪ್ರದೇಶದ ಭೌತ ಪರಿಸರಕ್ಕೆ ಮಾರಕವಾಗಿವೆ.

ಸಾಂಪ್ರದಾಯಕವಾಗಿ ವ್ಯವಸಾಯ ಹಾಗೂ ಅದಕ್ಕೆ ಸಂಬಂಧಪಟ್ಟ ವೃತ್ತಿಗಳಲ್ಲಿ ನಿರತರಾದ ಅನೇಕ ಜಾತಿಗುಂಪುಗಳ ಸಮುದಾಯವೇ ಗ್ರಾಮ. ಇಲ್ಲಿಯ ಅನೇಕ ಜಾತಿಗಳು, ಉಪಜಾತಿಗಳು ತಲತಲಾಂತರದಿಂದ ಬಂದ ತಮ್ಮ ಜಾತಿವೃತ್ತಿಗಳನ್ನು ಅನುಸರಿಸುತ್ತಾ ಬಂದಿದ್ದಾರೆ. ತಮ್ಮ ವೃತ್ತಿಗಳನ್ನು ಅದಕ್ಕೆ ತಕ್ಕದಾದ ಜೀವನಕ್ರಮವನ್ನು ಪಾಲಿಸಿಕೊಂಡು ಹೋಗುವುದೇ ಧರ್ಮ ಎಂದು ಅವರು ಬಲವಾಗಿ ನಂಬುತ್ತಾರೆ. ಅವರ ಸಾಮಾಜಿಕ ಜೀವನದ ಎಲ್ಲಾ ರಂಗದಲ್ಲೂ ಕಳ್ಳುಬಳ್ಳಿ, ನೆರೆಹೊರೆ ಸಂಬಂಧಗಳು ಎದ್ದು ಕಾಣುತ್ತಿರುತ್ತವೆ. ಜನರು ಸಂಪ್ರದಾಯ ಶರಣರು, ಮುಗ್ದರು, ಆಶಾವಾದಿಗಳು. ತಮ್ಮ ಕಷ್ಟಗಳು ಏನೇ ಇದ್ದರೂ ಮರೆತು ಹಬ್ಬ, ಜಾತ್ರೆ ಮುಂತಾದ ಧಾರ್ಮಿಕ ಆಚರಣೆಗಳನ್ನು ಆಚರಿಸುತ್ತಾರೆ, ಜಾನಪದ ಹಾಡು, ಕುಣಿತಗಳಲ್ಲಿ ಮೈಮರೆಯುತ್ತಾರೆ. ತೀರಾ ಇತ್ತೀಚಿನವರೆಗೆ ಶಾಂತವಾಗಿದ್ದ ಈ ಗ್ರಾಮೀಣ ಸಾಮಾಜಿಕ ಪರಿಸರವೂ ಹದಗೆಟ್ಟಿದೆ. ಹಿಂದೆ ಎಲ್ಲರೂ ಒಂದೇ ಎನ್ನುವ ಭಾವನೆ ಹೊಂದಿದ್ದ ಗ್ರಾಮಸ್ಥರು ಈಗ ಹತ್ತೆಂಟು ರಾಜಕೀಯ ಪಕ್ಷ, ಗುಂಪುಗಳಾಗಿ ಒಡೆದು ಹೋಳಾಗಿದ್ದಾರೆ. ಈ ನಡುವೆ ಸರಕಾರ ಅವರನ್ನು ಪೂರ್ವದ, ಆರ್ಥಿಕ-ಸಾಮಾಜಿಕವಾಗಿ ಕೆಳಗಿನವರು, ಹಿಂದುಳಿದವರು, ಮುಂದುವರೆದವರು, ದೊಡ್ಡ ರೈತರು, ಸಣ್ಣ ರೈತರು, ಕೂಲಿಕಾರರು, ಭೂ ರಹಿತ ಕೂಲಿಕಾರರು, ಸಂಬಳದಾಳುಗಳು, ಜೀತದಾಳುಗಳು -ಹೀಗೆ ನೂರೆಂಟು ಗುಂಪುಗಳಾಗಿ ವಿಂಗಡಿಸಿ ಇವರೆಲ್ಲರ ಅಭಿವೃದ್ಧಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸಲು ಪ್ರಾರಂಭಿಸಿದೆ. ಹೀಗಾಗಿ ಎಲ್ಲಾ ಸಾಂಪ್ರದಾಯಕವಾಗಿ ಬಂದ ವೃತ್ತಿಗಳು, ಕಸಬುಗಳು ಮತ್ತು ಈ ಮೂಲಕ ಬರುತ್ತಿದ್ದ ಪರಸ್ಪರ ಸಂಬಂಧಗಳು ಇಂದು ಕ್ಷೀಣಿಸುತ್ತಿವೆ. ಇದರಿಂದ ಕೆಲವೊಂದು ಸೇವಾ ಮತ್ತು ಕೈಕೆಲಸದವರು ಕಂಗೆಟ್ಟಿದ್ದಾರೆ ಮತ್ತು ಬದುಕು ಹುಡುಕಿ ನಗರದತ್ತ ವಲಸೆ ಹೋಗುತ್ತಿದ್ದಾರೆ. ಇತ್ತ ಆಧುನಿಕತೆಯನ್ನು ಹೊಂದದ ಅತ್ತ ಸಂಪ್ರದಾಯವನ್ನೂ ಬಿಡದ ಇಂತಹ ಅನೇಕ ಗ್ರಾಮಸ್ಥರು ದಿಗಿಲುಗೊಂಡಿದ್ದಾರೆ. ಎಲ್ಲೆಲ್ಲೂ ನಿರಾಶೆ, ನಿರುದ್ಯೋಗ, ಬಡತನ, ವೈರಭಾವ, ಶೋಷಣೆ, ರಾಜಕಾರಣ, ಅನಾಯಕತ್ವ ಮುಂತಾದವು ತುಂಬಿವೆ. ಇದರಿಂದ ಗ್ರಾಮೀಣ ಸಾಮಾಜಿಕ ಪರಿಸರ ಕೆಡುತ್ತಿದೆ.

ಪರಿಸ್ಥಿತಿ ಹೀಗಿರುವಲ್ಲಿ ಅಭಿವೃದ್ಧಿ ತರಲು ಗ್ರಾಮಸ್ಥರನ್ನು ಅವರದೆ ಆದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿದೆ ಮತ್ತು ಈ ಮಾರ್ಗದಲ್ಲಿಯೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ತರಬೇಕಾಗಿದೆ. ಈ ಕಾರ್ಯಕ್ರಮಗಳನ್ನು ತರುವ ಪೂರ್ವದಲ್ಲಿ ಗ್ರಾಮಸ್ಥರಲ್ಲಿ ಮತ್ತು

ಕಾರ್ಯಕರ್ತರಲ್ಲಿ ಅಭಿವೃದ್ಧಿ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ಪ್ರಜ್ಞೆ ಮೂಡಿಸಲು ಅನೇಕ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಇವುಗಳಲ್ಲಿ ಪ್ರವಾಸ, ಸಭೆ, ಚರ್ಚಾಗೋಷ್ಠಿ, ವಿಚಾರ ಸಂಕಿರಣ ಮುಂತಾದವು ಪ್ರಮುಖವಾದವುಗಳು. ಇವುಗಳೆಲ್ಲದಕ್ಕಿಂತಲೂ ಮುಖ್ಯವಾದದ್ದು ಸಾಹಿತ್ಯಾನ್ವೇಷಣೆ. ಇಂತಹ ಅಭಿವೃದ್ಧಿ ಸಾಹಿತ್ಯವು ಅಧಿಕಾರಗಳ ಹಾಗೂ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದ ತಜ್ಞರ ಸ್ವಂತ ಅನುಭವದಿಂದ ಹಾಗೂ ಸಂಶೋಧಕರ ಸಂಶೋಧನೆಯಿಂದ ಹೊರಬರುತ್ತದೆ. ಇಂತಹ ಅಭಿವೃದ್ಧಿ ತರುವ ಕೆಲಸ ಜಗತ್ತಿನಾದ್ಯಂತ ನಡೆದಿರುವುದರಿಂದ ಅಲ್ಲಿ ಸೃಷ್ಟಿಯಾದ ಸಾಹಿತ್ಯವನ್ನು ಹೀಗೆ ಅಭಿವೃದ್ಧಿ ಹೊಂದುತ್ತಿರುವ ಇತರೆ ದೇಶಗಳಲ್ಲಿ ಸಿಗುವಂತೆ ವ್ಯವಸ್ಥೆ ಮಾಡಲಾಗಿದೆ. ಆದರೆ ಭಾಷೆ, ಹಣ, ಸುದ್ದಿ ಮಾಧ್ಯಮದ ತೊಡಕು ಮುಂತಾದವುಗಳ ಅಡೆತಡೆಯಿಂದಾಗಿ ಇವು ಎಲ್ಲರಿಗೂ ಸಾಕಷ್ಟು ಲಭ್ಯವಿಲ್ಲ. ಅಲ್ಲದೆ ಒಂದು ಸಮಾಜ-ಸಂಸ್ಕೃತಿಯಲ್ಲಿ ಒಪ್ಪಿಗೆಯಾದ ವಿಚಾರಗಳು ಅಥವಾ ಅಭಿವೃದ್ಧಿ ಕಾರ್ಯಕ್ರಮಗಳ ಅನುಭವಗಳು ಮತ್ತೊಂದರಲ್ಲಿ ಬಳಕೆಗೆ ಒಪ್ಪಿಗೆಯಾಗಲಾರವು. ಆಗ ಕಾರ್ಯಕರ್ತರು ತಮ್ಮ ಸ್ಥಳೀಯ ಪರಿಸ್ಥಿತಿಗೆ ತಕ್ಕದಾದ ಕಾರ್ಯಕ್ರಮಗಳನ್ನು, ಸಾಹಿತ್ಯವನ್ನು ತಂದುಕೊಳ್ಳಬೇಕಾಗುತ್ತದೆ. ಇವು ಫಲಾನುಭವಿಗಳ, ಕಾರ್ಯಕರ್ತರ ಬುದ್ಧಿಮಟ್ಟಕ್ಕೆ ಅನುಗುಣವಾಗಿ ಮೂಡಿ ಬರಬೇಕಾಗುತ್ತದೆ.

ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ತಮ್ಮ ಅನುಯಾಯಿಗಳಿಗೆ ಜನನಾಯಕರು ನೀಡಿದ ಆಶ್ವಾಸನೆಗಳನ್ನು ಸ್ವಾತಂತ್ರ್ಯ ಬಂದ ನಂತರ ಈಡೇರಿಸಲು ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ಅಸಮಾನತೆ, ಬಡತನಗಳನ್ನು ತೊಡೆದು ಹಾಕಲು, ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಯಿತು. ಇದಕ್ಕಾಗಿ ಆಂಗ್ಲರ ವಸಾಹತು ಆಡಳಿತ ಕೈಗೊಂಡಿದ್ದ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಅವುಗಳಲ್ಲಿನ ಕೆಲವೊಂದು ನ್ಯೂನ್ಯತೆಗಳನ್ನು ತಿದ್ದಿಕೊಂಡು ಈ ಮಾರ್ಗದಲ್ಲಿ ಭಾರತ ಸರಕಾರ ಮುಂದುವರೆಸಿತು. ಜೊತೆಗೆ ಹೊಸದಾಗಿ ಕೆಲವೊಂದು ಯೋಜನೆಗಳನ್ನು , ಸಂಸ್ಥೆಗಳನ್ನು ತಂದುಕೊಳ್ಳಲಾಯಿತು. ಇವುಗಳಲ್ಲಿ ರಾಷ್ಟ್ರಾಭಿವೃದ್ಧಿ ಕಾರ್ಯಕ್ಕೆ ಸೂಕ್ತ ಹಿನ್ನೆಲೆ ನೀಡಲು ಯೋಜನಾ ಆಯೋಗದಂತಹ ಸಂಸ್ಥೆಯನ್ನು ರೂಪಿಸಿದ್ದು ಒಂದು ಮುಖ್ಯ ಹೆಜ್ಜೆ. ಈ ಆಯೋಗವು ೧೯೫೧ರ ವೇಳೆಗೆ ಮೊದಲ ಪಂಚವಾರ್ಷಿಕ ಯೋಜನೆಯ ಕರಡು ಸಿದ್ಧಪಡಿಸಿದಾಗ ಅದರಲ್ಲಿ ಗ್ರಾಮೀಣ ಅಭಿವೃದ್ಧಿಗೆ ಸೂಕ್ತ ಆದ್ಯತೆ ನೀಡಲಾಗಿತ್ತು ಮತ್ತು ಗ್ರಾಮೀಣ ಅಭಿವೃದ್ಧಿಯನ್ನು ಔದ್ಯೋಗಿಕ ಅಭಿವೃದ್ಧಿಗೆ ಸಮಸಮವಾಗಿ ತರುವ ಉದ್ದೇಶ ಹೊಂದಲಾಗಿತ್ತು.

ಐವತ್ತರ ದಶಕದಲ್ಲಿ ಭಾರತ ಸರಕಾರದ ಮುಂದಿದ್ದ ಬೃಹತ್ ಸಮಸ್ಯೆ ಎಂದರೆ ಮಿತಿ ಮೀರಿ ಬೆಳೆಯುತ್ತಿದ್ದ ಜನಸಂಖ್ಯೆಗೆ ಆಹಾರ ಒದಗಿಸುವುದಾಗಿತ್ತು. ಈ ಆಹಾರದ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಸೂಕ್ತ ಕ್ರಮಗಳಾದ ನೀರಾವರಿ

ಯೋಜನೆಯನ್ನು, ಹೊಸ ಹೊಸ ತಳಿಯ, ಅಧಿಕ ಫಸಲು ನೀಡುವ ಬೆಳೆಗಳನ್ನು, ಅವುಗಳ ಬಿತ್ತನಾ ಕ್ರಮಗಳನ್ನು ರೂಪಿಸಲು ಕೃಷಿ ವಿಜ್ಞಾನ ಕೇಂದ್ರಗಳನ್ನು, ಇಲಾಖೆಯನ್ನು ಸ್ಥಾಪಿಸಿ ತಜ್ಞರನ್ನು ನೇಮಿಸುವುದಿತ್ತು. ಆಧುನಿಕ ವ್ಯವಸಾಯಕ್ಕೆ ಬೇಕಾದ ರಸಗೊಬ್ಬರ, ಕ್ರಿಮಿನಾಶಕಗಳನ್ನು ಬಳಸುವ ಮತ್ತು ಅವುಗಳನ್ನು ತಯಾರಿಸಲು ಕಾರ್ಖಾನೆಗಳನ್ನು ತೆರೆಯುವ ವ್ಯವಸ್ಥೆಮಾಡಲಾಗಿತ್ತು. ಆದರೆ ಎರಡನೆಯ ಪಂಚವಾರ್ಷಿಕ ಯೋಜನೆ ಪ್ರಾರಂಭವಾದರೂ ಗ್ರಾಮೀಣ ರಂಗದಲ್ಲಿ ಗಣನೀಯವಾಗಿ ಅಭಿವೃದ್ಧಿ ಬರಲಿಲ್ಲ. ತಜ್ಞರ ಅಭಿಪ್ರಾಯದಂತೆ ಗ್ರಾಮಸ್ಥರು ಈ ಅಭಿವೃದ್ಧಿ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸದೇ ಇದ್ದುದೇ ಇದಕ್ಕೆ ಕಾರಣ. ಇದನ್ನು ಸರಿಪಡಿಸಲು ಅಭಿವೃದ್ಧಿ ಕಾರ್ಯದ ಆಡಳಿತ ವ್ಯವಸ್ಥೆಯಲ್ಲೇ ಬದಲಾವಣೆ ತರಲು ಆಡಳಿತಾಧಿಕಾರವನ್ನು ವಿಕೇಂದ್ರಿಕರಿಸಲು ಪಂಚಾಯಿತಿ ರಾಜ್ಯ ವ್ಯವಸ್ಥೆ ತರಲಾಯಿತು. ಜಿಲ್ಲೆ, ರಾಜ್ಯ ಹಾಗೂ ಕೇಂದ್ರಗಳಲ್ಲಿ ಗ್ರಾಮಾಭಿವೃದ್ಧಿಗೆ ಹೆಚ್ಚಿನ ಚಾಲನೆ ತರಲು ಆದ್ಯತೆ ನೀಡಲಾಯಿತು. ಅಭಿವೃದ್ಧಿಗೆ ಬೇಕಾಗುವ ಸಿಬ್ಬಂದಿಗೆ ಪರಿಣತೆ ನೀಡಲು ತರಬೇತಿ ಕೇಂದ್ರಗಳನ್ನು ತೆರೆಯಲಾಯಿತು. ಸಂಶೋಧನೆಯ ಲಾಭ ಪಡೆಯಲು ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳನ್ನು ತೆರೆಯಲಾಯಿತು.

ಈ ಎಲ್ಲಾ ಕಾರ್ಯಕ್ರಮಗಳನ್ನು ತಂದುಕೊಂಡ ನಂತರವೂ ಗ್ರಾಮೀಣ ಅಭಿವೃದ್ಧಿಯು ಔದ್ಯೋಗಿಕ ಅಭಿವೃದ್ಧಿಗೆ ಸರಿಸಮನಾಗಿ ಬರಲಿಲ್ಲ. ಇದಕ್ಕೆ ನುರಿತ, ಆಸ್ಥೆಯುಳ್ಳ ಅಧಿಕಾರಿಗಳಿಲ್ಲದ್ದು, ಸೂಕ್ತ ಕಾಲದಲ್ಲಿ ಹಣದ ನೆರವು ನೀಡದೆ ಇದ್ದದ್ದು, ಗ್ರಾಮಸ್ಥರಲ್ಲಿ ಸೂಕ್ತ ಮುಂದಾಳುತನ ಇಲ್ಲದ್ದು, ಕೃಷಿ, ಪಶುಪಾಲನೆ, ಮುಂತಾದ ರಂಗದಲ್ಲಾದ ಸಂಶೋಧನಾ ಫಲವನ್ನು ಗ್ರಾಮಸ್ಥರ ಮಟ್ಟಕ್ಕೆ ಮುಟ್ಟಿಸಲು ಆಗದೇ ಇದ್ದದ್ದು ಮುಂತಾಗಿ ಇನ್ನೂ ಅನೇಕ ಕಾರಣಗಳಿದ್ದವೆಂದು ನಂತರ ತಿಳಿಯಲಾಯಿತು. ಅಲ್ಲದೆ ಆಂಗ್ಲ ಆಳರಸರ ಸೇವೆಗೆ ಸೇರಿ, ನಂತರ ಸ್ವತಂತ್ರ ಭಾರತದ ಸೇವೆಯಲ್ಲಿ ಮುಂದುವರೆದ ಅಧಿಕಾರಿಗಳು, ಹೊಸ ಬಗೆಯ ಈ ಆಡಳಿತ ವ್ಯವಸ್ಥೆಗೆ ಹೊಂದಿಕೊಳ್ಳಲಿಲ್ಲ. ಏಕೆಂದರೆ ಆಂಗ್ಲರು ಸ್ಥಳೀಯರನ್ನು ದೂರ ದೂರ ಇಟ್ಟಂತೆ ಇವರೂ ಜನರಿಂದ ದೂರ ಉಳಿದಿದ್ದರು. ಇವರ ಆಚಾರ ವಿಚಾರ, ನಡೆನುಡಿ, ಮನೋಭಾವನೆ, ಆಡಳಿತ ವೈಖರಿ ಭಾರತೀಯವಾಗಿರದೆ ಪಾಶ್ಚಿಮಾತ್ಯರಂತಿದ್ದವು. ಪ್ರಜಾಪ್ರಭುತ್ವದ ಮಾದರಿಯಲ್ಲಿರದೆ ಇನ್ನೂ ವಸಾಹತು ಆಡಳಿತ ರೀತಿಯಲ್ಲಿದ್ದವು. ಹೀಗಾಗಿ ಗ್ರಾಮೀಣ ಸಮಾಜದ ವ್ಯವಸ್ಥೆ, ಪರಿಸರ ಮತ್ತು ಸಮಸ್ಯೆಗಳು ಅವರಿಗೆ ತಿಳಿಯದಾದವು. ಅಲ್ಲದೆ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಗ್ರಾಮೀಣ ಅಭಿವೃದ್ಧಿ ಕಾರ್ಯದಲ್ಲಿ ರಾಜಕೀಯ ಪ್ರವೇಶವಾಗಿ ಗ್ರಾಮೀಣ ಮುಂದಾಳತ್ವವು ರಾಜಕೀಯ ಚದುರಂಗದಾಟದಲ್ಲಿ ಸಿಲುಕಿಹೋಗಿದ್ದಿತು. ಇದರಿಂದ ಅಭಿವೃದ್ಧಿ ಕಾರ್ಯಗಳು ಕುಂಟಿತವಾದವು, ಸರಕಾರದ ಕಾರ್ಯಕ್ರಮಗಳಾದವು. ಅಭಿವೃದ್ಧಿ ಕಾರ್ಯಕ್ರಮಗಳು ರಾಜಕಾರಣೆಗಳನ್ನು ಮತ್ತು

ಅಧಿಕಾರಿಗಳನ್ನು ಒಲೈಸಿದ್ದಕ್ಕೆ ಮೆಚ್ಚಿ ಗ್ರಾಮಸ್ಥರಿಗೆ ನೀಡಲ್ಪಟ್ಟ ಕೊಡಿಗೆಗಳಾಗಿ ಪರಿಣಮಿಸಿದವು.

ಗ್ರಾಮೀಣ ಅಭಿವೃದ್ಧಿ ತರಲು ಇಂದು ಅನೇಕ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಇಲಾಖೆಗಳು, ಮಂಡಲಿಗಳು ಮತ್ತು ಸ್ವಯಂ ಸೇವಾ ಸಂಘ ಸಂಸ್ಥೆಗಳಿವೆ. ಇವುಗಳಲ್ಲಿ ಪರಿಣತರಾದ ಸಿಬ್ಬಂದಿಗಳು ಇದ್ದಾರೆ. ಎಲ್ಲರಿಗೂ ತಮ್ಮದೇ ಆದ ಪ್ರಚಾರ ಸುದ್ದಿ ಮಾಧ್ಯಮ ಹಾಗೂ ಸಾಧನಗಳಿವೆ. ಆದರೆ ಈ ಯಾವ ಕಾರ್ಯಕ್ರಮಗಳೂ ಮತ್ತು ಯೋಜನೆಗಳೂ ಸೂಕ್ತವಾಗಿ ಗ್ರಾಮಸ್ಥರನ್ನು ಮುಟ್ಟುತ್ತಿಲ್ಲ. ಇದಕ್ಕೆ ಈ ಮಾಹಿತಿಯನ್ನು ಗ್ರಾಮಸ್ಥರ ಮಟ್ಟಕ್ಕೆ ಒಯ್ಯುವ ಬಗೆ ಹಾಗೂ ರೀತಿಗಳು ಅವರಲ್ಲಿ ಇಲ್ಲದಿರುವುದೆ ಇದಕ್ಕೆ ಕಾರಣವಿದೆ. ಒಂದು ವಿಧದಲ್ಲಿ ಹೇಳುವುದಾದರೆ ಅವರು ಗ್ರಾಮೀಣ ಪರಿಸರವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಬೇರೆ ಬೇರೆ ಭಾಷೆ ಮತ್ತು ರಾಷ್ಟ್ರಗಳಿಂದ ಲಭ್ಯವಾದ ಅಭಿವೃದ್ಧಿ ಸಾಹಿತ್ಯವನ್ನು ಅರಗಿಸಿಕೊಂಡು ಗ್ರಾಮಸ್ಥರಿಗೆ ಅರ್ಥವಾಗುವಂತೆ ಹೇಳುವ ಶಕ್ತಿಯೂ ಅವರಲ್ಲಿಲ್ಲ. ಹೀಗಾಗಿ ಅದನ್ನು ಅವರು ಶಬ್ದಶಃ ಭಾಷಾಂತರ ಮಾಡಿ ಹೇಳುತ್ತಾ ಬಂದರು ಮತ್ತು ಇದೇ ಮಾದರಿಯಲ್ಲಿ ಅಭಿವೃದ್ಧಿ ಸಾಹಿತ್ಯ ಸೃಷ್ಟಿಸಿದರು. ಹೀಗಾಗಿ ಇಂದು ಅವರು ಕೈಗೊಂಡಿರುವ ಅನೇಕ ಕಾರ್ಯಕ್ರಮಗಳಿಗೆ ಭಾರತದ ಗ್ರಾಮೀಣ ಹಿನ್ನೆಲೆಗೆ ತಕ್ಕಂತೆ ಸಾಹಿತ್ಯವಿಲ್ಲ. ಉದಾಹರಣೆಗೆ ಗ್ರಾಮೀಣ ನೈರ್ಮಲ್ಯ ಹಾಗೂ ಆರೋಗ್ಯಕ್ಕೆ ಸಂಬಂಧಪಟ್ಟ ಸಾಹಿತ್ಯವನ್ನೇ ತೆಗೆದುಕೊಳ್ಳೋಣ. ಈ ರಂಗದಲ್ಲಿ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದ ಅನೇಕ ಸಂಸ್ಥೆಗಳ ಹಾಗೂ ವ್ಯಕ್ತಿಗಳ ಸ್ವಂತ ಅನುಭವದ ಮೇಲೆ ಸಾಹಿತ್ಯವಿದೆ. ಇದನ್ನೇ ಅನುಸರಿಸಿ ನಮ್ಮ ಆರೋಗ್ಯ ಇಲಾಖೆಯವರು ಕಾರ್ಯಪ್ರವೃತ್ತರಾದರು. ಮೂವತ್ತು ವರ್ಷಗಳ ನಂತರವೂ ಇದಕ್ಕೆ ಅಣಕದೋಪಾದಿಯಲ್ಲಿ ಗ್ರಾಮೀಣ ಸಮಾಜದಲ್ಲಿ ಅನಾರೋಗ್ಯಕರವಾದ ಸ್ಥಿತಿ ಇದೆ. ಅವರಿಗೆ ಇರಲು ಉತ್ತಮವಾದ ಮನೆ ಇಲ್ಲ, ಕುಡಿಯಲು ನೀರಿಲ್ಲ, ಉಣ್ಣಲು ಸತ್ವಪೂರ್ಣ ಹಾಗೂ ಶುಚಿಯಾದ ಆಹಾರಗಳಿಲ್ಲ ಮತ್ತು ರೋಗ ನಿವಾರಕ ವಿಧಾನಗಳು ಗ್ರಾಮಸ್ಥರಿಗೆ ಗೊತ್ತಿಲ್ಲ. ಗರ್ಭಿಣಿ, ಬಾಣಂತಿ, ಮಗು ಮುಂತಾದವರ ಆರೋಗ್ಯ ಸಮಸ್ಯೆಗಳಿವೆ. ಸಾಂಕ್ರಾಮಿಕ ಹಾಗೂ ಸೋಂಕು ರೋಗಗಳು, ವೃತ್ತಿಗೆ ಸಂಬಂಧಿಸಿದ ರೋಗಗಳು ಇಂದಿಗೂ ಮರುಕಳಿಸುತ್ತಲಿವೆ. ಈ ರಂಗದಲ್ಲಿ ಪ್ರಪಂಚದ ಅನೇಕ ಕಡೆ ನಡೆದ ಪ್ರಯೋಗಗಳ ಹಾಗೂ ನಿವಾರಣೋಪಾಯಗಳ ಫಲದ ಬಗ್ಗೆ ಸಾಹಿತ್ಯವಿದ್ದರೂ ಇದು ಇಂದಿಗೂ ನಮ್ಮ ಗ್ರಾಮಸ್ಥರಿಗೆ ಸುಲಭವಾಗಿ ಮತ್ತು ಸೂಕ್ತವಾಗಿ ಲಭ್ಯವಿಲ್ಲ.

ಆಡಳಿತ ವರ್ಗ ತನ್ನ ಸಂಖ್ಯೆಯನ್ನು ವರ್ಧಿಸಿಕೊಳ್ಳ ಬಯಸುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಆಸ್ಪತ್ರೆಗಳನ್ನು ತೆರೆದು ಹೆಚ್ಚು ಜನ ವೈದ್ಯರನ್ನು ನೇಮಿಸಿ

ಈ ಸಮಸ್ಯೆಯನ್ನು ನಿವಾರಿಸಲು ಪ್ರಯತ್ನಿಸಿತು. ಇದರಿಂದ ಕಟ್ಟಡ, ಸಿಬ್ಬಂದಿ ಖರ್ಚು ಹೆಚ್ಚಿತಲ್ಲದೆ ಮತ್ತಾವ ಅಭಿವೃದ್ಧಿಯೂ ಬರಲಿಲ್ಲ. ಏಕೆಂದರೆ ರೋಗಗಳು, ಆರೋಗ್ಯ, ನೈರ್ಮಲ್ಯ ಮತ್ತು ರೋಗ ನಿವಾರಕ ಉಪಾಯಗಳ ಬಗ್ಗೆ ಗ್ರಾಮಸ್ಥರಿಗೆ ಸೂಕ್ತವಾಗಿ ತಿಳಿಸದೇ ಇದ್ದುದೇ ಇದಕ್ಕೆ ಕಾರಣವೆಂದು ಅವರು ಮನಗಾಣಲಿಲ್ಲ. ಇದರಿಂದಾಗಿ ಅನೇಕ ಗ್ರಾಮೀಣ ಆರೋಗ್ಯ ಕಾರ್ಯಕರ್ತರ ಅನುಭವದಂತೆ, ಗ್ರಾಮೀಣ ರೋಗಿಗಳು ಪದೇ ಪದೇ ಅದೇ ಒಂದೆರಡು ರೋಗಗಳ ಚಿಕಿತ್ಸೆಗೆ ವೈದ್ಯರ ಕಡೆ ಬರುತ್ತಾರೆ. ಇದರಿಂದ ವೈದ್ಯರ ಹಾಗೂ ಗ್ರಾಮಸ್ಥರ ವೇಳೆ, ಶ್ರಮ, ಔಷಧ ಮತ್ತು ಹಣ ದಂಡವಾಗುತ್ತದೆ. ಸಾರ್ವಜನಿಕ ಆರೋಗ್ಯ ಇಲಾಖೆಯವರು ಈ ಬಗ್ಗೆ ಸಂಶೋಧನೆ ಮಾಡಿ ಹೀಗೆ ಪದೇ ಪದೇ ಬರುವ ತೊಂದರೆಗಳಾವು, ಇದಕ್ಕೆ ಕಾರಣವೇನು, ಪರಹಾರವೇನು ಎಂದು ತಿಳಿದಿದ್ದರೆ ಆರೋಗ್ಯ-ನೈರ್ಮಲ್ಯಗಳ ಬಗ್ಗೆ ಗ್ರಾಮಸ್ಥರಲ್ಲಿಯ ಅಜ್ಞಾನ ಹಾಗೂ ತಪ್ಪು ಕಲ್ಪನೆಗಳ ಬಗ್ಗೆ ತಿಳಿಯುತ್ತಿದ್ದವು. ಇಂತಹ ವಿಚಾರಗಳನ್ನು ತಿಳಿದು ಕಾರ್ಯೋನ್ಮುಖರಾಗಬೇಕಲ್ಲದೆ ಕೇವಲ ಗ್ರಾಮಸ್ಥರನ್ನು ಕಿತ್ತು ತಿನ್ನಲು ಹೆಚ್ಚು ಜನ ವೈದ್ಯಕೀಯ ಸಿಬ್ಬಂದಿಯನ್ನು ನೇಮಿಸಿದರೆ ಮತ್ತು ಸೂಕ್ತ ಔಷಧಗಳಿಲ್ಲದೆ, ಸಲಕರಣೆಗಳಿಲ್ಲದೆ ಆಸ್ಪತ್ರೆಗಳನ್ನು ತೆರೆದರೆ, ಸಮಸ್ಯೆ ಪರಿಹಾರವಾಗುವುದಿಲ್ಲ. ಗ್ರಾಮೀಣ ಭಾರತದ ಇಂತಹ ಆರೋಗ್ಯ ಸ್ಥಿತಿಯ ಬಗ್ಗೆ ಸಾಹಿತ್ಯ ಇನ್ನೂ ಮೂಡಿಬರಬೇಕಾಗಿದೆ.

ಗ್ರಾಮೀಣ ಸಮಾಜದಲ್ಲಿ ಬಡತನ ಎಲ್ಲೆಲ್ಲೂ ತಾಂಡವವಾಡುತ್ತಿದೆ. ಇದನ್ನು ತಾತ್ಕಾಲಿಕ, ನಿರಂತರ, ಕಡುಬಡತನ ಎಂದೆಲ್ಲಾ ಬಗೆ ಮಾಡಿ ವರ್ಣಿಸಲಾಗಿದೆ. ಬಡತನಕ್ಕೆ ಒಂದೆರಡು ಅಥವಾ ಇಂತಹದ್ದೇ ಕಾರಣವೆಂದು ಹೇಳ ಬರುವುದಿಲ್ಲವಾದರೂ ಗ್ರಾಮಸ್ಥರಲ್ಲಿನ ಅಜ್ಞಾನ, ಸರಕಾರದ ಅನಾದರಣೆ, ಹೊರಗಿನವರ ಶೋಷಣೆ ಮುಂತಾದವು ಮುಖ್ಯವಾದವು. ನಮ್ಮ ಸರಕಾರ ಮತ್ತು ಅನೇಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳು ಈ ಮೂರು ಪೆಡಂಭೂತಗಳನ್ನು ಹೊಡೆದೋಡಿಸಲು ಬಹು ಹಿಂದಿನಿಂದಲೂ ಪಣ ತೊಟ್ಟು ಅನೇಕ ಯೋಜನೆಗಳನ್ನು ತಂದುಕೊಂಡಿವೆ. ಆದರೂ ಗ್ರಾಮೀಣ ಸಮಾಜದಲ್ಲಿ ಬಡತನ ಎಲ್ಲೆಲ್ಲೂ ತಾಂಡವವಾಡುತ್ತಿದೆ. ಇದಕ್ಕೆ ಗ್ರಾಮಸ್ಥರು ಹೆಚ್ಚಾಗಿ ಪ್ರಕೃತಿಯನ್ನು ಅವಲಂಬಿಸಿರುವುದು, ಸರಕಾರದ ಬೇರೆ ಬೇರೆ ಇಲಾಖೆಗಳಲ್ಲಿ ಹೊಂದಾಣಿಕೆ ಇಲ್ಲದೆ ಇರುವುದು, ಗ್ರಾಮಸ್ಥರಿಗೆ ಸಕಾಲದಲ್ಲಿ ಹಣ ಮತ್ತು ತಾಂತ್ರಿಕ ನೆರವು ಸಿಗದೆ ಇರುವುದು, ರೈತರು ಬೆಳೆದ ಬೆಳೆಗೆ ಸೂಕ್ತ ಮಾರುಕಟ್ಟೆ ಮತ್ತು ಬೆಲೆ ಸಿಗದೆ ಇರುವುದು, ಬಡ್ಡಿ ಖಾತೆ ಮಾಡುವವರಿಂದ ಶೋಷಣೆ, ಹೀಗೆ ಅನೇಕ ತೊಡಕುಗಳಿವೆ. ಇವೆಲ್ಲವಕ್ಕೂ ಮುಖ್ಯ ಕಾರಣವೆಂದರೆ ಜನರಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ತಮ್ಮ ಮುಂದಾಳುಗಳ ಬಗ್ಗೆ ಇರುವ ಅಜ್ಞಾನ. ಇಂದು ಗ್ರಾಮಾಂತರ ಬಡತನದ ನಿರ್ಮೂಲನೆಗೆ ಮತ್ತು ಆರ್ಥಿಕ

ಅಭಿವೃದ್ಧಿಗೆ, ಗೃಹ ಕೈಗಾರಿಕೆ, ತೋಟಗಾರಿಕೆ, ಹೈನುಗಾರಿಕೆ, ಕುರಿ-ಕೋಳಿ ಸಾಕಾಣಿಕೆ, ನೇಕಾರಿಕೆ ಹೀಗೆ ಅನೇಕ ಕಾರ್ಯಕ್ರಮಗಳಿವೆ. ಈ ಎಲ್ಲಾ ರಂಗದಲ್ಲಿ ಅವರಿಗೆ ನೆರವಾಗಲು, ಸಹಕರಿಸಲು ಪರಿಣತಿ ಪಡೆದ ಅಧಿಕಾರಿಗಳಿದ್ದಾರೆ. ಆದರೆ ಇದು ಅವರು ಉದ್ದೇಶಿತ ಜನರನ್ನು ಮುಟ್ಟುತ್ತಿಲ್ಲ. ಕಾರಣ ಎಲ್ಲಾ ಹಂತದಲ್ಲಿಯೂ ಲಂಚಕೋರರಾದ-ಅಧಿಕಾರಿಗಳು, ಮಧ್ಯವರ್ತಿಗಳು ಶೋಷಣೆಗಾರರು ತುಂಬಿದ್ದಾರೆ. ತಮ್ಮ ಅಸಹಾಯಕ ಸ್ಥಿತಿಯಿಂದಾಗಿ ಸರಕಾರದ ನೆರವು ಪಡೆಯಲು ಗ್ರಾಮಸ್ಥರು ಮಧ್ಯವರ್ತಿಗಳ ಮೊರೆ ಹೋಗಿದ್ದಾರೆ. ಇಂತಹ ಒಂದು ಪರಿಸ್ಥಿತಿಗೆ ಈ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಾಕಷ್ಟು ಸಾಹಿತ್ಯವಿಲ್ಲದ್ದು, ಇರುವ ಸಾಹಿತ್ಯ ಸೂಕ್ತವಾಗಿಲ್ಲದಿರುವುದು ಕಾರಣವಿದೆ.

ಗ್ರಾಮೀಣ ಕುಶಲ ಕಲೆಗಳ ಆಧುನೀಕರಣದ ಬಗ್ಗೆ ಹೊಸ ಬಗೆಯ ಲಾಭದಾಯಕ ವಿಧಾನಗಳು ಹಾಗೂ ವಸ್ತುಗಳ ಬಗ್ಗೆ ಅನೇಕ ಕುಶಲ ಕಲಾ ವಸ್ತುಗಳ ತಯಾರಿಕೆಯ ತರಬೇತಿಗೆ ಸರಕಾರ ಯೋಜನೆ ಹಾಕಿಕೊಂಡಿದೆ ಮತ್ತು ತರಬೇತಿ ಕೇಂದ್ರಗಳನ್ನು ತೆರೆದಿದೆ. ಲಕ್ನೋದ ತಾಂತ್ರಿಕ ಶಾಲೆ, ನಮ್ಮ ರಾಜ್ಯದಲ್ಲೇ ಇರುವ ಖಾನಾಪುರದ ಕುಂಬಾರಿಕೆ ತರಬೇತಿ ಕೇಂದ್ರ, ಬೆಳಗಾಂನ ಚರ್ಮಗಾರಿಕೆ ಕೇಂದ್ರ, ಹೀಗೆ ಇನ್ನೂ ಅನೇಕ ಕೇಂದ್ರಗಳಲ್ಲಿ ಬಡಿಗಾರಿಕೆ, ಕಮ್ಮಾರಿಕೆ, ನೇಕಾರಿಕೆ ಮುಂತಾದ ವೃತ್ತಿಗಳಲ್ಲಿ ತರಬೇತಿ ನೀಡಲು ಅನುಕೂಲತೆಗಳಿವೆ. ಸರಕಾರದಿಂದ ಹಣದ ನೆರವೂ ಇದೆ. ಗ್ರಾಮೀಣ ಕುಶಲ ಕೈಗಾರಿಕೆಗಳ ಬಗ್ಗೆ, ಅವುಗಳಿಗೆ ಸಿಗುವ ಧನ ಸಹಾಯ, ತಾಂತ್ರಿಕ ನೆರವು, ಕಚ್ಚಾ ವಸ್ತುಗಳು, ಸಿದ್ಧ ವಸ್ತುಗಳಿಗೆ ಮಾರುಕಟ್ಟೆ, ಸಹಕಾರಿ ಸಂಘಗಳು ಹೀಗೆ ಈ ಕೈಗಾರಿಕೆಗಳಿಗೆ ಬೇಕಾಗುವ ಸಕಲ ಅನುಕೂಲತೆಗಳನ್ನು ನೀಡಲು ಸರಕಾರದಲ್ಲಿ ಹಣ ಮತ್ತು ಯೋಜನೆಗಳಿವೆ. ಇದಕ್ಕೆ ಬೇಕಾದ ಮಾಹಿತಿ ಸಾಹ್ಯಿವೂ ಇದೆ. ಆದರೂ ಗ್ರಾಮೀಣ ಕುಶಲಕಲಾ ಗುಂಪುಗಳು ಕೆಲಸವಿಲ್ಲದೆ ಬಡತನದಲ್ಲಿ ಬೇಯುತ್ತಿದ್ದಾರೆ. ಇವರು ತಯಾರಿಸುವ ಅನೇಕ ವಸ್ತುಗಳಿಗೆ ಗ್ರಾಮದಲ್ಲೇ ಬೇಡಿಕೆ ಇದೆ. ಆದರೆ ಇವರನ್ನು ಬಳಸಿಕೊಳ್ಳುವ ಅಧಿಕಾರವರ್ಗ ಹಾಗೂ ಸಾಹಿತ್ಯ ಇಲ್ಲ. ಪ್ರಪಂಚದಾದ್ಯಂತ ಅನಾದಿಕಾಲದಿಂದಲೂ ಆದಿವಾಸಿಗಳು, ಗ್ರಾಮಸ್ಥರು ತಮಗೆ ಬೇಕಾದ ನೀರೆತ್ತುವ ಸಾಧನ, ಚಕ್ಕಡಿ, ಬಲೆ, ತರಕಾರಿ ಸಂಗ್ರಹಣೆಗೆ, ನೀರು ಶೋಧಿಸಲು ಸ್ಥಳೀಯವೇ ಆದ ಕಡಿಮೆ ಅಥವಾ ಯಾವ ಖರ್ಚೂ ಇಲ್ಲದ, ಅನೇಕ ಉಪಯುಕ್ತ ತಂತ್ರಗಳನ್ನು ಪಡೆದಿದ್ದಾರೆ. ಅವುಗಳ ತಯಾರಿಕೆಗೆ ಮತ್ತು ರಿಪೇರಿಗೆ ಸ್ಥಳೀಯ ಪರಿಣತೆಯನ್ನು ಬಳಸಬಹುದಾಗಿದೆ. ಇದು ಸ್ಥಳೀಯ ಕುಶಲಕರ್ಮಿಗಳಿಗೆ ಆದಾಯ ತರುತ್ತದೆ. ಆದರೆ ಇಂದು ಈ ಎಲ್ಲಾ ಕೈಗಾರಿಕೆಗಳು ನಶಿಸಿ ಹೋಗಿವೆ. ಇವುಗಳ ಜೀರ್ಣೋದ್ಧಾರ ಮಾಡಲು ಬೇಕಾಗುವ ಸೂಕ್ತ ಮಾಹಿತಿ ಸಾಹಿತ್ಯ ಇಲ್ಲದಾಗಿದೆ. ಕೆಲವೊಂದು ಅಂತರರಾಷ್ಟ್ರೀಯ ಮಟ್ಟದ ಅಭಿವೃದ್ಧಿ ಸಂಸ್ಥೆಗಳು ಜಗತ್ತಿನ ಅನೇಕ ದೇಶಗಳಲ್ಲಿ ಫಲದಾಯಕವಾಗಿ ಬಳಸಿರುವ ಇಂತಹ

5

ಕೆಲವು ತಂತ್ರಗಳ, ಅವುಗಳ ಉಪಯುಕ್ತತೆ, ಸಾಧ್ಯತೆಗಳ ಬಗ್ಗೆ ಪ್ರಕಟಿಸಿದ್ದಾರೆ. ಈ ಸಾಹಿತ್ಯವನ್ನು ಕನ್ನಡಕ್ಕೆ ಭಾಷಾಂತರಿಸಿ ಗ್ರಾಮಸ್ಥರಿಗೆ ಸಿಗುವಂತೆ ಮಾಡುವುದೂ ಸೂಕ್ತವಿದೆ.

ನಮ್ಮ ಕೆಲವು ಅಧಿಕಾರಿಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ಆಚರಣೆಗೆ ತರುವಲ್ಲಿ ಬರುವ ಅನೇಕ ಸಾಮಾಜಿಕ-ಸಾಂಸ್ಕೃತಿಕ ಸಮಸ್ಯೆಗಳಿಗೆ ನಿವಾರಣೋಪಾಯಗಳು ತಿಳಿದಿರುವುದಿಲ್ಲ. ಇವರಲ್ಲಿ ಅನೇಕರು ಗ್ರಾಮೀಣ ಹಿನ್ನೆಲೆಯಿಂದ ಬಂದಿದ್ದರೂ ತಮ್ಮ ಮನೆತನ, ಜಾತಿ ಅಥವಾ ಆರ್ಥಿಕ ಪರಿಸರದಿಂದಾಗಿ ಗ್ರಾಮಾಂತರ ಸಮಾಜದ ಎಲ್ಲಾ ಅಂಗ-ಅಂಶಗಳನ್ನು ಅವರು ತಿಳಿದಿರುವುದಿಲ್ಲ. ಹಳ್ಳಿಯಲ್ಲಿದ್ದರೂ ಹೀಗೆ ನಗರ ಸಂಸ್ಕೃತಿಯನ್ನು ಬೆಳೆಸಿಕೊಂಡು ಜೀವನ ಮಾಡಿರುತ್ತಾರೆ ಮತ್ತು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮತ್ತು ನೌಕರಿ ಮಾಡಲು ಅಲ್ಲಿಂದ ಹೊರಬಂದಿರುತ್ತಾರೆ. ಬಡತನ, ಮೌಢ್ಯತನ, ಶೋಷಣೆ, ಅನಾರೋಗ್ಯ, ಅಸಹಾಯಕತೆ ಮುಂತಾದ ಸಮಸ್ಯೆಗಳನ್ನು ಅವರ ತಂದೆ-ತಾಯಿಗಳು, ಬಂಧುಬಳಗದವರು ಅನುಭವಿಸಿರಬಹುದು, ಸ್ವತಃ ಇವರಲ್ಲ. ಹೀಗಾಗಿ ಅಧಿಕಾರಗಳಿಗೆ ಗ್ರಾಮೀಣ ಸಮಸ್ಯೆಗಳ ಅನುಭವ ಇರುವುದಿಲ್ಲ. ಆದ್ದರಿಂದ ಇಂತಹ ಸಮಸ್ಯೆಗೆ ಅವರು ತಮ್ಮ ಕಲಿತ ಬುದ್ಧಿಯಿಂದ ಗ್ರಾಮೀಣ ಸಮಸ್ಯೆಗಳಿಗೆ ನಿವಾರಣೋಪಾಯ ನೀಡಬಲ್ಲರೇ ವಿನಃ ಸ್ವಂತ ಅನುಭವದಿಂದಲ್ಲ. ಇದರಿಂದ ಸಮಸ್ಯೆಗೆ ಅವರು ಸೂಕ್ತ ಪರಿಹಾರ ನೀಡಲಾರರು. ಏಕೆಂದರೆ ಹಸಿವು, ಅಸಹಾಯಕತೆ, ಬಡತನ, ಶೋಷಣೆ ಮುಂತಾದವನ್ನು ಸ್ವತಃ ಅನುಭವಿಸಿದರೆ ಮಾತ್ರ ಅದರ ನೋವು ತಿಳಿಯುತ್ತದೆ. ಈ ತಿಳುವಳಿಕೆ ಹೊಂದಿದ ಅಧಿಕಾರಿಗಳಿಂದ ಇಂತಹ ಒಂದು ಸಾಹಿತ್ಯ ಇನ್ನೂ ಮೂಡಿಬರಬೇಕಾಗಿದೆ.

ಉತ್ತಮವಾದ ಅಭಿವೃದ್ಧಿ ಸಾಹಿತ್ಯ ಲಭ್ಯವಿಲ್ಲದೆ ಇದ್ದುದಕ್ಕೆ, ಅದನ್ನು ತಿಳಿದುಕೊಳ್ಳದಿದ್ದುದಕ್ಕೆ ಅಧಿಕಾರಗಳನ್ನು, ಕಾರ್ಯಕರ್ತರನ್ನು ಮತ್ತು ಫಲಾನುಭವಿಗಳನ್ನು ಮಾತ್ರ ಅಳಿದರೆ ತಪ್ಪಾಗುತ್ತದೆ. ಏಕೆಂದರೆ ಅವರಿಗೆ ತಮ್ಮದೇ ನೂರೆಂಟು ಆಡಳಿತ ಅಥವಾ ವೈಯಕ್ತಿಕ ಸಮಸ್ಯೆಗಳಿರುತ್ತವೆ. ಈ ಜಂಜಾಟಕ್ಕೆ ಸಿಕ್ಕು ತರಗಲೆಗಳಂತಾಗಿರುವ ಇವರಿಗೆ ಸೂಕ್ತ ಸಾಹಿತ್ಯಾನ್ವೇಷಣೆಗೆ ಕಾಲ ಮತ್ತು ಆಕಾಂಕ್ಷೆ ಇಲ್ಲದಿರುವುದು ಸಹಜ. ಇಂತಹ ಸಾಹಿತ್ಯ ಸೃಷ್ಟಿಗೆ, ಪ್ರಚಾರಕ್ಕೆ ಮತ್ತು ಪ್ರಕಟಣೆಗೆಂದೇ ಅಸ್ತಿತ್ವಕ್ಕೆ ಬಂದಿರುವ ಸಂಸ್ಥೆಗಳು ಮತ್ತು ಅದರಲ್ಲಿಯ ಅಧಿಕಾರಿಗಳು ಈ ಕೆಲಸ ಮಾಡಬೇಕು.

ಇಂದು ಕೃಷಿ ಹಾಗೂ ಅಭಿವೃದ್ಧಿ ಬಗ್ಗೆ ಕಲಿಸಲು ತೆರೆಯಲಾದ ವಿದ್ಯಾಲಯಗಳು ತಮ್ಮ ಮಾಹಿತಿ ವಿಸ್ತರಣ ಯೋಜನೆಯ ಅಂಗವಾಗಿ ತಮ್ಮ ಪರಿಣತೆಯನ್ನು, ಜ್ಞಾನವನ್ನು ತಮ್ಮ "ಸಂಶೋಧನಾಲಯದಿಂದ ಹೊಲಕ್ಕೆ" ಎಂಬ ಕಾರ್ಯಕ್ರಮದಡಿಯಲ್ಲಿ, ಸಮಾಜಕ್ಕೆ ನೀಡುವ ವ್ಯವಸ್ಥೆ ಮಾಡಿವೆ. ಪರಭಾಷೆಯಿಂದ ಅನೇಕ ಉಪಯುಕ್ತ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಕಾರ್ಯವನ್ನು ಹಮ್ಮಿಕೊಂಡು ಸಾವಿರಾರು ಹೊತ್ತಿಗೆಗಳನ್ನು

ಹೊರತಂದಿದ್ದಾರೆ. ಆದರೆ ಅವರು ಪ್ರಕಟಿಸಿರುವ ಪುಸ್ತಕಗಳ ಪಟ್ಟಿಯನ್ನು ನೋಡಿದಾಗ ಇವುಗಳಲ್ಲಿ ಅನೇಕ ಪುಸ್ತಕಗಳು ಗ್ರಾಮೀಣ ಅಭಿವೃದ್ಧಿಗೆ ನೇರವಾಗಿ ಸಂಬಂಧಿಸಿಲ್ಲ ಎಂಬ ಅಂಶ ತಿಳಿಯುತ್ತದೆ. ಈ ಪುಸ್ತಕಗಳೂ ಗ್ರಾಮೀಣ ಓದುಗರಿಗೆ ಸುಲಭವಾಗಿ ಸಿಗುವುದಿಲ್ಲ. ನಮ್ಮ ಅನೇಕ ವಿಶ್ವವಿದ್ಯಾಲಯಗಳು ಪರಭಾಷೆಗಳಿಂದ ವ್ಯವಸಾಯ, ಪಶುಪಾಲನೆ, ಸಾಮಾಜಿಕ ಅಭಿವೃದ್ಧಿ ಮುಂತಾದ ವಿಷಯಗಳ ಮೇಲಿನ ಅನೇಕ ಉಪಯುಕ್ತ ಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರಿಸಿವೆ ಮತ್ತು ಅನೇಕ ಪುಸ್ತಕಗಳನ್ನು, ಕಿರಿಹೊತ್ತಿಗೆಗಳನ್ನು ತಾವೇ ಪ್ರಕಟಿಸಿವೆ. ಆದರೆ ಈ ಪುಸ್ತಕಗಳನ್ನು ಕೊಳ್ಳುವುದು, ಓದುವುದು ಕೂಡ ಕಷ್ಟದ ಕೆಲಸವಾಗಿದೆ. ಇತ್ತೀಚೆಗೆ ನಾನು ಕಾರ್ಯಾಧ್ಯಕ್ಷನಿದ್ದ ಭಾರತೀಯ ಅಭಿವೃದ್ಧಿ ಸೇವಾ ಸಂಸ್ಥೆಯ ಪುಸ್ತಕಾಲಯಕ್ಕೆ ಈ ಎಲ್ಲಾ ಪುಸ್ತಕಗಳ ಎರಡೆರಡು ಪ್ರತಿಗಳನ್ನು ಕೊಳ್ಳಲು ನಾವು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಇಲ್ಲಿ ನನ್ನ ಅಭಿಪ್ರಾಯವಿಷ್ಟೇ. ಸಂಸ್ಥೆಗಳು ಕಷ್ಟಪಟ್ಟು ಪುಸ್ತಕಗಳನ್ನು ಬರೆಸಿದರೆ, ಪ್ರಕಟಿಸಿದರೆ ಮಾತ್ರ ಸಾಲದು, ಇವು ಸೂಕ್ತ ಪುಸ್ತಕಾಲಯಗಳನ್ನು, ಓದುಗರನ್ನು ಅದರಲ್ಲೂ ಸಕಾಲದಲ್ಲಿ ಮುಟ್ಟುವಂತಾಗಬೇಕು. ಹೀಗೆ ಪುಸ್ತಕಗಳನ್ನು ಅವುಗಳ ಅವಶ್ಯಕತೆ ಇರುವ ಓದುಗರಿಗೆ ತಲುಪಿಸುವುದೂ ಅಭಿವೃದ್ಧಿ ಕಾರ್ಯದ ಒಂದು ಮುಖ್ಯಕಾರ್ಯ ಎಂದೂ ಅವರು ತಿಳಿಯಬೇಕು.

ಗ್ರಾಮಸ್ಥರಲ್ಲಿಯ ಜಡತೆ ಮತ್ತು ಅದನ್ನು ಹೋಗಲಾಡಿಸಲು ಇರುವ ಸಾಹಿತ್ಯದ ಬಗ್ಗೆ ತಿಳಿಯುವ. ಗ್ರಾಮಾಂತರ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಅನೇಕರು ಹೇಳುವಂತೆ ಗ್ರಾಮಸ್ಥರಲ್ಲಿ ಅನಕ್ಷರತೆ, ಹೆಡ್ಡತನ, ಜಡತೆ, ಮುಂದಾಲೋಚನೆ ಇಲ್ಲದಿರುವುದು, ವೈರತ್ವ ಮತ್ತು ಸಂಕುಚಿತ ಭಾವನೆ, ಆಲಸ್ಯ ಇತ್ಯಾದಿ ತುಂಬಿರುತ್ತವೆ. ಹೊರನೋಟಕ್ಕೆ ಈ ಎಲ್ಲಾ ಸಂಗತಿಗಳು ಸತ್ಯವಾಗಿ ಕಂಡರೂ ಇದು ನಿಜವಲ್ಲ. ಅನೇಕ ನೂರು ವರ್ಷಗಳ ಕಾಲ ಹೊರಗಿನವರ ದುರಾಡಳಿತ, ಶೋಷಣೆ, ಅನಾದರಣೆ, ದಬ್ಬಾಳಿಕೆಗಳಿಗೆ ಗುರಿಯಾದರೂ ಇಂದಿಗೂ ಭಾರತದ ಗ್ರಾಮೀಣ ಸಮಾಜ ಉಳಿದುಕೊಂಡು ಬಂದಿರುವುದೇ ಇದಕ್ಕೆ ಸಾಕ್ಷಿ. ಆದರೆ ಹಿಂದಕ್ಕೆ ಗ್ರಾಮಸ್ಥರಲ್ಲಿದ್ದ ಕೆಲವು ಅಂತರ್‌ಸತ್ವಗಳು, ಮೌಲ್ಯಗಳು ಇಂದು ಇಲ್ಲವಾಗಿವೆ ಅಥವಾ ಅರ್ಥಹೀನವಾಗಿವೆ. ಇದಕ್ಕೆ ಇಂದು ಅವರು ಇರುವ ಪರಿಸ್ಥಿತಿಯೇ ಕಾರಣ. ಸದಾ ಹೊರಗಿನವರ ದಬ್ಬಾಳಿಕೆ, ಶೋಷಣೆಗೆ ಸಿಕ್ಕ ಗ್ರಾಮಸ್ಥರು ಶಂಖದ ಹುಳದಂತಾಗಿದ್ದಾರೆ. ಹೊರಗಿನಿಂದ ಆಳಲು ಅಥವಾ ಅಭಿವೃದ್ಧಿಪಡಿಸಲು ಬಂದವರೆಲ್ಲರೂ ಅವರ ಪದ್ಧತಿಗಳನ್ನು, ಆಚಾರ-ವಿಚಾರಗಳನ್ನು, ಸಾಮಾಜಿಕ ಮೌಲ್ಯಗಳನ್ನು ಅರ್ಥ ಮಾಡಿಕೊಳ್ಳದೆ ಇವು ಕೆಟ್ಟವು, ಅರ್ಥಹೀನವಾದವು ಎಂದು ಹೇಳಿ, ಅವುಗಳನ್ನು ಕಿತ್ತೊಗೆಯಲು ಪ್ರಯತ್ನಿಸಿದರು. ಹೀಗಾಗಿ ಗ್ರಾಮಸ್ಥರು ತಮ್ಮ ಈ ಮೌಲ್ಯಗಳಿಗೆ ಇನ್ನೂ ಗಟ್ಟಿಯಾಗಿ ತಬ್ಬಿಕೊಳ್ಳುವಂತಾಗಿದೆ. ಅಲ್ಲದೆ ಸದಾ ಅಭಾವ ಪರಿಸ್ಥಿತಿಯಲ್ಲಿರುವ ಗ್ರಾಮಸ್ಥರು ಬದುಕು-ಸಾವಿನೊಡನೆ ನಿರಂತರ

ಹೋರಾಟ ನಡೆಸಿರುತ್ತಾರೆ. ಪರಿಸ್ಥಿತಿ ಹೀಗಿರುವಲ್ಲಿ ಹೊರಗಿನಿಂದ ಬಂದವರು ಇವರನ್ನು, ಪರಿಸ್ಥಿತಿಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಅವರ ಈ ಪೂರ್ವ ಪದ್ಧತಿಗಳನ್ನು ಬಿಡುವಂತೆ ಪ್ರಚಾರ ಮಾಡುವುದು ಒಂದು ರೀತಿಯ ದಬ್ಬಾಳಿಕೆ ಅಥವಾ ಶೋಷಣೆ. ಏಕೆಂದರೆ ಹೊಸದೆನ್ನುವುದನ್ನು ಪಡೆಯಲು ಹಳೆಯದೆನ್ನುವುದನ್ನು ಕೈಬಿಡಬೇಕಾಗುತ್ತದೆ. ಫಲಾನುಭವಿಗಳಿಗೆ ತಮ್ಮ ಕಾರ್ಯಕ್ರಮದ ಉದ್ದೇಶಗಳನ್ನು ಸೂಕ್ತವಾಗಿ ತಿಳಿಯ ಹೇಳದಿದ್ದರೆ ಇತರೆ ಯಾರೇ ಹೊರಗಿನ ಆಡಳಿತಗಾರರಂತೆ ಈ ಅಭಿವೃದ್ಧಿ ಕಾರ್ಯಕರ್ತರೂ ತಮ್ಮದೆನ್ನುವುದನ್ನು ಕಿತ್ತುಕೊಳ್ಳಲು ಬಂದಿದ್ದಾರೆ ಎಂಬ ತಪ್ಪು ಭಾವನೆ ಅವರಲ್ಲಿ ಬರುತ್ತದೆ.

ಗ್ರಾಮಸ್ಥರಲ್ಲಿ ಸಹಕಾರ, ಉಳಿತಾಯ, ವಿಶಾಲ ಭಾವನೆ, ಹೊಸದನ್ನು ಪಡೆಯಬೇಕೆಂಬ ಆಸೆ, ತಮ್ಮ ಜೀವನ ಮಟ್ಟವನ್ನು ಉತ್ತಮ ಪಡಿಸಿಕೊಳ್ಳಬೇಕು ಎಂಬ ಆಕಾಂಕ್ಷೆಗಳು ಇಲ್ಲವೆಂಬುದೂ ಸುಳ್ಳು. ಅನಾದಿಕಾಲದಿಂದಲೂ ಗ್ರಾಮಸ್ಥರು ತಮ್ಮ ಊರಲ್ಲಿಯ ಬಾವಿ, ಕೆರೆ-ಕಟ್ಟೆಗಳನ್ನು, ರಸ್ತೆಗಳನ್ನು, ಮನೆಯಂಗಳವನ್ನು ಸ್ವಚ್ಛವಾಗಿಟ್ಟಿದ್ದಾರೆ, ಜಗಳಗಳನ್ನು, ತಂಟೆಗಳನ್ನು ಪರಿಹಾರ ಮಾಡುತ್ತಾ ಬಂದಿದ್ದಾರೆ, ಹೊಸ ಹೊಸ ಗುಡಿ, ಶಾಲೆಗಳನ್ನು ಮುಂತಾದ ಸಾರ್ವಜನಿಕ ಕಟ್ಟಡಗಳನ್ನು ರಸ್ತೆಗಳನ್ನು ಕಟ್ಟಿಕೊಂಡಿದ್ದಾರೆ. ಗ್ರಾಮಸ್ಥರಲ್ಲಿಯ ಈ ಸಹಕಾರ ಭಾವನೆಯ ಮೂಲವೇನು ಮತ್ತು ಆಧಾರಗಳೇನು ಎಂದು ಅಭಿವೃದ್ಧಿ ಕಾರ್ಯಕರ್ತರು ತಿಳಿದು, ತಾವು ತರಬಯಸುವ ಅಭಿವೃದ್ಧಿ ಕಾರ್ಯದಲ್ಲಿ ಅದನ್ನು ಹೇಗೆ ಬಳಸಲು ಸಾಧ್ಯವೆಂದು ಅವರು ಚಿಂತಿಸದೆ ತಮ್ಮ ಕಾರ್ಯಸಾಧನೆ ಆಗದೇ ಹೋದುದಕ್ಕೆ ಗ್ರಾಮಸ್ಥರಲ್ಲಿ ವಿಶಾಲ ಮತ್ತು ಸಹಕಾರ ಭಾವನೆಗಳೇ ಇಲ್ಲ ಎನ್ನುವುದು ತಪ್ಪಾಗುತ್ತದೆ.

ಉದಾಹರಣೆಗೆ ಗ್ರಾಮಸ್ಥರು ನಮ್ಮಂತೆ ಬ್ಯಾಂಕಿನಲ್ಲಿ ಖಾತೆ ತೆಗೆದು ನಗದು ರೂಪದಲ್ಲಿ ಹಣ ಉಳಿತಾಯ ಮಾಡಿರಲಿಕ್ಕಿಲ್ಲ. ಆದರೆ ಬಂಗಾರದ ಒಡವೆ, ವ್ಯವಸಾಯದ ಭೂಮಿ, ಸಾಕು ಪ್ರಾಣಿಗಳನ್ನು ಸಾಕುವುದು, ಬಂಧು-ಬಳಗದವರಿಗೆ ಕೈಗಡ, ಮುಯ್ಯಿ ನೀಡುವುದು ಹಾಗೂ ವಿವಾಹ, ಶವಸಂಸ್ಕಾರ, ಹಬ್ಬ ಮುಂತಾದ ಆಚರಣೆಗಳ ಸಂದರ್ಭದಲ್ಲಿ ತಮ್ಮ ಪರಿಣತೆಗೆ ತಕ್ಕಂತ ಕೆಲಸ ವಹಿಸಿಕೊಂಡು ಮಾಡುವುದು ಮುಂತಾದವುಗಳೇ ಅವರ ಉಳಿತಾಯ ಯೋಜನೆಗಳು. ಹೇಗೆಂದರೆ ಇವರ ಮನೆಯಲ್ಲಿ ವಿಧಿಕಾರ್ಯ ನಡೆದಾಗ ಇವರಿಂದ ನೆರವು ಪಡೆದವರು ಹಿಂತಿರುಗಿಸುತ್ತಾರೆ. ಕುರಿ, ಮೇಕೆ, ಕೋಳಿ ಮುಂತಾದ ಪ್ರಾಣಿಗಳನ್ನು ಬೆಳೆಸಿ ಅವಶ್ಯಕತೆ ಬಿದ್ದಾಗ, ಅವುಗಳನ್ನು ಮಾರುವುದರಿಂದಲೂ ಅವರಿಗೆ ಹಣ ಬರುತ್ತದೆ. ಆದರೆ ಅವರ ಈ ಉಳಿತಾಯಗಳು ಹಣದ ರೂಪದಲ್ಲಿ, ಬ್ಯಾಂಕ್ ಖಾತೆಯಲ್ಲಿ ಇಲ್ಲದಿರುವುದರಿಂದ, ಈ ಹಣ ಅವರೆಣಿಸಿದಂತೆ ವ್ಯವಹಾರ ಮಾಡಲು ಅವರಿಗೆ ಸಿಗುವುದಿಲ್ಲವಾದ್ದರಿಂದ, ಇವು ಉಳಿತಾಯಗಳೇ ಅಲ್ಲ, ಇವರಲ್ಲಿ ಮಿತವ್ಯಯದ, ಆಪದ್ದನ

ಇಡುವ ಮನೋಭಾವನೆಯೇ ಇಲ್ಲವೆಂದು ತಪ್ಪಾಗಿ ತಿಳಿದಿದ್ದಾರೆ. ಜೊತೆಗೆ ಗ್ರಾಮಸ್ಥರು ಸರಕಾರಿ ಕಛೇರಿಗೆ ಯಾವುದಾದರೂ ಕೆಲಸಕ್ಕೆ ಬಂದರೆ ಇಂತಹ ಖಾತೆಯೊಂದನ್ನು ತೆಗೆಯುವಂತೆ ಅಥವಾ ಉಳಿತಾಯದ ಪತ್ರಗಳನ್ನು ಕೊಳ್ಳುವಂತೆ ಬಲವಂತ ಮಾಡುತ್ತಾರೆ. ಹೀಗೆ ತೆಗೆದ ಖಾತೆಯ ಸಂಖ್ಯೆ ಅಥವಾ ಪತ್ರ ಕಳೆದುಕೊಂಡಿರುವುದರಿಂದ ಈ ಹಣವನ್ನು ಪಡೆಯಲಾಗದೆ ಅನೇಕರು ತೊಂದರೆಪಡುತ್ತಿದ್ದಾರೆ. ಹೀಗೆ ಗ್ರಾಮಸ್ಥರು ಯಾವ ಯಾವ ರೂಪದಲ್ಲಿ ಮತ್ತು ಯಾವ ಉದ್ದೇಶಕ್ಕೆ ಉಳಿತಾಯ ಮಾಡುತ್ತಾರೆ ಎನ್ನುವುದನ್ನು ಹೇಳುವ ಸಾಹಿತ್ಯ ಬರಬೇಕಾಗಿದೆ.

ಇದೇ ರೀತಿ ಗ್ರಾಮಸ್ಥರು ಸಂಕುಚಿತ ಮನೋಭಾವನೆಯವರಲ್ಲ ಎಂದು ತೋರಿಸಲೂ ಹೆಚ್ಚು ಸಾಹಿತ್ಯವಿಲ್ಲ. ಗ್ರಾಮಾಂತರ ವೃತ್ತಿಗಳಾದ ವ್ಯವಸಾಯ, ಪಶುಪಾಲನೆ ಮುಂತಾದವು ಪ್ರಕೃತಿಯ ಮೇಲೆ ಅವಲಂಬಿಸಿದವುಗಳು. ನೆಲ ಉಳುವುದು, ಬಿತ್ತನೆ, ಕೊಯ್ಲು ಮುಂತಾದವನ್ನು ಸಕಾಲದಲ್ಲಿ ಮಾಡಲು ಗ್ರಾಮಸ್ಥರಲ್ಲಿ ಸಂಕುಚಿತ ಭಾವನೆ ಇದ್ದರೆ ಸಾಧ್ಯವಿಲ್ಲ. ಬೆಂಕಿ ಆಕಸ್ಮಿಕ, ಅಪಘಾತ ಮುಂತಾದವು ಸಂಭವಿಸಿದಾಗ ಎಲ್ಲರೂ ತೊಂದರೆಗೀಡಾದವರ ನೆರವಿಗೆ ಧಾವಿಸುವುದನ್ನು ನೋಡುತ್ತೇವೆ. ತಮ್ಮಲ್ಲಿನ ಈ ವಿಶಾಲ ಭಾವನೆಯಿಂದಲೇ ಅವರು ಕೆರೆ, ಕಟ್ಟೆ ಕಾಲುವೆಯ ನೀರನ್ನು ಹಂಚಿಕೊಳ್ಳುತ್ತಾರೆ. ಅಲ್ಲದೆ ಸರಕಾರ ತಂದ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಅವರು ಸಕ್ರಿಯವಾಗಿ ಭಾಗವಹಿಸುತ್ತಾರೆ. ಇವೆಲ್ಲವೂ ಅವರಲ್ಲಿನ ವಿಶಾಲ ಹಾಗೂ ಸಹಕಾರ ಭಾವನೆಯ ಕುರುಹುಗಳು. ಈ ಬಗ್ಗೆಯೂ ಹೆಚ್ಚು ಹೆಚ್ಚು ಸಾಹಿತ್ಯ ಹೊರ ಬರಬೇಕಾಗಿದೆ.

ಗ್ರಾಮಸ್ಥರು ಬದಲಾವಣೆಯನ್ನು, ಹೊಸತನ್ನು ಸ್ವಾಗತಿಸುವ ಮನೋಭಾವನೆ ಹೊಂದಿದ್ದಾರೆ ಎಂಬ ಬಗ್ಗೆಯೂ ಸಾಹಿತ್ಯ ಸಾಕಷ್ಟು ಇಲ್ಲ. ಅನಾದಿಕಾಲದಿಂದಲೂ ಗ್ರಾಮಸ್ಥರು ತಮ್ಮ ಸಮಸ್ಯೆಗಳ ನಿವಾರಣೆಗೆ, ಪರಿಹಾರ ರೂಪದಲ್ಲಿ ಹೊಸದೆನ್ನುವುದನ್ನು ಸ್ವಾಗತಿಸುತ್ತಾ ಬಂದಿದ್ದಾರೆ. ಆರೋಗ್ಯ, ನೈರ್ಮಲತೆಯ ದೃಷ್ಟಿಯಿಂದ ಗ್ರಾಮ ನಿವಾಸ ಸ್ಥಳಗಳನ್ನು ಅವಶ್ಯಕವೆನಿಸಿದಾಗ, ಬದಲಿಸಿದ್ದಾರೆ. ಹಳೆಯ ವ್ಯವಸಾಯ ಪದ್ಧತಿಗಳನ್ನು ಬಿಟ್ಟು ಆಧುನಿಕ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದಾರೆ. ಸಾವೆ, ನವಣೆ, ಸಜ್ಜೆ ಮುಂತಾದ ಸಾಂಪ್ರದಾಯಕ ಬೆಳೆಗಳನ್ನು ಬಿಟ್ಟು ಹೆಚ್ಚು ಇಳುವರಿಯ, ಮಿಶ್ರ ತಳಿಯ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದ್ದಾರೆ. ಆಹಾರ ಧಾನ್ಯ ಬಿಟ್ಟು ಹಣದ ಬೆಳೆಗಳಾದ ಎಣ್ಣೆಕಾಳುಗಳು, ತಂಬಾಕು, ಕಬ್ಬು, ಹತ್ತಿ ಮುಂತಾದವನ್ನು ಬೆಳೆಯಲು ಪ್ರಾರಂಭಿಸಿದ್ದಾರೆ. ಸಂಪ್ರದಾಯಕವಾಗಿ ಬಂದ ಕುಲವೃತ್ತಿಗಳಲ್ಲಿ ಬದಲಾವಣೆಗಳನ್ನು ತಂದುಕೊಂಡು ತಮ್ಮ ಆದಾಯವನ್ನು ಹೆಚ್ಚಿಸಿಕೊಂಡಿದ್ದಾರೆ. ಅನೇಕರು ತಮ್ಮ ಹಳೆಯ ವೃತ್ತಿಗಳನ್ನು ಬಿಟ್ಟು ಹೊಸ ಹೊಸ ಜೀವನ ಮಾರ್ಗಗಳನ್ನು ಅನುಸರಿಸುತ್ತಿದ್ದಾರೆ. ಹೀಗೆ ಪ್ರತಿಯೊಂದು ಬಗೆಯ ಬೆಳೆ, ಬೇಸಾಯ ಪದ್ಧತಿ

ಕೈ ಬಿಟ್ಟಾಗಲೂ ಗ್ರಾಮಸ್ಥರು ತಮ್ಮೊಳಗಿನ, ತಮ್ಮ ಹಾಗೂ ನೆರೆಹೊರೆಯವರ, ತಮ್ಮ ಹಾಗೂ ಪ್ರಕೃತಿ, ದೇವರು ನಡುವಣ ಸಂಬಂಧಗಳನ್ನು, ಮೌಲ್ಯಗಳನ್ನು ಬದಲಾಯಿಸಿಕೊಂಡಿದ್ದಾರೆ. ಈ ಯಾವ ಬದಲಾದ ಮೌಲ್ಯಗಳ ಬಗ್ಗೆಯೂ ವಿವರವಾದ ಸಾಹಿತ್ಯ ಬಂದಿಲ್ಲವೆನ್ನುವುದಕ್ಕೆ ಇಂದಿಗೂ ನಾವು ಗ್ರಾಮಸ್ಥರು ಸಂಪ್ರದಾಯ ಶರಣರೆನ್ನುತ್ತಾ ಬಂದಿರುವುದೇ ಸಾಕ್ಷಿ.

ಗ್ರಾಮಸ್ಥರಲ್ಲಿ ಈ ಎಲ್ಲಾ ಗುಣಗಳಿದ್ದರೂ, ಅಭಿವೃದ್ಧಿಗೆ ಪೂರಕವಾದ ಅನುಕೂಲತೆಗಳಿದ್ದರೂ ಅವರು ಇನ್ನೂ ಏಕೆ ಅಭಿವೃದ್ಧಿ ಹೊಂದಿಲ್ಲ, ಅವರನ್ನು ಶೋಷಣೆ ಮಾಡುತ್ತಿರುವವರಾರು? ಎಂಬುದರ ಬಗ್ಗೆಯೂ ಸೂಕ್ತ ಸಾಹಿತ್ಯ ಇಲ್ಲ. ತಾವು ಬೆಳೆಯುವ ಪ್ರತಿ ಬೆಳೆಗೆ ತಗಲುವ ಖರ್ಚುಗಳನ್ನು ಬೇಸಾಯ ಕೆಲಸದ ಪ್ರತಿ ಹಂತದಲ್ಲಿಯೂ ಲೆಕ್ಕ ಹಾಕಿ ಹೇಳುವ, ಗ್ರಾಮಸ್ಥರು ರಸಗೊಬ್ಬರಗಳನ್ನು ಮತ್ತು ತಂದ ಸಾಲಗಳನ್ನು ಹೇಗೆ ದುರುಪಯೋಗ ಮಾಡುತ್ತಾರೆಂಬ, ಸಕಾಲಕ್ಕೆ ಅವರಿಗೆ ಬೇಕಾಗುವ ಹಣ ಹಾಗೂ ತಾಂತ್ರಿಕ ನೆರವು ಸಿಗದಿದ್ದರೆ ಅವರು ಅನುಭವಿಸುವ ತೊಂದರೆಗಳನ್ನು, ಅವರು ಕಷ್ಟಪಟ್ಟು ಬೆಳೆದ ಬೆಳೆಗಳನ್ನು ಕ್ರಿಮಿ, ಕೀಟಗಳಿಂದ, ಇಲಿಗಳಿಂದ ಸಂರಕ್ಷಿಸುವ, ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗದಿರುವ, ಅಲ್ಲಿ ನಡೆಯುವ ಮೋಸ, ಅನ್ಯಾಯ ಹೀಗೆ ಈ ಎಲ್ಲವುಗಳ ಬಗ್ಗೆಯೂ ಆಧಾರ ಸಹಿತ ವಿವರಿಸುವ ಸಾಹಿತ್ಯ ಇಲ್ಲ. ಇಂದು ಗ್ರಾಮೀಣ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ವ್ಯಕ್ತಿಗಳಿಗೆ, ಸಂಸ್ಥೆಗಳಿಗೆ ಇಂತಹ ಸಾಹಿತ್ಯ ಬೇಕಾಗಿದೆ.

ಇಂದು ಸರಕಾರ ಒಂದರ ಬದಲು ಇನ್ನೊಂದು ಹೀಗೆ ಪ್ರತಿ ಐದಾರು ವರ್ಷಕ್ಕೆ ಒಮ್ಮೆ ಅನೇಕ ಹೊಸ ಹೊಸ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಂದಿದೆ ಮತ್ತು ತರುತ್ತಾ ಇದೆ. ಗ್ರಾಮೀಣ ವಿಸ್ತೀರ್ಣ ಯೋಜನೆ, ಕ್ಷೇತ್ರಾಭಿವೃದ್ಧಿ ಯೋಜನೆಗಳು ಮುಗಿದು ಈಗ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಬಂದಿದೆ. ಪ್ರತಿಯೊಂದು ಹೊಸ ಕಾರ್ಯಕ್ರಮ ಬಂದಾಗ ಅದರ ಜೊತೆಗೆ ಅನೇಕ ಅಭಿವೃದ್ಧಿ ಯೋಜನೆಗಳು, ಕಾನೂನುಗಳು ಬಂದವು. ಈ ಎಲ್ಲಾ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸಾಹಿತ್ಯವೂ ಸೃಷ್ಟಿಯಾಯಿತು. ಆದರೆ ಗ್ರಾಮಸ್ಥರು ಈ ಸಾಹಿತ್ಯವನ್ನು ಸೂಕ್ತವಾಗಿ ಅರ್ಥಮಾಡಿಕೊಂಡು ಅಳವಡಿಸಿಕೊಳ್ಳುವಲ್ಲಿ ಇನ್ನೊಂದು ಕಾರ್ಯಕ್ರಮ ಬಂದಿತು. ಹೀಗೆ ಹೊಸ ಹೊಸ ಕಾರ್ಯಕ್ರಮಗಳು ತ್ವರಿತಗತಿಯಿಂದ ಬಂದರೆ ಗ್ರಾಮಸ್ಥರು ಗೊಂದಲಗೊಳ್ಳುತ್ತಾರೆ. ಇಲ್ಲಿ ಉದಾಹರಣೆಯಾಗಿ ಪಂಚಾಯಿತಿ ರಾಜ್ಯದ ಕಲ್ಪನೆಯ ಅಡಿಯಲ್ಲಿ ತಂದ ಆಡಳಿತ ಅಧಿಕಾರದ ವಿಕೇಂದ್ರಿಕರಣವನ್ನು ತೆಗೆದುಕೊಳ್ಳಬಹುದು. ಸರಕಾರ ಇಂತಹ ಯಾವುದಾದರೂ ಯೋಜನೆಯನ್ನು ಕೈಗೊಳ್ಳುವ ಮುನ್ನ ಅದರ ಸುತ್ತ ಇರುವ ಸಮಸ್ಯೆಗಳನ್ನು ಸೂಕ್ತವಾಗಿ ಅಭ್ಯಾಸ ಮಾಡಿ ರಾಷ್ಟ್ರಮಟ್ಟದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಒಂದರ ಮುಂದೆ ಮತ್ತೊಂದನ್ನು ತರಬೇಕಲ್ಲದೆ, ಹೀಗೆ ಒಂದರ ಬದಲಿಗೆ ಇನ್ನೊಂದನ್ನಲ್ಲ. ಸರಕಾರದ ಇಂತಹ ನೀತಿಗೆ ಅವರಲ್ಲಿ ಗ್ರಾಮೀಣ ಅಭಿವೃದ್ಧಿ

ಕಾರ್ಯದಲ್ಲಿ ಏನಾಗಿದೆ, ಇದು ಯಾವ ಕಾರಣಕ್ಕೆ ಸಂಭವಿಸಿತು ಎಂಬುದರ ಬಗ್ಗೆ ಮಾಹಿತಿ ಇಲ್ಲದಿರುವುದೇ ಕಾರಣವೆನ್ನಬಹುದು.

ಅನೇಕ ದಶಕಗಳಿಂದ ಭಾರತದಾದ್ಯಂತ ಪ್ರಾಥಮಿಕ ಶಾಲಾ ಶಿಕ್ಷಣ ಕಡ್ಡಾಯ ಮತ್ತು ಉಚಿತವಾಗಿದ್ದರೂ ಗ್ರಾಮಾಂತರ ಸಾಕ್ಷರತೆ ಇಂದಿಗೂ ಹೆಚ್ಚಾಗಿಲ್ಲ. ನಂತರ ಮಧ್ಯಾಹ್ನದ ಊಟ, ಉಚಿತ ಪಠ್ಯ ಪುಸ್ತಕ ಮತ್ತು ಸಮವಸ್ತ್ರದ ವಿತರಣೆ ಮುಂತಾದವನ್ನು ನೀಡಿ ವಿದ್ಯಾರ್ಥಿಗಳನ್ನು ಶಾಲೆಗೆ ಆಕರ್ಷಿಸುವ ಕಾರ್ಯಕ್ರಮಗಳು ಬಂದವು, ಹೋದವು. ಆದರೂ ಸಾಕ್ಷರತಾ ಮಟ್ಟ ಹೆಚ್ಚಾಗಲಿಲ್ಲ. ಇದಕ್ಕೆ ಕಾರಣಗಳಿಲ್ಲದಿಲ್ಲ. ಮೊದಲನೆಯದಾಗಿ ಕಲಿತ ನಂತರ ನೌಕರಿ ಸಿಕ್ಕರೆ ಮಾತ್ರ ಉಪಯೋಗಕ್ಕೆ ಬರುವ ಆಧುನಿಕ ಶಾಲಾ ಶಿಕ್ಷಣದಲ್ಲಿ ಗ್ರಾಮಸ್ಥರಿಗೆ ಹೆಚ್ಚಿನ ಆಸಕ್ತಿ ಇಲ್ಲ. ಅವರಿಗೆ ಕಲಿಯುವುದು ಬೇಡವೆಂದಲ್ಲ, ಈಗ ಸರಕಾರ ನೀಡಬಯಸುತ್ತಿರುವ ಈ ವಿದ್ಯೆ ಅವರಿಗೆ ಬೇಕಿಲ್ಲ. ಅದು ಅವರಿಗೆ ಉಪಯೋಗಕ್ಕಿಲ್ಲ. ಎರಡನೆಯದಾಗಿ ಕಿತ್ತು ತಿನ್ನುವ ಬಡತನ. ಗಂಡ-ಹೆಂಡಿರು ಇಬ್ಬರೂ ಹೊರಗೆ ದುಡಿಯಲು ಹೋಗುವ ಕುಟುಂಬದಲ್ಲಿ ಹಿರಿಯ ಮಕ್ಕಳು ಶಾಲೆಗೆ ಹೋದರೆ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ಯಾರೂ ಇರುವುದಿಲ್ಲ. ಅಲ್ಲದೆ ಈ ಮಕ್ಕಳ ಇಷ್ಟವಿಲ್ಲದ ಈ ವಿದ್ಯೆಯನ್ನು ಕಡ್ಡಾಯವಾಗಿ ನೀಡಬಯಸುವ ಸರಕಾರ ಈ ಬಗ್ಗೆ ನಾಲ್ಕಾರು ಸೂಕ್ತ ಯೋಜನೆಗಳನ್ನು ರೂಪಿಸಬಹುದಿತ್ತು. ಉದಾಹರಣೆಗೆ ಈ ಮಕ್ಕಳು ಶಾಲೆಗೆ ಬಂದರೆ ಅದೇ ಕೂಲಿ ಹಣವನ್ನು ತಾವು ಕೊಡುವ ವ್ಯವಸ್ಥೆ ಮಾಡಬಹುದಿತ್ತು; ಮಾಡಲಿಲ್ಲ. ಇಲ್ಲವೆ ಅವರಿಗಾಗಿ ಸಂಜೆಶಾಲೆಗಳನ್ನು ತೆಗೆಯಬಹುದಿತ್ತು. ಇದನ್ನೂ ಮಾಡಲಿಲ್ಲ. ಬದಲಿಗೆ ಆಡಳಿತ ತಜ್ಞರು ತಮಗೆ ತಿಳಿದ, ತಮಗೆ ಲಾಭ ಮತ್ತು ಪ್ರಚಾರ ತರುವ ಮಧ್ಯಾಹ್ನದ ಊಟದಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಆದರೆ ನಿಜವಾದ ಸಮಸ್ಯೆ ಅಲ್ಲೇ ಉಳಿಯಿತು ಮತ್ತು ಬೃಹದಾಕಾರವಾಗಿ ಬೆಳೆಯಿತು. ಹೀಗಾಗಿ ಈ ಗ್ರಾಮಾಂತರ ಶಿಕ್ಷಣ ಯೋಜನೆಯ ಉದ್ದೇಶ ಈಡೇರಲಿಲ್ಲ. ಸದ್ಯದ ಶಾಲಾಶಿಕ್ಷಣದಿಂದ ಯಾರಿಗೆ ಲಾಭ, ಯಾರಿಗೆ ನಷ್ಟ. ಇದನ್ನು ಸರಿಪಡಿಸಲು ಯಾವ ಯೋಜನೆಯನ್ನು ಹಾಕಿಕೊಳ್ಳಬೇಕು ಎಂಬುದನ್ನು ಸಂಶೋಧನಾ ಆಧಾರಗಳಿಂದ ಹೇಳುವ ಸಾಹಿತ್ಯ ಇನ್ನೂ ಬರಬೇಕಾಗಿದೆ.

ಗ್ರಾಮಸ್ಥರಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸಿ ಅವರ ಒಲವನ್ನು ವಿಜ್ಞಾನ ಮತ್ತು ತಾಂತ್ರಿಕತೆಯ ಕಡೆಗೆ ಹರಿಯುವಂತೆ ಮಾಡುವುದೂ ಅಭಿವೃದ್ಧಿ ಯೋಜನೆಯ ಒಂದು ಮುಖ್ಯ ಉದ್ದೇಶವಾಗಿದ್ದಿತು. ಆದರೆ ಇಂದಿಗೂ ಗ್ರಾಮಸ್ಥರ ಆಹಾರ, ಔಷಧೋಪಚಾರ, ನ್ಯಾಯವಿತರಣೆ ಮುಂತಾದ ರಂಗಗಳಲ್ಲಿ ಇನ್ನೂ ಮೂಢ ನಂಬಿಕೆಗಳು ಮತ್ತು ಸಂಪ್ರದಾಯಕತೆ ಹೆಚ್ಚಾಗಿ ಕಂಡು ಬರುತ್ತದೆ. ಅವರು ಪಡೆದ ಒಂದೆರಡು ವೈಜ್ಞಾನಿಕ ಸವಲತ್ತುಗಳೂ ಅವರಿಗೆ ಕೆಟ್ಟ ಅನುಭವವನ್ನು ನೀಡಿವೆ. ಉದಾಹರಣೆಗೆ ಹೊಸ ಪದ್ಧತಿಯ

ರಸಗೊಬ್ಬರಗಳು, ಮಿಶ್ರತಳಿಯ ಬೀಜಗಳು, ಬೇಸಾಯ ಪದ್ಧತಿ ಮುಂತಾದವನ್ನು ಅವರು ಇಡಿಯಾಗಿ ಒಪ್ಪಿಕೊಂಡಿದ್ದರಿಂದ ಇಂದು ತಮ್ಮ ಭೂಮಿಯನ್ನು ಅವರು ಬಂಜರು ಮಾಡಿಕೊಂಡಿದ್ದಾರೆ. ಅಧಿಕ ಧಾನ್ಯ ಉತ್ಪಾದಿಸುವ ಮಿಶ್ರತಳಿಯ ಬೆಳೆಗಳು ಅವರ ದನಗಳಿಗೆ ಹುಲ್ಲುಮೇವು ಇಲ್ಲದಂತೆ ಮಾಡಿವೆ. ಟ್ರ್ಯಾಕ್ಟರ್, ನೀರೆತ್ತುವ ಯಂತ್ರ, ಕೊಳವೆ ಬಾವಿ ಮುಂತಾದವು ಅವರಿಗೆ ದುಬಾರಿಯಾಗಿವೆ, ಉರುಲಾಗಿವೆ. ಇದಕ್ಕೆಲ್ಲಾ ಕಾರಣ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದವರು ಈ ಆಧುನಿಕ ವಸ್ತುಗಳ ಉಪಯೋಗಗಳನ್ನಷ್ಟೇ ವರ್ಣಿಸದೆ ಅವು ತರುವ ತೊಂದರೆಗಳ ಬಗ್ಗೆಯೂ ಸವಿಸ್ತಾರವಾಗಿ ಹೇಳಬೇಕಾಗಿತ್ತು. ಈ ಆಧುನಿಕ ತಂತ್ರಗಳನ್ನು ಬಳಸುವುದರಿಂದ ಅಭಿವೃದ್ಧಿ ಹೊಂದುತ್ತಿರುವ ಅನೇಕ ದೇಶಗಳಲ್ಲಿ ಬಂದಿರುವ ಸಮಸ್ಯೆಗಳ ಬಗ್ಗೆ ಸಾಕಷ್ಟು ಸಾಹಿತ್ಯವಿದೆ. ಇದನ್ನು ಗ್ರಾಮಸ್ಥರ ಗಮನಕ್ಕೆ ತರಲಿಲ್ಲ. ಹೀಗಾಗಿ ಇಂದು ಗ್ರಾಮಸ್ಥರಲ್ಲಿ ಇವುಗಳ ಬಗ್ಗೆ ಅಸಹ್ಯ ಭಾವನೆ ಮೂಡುವಂತಾಗಿದೆ.

ಇದೇ ರೀತಿ ಅವರು ತಿನ್ನುವ ಅನ್ನ, ಕುಡಿಯುವ ನೀರು, ಉಡುವ ಬಟ್ಟೆ ಮುಂತಾದ ದಿನಿತ್ಯದ ಬಳಕೆಯ ಅನೇಕ ವಸ್ತುಗಳ ಬಗ್ಗೆಯೂ ಇನ್ನೂ ವೈಜ್ಞಾನಿಕ ತಿಳುವಳಿಕೆ ಇಲ್ಲ. ಇದನ್ನು ಅವರಿಗೆ ಸೂಕ್ತವಾಗಿ, ಸಕಾಲದಲ್ಲಿ ನೀಡಿದ್ದರೆ ಇಂದು ಗ್ರಾಮಸ್ಥರು ಅನುಭವಿಸುತ್ತಿರುವ ಬಹುತೇಕ ಸಮಸ್ಯೆಗಳನ್ನು ತಪ್ಪಿಸಬಹುದಿತ್ತು. ಉದಾಹರಣೆಗೆ ಗ್ರಾಮಸ್ಥರು ಕುಡಿಯುವ ನೀರನ್ನೇ ತೆಗೆದುಕೊಳ್ಳೋಣ. ಅಭಿವೃದ್ಧಿ ಕಾರ್ಯಕರ್ತರು ಶುದ್ಧವಾದ ನೀರನ್ನೇ ಕುಡಿಯಿರಿ ಎಂದು ಹೇಳುತ್ತಾರೆ. ಹೆಚ್ಚೆಂದರೆ ಕೊಳವೆಬಾವಿ ತೋಡಿಕೊಡಬಹುದು ಅಥವಾ ಇದರ ಬಳಕೆಯ ಬಗ್ಗೆ ಭಿತ್ತಿಪತ್ರಿಕೆಗಳನ್ನು ಹೊರಡಿಸಬಹುದು. ನಮಗೆ ಶುದ್ಧವೆಂಬುದು ಗ್ರಾಮಸ್ಥರ ಶಬ್ದಕೋಶದಲ್ಲಿ "ಮಡಿ" ಯಾದದ್ದು ಎಂಬ ಅರ್ಥದಲ್ಲಿರುತ್ತದೆ. ಆದ್ದರಿಂದ ಮಡಿಯಾದುದೆಲ್ಲ ಶುದ್ಧವಾದದ್ದು ಆಗಲಾರದು. ಈ ಪ್ರಚಾರ ಪದ್ಧತಿ ಬಿಟ್ಟು ಪ್ರತಿ ಕಾರ್ಯಕರ್ತನ ಕೈಗೂ ಒಂದೊಂದು ಸೂಕ್ಷ್ಮದರ್ಶಕ ಯಂತ್ರ ಕೊಟ್ಟು, ಅವರು ಪ್ರತಿ ಊರಿಗೆ, ಮನೆಗೆ ಹೋಗಿ, ಗ್ರಾಮಸ್ಥರು ಬಳಸುವ ನೀರಿನ ಸಂಗ್ರಹಣೆಯಿಂದಲೇ ಒಂದು ಹನಿ ತೆಗೆದುಕೊಂಡು, ಅದರಲ್ಲಿನ ಸೂಕ್ಷ್ಮಕ್ರಿಮಿಗಳನ್ನು ಅವರಿಗೆ ತೋರಿಸಿದ್ದರೆ ಗ್ರಾಮಸ್ಥರಾರೂ ಮತ್ತು ಎಂದೂ ಕೆರೆ-ಕಾಲುವೆಗಳ ನೀರು ಬಳಸುತ್ತಿರಲಿಲ್ಲ. ಇಂತಹ ಸಾಹಿತ್ಯ ಸೃಷ್ಟಿಸುವವರು ತಮ್ಮ ವಿಚಾರ ಲಹರಿಯನ್ನು ತಿದ್ದಿಕೊಳ್ಳಬೇಕಾಗುತ್ತದೆ.

ಇನ್ನು ಪ್ರಚಾರ ಹಾಗೂ ವಾರ್ತಾ ಇಲಾಖೆಯಂತಹ ಸರಕಾರಿ ಸಂಸ್ಥೆಗಳು ಸೃಷ್ಟಿಸಿರುವ ಸಾಹಿತ್ಯ ಮತ್ತು ಅದರಲ್ಲಿರುವ ವಿಚಾರಗಳು ಎಷ್ಟರಮಟ್ಟಿಗೆ ಜನಸಾಮಾನ್ಯರಿಗೆ ತಲುಪುತ್ತಿವೆ ಎನ್ನುವುದನ್ನು ತಿಳಿಯುವ. ಇಂದು ಪ್ರಚಾರದ ಮಾಧ್ಯಮಗಳು, ರೀತಿಗಳು ಸಾಕಷ್ಟು ಬೆಳೆದಿವೆ ಮತ್ತು ಬದಲಾಗಿವೆ. ಅವರು ಹೊರಡಿಸುವ ಪುಸ್ತಕ ಅಥವಾ ಕರಪತ್ರಗಳು

ವಿನ್ಯಾಸದಲ್ಲಿ ಉತ್ತಮವಿದ್ದರೆ, ಕನ್ನಡದಲ್ಲಿದ್ದರೆ ಸಾಲದು. ಅದು ಜನಸಾಮಾನ್ಯರಲ್ಲಿ ದಿನನಿತ್ಯದಲ್ಲಿ ಬಳಸುವ ಭಾಷೆಯಲ್ಲಿರಬೇಕು. ಇಲ್ಲಿ ಭಾಷೆಯನ್ನು ಬಳಸುವಾಗ ಈ ಸಾಹಿತ್ಯ ಯಾರಿಗಾಗಿ ಸೃಷ್ಟಿಯಾದದ್ದು, ಅವರ ಸಾಮಾಜಿಕ-ಸಾಂಸ್ಕೃತಿಕ ಮಟ್ಟ ಯಾವುದು, ಮನೋಭಾವನೆ ಏನು ಎಂಬುದನ್ನು ಗಮನದಲ್ಲಿಡಬೇಕು. ಇಲ್ಲದಿದ್ದರೆ ಈ ಭಾಷೆಯ ಗೊಂದಲದಿಂದ ಇನ್ನೂ ಅನೇಕ ಸಮಸ್ಯೆಗಳು ಬರುತ್ತವೆ. ಉದಾಹರಣಾರ್ಥವಾಗಿ "ಒಣ ಬೇಸಾಯ" ಎಂಬ ಪದವನ್ನೇ ತೆಗೆದುಕೊಳ್ಳೋಣ. ಇಂದು ಆಂಗ್ಲ ಪದ "ಡ್ರೈಯ್ ಫಾರ್ಮಿಂಗ್"ನ ನೇರ ಭಾಷಾಂತರ. ಕನ್ನಡದಲ್ಲೇ ಈ ಬಗೆಯ ಬೇಸಾಯಕ್ಕೆ "ಬೆದ್ಲು", "ಹಕ್ಲು" ಎನ್ನುವ ಪದಗಳಿವೆ. ಇವನ್ನು ಬಿಟ್ಟು ಒಣ ಬೇಸಾಯ ಎಂಬ ಪದವನ್ನು ಬಳಸಿದರೆ ರೈತರಲ್ಲಿ ಗೊಂದಲ ಬರುತ್ತದೆ. ಏಕೆಂದರೆ ಎಲ್ಲಾ ಬಗೆಯ ವ್ಯವಸಾಯಕ್ಕೆ ನೀರು ಬೇಕು. ಕೆಲವು ತಳಿಯ ಬೆಳೆಗಳಿಗೆ ಕಡಿಮೆ ನೀರು ಬೇಕಾದರೆ ಉಳಿದವುಗಳಿಗೆ ಹೆಚ್ಚು ಬೇಕು. ಕೆಲವು ಮಳೆ ಆಧಾರದಿಂದ ಪಡೆದರೆ ಉಳಿದವು ಕೆರೆ-ಕಟ್ಟೆ ಹಾಗೂ ಅಣೆಕಟ್ಟುಗಳ ಕಾಲುವೆಯಿಂದ ಪಡೆಯುತ್ತವೆ. "ಒಣ ಬೇಸಾಯ" ಎಂದರೆ ಇದಕ್ಕೆ ಎಷ್ಟೂ ನೀರು ಬೇಡವೆಂದು ಕೆಲವು ಮುಗ್ಧ ರೈತರು ತಿಳಿದಿದ್ದಾರೆ. ಇನ್ನೂ ಕೆಲವರು ಇಸ್ರೇಲಿನಲ್ಲಿ ಬಳಸುವ ಹನಿ ನೀರಾವರಿ, ಜಪಾನೀಯರ ನಾಟಿ ಬೇಸಾಯದಂತೆ ಇದೂ ಯಾವುದೋ ಹೊರದೇಶದಿಂದ ಕಲಿತ, ಸ್ವಲ್ಪವೂ ನೀರು ಬೇಕಿಲ್ಲದ ಬೇಸಾಯ ಪದ್ಧತಿ ಎಂಬು ತಿಳಿದಿದ್ದಾರೆ.

ಇನ್ನೊಂದು ಉದಾಹರಣೆ ಏಡ್ಸ್ ರೋಗದ ಬಗ್ಗೆ ಎಚ್ಚರಿಕೆಯ ಮಾತುಗಳನ್ನು ಹೇಳುವಲ್ಲಿ ಬಳಸಲಾಗಿರುವ ಘೋಷಣಾಪದ ಹೀಗಿದೆ: "ಅಪರಿಚಿತರೊಡನೆ ಲೈಂಗಿಕ ಸಂಪರ್ಕ ಮಾಡಬಾರದು" ಎಂದು. ಆರೋಗ್ಯ ಇಲಾಖೆಯವರ ತಿಳುವಳಿಕೆಯಲ್ಲಿ ಇಲ್ಲಿ ಅಪರಿಚಿತರು ಎಂದರೆ ಆ ವ್ಯಕ್ತಿಯ ಆರೋಗ್ಯಸ್ಥಿತಿಯ ಬಗ್ಗೆ ತಿಳಿಯದವರು. ಆದರೆ ವ್ಯಭಿಚಾರಿ ಇದನ್ನು ಅರಿಯುವುದಾದರೂ ಹೇಗೆ? ಅಲ್ಲದೆ "ಪರಿಚಿತ ರೋಗಿಯೊಡನೆ ಲೈಂಗಿಕ ಸಂಬಂಧ ಹೊಂದಿದರೆ ಈ ರೋಗ ಬರುವುದಿಲ್ಲ" - ಎಂಬ ತಪ್ಪುಗ್ರಹಿಕೆಯೂ ಬರುತ್ತವೆ. ಇಲ್ಲಿ ಆಗಿರುವ ತಪ್ಪು ಎಂದರೆ ನಮಗಿಂತ ಮುಂಚೆ ಈ ರೋಗ ಮತ್ತು ಅದಕ್ಕೆ ನಿವಾರಣೆ ನೀಡ ಹೊರಟ ದೇಶದ ಭಾಷಾ ಪದಗಳನ್ನೇ ಕನ್ನಡೀಕರಿಸಿರುವುದು. ಆದರೆ ಆ ಸಮಾಜಗಳಲ್ಲಿ ಸೂಳೆಗಾರಿಕೆ ಕಾನೂನುಬದ್ಧ ವೃತ್ತಿ. ಜೊತೆಗೆ ಸಂಗಾತಿಗಳ ಅನುಮತಿ ಇದ್ದರೆ, ವಿವಾಹ ಪೂರ್ವ ಲೈಂಗಿಕ ಸಂಬಂಧಕ್ಕೆ ಅವರು ಅಷ್ಟಾಗಿ ನೈತಿಕ ಬೆಲೆ, ಮಹತ್ವನೀಡುವುದಿಲ್ಲ. ಈ ಹಿನ್ನೆಲೆಯಲ್ಲಿ ಇಂತಹ ಸಂಬಂಧಕ್ಕೆ ಆಂಗ್ಲ ಭಾಷೆಯಲ್ಲಿ "ಅಪರಿಚಿತ" ಪದ ಬಳಕೆಯಾಗಿದೆ. ಇತರೆ ಸಮಾಜ-ಸಂಸ್ಕೃತಿ ಗುಂಪುಗಳಿಗೆ ಸೇರಿದವರು ಈ ಪದವನ್ನು ಯಥಾವತ್ತಾಗಿ ಭಾಷಾಂತರಿಸಿ ಬಳಸಿದರೆ ಅಪಾರ್ಥ ಬರುತ್ತದೆ.

ಸರಕಾರ ತನ್ನ ಅನೇಕ ಕರ್ತವ್ಯಗಳಲ್ಲಿ ಒಂದಾಗಿ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಂದುಕೊಂಡಿವೆ. ಈ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವ ಮುನ್ನ ಅದು ಅನೇಕ ಬಗೆಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಇದರಲ್ಲಿ ಅಭಿವೃದ್ಧಿಯ ಬಗ್ಗೆ ಸಾಹಿತ್ಯದ ರಚನೆ, ವಿತರಣೆಗಳು ಮುಖ್ಯವಾದವುಗಳು. ಆದ್ದರಿಂದ ಜನತೆಗೆ ಮತ್ತು ಕಾರ್ಯಕರ್ತರಿಗೆ ಸೂಕ್ತ ಸಾಹಿತ್ಯ ನೀಡುವತ್ತ ಕಾರ್ಯೋನ್ಮುಖವಾಗಬೇಕು. ಸದ್ಯ ಅಭಿವೃದ್ಧಿ ಮತ್ತಿತರ ವಿಷಯಗಳ ಪ್ರಚಾರಕ್ಕಾಗಿ ಎಲ್ಲಾ ಅಭಿವೃದ್ಧಿ ಮಂಡಳಿಗಳಲ್ಲಿ ಒಂದೊಂದು ಮಾಹಿತಿ ಮತ್ತು ಪ್ರಚಾರ ಕೇಂದ್ರ ತೆರೆದಿದೆ. ಆದರೆ ಅಲ್ಲಿ ಲಭ್ಯವಿರುವ ಮಾಹಿತಿ ಸಾಹಿತ್ಯ ಯಾವ ಕಾರ್ಯಕ್ಕೂ ಸಾಲದು. ಸೂಕ್ತ ಸಾಹಿತ್ಯ ಎಲ್ಲಾ ಕಾರ್ಯಕರ್ತರಿಗೆ ಸಿಗುವಂತೆ ಮಾಡಲು ಪ್ರತಿ ಜಿಲ್ಲಾ ಕೇಂದ್ರದಲ್ಲೂ ಒಂದು ಮಾಹಿತಿ ಭಂಡಾರ ಮತ್ತು ವಾಚನಾಲಯ ತೆರೆಯಬೇಕು. ಇಲ್ಲಿ ಗ್ರಾಮೀಣ ಪರಿಸರ, ಅಭಿವೃದ್ಧಿ ಮುಂತಾದವುಗಳಿಗೆ ಸಂಬಂಧಿಸಿದ ಸಾಹಿತ್ಯವನ್ನು ತರಿಸಿ ಇಡುವಂತಾಗಬೇಕು. ಇದು ತಮ್ಮಲ್ಲಿರುವುದನ್ನು ಎಲ್ಲಾ ಕಾರ್ಯಕರ್ತರ, ಅಧಿಕಾರಿಗಳ ಗಮಕ್ಕೆ ತರಬೇಕು. ಈ ಪುಸ್ತಕದಲ್ಲಿರುವ ವಿಷಯಗಳನ್ನು ಸಂಕ್ಷಿಪ್ತವಾಗಿ ತಿಳಿಸುವ ಸಾಹಿತ್ಯ ಬೇಕು. ಗ್ರಂಥಾಲಯಗಳು ಇಂತಹ ವಿಚಾರಗಳ ಬಗ್ಗೆ ತಿಳುವಳಿಕೆ ನೀಡುವ ಸೇವೆಯನ್ನು ಇಟ್ಟುಕೊಳ್ಳಬೇಕು. ಹೀಗಾದರೆ ಮಾತ್ರ ಅಭಿವೃದ್ಧಿ ಸಾಹಿತ್ಯ ಸೃಷ್ಟಿಯಾಗುತ್ತದೆ ಮತ್ತು ಪ್ರಸರಣವಾಗುತ್ತದೆ.

★★★★

ಲೇಖನ - ೪

ಗ್ರಾಮೀಣ ಮಗು

ಬದಲಾವಣೆ ಎಲ್ಲಾ ಜೀವಂತ ಸಮಾಜಗಳಲ್ಲಿ ಅನಿವಾರ್ಯ. ಅಲ್ಲದೆ ಕಾಲಕಾಲಕ್ಕೆ ತಕ್ಕಂತೆ ತನ್ನ ರಚನೆ, ವ್ಯವಸ್ಥೆ ಮತ್ತು ಕಾರ್ಯದಲ್ಲಿ ಬದಲಾವಣೆ ತಂದುಕೊಳ್ಳುವುದು ಸಮಾಜದ ವಿಶೇಷ ಗುಣ. ಸಮಾಜವು ಆರಿಸಿಕೊಂಡ ಗತಿಯಲ್ಲಿಯೇ ಇದು ಬರುವುದಾದರೂ ಕೆಲವೊಂದು ಗುಂಪುಗಳು ಈ ಬದಲಾವಣೆಗೆ ಹೊಂದಿಕೊಳ್ಳಲಾರದೆ ತೊಂದರೆಗೀಡಾಗುತ್ತವೆ. ಇದರಿಂದ ಸಮಾಜದ ಕಾರ್ಯದಲ್ಲಿ ತೊಂದರೆಗಳು ಕಾಣಿಸಿಕೊಂಡು ಸಮಾಜ ಜೀವನ ಕುಂಠಿತವಾಗುತ್ತದೆ. ಆಗ ನಷ್ಟ ಹೊಂದಿದ ಗುಂಪು ತನ್ನಲ್ಲಾದ ಹಾನಿ ಕೇವಲ ತನ್ನದೆಂದು ಭಾವಿಸಿದರೂ ಅದು ಇಡೀ ಸಮಾಜದ್ದೇ ಆಗುತ್ತದೆ. ಇಂತಹ ತೊಂದರೆಯನ್ನು ಸರಿಪಡಿಸಲು ಮತ್ತು ಅದಕ್ಕಾದ ನಷ್ಟವನ್ನು ತುಂಬಿಕೊಡಲು ಇಡೀ ಸಮಾಜವೇ ಶ್ರಮಿಸುತ್ತದೆ. ಇಲ್ಲದಿದ್ದರೆ ಈ ನಷ್ಟವನ್ನು ಸಮಾಜ ಶಾಶ್ವತವಾಗಿ ಅನುಭವಿಸಬೇಕಾಗುತ್ತದೆ. ಸಮಾಜವನ್ನು ಒಂದು ಜೀವಿ ಎಂದು ಪರಿಗಣಿಸಿದಲ್ಲಿ ಅದರ ಯಾವುದಾದರೊಂದು ಅಂಗಕ್ಕೆ ತೊಂದರೆ ಬಂದರೂ ಇಡೀ ಸಮಾಜದಲ್ಲಿ ಗೊಂದಲವುಂಟಾಗುತ್ತದೆ. ಇದರಿಂದ ತಕ್ಷಣ ಅಥವಾ ಕಾಲಕ್ರಮೇಣದಲ್ಲಿ ಇಡೀ ಸಮಾಜವೇ ತೊಂದರೆಗೊಳಗಾಗಬಹುದು. ಆದ್ದರಿಂದ ಕೂಡಲೇ ಸಮಾಜ ತನ್ನ ನಿಯಂತ್ರಣ ಶಕ್ತಿಯನ್ನು ಒಟ್ಟುಗೂಡಿಸಿ, ತನ್ನಲ್ಲಿ ಬಂದಿರುವ ತೊಂದರೆಯ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳುತ್ತದೆ.

ಆಧುನಿಕ ಸಾರಿಗೆ ಸಂಪರ್ಕ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಹೊಂದಿರುವ ಇಂದಿನ ಸಮಾಜದಲ್ಲಿ ಯಾವುದಾದರೊಂದು ಗುಂಪಿನಲ್ಲಿ ಸಮಸ್ಯೆ ಬಂದರೂ ಮುಂದೆ ಅದರಿಂದಾಗುವ ಕೆಡಕು ಮತ್ತು ಹಾನಿಗಳನ್ನು ಮನಗಂಡು ಕೂಡಲೇ ಅದನ್ನು ನಿಯಂತ್ರಿಸಲು ಕಾರ್ಯೋನ್ಮುಖವಾಗುತ್ತದೆ. ಇಂತಹ ಕಾರ್ಯಗಳನ್ನು ಕೈಗೊಳ್ಳಲೆಂದೇ ಕೆಲವೊಂದು ಕಲ್ಯಾಣ ಸಂಸ್ಥೆಗಳಿರುತ್ತವೆ. ಉದಾಹರಣೆಗೆ ಆಧುನಿಕ ಸಮಾಜ ತನ್ನಲ್ಲಾಗಬಹುದಾದ ನಗರೀಕರಣ, ಔದ್ಯೋಗೀಕರಣ ಅಥವಾ ನೆರೆ, ಬಿರುಗಾಳಿ, ಭೂಕಂಪ ಮುಂತಾದ ಪ್ರಕೃತಿಯಿಂದ ಬಂದಿರಬಹುದಾದ ಹಾನಿಗಳನ್ನು ತಪ್ಪಿಸಲು, ತೊಂದರೆಗಳನ್ನು ನಿವಾರಿಸಲು ಸಿದ್ಧತೆ ಮಾಡಿಕೊಂಡಿರುತ್ತದೆ. ಅನೇಕ ವೇಳೆ ಸಮಾಜದ ದುರ್ಬಲ ವರ್ಗಗಳಾದ ಮಹಿಳೆಯರು, ಮಕ್ಕಳು, ವೃದ್ಧರು, ಬಡವರು, ಇತರರಿಂದ ತುಳಿಯಲ್ಪಟ್ಟವರು

ಉಳಿದವರಂತೆ ಮೇಲೆ ಬರಲು ಸಾಧ್ಯವಾಗದಾದಾಗ, ಅವರೊಡನೆ ಪೈಪೋಟಿ ಮಾಡಿ ಗೆಲ್ಲಲಾರದಾದಾಗ, ಸಮಾಜದಲ್ಲಿ ತೊಡಕುಗಳು ಬರುತ್ತವೆ. ಈ ದೃಷ್ಟಿಯಿಂದ ಕಲ್ಯಾಣ ಧೋರಣೆ ಹೊಂದಿದ ರಾಜ್ಯವು ದುರ್ಬಲರಿಗೆ ತನ್ನ ಕಾರ್ಯಾಂಗವಾದ ಸರಕಾರದ ಮೂಲಕ ಕೂಡಲೇ ನಿವಾರಣೋಪಾಯಗಳನ್ನು ಹುಡುಕಿ, ಸಹಾಯ ಮಾಡುತ್ತದೆ. ಈ ಕಾರ್ಯಾಂಗಗಳಲ್ಲಿ ಸರಿಯಾದ ಒಡಂಬಡಿಕೆ, ಸಹಕಾರ, ಸೂಕ್ತ ವ್ಯವಸ್ಥೆ ಇಲ್ಲದಿದ್ದರೆ ಅಥವಾ ಒಂದು ವರ್ಗ ಇನ್ನೊಂದನ್ನು ತುಳಿಯಲು ಪ್ರಯತ್ನಿಸಿದರೆ ಈ ಕೆಲಸ ಸುಲಭವಾಗಿ ಸಾಧ್ಯವಾಗಲಾರದು. ಸದ್ಯ ತೊಂದರೆಗೀಡಾದ ಗುಂಪು ಇನ್ನೂ ಹೆಚ್ಚಿನ ಹಾನಿಗೀಡಾಗುತ್ತದೆ. ಇದನ್ನು ನಮ್ಮ ಪ್ರಸ್ತುತ ಅಭ್ಯಾಸದ ವಿಷಯವಾದ ಗ್ರಾಮೀಣ ಮಗುವನ್ನು ತೆಗೆದುಕೊಂಡು ತಿಳಿಯಬಹುದು.

ಆಧುನಿಕತೆ, ಔದ್ಯೋಗೀಕರಣ, ಸಾಮಾಜಿಕ-ಸಾಂಸ್ಕೃತಿಕ ಬದಲಾವಣೆ ಮುಂತಾದವು ಗ್ರಾಮೀಣ ಸಮಾಜದಲ್ಲಿ ಹೆಚ್ಚಿನ ಬದಲಾವಣೆ ತಂದು ಕುಟುಂಬ, ಕಳ್ಳುಬಳ್ಳಿ ಮತ್ತು ನೆರೆಹೊರೆ ಸಂಬಂಧಗಳನ್ನು ಶಿಥಿಲಗೊಳಿಸಿವೆ. ಅಲ್ಲದೆ ವ್ಯಕ್ತಿ ಸ್ವಾತಂತ್ರ್ಯದ ರುಚಿ ನೋಡಿದವರು ಹಿರಿಯರ ಅಂಕೆ-ಆಜ್ಞೆ ಇಲ್ಲದೆ ಸ್ವತಂತ್ರವಾಗಿ ಇರಬೇಕೆಂದು ಬಯಸುತ್ತಾರೆ. ಇವೆಲ್ಲವೂ ಕೆಲವೊಂದು ವ್ಯಕ್ತಿಯ, ಅದರಲ್ಲೂ ಮಕ್ಕಳ ಮೇಲೆ ಹೆಚ್ಚಿನ ದುಷ್ಪರಿಣಾಮ ಬೀರಿವೆ. ಇಂದು ಗ್ರಾಮೀಣ ಮಕ್ಕಳು ಯಾವ ತರಹದ ಹಾನಿಗೊಳಗಾಗಿದ್ದಾರೆ, ಈ ಪರಿಸ್ಥಿತಿಗೆ ಕಾರಣಗಳಾವು ಮತ್ತು ಇವುಗಳಿಗೆ ಸಮಾಜ ಯಾವ ವಿಧದ ನಿವಾರಣೋಪಾಯಗಳನ್ನು ತಂದಿದೆ ಎಂಬುದನ್ನು ಮೊದಲು ಪರಿಶೀಲಿಸಬೇಕಾಗಿದೆ.

ಈ ಲೇಖನಕ್ಕೆ ಬೇಕಾದ ಮಾಹಿತಿಯನ್ನು ಧಾರವಾಡ ಜಿಲ್ಲೆಯ ಕೊಪ್ಪ ಎನ್ನುವ ಗ್ರಾಮದಿಂದ ಪಡೆಯಲಾಗಿದೆ. ಇಲ್ಲಿ ೧೯೭೭ರಲ್ಲಿ, ಒಟ್ಟು ೧೮೪ ಮನೆತನಗಳಿದ್ದು ಗ್ರಾಮದ ಜನಸಂಖ್ಯೆ ೧೧೨೪. ವ್ಯವಸಾಯವೇ ಗ್ರಾಮಸ್ಥರ ಜೀವನಾಧಾರವಾದರೂ ಉಳುವ ಭೂಮಿ ಇಲ್ಲದವರು ಮುಖ್ಯವಾಗಿ, ವ್ಯವಸಾಯಕ್ಕೆ ಸಂಬಂಧಿಸಿದ ಕಸಬುಗಳಾದ ಬಡಗಿತನ, ಕಮ್ಮಾರಿಕೆ, ತೋಟಗಾರಿಕೆ, ಕೂಲಿ ಮುಂತಾದ ವೃತ್ತಿಗಳನ್ನು ಹೊಂದಿದ್ದಾರೆ. ಕೊಪ್ಪದಲ್ಲಿ ಒಟ್ಟು ಏಳು ಜಾತಿಗಳಿದ್ದು ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರ ನಂತರ ಕ್ರಮವಾಗಿ ಮುಸಲ್ಮಾನರು, ನಾಯಕರು, ಸುಣಗಾರರು ಮತ್ತು ಹರಿಜನರು ಬರುತ್ತಾರೆ. ಲಿಂಗಾಯಿತರಲ್ಲಿ ಜಂಗಮ, ಪಂಚಮಸಾಲಿ, ಹೂಗಾರ, ಬಡಗಿ ಮತ್ತು ಬಣಕಾರರೆಂದು ಐದು ಉಪಪಂಗಡಗಳಿವೆ. ಊರಿನ ಹೆಚ್ಚಿನ ವ್ಯವಸಾಯ ಭೂಮಿಯನ್ನು ಪಂಚಮಸಾಲಿಯವರು ಹೊಂದಿದ್ದು ಉಳಿದವರು ಅವರ ಗೇಣಿದಾರರು, ಇಲ್ಲವೆ ಒಕ್ಕಲುತನ ಕೂಲಿಕಾರರು. ಮುಸಲ್ಮಾನರಲ್ಲಿಯೂ ಕೆಲವರು ವ್ಯವಸಾಯ ಭೂಮಿ ಹೊಂದಿದ್ದಾರೆ. ಉಳಿದವರು ಗೇಣಿದಾರರು ಮತ್ತು ಕೂಲಿಕಾರರು. ನಾಯಕರಲ್ಲಿ ಕೆಲವರು ಮಾತ್ರ ಸರಕಾರ ಅವರ

ಸೇವೆಗೆಂದು ನೀಡಿರುವ ಭೂಮಿಯನ್ನು ಹೊಂದಿದ್ದಾರೆ. ಉಳಿದವರೆಲ್ಲರೂ ಕೂಲಿಕಾರರು ಮತ್ತು ಸಣ್ಣ ವ್ಯಾಪಾರಸ್ಥರು. ಹರಿಜನರಲ್ಲಿ ಮೂರು ಕುಟುಂಬಗಳು ಮಾತ್ರ ಸಣ್ಣ ಪ್ರಮಾಣದಲ್ಲಿ ಜಮೀನು ಹೊಂದಿದ್ದು ಉಳಿದವರು ಕೂಲಿಕಾರರು.

ಕೊಪ್ಪದಲ್ಲಿಯ ೧೮೪ ಕುಟುಂಬಗಳಲ್ಲಿ ೧೬೪ ಕುಟುಂಬಗಳು ಹಂಚಿನ ಮನೆಯಲ್ಲೂ, ೨೦ ಗುಡಿಸಿಲಿನಲ್ಲೂ ವಾಸ ಮಾಡುತ್ತಾರೆ. ಇವುಗಳಲ್ಲಿ ೧೪ ಮನೆಗಳು ವಾಸಿಸಲು ಅಷ್ಟೇನೂ ಯೋಗ್ಯವಾಗಿಲ್ಲ. ಇಲ್ಲಿ ೮೩ ಪ್ರಾಥಮಿಕ ಕುಟುಂಬಗಳು, ೧೦೧ ವಿಸ್ತೃತ ಕುಟುಂಬಗಳು ಇವೆ. ಗ್ರಾಮಪ್ರದೇಶವು ಜಾತಿಯ ಆಧಾರದ ಮೇಲೆ ಓಣಿಗಳಾಗಿ, ವಿಂಗಡಿಸಲ್ಪಟ್ಟಿದೆ. ಹರಿಜನರು, ನಾಯಕರು, ಮುಸಲ್ಮಾನರು ಮತ್ತು ಲಿಂಗಾಯಿತರು ಬೇರೆ ಬೇರೆ ಓಣಿಗಳಲ್ಲಿ ವಾಸ ಮಾಡುತ್ತಾರೆ. ಕೆಲವರು ವಿಶೇಷವಾಗಿ ಆರ್ಥಿಕವಾಗಿ ಸ್ಥಿತಿವಂತರಾದ ಮುಸಲ್ಮಾನರು ಮತ್ತು ಲಿಂಗಾಯತರು, ಇತ್ತೀಚೆಗೆ ತಮ್ಮ ಜಾತಿಯ ಓಣಿಗಳನ್ನು ಬಿಟ್ಟು ಇತರೆಡೆಯಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಏಕೆಂದರೆ ಈ ಗ್ರಾಮಕ್ಕೆ ಇರುವ ಅನೇಕ ಸಮಸ್ಯೆಗಳಲ್ಲಿ ವಾಸಕ್ಕೆ ಮನೆ ಕಟ್ಟಿಕೊಳ್ಳಲು ಉತ್ತಮವಾದ ಮತ್ತು ಸಾಕಷ್ಟು ಜಾಗವಿಲ್ಲದ್ದು ಒಂದು. ಊರ ಸುತ್ತ ಇರುವ ಹೊಲಗಳು ಪ್ರಭಾವಶಾಲಿ ಮನೆತನಗಳಿಗೆ ಸೇರಿದವು ಮತ್ತು ಭತ್ತ ಬೆಳೆಯಲು ಉತ್ತಮವಾದ ಹೊಲಗಳು. ಹೀಗಾಗಿ ಯಾರೂ ಈ ಹೊಲಗಳನ್ನು ಮಾರಲು ಮುಂದೆ ಬರುವುದಿಲ್ಲ. ಇವುಗಳ ಮಾಲಿಕರು ಗ್ರಾಮ ಪಂಚಾಯಿತಿಯಲ್ಲಿಯೂ ಪ್ರಭಾವಶಾಲಿಗಳಾಗಿರುವುದರಿಂದ ಈ ಸಮಿತಿ ಕೂಡ ಗ್ರಾಮ ಠಾಣಕ್ಕೆ ಹೆಚ್ಚಿಗೆ ಜಾಗ ಪಡೆಯಲಾರದಾಗಿದೆ. ಕೆಲವೊಂದು ದೊಡ್ಡ ದೊಡ್ಡ ರೈತರಿಗೆ ಸೇರಿದ ಮನೆಗಳ ಹಿಂದೆ ಹಿತ್ತಲುಗಳಿದ್ದು ಇಲ್ಲಿ ಅವರು ತಮಗೆ ಅವಶ್ಯಕವಾದ ಗೊಬ್ಬರ, ಮೇವು, ಕಟ್ಟಿಗೆ ಮುಂತಾದವನ್ನು ಸಂಗ್ರಹಿಸುತ್ತಾರೆ. ಈ ಜಾಗವನ್ನು ಇವರೂ ಮಾರುವುದಿಲ್ಲ. ಹೀಗಾಗಿ ಬಡವರು ಯಾರದಾದರೂ ಮನೆಯ ಪಕ್ಕದಲ್ಲಿ, ಕಣದಲ್ಲಿ ಸಿಕ್ಕ ಸ್ವಲ್ಪ ಜಾಗದಲ್ಲೇ ಮನೆ ಕಟ್ಟಿಕೊಂಡು ವಾಸಮಾಡುತ್ತಾರೆ.

ಎರಡನೆಯ ಸಮಸ್ಯೆ ಎಂದರೆ, ಕುಡಿಯುವ ನೀರಿಗೆ ಸೂಕ್ತ ವ್ಯವಸ್ಥೆ ಇಲ್ಲದ್ದು. ಕೊಪ್ಪದಲ್ಲಿ ಹರಿಜನರಿಗೆಂದೇ ಪ್ರತ್ಯೇಕವಾಗಿ ಇರುವ ಒಂದು ಬಾವಿಯೂ ಸೇರಿದಂತೆ ಒಟ್ಟು ಮೂರು ಬಾವಿಗಳಿವೆ. ಉಳಿದ ಎರಡರಲ್ಲಿ ಒಂದು ಬಾವಿಯ ನೀರು ಸ್ವಲ್ಪ ಉಪ್ಪು, ಮತ್ತೊಂದು ಕೆರೆಯೊಂದರ ಪಕ್ಕದಲ್ಲಿರುವುದರಿಂದ ಇದರಲ್ಲಿಯ ನೀರು ಸಿಹಿಯಾಗಿದೆ. ಬೇಸಿಗೆಯಲ್ಲಿ ಕೆರೆಯಲ್ಲಿ ನೀರು ಬತ್ತಿದಾಗ, ಊರಲ್ಲಿಯ ಎಲ್ಲಾ ಬಾವಿಗಳಲ್ಲಿಯೂ ನೀರು ತಳ ಮುಟ್ಟುತ್ತದೆ. ಆಗ ಗ್ರಾಮಸ್ಥರು ಈ ಬಾವಿಗಳ ನೀರನ್ನೇ ಮುಗಿದುತಂದು ಉಪಯೋಗಿಸುತ್ತಾರೆ. ಉಪ್ಪುನೀರುಬಾವಿಯ ನೀರನ್ನು ದನಕರುಗಳ ಉಪಯೋಗಕ್ಕೆ, ತೊಳೆಯಲು ಮಾತ್ರ ಉಪಯೋಗಿಸುತ್ತಾರೆ.

ಕೊಪ್ಪಗ್ರಾಮಸ್ಥರಲ್ಲಿ ವಿದ್ಯಾಮಟ್ಟ ಕಡಿಮೆ ಇದ್ದು ೧೧೨೪ ಜನರಲ್ಲಿ ೫೧೬ ಜನರು ಅನಕ್ಷರಸ್ಥರು ಮತ್ತು ೩೪೫ ಜನ ಕೇವಲ ಪ್ರಾಥಮಿಕ ಮಟ್ಟದವರೆಗೆ ಮಾತ್ರ ಕಲಿತಿದ್ದಾರೆ. ಇದಕ್ಕೂ ಹೆಚ್ಚಿಗೆ ಕಲಿತ ಕೆಲವರು ಊರಿಂದ ಹೊರಗೆ ನೌಕರಿ ಮಾಡುತ್ತಿದ್ದು, ಹೊರಪ್ರಪಂಚದೊಡನೆ ಸಂಪರ್ಕ ಹೊಂದಿ ತಮ್ಮ ವಿಚಾರಗಳನ್ನು ಮತ್ತು ಅಭಿಪ್ರಾಯಗಳನ್ನು ಬದಲಿಸಿಕೊಂಡಿದ್ದಾರೆ. ಹೆಚ್ಚಿನ ವೇಳೆಯನ್ನು ಇವರು ಊರಿಂದ ಹೊರಗೆ ಕಳೆಯುವುದರಿಂದ ಅವರ ಕೆಲವೊಂದು ವಿಚಾರಗಳು ಈ ಜನರಿಗೆ ಒಪ್ಪಿಗೆ ಇಲ್ಲ. ಈ ಗ್ರಾಮಸ್ಥರು ಆರೋಗ್ಯ ಮತ್ತು ನೈರ್ಮಲ್ಯ ಮುಂತಾದ ವಿಷಯದ ಬಗ್ಗೆ ತಮ್ಮದೇ ಆದ ಕಲ್ಪನೆ ಮತ್ತು ಮೌಲ್ಯಗಳನ್ನು ಹೊಂದಿದ್ದಾರೆ. ಇವರ ನಂಬಿಕೆಯಂತೆ ಆರೋಗ್ಯ ಮತ್ತು ನೈರ್ಮಲ್ಯಗಳಿಗೆ ಯಾವ ಸಂಬಂಧವೂ ಇಲ್ಲ. ಅಂದರೆ ರೋಗಗಳು ಯಾವುದಾದರೂ ದೈವ ಮುನಿದಾಗ, ಮಾಟದಿಂದ, ಮೈಲಿಗೆಯಿಂದ ಬರುತ್ತವೆ. ಆದ್ದರಿಂದ ದೈವಗಳನ್ನು ಮೆಚ್ಚಿಸಲು, ಮಾಟ-ಮಂತ್ರವನ್ನು ಹೆಚ್ಚಿನ ಮಾಂತ್ರಿಕ ಶಕ್ತಿಯಿಂದ ನಿವಾರಿಸಲು ಮತ್ತು ಮೈಲಿಗೆಯನ್ನು ತೊಳೆದು ಮಡಿಮಾಡಿ ನಿವಾರಿಸಲು ಸಾಧ್ಯವೆಂದು ಇವರ ನಂಬಿಕೆ.

ಹೀಗಾಗಿ ಯಾರಿಗಾದರೂ ಆರೋಗ್ಯ ಕೆಟ್ಟರೆ, ಇದಕ್ಕೆ ಈ ಮೇಲಿನ ಯಾವುದಾದರೊಂದು ಕಾರಣಗಳನ್ನು ನೀಡಿ, ಅವುಗಳ ನಿವಾರಣೆಗೆ ಪೂಜಾರಿ, ಮಂತ್ರವಾದಿ, ನಾಟಿ ವೈದ್ಯ ಇವರ ಕಡೆ ಹೋಗುವವರು; ಆಧುನಿಕ ಔಷಧ ಪದ್ಧತಿಯ ವೈದ್ಯರ ಕಡೆ ಹೋಗುವುದಿಲ್ಲ. ಇದರಿಂದ ಕೊಪ್ಪ ಗ್ರಾಮದಲ್ಲಿ ಜಾನಪದ ಸಂಸ್ಕೃತಿಯ ಪ್ರಭಾವ ಹೆಚ್ಚಾಗಿದೆ ಎಂದು ತಿಳಿಯಬಹುದು. ಇನ್ನೂ ಕೆಲವರು ತಮ್ಮ ಎಲ್ಲಾ ಆಗುಹೋಗುಗಳಿಗೆ ತಮ್ಮ ಹಣೆಯಬರಹವೇ ಕಾರಣವೆಂದು ನಂಬುತ್ತಾರೆ. ಈ ನಂಬಿಕೆಯು ಅವರ ಜೀವನದ ಎಲ್ಲಾ ರಂಗಗಳಲ್ಲಿಯೂ ಕಂಡು ಬರುತ್ತಿದ್ದು ಮನುಷ್ಯ ಪ್ರಯತ್ನ ಹಾಗೂ ಮನಷ್ಯನ ಶಕ್ತಿಯಲ್ಲಿ ಇವರಿಗೆ ನಂಬಿಕೆ ಇನ್ನೂ ಮೂಡಿಲ್ಲ. ಈ ಕಾರಣದಿಂದ ವಿಜ್ಞಾನ ಮತ್ತು ತಾಂತ್ರಿಕ ರಂಗದಲ್ಲಿ ಬಂದಿರುವ ಯಾವ ಪ್ರಗತಿಯೂ ಇವರಿಗೆ ಮುಟ್ಟಿಲ್ಲ ಎನ್ನಬಹುದು. ಆದರೂ ಗ್ರಾಮಸ್ಥರು ಕುರುಡಾಗಿ ಅದನ್ನು ಅನುಸರಿಸುತ್ತಾ ಬಂದಿದ್ದಾರಾದ್ದರಿಂದ ಇವುಗಳಿಗೆ ಒಳಿತಿಗಿಂತ ತೊಂದರೆಗಳೇ ಹೆಚ್ಚಾಗಿವೆ.

ಕೊಪ್ಪಗ್ರಾಮ ಹೊರಜಗತ್ತಿನೊಡನೆ ಸಾಕಷ್ಟು ಸಂಬಂಧ ಹೊಂದಿದೆ. ಈವರೆಗೆ ೧೨ ಜನ ಪದವೀಧರರು ಮತ್ತು ಇತರೆ ೧೫ ಜನರು ಹೊರಗೆ ಸರಕಾರಿ, ಅರೆ ಸರಕಾರಿ ಹಾಗೂ ಖಾಸಗಿ ಸಂಘ-ಸಂಸ್ಥೆಗಳಲ್ಲಿ ಕೆಲಸದಲ್ಲಿದ್ದಾರೆ. ೧೫ ಜನ ವಿದ್ಯಾರ್ಥಿಗಳು ಧಾರವಾಡದಲ್ಲಿ ವಿವಿಧ ಶಾಲೆಗಳಲ್ಲಿ ಓದುತ್ತಿದ್ದಾರೆ. ಸಾರಿಗೆ ಸಂಚಾರದ ಬಗ್ಗೆ ಹೇಳುವುದಾದರೆ ಧಾರವಾಡ, ದಾಂಡೇಲಿ ಮತ್ತು ಸೂಪಾದ ನಡುವೆ ಓಡಾಡುವ ಬಸ್‌ಗಳು, ನೂರಾರು ಟ್ಯಾಕ್ಸಿಗಳು, ಲಾರಿಗಳು ಈ ಊರಿಂದ ಕೇವಲ ಒಂದು ಕಿಲೋಮೀಟರ್ ದೂರದಲ್ಲಿರುವ

ಹೆದ್ದಾರಿಯಲ್ಲಿ ಹೋಗುತ್ತವೆ. ೧೯೬೩ ರಿಂದ ಕೊಪ್ಪಕ್ಕೆ ನಾಲ್ಕು ಬಸ್‌ಗಳೂ ಬರುತ್ತಿದ್ದು, ರಾತ್ರಿ ಕೊನೆಗೆ ಬರುವ ಬಸ್ಸು ಇಲ್ಲಿಯೇ ತಂಗಿದ್ದು ಮುಂಜಾನೆ ಹೊರಡುತ್ತದೆ. ೧೯೭೫ರಿಂದ ಊರಿಗೆ ವಿದ್ಯುಚ್ಛಕ್ತಿ ಬಂದಿದ್ದು ಇದನ್ನು ಹೊಲಗಳಿಗೆ ನೀರೆತ್ತಲು, ಹಿಟ್ಟಿನ ಗಿರಣಿ ಓಡಿಸಲು ಮತ್ತು ಮನೆಗಳಲ್ಲಿ ದೀಪ ಬೆಳಗಿಸಲು ಉಪಯೋಗಿಸುತ್ತಾರೆ. ಹೀಗಾಗಿ ಗ್ರಾಮದಲ್ಲಿ ೩೯ ರೇಡಿಯೋಗಳು ಬಳಕೆಯಲ್ಲಿವೆ. ಧಾರವಾಡದ ಮುನಿಸಿಪಲ್ ಕಮಿಟಿಯ ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾದ ಕೆಲವರು ಈ ಊರಿನಲ್ಲಿದ್ದಾರೆ. ಇಲ್ಲಿ ಒಂದು ಯುವಕ ಮಂಡಳಿ, ಮಹಿಳಾ ಮಂಡಳಿಗಳಿವೆ ಮತ್ತು ಒಂದು ಸಹಕಾರ ಸಂಘವೂ ಇದೆ. ಧಾರವಾಡದಲ್ಲಿರುವ ಅನೇಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳೊಂದಿಗೆ ನೇರ ಸಂಬಂಧವನ್ನಿಟ್ಟುಕೊಂಡಿರುವ ವ್ಯಕ್ತಿಗಳೂ ಈ ಗ್ರಾಮದಲ್ಲಿದ್ದಾರೆ.

ಕೊಪ್ಪದ ಸುತ್ತಲೂ ಇರುವ ಗುಡ್ಡಗಳಲ್ಲಿ ಕಲ್ಲಿನ ಅನೇಕ ಹರೆಗಳಿದ್ದು ಅಲ್ಲಿಯೂ ಕೆಲವರು ಕೂಲಿ ಕೆಲಸಕ್ಕೆ ಹೋಗುತ್ತಾರೆ. ಗ್ರಾಮದಲ್ಲಿ ಮಾವು, ನೇರಳೆ, ಪೇರಲ ಮುಂತಾದ ಅನೇಕ ಬಗೆಯ ಹಣ್ಣುಗಳು ಬೆಳೆಯುತ್ತಿದ್ದು ಇವನ್ನು ಧಾರವಾಡದ ಪೇಟೆಯಲ್ಲಿ ಮಾರಲು ಕೆಲವರು ಹೋಗುತ್ತಾರೆ. ಇಲ್ಲಿಯ ರೈತರು ಮತ್ತು ಸಣ್ಣ ವ್ಯಾಪಾರಿಗಳು ಪ್ರತಿ ವಾರ ಧಾರವಾಡದ ಸಂತೆಗೆ ಅಕ್ಕಿ, ಬೇಳೆ, ಮಡಕೆ ಹಾಗೂ ಅವರೆಕಾಳು, ಬೆಣ್ಣೆ ಮಾರಲೂ ಹೋಗುತ್ತಾರೆ. ಹೀಗೆ ಹೊರ ಜಗತ್ತಿನೊಡನೆ ನೇರ ಸಂಪರ್ಕ ಹೊಂದಿದ್ದರೂ ಕೊಪ್ಪದ ಜನರಲ್ಲಿ ಆರೋಗ್ಯ, ನೈರ್ಮಲ್ಯ ಮುಂತಾದವುಗಳ ಬಗ್ಗೆ ಹೆಚ್ಚಿನ ಪ್ರಗತಿಯಾಗಿಲ್ಲ. ಈ ಜನರು ಪೇಟೆ ಎಂಬ ಪ್ರಪಂಚದೊಡನೆ ಸಂಬಂಧ ಹೊಂದಿದ್ದಾರಾದರೂ ಇವರು ರೈತ ಸಮಾಜ ಹಾಗು ಸಂಸ್ಕೃತಿಗೆ ಸೇರಿದವರು. ಆದ್ದರಿಂದ ಈ ಪೇಟೆಯ ಆಗು-ಹೋಗುಗಳು ತಮಗೆ ಸಂಬಂಧಿಸಿದವಲ್ಲವೆಂದು ತಿಳಿದು ಅವುಗಳಿಂದ ದೂರವಿರುತ್ತಾರೆ.

ಕೊಪ್ಪದಲ್ಲಿ ಐದು ವರ್ಷ ವಯಸ್ಸಿಗಿಂತ ಕಡಿಮೆ ಇರುವ ಮಕ್ಕಳ ಸಂಖ್ಯೆ ೧೬೮ ಮತ್ತು ಆರರಿಂದ ಹತ್ತು ವರ್ಷಗಳ ವಯಸ್ಸಿನವರ ಸಂಖ್ಯೆ ೧೪೫ ಇದೆ. ಸಾಮಾನ್ಯವಾಗಿ ಮಕ್ಕಳಲ್ಲಿ ಕಂಡು ಬರುವ ತೊಂದರೆಗಳೆಂದರೆ ಅನಾರೋಗ್ಯ, ಹಸಿವು, ಅನ್ನಸತ್ವ ಕಡಿಮೆ ಇರುವುದು, ಒಂಟಿತನ ಮತ್ತು ಭಯ. ಇಂದಿನ ಗ್ರಾಮೀಣ ಸ್ಥಿತಿಯಂತೆ, ಯಾವುದೇ ವೃತ್ತಿ ಹೊಂದಿದವರನ್ನೇ ತೆಗೆದುಕೊಂಡರೂ ಮಹಿಳೆಯರೂ ಸೇರಿದಂತೆ ಕುಟುಂಬದ ಎಲ್ಲಾ ಪ್ರೌಢ ಸದಸ್ಯರೂ ಹಗಲಲ್ಲಿ ಹೆಚ್ಚಿನ ವೇಳೆಯನ್ನು ಮನೆಯಿಂದ ಹೊರಗೆ ದುಡಿಯಲು, ಕಳೆಯುತ್ತಾರೆ. ಕೆಲವರು ಹಾಲು ಕುಡಿಯುವ ಮಕ್ಕಳನ್ನು ಕೆಲಸದ ತಾಣಕ್ಕೇ ಕರೆದುಕೊಂಡು ಹೋಗಿ ಅಲ್ಲಿ ಮರದ ನೆರಳಲ್ಲಿ ಜೋಲಿಗೆ ಕಟ್ಟಿ ಮಲಗಿಸಿ, ಕೆಲಸ ಮಾಡುತ್ತಾರೆ ಮತ್ತು ಅವು ಅತ್ತಾಗ ಒಮ್ಮೆ ಬಂದು ಹಾಲುಣಿಸಿ, ಮತ್ತೆ ಮಲಗಿಸಿ ಹೋಗುತ್ತಾರೆ. ಇದಕ್ಕೂ ದೊಡ್ಡ ಅಂದರೆ ಗಟ್ಟಿ ಆಹಾರ ತಿನ್ನಲು ಪ್ರಾರಂಭಿಸಿರುವ ಮಕ್ಕಳನ್ನು , ಅವರಲ್ಲೇ ಹಿರಿಯ ಮಗುವಿನ

ಆಶ್ರಯದಲ್ಲಿ ಬಿಟ್ಟು ಹೋಗುತ್ತಾರೆ. ಈ ಮಗೂ ಕೂಡ ಹೆಚ್ಚೆಂದರೆ ಏಳೆಂಟು ವರ್ಷ ವಯಸ್ಸಿನದಿರುತ್ತದೆ. ಈ ಚಿಕ್ಕ ಮಗು ತನ್ನ ತಮ್ಮ-ತಂಗಿಯರನ್ನು ಇಡೀ ದಿನ ತಾನೊಬ್ಬನೆ ಎಲ್ಲಾ ರೀತಿಯಿಂದ ನೋಡಿಕೊಳ್ಳಬೇಕಾಗುತ್ತದೆ. ಹೀಗೆ ಕೇವಲ ಚಿಕ್ಕಮಕ್ಕಳು ಮಾತ್ರ ಮನೆಯಲ್ಲಿ ಉಳಿಯುವುದರಿಂದ ಮನೆಯಲ್ಲಿಯ ವಸ್ತುಗಳ ಸುರಕ್ಷತೆಯ ದೃಷ್ಟಿಯಿಂದ, ತಂದೆ-ತಾಯಿಗಳು, ಮಕ್ಕಳನ್ನು ಮನೆಯಿಂದ ಹೊರಗೆ ಬಿಟ್ಟು ಬಾಗಿಲಿಗೆ ಬೀಗ ಹಾಕಿಕೊಂಡು ಹೋಗಿಬಿಡುತ್ತಾರೆ. ಆಗ ಮಕ್ಕಳು ಇಡೀ ದಿನ ಮನೆಯಿಂದ ಹೊರಗೇ ಇರಬೇಕಾಗುತ್ತದೆ.

ಎರಡನೆಯ ಸಮಸ್ಯೆ ಮಕ್ಕಳನ್ನು ಕಾಡುವ ಒಂಟಿತನ ಮತ್ತು ಭಯ. ಹಿಂದಿನ ಕಾಲಕ್ಕೆ ಅವಿಭಕ್ತಕುಟುಂಬಗಳಿದ್ದು ಅದರಲ್ಲಿ ಅಜ್ಜ-ಅಜ್ಜಿಯರು, ತಂದೆಯ ಅಣ್ಣತಮ್ಮಂದಿರು, ಅವರ ಹೆಂಡಿರು ಮತ್ತು ಮಕ್ಕಳು, ವಿಧವೆಯರಾದ ಅಕ್ಕ ತಂಗಿಯರು, ಅತ್ತೆಯರು ಹೀಗೆ ಅನೇಕ ಜನ ಸಂಬಂಧಿಕರಿಂದ ಮನೆ ತುಂಬಿರುತ್ತಿತ್ತು. ಹೀಗಾಗಿ ಮಗುವಿಗೆ ಆಡಲು, ಮಾತಾಡಲು ಮತ್ತು ಕೂಡಿಕೊಂಡು ಇರಲು ಯಾವಾಗಲೂ ಯಾರಾದರೊಬ್ಬರು ಮನೆಯಲ್ಲಿರುತ್ತಿದ್ದರು. ಅಲ್ಲದೆ ಹಿಂದಕ್ಕೆ ಕಳ್ಳುಬಳ್ಳಿ, ನೆರೆಹೊರೆ, ಜಾತಿ ಮತ್ತು ಸಮುದಾಯ ಸಂಬಂಧಗಳು ಭದ್ರವಾಗಿ ಹಾಗೂ ನಿಕಟವಾಗಿರುತ್ತಿದ್ದವು. ಅವಶ್ಯಕತೆ ಬಿದ್ದರೆ ಇವರಲ್ಲಿ ಯಾರಾದರೂ ಮಕ್ಕಳನ್ನು ನೋಡಿಕೊಳ್ಳುತ್ತಿದ್ದರು. ಹೀಗಾಗಿ ತಂದೆ-ತಾಯಿಗಳು ಹೊಲಗೆಲಸಕ್ಕೆ ಅಥವಾ ಹೊರಗೆಲ್ಲಾದರೂ ಹೋದರೂ ಮಗುವಿಗೆ ತಾನು ಒಂಟಿ ಎಂಬ ಭಾವನೆ ಬರುತ್ತಿರಲಿಲ್ಲ. ಇಂದು ಹೊಸ ನಂಟಸ್ಥಿಕೆಯಲ್ಲಿ ಸಂಬಂಧ ಮಾಡಿಕೊಳ್ಳುವುದು, ಆಸ್ತಿಗೆ ಹಕ್ಕು, ಆಧುನಿಕ ವಿದ್ಯಾಭ್ಯಾಸ ಮುಂತಾದವು ವ್ಯಕ್ತಿವ್ಯಕ್ತಿಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ತಂದಿವೆ. ಹೀಗಾಗಿ ಅವಿಭಕ್ತ ಕುಟುಂಬಗಳು ಒಡೆದು, ಕಳ್ಳುಬಳ್ಳಿ ಸಂಬಂಧಗಳು ಬಲಹೀನವಾಗಿವೆ. ಸ್ಥಳೀಯ ರಾಜಕೀಯದಿಂದಾಗಿ ಸಮುದಾಯ ಜೀವನವೂ ಶಿಥಿಲವಾಗಿದೆ. ಇದರಿಂದ ಮಕ್ಕಳಿಗೆ ಸಾಮಾಜಿಕ ಮತ್ತು ಮಾನಸಿಕ ಭದ್ರತೆ ತಪ್ಪಿದೆ.

ಮೂರನೆಯದಾಗಿ ಕೆಲವು ತಂದೆತಾಯಿಗಳು ಮಕ್ಕಳನ್ನು ಅವರ ಅಜ್ಜ ಅಜ್ಜಿಯರ ಕಡೆ ಬಿಟ್ಟು ಹೊಲಕಣಕೆಲಸಕ್ಕೆ ಹೋಗಬಹುದು. ಈ ವೃದ್ಧರು ತಾವೇ ಅನಾರೋಗ್ಯ, ಕುರುಡು ಹಾಗೂ ಕಿವುಡುತನದಿಂದ ತೊಂದರೆ ಪಡುತ್ತಿದ್ದರೆ ಅವರೇ ಬೇರೊಬ್ಬರ ಮೇಲೆ ಅವಲಂಬಿಗಳಾಗಬೇಕಾಗಿರುತ್ತದೆ. ಅಲ್ಲದೆ ಹೀಗೆ ಜೊತೆಗಿರುವ ಈ ಎರಡು ವಯೋಗುಂಪುಗಳ ಅವಶ್ಯಕತೆಗಳು, ಕಾರ್ಯ-ಚಟುವಟಿಕೆಗಳು ಭಿನ್ನವಾಗುತ್ತವೆ. ಹಿರಿಯರು ತಮ್ಮ ವಯೋ ಗುಂಪಿನವರೊಡನೆ ಹರಟೆ ಹೊಡೆಯುತ್ತಾ, ಹಾಯಾಗಿ ಒಂದೆಡೆ ಕೂಡಬೇಕು ಅಥವಾ ಮಲಗಬೇಕೆಂದರೆ, ಮಕ್ಕಳು ತಮ್ಮ ವಯಸ್ಸಿನವರೊಡನೆ ಆಡಲು ಹೋಗಬೇಕು, ಕುಣಿದು-ಕುಪ್ಪಳಿಸಬೇಕೆಂದು ತವಕಿಸುತ್ತವೆ. ಹೀಗಾಗಿ ಇವರಲ್ಲಿ

ಹೊಂದಾಣಿಕೆ ಬಾರದೆ ಹಿರಿಯ ವ್ಯಕ್ತಿ ಅವರ ಭಾವನೆಗಳಿಗೆ ಅಡ್ಡಿ ತರುತ್ತಾರೆ ಆಗಲೂ ಮಗು ಮಾನಸಿಕ ಸಮಸ್ಯೆಗಳನ್ನು ಅನುಭವಿಸಬಹುದು.

ಕೊಪ್ಪದ ಮಕ್ಕಳಿಗೆ ಬರುವ ಅನೇಕ ದೈಹಿಕ ರೋಗಗಳಿಗೆ ಅವರ ಪರಿಸರವೇ ಬಹುತೇಕ ಕಾರಣವಿದೆ. ಅಲ್ಲದೆ ಇತರೆ ಯಾರೇ ಭಾರತೀಯರಂತೆ ತಂದೆತಾಯಂದಿರಲ್ಲಿ, ನೆರೆಹೊರೆಯವರಲ್ಲಿ ನೈರ್ಮಲ್ಯದ ಬಗ್ಗೆ ಸೂಕ್ತ ತಿಳುವಳಿಕೆ ಇಲ್ಲ. ಅವರು ದನಕರುಗಳನ್ನು ಮನೆಯೊಳಗೆ ಅಥವಾ ಅದರಎಡ-ಬಲದಲ್ಲಿ ಇಟ್ಟುಕೊಳ್ಳುವುದರಿಂದ ಎಲ್ಲೆಂದರಲ್ಲಿ ಸಗಣಿ, ಕಸ ಬಿದ್ದಿರುತ್ತದೆ. ಈ ಊರಿನ ಮತ್ತೊಂದು ವಿಶೇಷತೆ ಎಂದರೆ ಬಹುತೇಕ ಎಲ್ಲರೂ ತಂಬಾಕು ತಿನ್ನುವುದು ಮತ್ತು ಎಲ್ಲೆಂದರಲ್ಲಿ ಉಗುಳುವುದು. ಹೀಗಾಗಿ ಅಲ್ಲೇ ಆಡುವ ತಿಳುವಳಿಕೆ ಇಲ್ಲದೆ ಮಕ್ಕಳು ಅದರ ಮೇಲೆ ಓಡಾಡಿ, ಆಡಿ ತಮ್ಮ ಮೈ-ಕೈಗಳನ್ನು ಕೊಳೆ ಮಾಡಿಕೊಳ್ಳುತ್ತವೆ. ಇವರ ತಂದೆತಾಯಂದಿರು ದಿನವಿಡೀ ಹೊಲ-ಕಣದಲ್ಲಿ ದುಡಿದು ಸಂಜೆ ಸೋತು ಸುಣ್ಣವಾಗಿ ಬಂದರೂ ತಮ್ಮ ಮನೆಗೆಲಸವನ್ನೂ ತಾವೇ ಮಾಡಿಕೊಳ್ಳಬೇಕು. ಮನೆ ಬಟ್ಟೆಗೆ ಬೇಕಾದ ನೀರು ಹಿಟ್ಟು, ಮೇವು, ಕಟ್ಟಿಗೆ-ಕುಳ್ಳು ಜೋಡಿಸಿಕೊಳ್ಳಬೇಕು. ಹೀಗಾಗಿ ಅವರಿಗೆ ತಮ್ಮ ಮಕ್ಕಳ ಮೈ-ಕೈ ತೊಳೆಯಲು, ಬಟ್ಟೆ ಬದಲಾಯಿಸಲು ಸಮಯ ಮತ್ತು ಸಂಯಮ ಇರುವುದಿಲ್ಲ. ಇದರಿಂದಾಗಿ ಮಕ್ಕಳ ಮುಖ-ಮೈಗಳು ಸದಾ ಕೊಳೆಯಾಗಿರುತ್ತವೆ ಮತ್ತು ಇದು ರೋಗಗಳಿಗೆ ದಾರಿಯಾಗುತ್ತದೆ.

ಈ ಊರಿನಲ್ಲಿ ಮಕ್ಕಳಿಗೆ ಬರುವ ಸಾಮಾನ್ಯ ರೋಗಗಳೆಂದರೆ ರಕ್ತಹೀನತೆ, ನಾಯಿಕೆಮ್ಮು, ಲಿವರ್ ರೋಗ, ಜ್ವರ, ಸೆಟೆ ಬೇನೆ, ಜಾಂಡೀಸ್, ಕಜ್ಜಿಮುಂತಾದವು. ಇವೂ ಅಲ್ಲದೆ ಜಂತು ಹುಳು, ಹಲ್ಲಿನ ಬೇನೆ, ಕಣ್ಣಿನ ಬೇನೆ, ಕೈಮೈ ಮೇಲಿನ ಗಾಯಗಳು ಸರ್ವೇಸಾಮಾನ್ಯ. ಇಲ್ಲಿ ಪೌಷ್ಠಿಕ ಆಹಾರದ ಕೊರತೆಯಿಂದಾಗಿ ಕ್ಷಯರೋಗದ ಉಪಟಳ ಹೆಚ್ಚಾಗಿದ್ದು ಅನೇಕ ತಂದೆತಾಯಂದಿರು ಈ ರೋಗದಿಂದ ಬಳಲುತ್ತಿದ್ದಾರೆ. ಹೀಗಾಗಿ ರೋಗ ಚಿಕ್ಕ ವಯಸ್ಸಿಗೆ ಮಕ್ಕಳಿಗೂ ಬರುತ್ತದೆ. ನಾವು ಹಿಂದೆಯೇ ಹೇಳಿರುವಂತೆ ತಂದೆತಾಯಂದಿರಲ್ಲಿ ಮೂಢ ನಂಬಿಕೆಗಳು, ಆರೋಗ್ಯ, ನೈರ್ಮಲ್ಯ, ರೋಗಗಳ ಬಗ್ಗೆ ಅಜ್ಞಾನ, ರೋಗ ಬರದಂತೆ ಮುಂಜಾಗ್ರತೆ ವಹಿಸದೆ ಇರುವುದು, ಅವುಗಳ ನಿವಾರಣೋಪಾಯಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದಿರುವುದು ಹೆಚ್ಚಿನ ಹಾನಿಗೆ ಎಡೆಯಾಗಿದೆ. ಯಾವುದಾದರೂ ಖಾಯಿಲೆ ಬಂದರೆ ಅದಕ್ಕೆ ಮೊದಲು ಮನೆಯ ವೈದ್ಯ ಮಾಡುತ್ತಾರೆ. ಒಂದೆರಡು ದಿನಗಳಲ್ಲಿ ರೋಗ ವಾಸಿಯಾಗದಿದ್ದರೆ ಓಣಿಯಲ್ಲಿಯ ಅಥವಾ ಊರಲ್ಲಿಯ ನಾಟಿ ವೈದ್ಯರ ಕಡೆ ಹೋಗುತ್ತಾರೆ.

ಈ ಊರಲ್ಲಿ ಇಬ್ಬರು ಮಹಿಳೆಯರು, ಮೂರು ಜನ ಪುರುಷರು "ವೈದ್ಯ" ಮಾಡುತ್ತಾರೆ. ಇವರಲ್ಲದೆ ಮೂರು ಜನ ಮಾಟ ಮಾಡುವುದರಲ್ಲಿ ಪರಿಣಿತರಿದ್ದಾರೆ. ಜನ ಸಾಮಾನ್ಯರ ನಂಬಿಕೆಯಂತೆ ಇವರು ವಾಸಿ ಮಾಡದ ರೋಗವಿಲ್ಲ. ಅಲ್ಲದೆ ತಾವು ನೀಡಿದ

ಸೇವೆಗೆ ಇವರು ಯಾವ ಬಗೆಯ ಸಂಭಾವನೆಯನ್ನೂ ತೆಗೆದುಕೊಳ್ಳುವುದಿಲ್ಲವಾದ್ದರಿಂದ ಬಡವರು ಇವರನ್ನೇ ಆಶ್ರಯಿಸುತ್ತಾರೆ. ಸಾಕಷ್ಟು ದಿನಗಳ ಚಿಕಿತ್ಸೆಯ ನಂತರವೂ ರೋಗ ಗುಣವಾಗದಿದ್ದರೆ ಗ್ರಾಮಸ್ಥರು ಆಗಾಗ ಗ್ರಾಮಕ್ಕೆ ಬರುವ ಕೆಲವೊಂದು ಗಾಂವಟಿ ವೈದ್ಯರಿಂದ ಚಿಕಿತ್ಸೆ ಪಡೆಯುತ್ತಾರೆ. ಈ ವೇಳೆಗೆ ಮಗುವಿಗೆ ರೋಗ ವಾಸಿಯಾಗಲೂ ಬಹುದು ಅಥವಾ ಅದು ಸತ್ತಿದ್ದರೂ ಆಶ್ಚರ್ಯವಲ್ಲ. ಕೆಲವರು ಧಾರವಾಡದಲ್ಲಿಯ ಆಧುನಿಕ ಔಷಧ ನೀಡುವ ವೈದ್ಯರ ಕಡೆ ಹೋಗುತ್ತಾರೆ. ಸರಿಯಾದ ಸಮಯಕ್ಕೆ ಸರಿಯಾದ ವೈದ್ಯರ ಕಡೆ ಹೋದವರು ಬದುಕಿ ಉಳಿದಿದ್ದಾರೆ. ಇಲ್ಲದವರು ಸುಲಭವಾಗಿ ವಾಸಿಯಾಗಬಹುದಾದ ಸಣ್ಣ ಪುಟ್ಟ ಖಾಯಿಲೆಗೆ ತಮ್ಮ ಮಕ್ಕಳನ್ನು ಕಳೆದುಕೊಂಡಿದ್ದಾರೆ.

ಯಾವುದೇ ಗ್ರಾಮೀಣ ಸಮಾಜದಂತೆ ಕೊಪ್ಪದ ಜನರು ತಾವು ತಿನ್ನುವ ಆಹಾರ, ಕುಡಿಯುವ ಪಾನೀಯಗಳಿಗೆ ತಮ್ಮದೇ ಮೌಲ್ಯಗಳನ್ನು ನೀಡಿದ್ದಾರೆ. ತಾವು ದಿನನಿತ್ಯದಲ್ಲಿ ಉಣ್ಣದಿದ್ದರೂ ಉತ್ತಮವಾದ ಊಟ, ತಿಂಡಿ ಯಾವುದೆಂದು ಕೇಳಿದರೆ ಅದರಲ್ಲಿ ಹಾಲು, ಮೊಸರು, ತುಪ್ಪ, ಗೋಧಿ ಮುಂತಾದವನ್ನು ಸೇರಿಸುತ್ತಾರೆ. ಜೊತೆಗೆ ಕೆಲಬಗೆಯ ಹಣ್ಣುಗಳನ್ನು ಮತ್ತು ತರಕಾರಿಗಳನ್ನು ಸೇರಿಸುತ್ತಾರೆ. ಕೆಲವೊಂದು ಕುಟುಂಬದಲ್ಲಿ ಇವೆಲ್ಲವೂ ಇದ್ದರೂ ಮೂಢ ನಂಬಿಕೆಯಿಂದಾಗಿ ಅವರಿಗೆ ಈ ಕಡೆ ಗಮನವಿರುವುದಿಲ್ಲ ಅಥವಾ ಹಣದಾಸೆಗೆ ಮತ್ತು ತಮ್ಮ ಇತರೆ ಅಡಚಣೆಗೆ ಮಾರುತ್ತಾರೆ. ಜೊತೆಗೆ ಈ ಊರಿನಿಂದ ಪ್ರತಿದಿನ ೧೦೦ ರಿಂದ ೧೫೦ ಲೀಟರ್‌ಗಳಷ್ಟು ಹಾಲನ್ನು ಧಾರವಾಡದ ಬಳಕೆದಾರರಿಗೆ ಮಾರುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಈ ಕುಟುಂಬಗಳು ತಾವು ಬಳಸಿ ಮಿಕ್ಕಿದ ಹಾಲನ್ನು ಮಾತ್ರ ಮಾರದೆ, ಹಣದ ಅಡಚಣೆಗೆ ಅಥವಾ ಆಸೆಗೆ, ಎಲ್ಲವನ್ನೂ ಮಾರಿಬಿಡುತ್ತಾರೆ. ನಮ್ಮ ಅನುಭವವನ್ನೇ ಹೇಳಬೇಕೆಂದರೆ ನಾವು ಕೊಪ್ಪದಲ್ಲಿ ಸಂಶೋಧನೆಗೆಂದು ವಾಸವಾಗಿದ್ದಾಗ ಹತ್ತಾರು ದನಕರುಗಳಿದ್ದ ಅನೇಕ ದೊಡ್ಡ ದೊಡ್ಡ ಕುಟುಂಬದಲ್ಲಿಯೂ ನಾವು ಕಪ್ಪನೆಯ ಚಹ ಕುಡಿಯಬೇಕಾಗುತ್ತಿತ್ತು. ಹೀಗೆ ಕೊಪ್ಪದಲ್ಲಿ ಉತ್ಪತ್ತಿಯಾಗುವ ಅನೇಕ ವಸ್ತುಗಳು ಅಲ್ಲಿಯ ಜನರಿಗೆ ಸಿಗುವುದಿಲ್ಲ. ಹಣದ ವ್ಯವಹಾರ, ಕಳ್ಳುಬಳ್ಳಿ ಮತ್ತು ನೆರೆ ಹೊರೆ ಸಂಬಂಧಗಳು ಕೆಟ್ಟಿರುವುದರಿಂದ ಪುಕ್ಕಟೆ ಕೇಳಿದರೆ ಯಾರೂ ಹಾಲು ಕೊಡುವುದಿಲ್ಲ. ಆದ್ದರಿಂದ ಬಡವರ ಮಕ್ಕಳಿಗೆ ತಾಯಿಯ ಹಾಲು ಬಿಟ್ಟರೆ ಮತ್ತಾವ ಹಾಲೂ ಸಿಗುವುದಿಲ್ಲ.

ಈ ಗ್ರಾಮದಲ್ಲಿ ನಾವು ವಿಚಾರಿಸಿದ ಯಾವ ಕುಟುಂಬದಲ್ಲೂ ಮಕ್ಕಳಿಗೆಂದೇ ಪತ್ಯೇಕವಾದ ಮತ್ತು ಸೂಕ್ತವಾದ ಆಹಾರ ತಯಾರಿಸುವುದು ತಿಳಿದುಬರಲಿಲ್ಲ. ಅಂದರೆ ಪ್ರೌಢವಯಸ್ಕರಿಗೆಂದು ಮಾಡಿದ ಆಹಾರವನ್ನೇ ಮಕ್ಕಳು ತಿನ್ನುತ್ತಾರೆ. ಇದು ಕಾರ ಅಥವಾ ಗಟ್ಟಿಯಾಗಿದ್ದು ಮಕ್ಕಳು ಸುಲಭವಾಗಿ ತಿನ್ನಲು ಮತ್ತು ಜೀರ್ಣಿಸಿಕೊಳ್ಳಲು ಸಾಧ್ಯವಿಲ್ಲ. ತಮ್ಮ ಮಕ್ಕಳ ಮೇಲೆ ಅವರಿಗೆ ಪ್ರೀತಿ ಇಲ್ಲವೆಂದಲ್ಲ. ಆದರೆ ಮಕ್ಕಳ ಅವಶ್ಯಕತೆಗಳನ್ನು ಗಮನಿಸಿ

ಸೂಕ್ತ ಆಹಾರವನ್ನು ಸುಲಭವಾಗಿ ತಯಾರಿಸುವ ಅವಶ್ಯಕತೆ ಮತ್ತು ಮಾರ್ಗ ಇವರಿಗೆ ತಿಳಿಯದು. ಅದೂ ಅಲ್ಲದೆ ಮಕ್ಕಳಿಗೆ ಆಹಾರವನ್ನು ಸಕಾಲಕ್ಕೆ, ಸೂಕ್ತವಾದ ರೀತಿಯಲ್ಲಿ ನೀಡಬೇಕೆಂಬುದರ ಅರಿವು ಕೂಡ ಅವರಿಗೆ ಇಲ್ಲ. ಮಕ್ಕಳಿಗೆ ಆಹಾರವನ್ನು ಎಷ್ಟು ಸಮಯದ ಅಂತರದಲ್ಲಿ ನೀಡುತ್ತೀರೆಂದು ಕೇಳಿದ ಪ್ರಶ್ನೆಯೊಂದಕ್ಕೆ ತಾಯಂದಿರೆಲ್ಲಾ "ಅವು ಅತ್ತಾಗಲ್ಲಾ" ಎಂದು ಉತ್ತರಿಸಿದರು. ಆದರೆ ಮಕ್ಕಳು ಅಳುವುದು ಹಸಿವಾದಾಗ ಮಾತ್ರವಲ್ಲ ಮತ್ತು ಅವು ಆಹಾರಕ್ಕಾಗಿ ಅತ್ತಾಗ ತಾಯಂದಿರು ಮನೆಯಲ್ಲಿ ಇಲ್ಲದೆಯೂ ಇರಬಹುದು.

ಕೊಪ್ಪ ಗ್ರಾಮದ ರೂಢಿಯಂತೆ ತಂದೆತಾಯಿಗಳು ಊಟಕ್ಕೆ ಕುಳಿತಾಗ ಮಕ್ಕಳನ್ನೂ ತಮ್ಮೊಂದಿಗೆ ಕರೆದುಕೊಳ್ಳುತ್ತಾರೆ. ಕೆಲಸದ ಒತ್ತಡದಿಂದಾಗಿ ಹಿರಿಯರಿಗೆ ಅವಸರವಿರುವುದರಿಂದ ಅವರು ಬೇಗನೇ ಉಂಡು ಮುಗಿಸಬಹುದು. ಆದರೆ ಮಕ್ಕಳು ಅಷ್ಟೇ ವೇಗದಲ್ಲಿ ತಿಂದು ಮುಗಿಸಲಾರರು. ಜೊತೆಗೆ ಅವರು ಹೊಲಗೆಲಸಕ್ಕೆ ಹೋಗುವಾಗ ಅವು ನಡುವೆ ಕೇಳಿದರೆ ತಿನ್ನಿಸಲೆಂದು, ಏನಾದರೂ ಸ್ವಲ್ಪ ಉಳಿಸಿಕೊಟ್ಟಿರುತ್ತಾರೆ. ಅನೇಕ ಕುಟುಂಬಗಳಲ್ಲಿ ಆದರಲ್ಲೂ ಕೂಲಿಕೆಲಸಕ್ಕೆ ಹೋಗುವವರು, ಬೆಳಿಗ್ಗೆ ಊಟ ಮಾಡುವುದು ಸುಮಾರು ಎಂಟು ಗಂಟೆಗೆ. ಈ ಆಹಾರದ ಸ್ವಲ್ಪ ಭಾಗವನ್ನು ಮಕ್ಕಳು ಮಧ್ಯಾಹ್ನವೂ ತಿನ್ನುತ್ತಾರೆ. ಹೀಗಾಗಿ ಸಂಜೆಯಾದಂತೆ ಕೊಪ್ಪದ ಹಸಿದ ಮಕ್ಕಳು ಹಸಿವಿನಿಂದಾಗಿ, ತಾಯಂದಿರಿಗಾಗಿ ಅಳುವ ಧ್ವನಿ ಹೃದಯವಿದ್ರಾವಕವಾದದ್ದು. ಅವರು ಹೊಲದಿಂದ ಹಿಂತಿರುಗಿ ಬಂದು ಅಡುಗೆ ಮಾಡಿ ತಿನ್ನಿಸುವವರೆಗೂ ಅವು ಗೋಳಿಡುತ್ತಿರುತ್ತವೆ.

ತಂದೆ ತಾಯಿಗಳು ಮನೆಗೆ ಹಿಂತಿರುಗಿದ ಮಾತ್ರಕ್ಕೆ ಇವರಿಗೆ ಕೂಡಲೇ ಊಟ ಸಿಗುವುದಿಲ್ಲ. ಅನೇಕ ಬಡ ಕುಟುಂಬಗಳಲ್ಲಿ ಹೊಲದಿಂದ ಬಂದ ತಾಯಿಯೇ ಅಡಿಗೆ ಮಾಡಬೇಕಾಗುವುದರಿಂದ ಕಡಿಮೆ ಎಂದರೆ ರಾತ್ರಿ ಎಂಟು ಗಂಟೆಯವರೆಗಾದರೂ ಕಾಯಬೇಕಾಗುತ್ತದೆ. ಈ ವೇಳೆಗೆ ಕೆಲವೊಮ್ಮೆ ಹಸಿದು ಬಳಲಿ ಕಂಗಾಲಾಗಿದ್ದ ಮಕ್ಕಳು ತಮ್ಮ ತಾಯಂದಿರನ್ನು ನೋಡಿದ ಆನಂದಮಾತ್ರದಿಂದ ನಿದ್ರೆ ಹೋಗಿಬಿಡುತ್ತವೆ ಅಥವಾ ನಿದ್ರೆಯ ಗುಂಗಿನಲ್ಲಿರುತ್ತವೆ. ಈ ಸ್ಥಿತಿಯಲ್ಲಿ ತಾಯಂದಿರು ಅವರಿಗೆ ಉಣಿಸಬೇಕೆಂದರೂ ಅದು ಸಾಧ್ಯವಾಗುವುದಿಲ್ಲ. ಹೀಗೆ ಗ್ರಾಮಾಂತರ ಮಕ್ಕಳು ಸರಿಯಾದ ಊಟ-ಉಪಚಾರಗಳಿಲ್ಲದೆ ಕೊರಗುತ್ತವೆ. ಇದರಿಂದ ಅವರ ದೇಹದಂತೆ ಬುದ್ಧಿಯೂ ಕುಂಟಿತವಾಗುತ್ತದೆ.

ನಾನಿಲ್ಲಿ ಹೇಳಿರುವ ವಿಚಾರಗಳು ಕೊಪ್ಪಕ್ಕೆ ಸಂಬಂಧಿಸಿದವಾದರೂ ಇವು ಭಾರತದ ಇತರೆ ಯಾವುದೇ ಹಳ್ಳಿಗೆ ಹೊರತಲ್ಲ. ಇದೇ ಪರಿಸ್ಥಿತಿ ಮುಂದುವರೆದರೆ ಮಕ್ಕಳು ಕೊರಗಿ ಜೀವನದಲ್ಲಿ ಬೇಗನೆ ಸಾಯುತ್ತವೆ, ಇಲ್ಲವೆ ರೋಗಸ್ಥರಾಗಿ, ಬುದ್ಧಿಮಾಂದ್ಯರಾಗಿ ಬೆಳೆಯುತ್ತವೆ. ಈ ರೋಗಸ್ಥ ಮಕ್ಕಳೇ ಮುಂದೆ ರಾಷ್ಟ್ರದ ಪ್ರಜೆಗಳಾಗುತ್ತಾರಾದ್ದರಿಂದ

ದೇಶವೇ ರೋಗಿಗಳ ಸಂತೆಯಾಗುತ್ತದೆ. ಇದನ್ನು ಮನಗಂಡು ನಮ್ಮ ಸರಕಾರ ಈಗಾಗಲೇ ಕೆಲವೊಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆದರೆ ಅದರಲ್ಲಿಯ ಕೆಲವು ನ್ಯೂನತೆಗಳಿಂದಾಗಿ ಇವು ಸರಿಯಾಗಿ ಕಾರ್ಯ ಮಾಡುತ್ತಿಲ್ಲ. ಈ ಕಾರ್ಯಕ್ರಮಗಳನ್ನು ಸೂಕ್ತ ರೀತಿಯಿಂದ ಮಾಡಿ ಮಕ್ಕಳ ಕಲ್ಯಾಣ ಮಾಡುವುದರ ಮೂಲಕ ದೇಶದ ಸಂಪತ್ತನ್ನು ಹೇಗೆ ಉಳಿಸಿಕೊಳ್ಳಬಹುದೆಂಬುದರ ಬಗ್ಗೆ ಇಲ್ಲಿ ಕೆಲವೊಂದು ಸಲಹೆಗಳನ್ನು ನೀಡಲಾಗಿದೆ.

ಮೊದಲನೆಯದಾಗಿ, ಸರಕಾರವು ತನ್ನ ಸಮಾಜ ಕಲ್ಯಾಣ ಸಿಬ್ಬಂದಿಯ ಸಹಾಯದಿಂದ ಗ್ರಾಮೀಣ ಜನರಲ್ಲಿ ಆರೋಗ್ಯ, ನೈರ್ಮಲ್ಯ ಮುಂತಾದ ವಿಷಯದ ಬಗ್ಗೆ ಸರಿಯಾದ ಮಾಹಿತಿ ನೀಡಿ ಜನರನ್ನು ಜಾಗೃತರನ್ನಾಗಿ ಮಾಡಬೇಕು. ಇವರು ತಮ್ಮೊಂದಿಗೆ ಸೂಕ್ಷ್ಮದರ್ಶಕ ಯಂತ್ರ, ಚಲನಚಿತ್ರ ತೋರಿಸುವ ಸಾಧನ ಮುಂತಾದವನ್ನು ತಂದು ಜನರಿಗೆ ಅವರು ತಿನ್ನುವ ಆಹಾರ ಮತ್ತು ಕುಡಿಯುವ ನೀರನ್ನೇ ತೆಗೆದುಕೊಂಡು ಅವುಗಳಲ್ಲಿರುವ ರೋಗಾಣುಗಳನ್ನು ತೋರಿಸಿ ತಿಳಿಯಹೇಳಬೇಕು. ಎರಡನೆಯದಾಗಿ, ಜನರಲ್ಲಿಯ ಮೂಢನಂಬಿಕೆಗಳನ್ನು ಕಳೆದು ಅವರು ಆಧುನಿಕ ವೈದ್ಯಕೀಯಶಾಸ್ತ್ರದ ಸಹಾಯ ಪಡೆಯುವಂತೆ ಮಾಡಬೇಕು. ಇದಕ್ಕೆ ಪರಿಹಾರವಾಗಿ ಹಳ್ಳಿಯಲ್ಲಿಯ ನಾಟಿ ವೈದ್ಯರ ಬಗ್ಗೆ ಸರಿಯಾಗಿ ತಿಳಿಯಹೇಳಬೇಕು. ಮೂರನೆಯದಾಗಿ, ಆಧುನಿಕ ವೈದ್ಯಕೀಯ ಅನುಕೂಲತೆಗಳು ಊರಲ್ಲೇ ಎಲ್ಲರಿಗೂ ಸಿಗುವಂತೆ ಮಾಡಬೇಕು. ಬಡತನ ಹಾಗೂ ವೇಳೆಯ ಅಭಾವದಿಂದ ಗ್ರಾಮಸ್ಥರು ದೂರದ ಪೇಟೆಯಲ್ಲಿಯ, ವೈದ್ಯರ ಕಡೆ ಹೋಗಲು ಹಿಂಜರಿಯುತ್ತಾರೆ. ಆದರೆ ಪುಕ್ಕಟೆಯಾಗಿ, ಸರಿಯಾದ ಸೌಲಭ್ಯಗಳು ಊರಲ್ಲಿಯೇ ಸಿಕ್ಕರೆ ಅವರು ಪಡೆಯಲು ಮುಂದೆ ಬರುತ್ತಾರೆ. ಆದ್ದರಿಂದ ಗ್ರಾಮೀಣ ಜನರಲ್ಲಿ ಸೇವೆ ಸಲ್ಲಿಸಲು ವಿಶೇಷವಾಗಿ ತರಬೇತಿ ಪಡೆದ, ಧನ ಪಿಶಾಚಿಗಳಲ್ಲದ ವೈದ್ಯರನ್ನು, ವೈದ್ಯಕೀಯ ಸಿಬ್ಬಂದಿಯನ್ನು ತರಬೇಕು.

ನಾಲ್ಕನೆಯದಾಗಿ, ನಮ್ಮಲ್ಲಿ ಸದ್ಯ ಜಾರಿಯಲ್ಲಿರುವ ಕಡ್ಡಾಯ ಶಿಕ್ಷಣವನ್ನು ಅಕ್ಷರಶಃ ಜಾರಿಗೆ ತರಬೇಕು. ಅಂದರೆ ೧೬ ವರ್ಷಕ್ಕೆ ಕೆಳಗಿನ ವಯಸ್ಸಿನವರೆಲ್ಲರನ್ನೂ ಕಡ್ಡಾಯವಾಗಿ ಶಾಲೆಗೆ ತರಬೇಕು. ಈ ಶಾಲೆಗಳಲ್ಲಿ ಅವರಿಗೆ ಆರೋಗ್ಯ ನೈರ್ಮಲ್ಯ ಮತ್ತು ಓದುಬರಹದ ಬಗ್ಗೆ ಕಲಿಸುವುದರ ಜೊತೆಗೆ ಸರಿಯಾದ ಊಟ, ಬಟ್ಟೆ ಮುಂತಾದವನ್ನು ಒದಗಿಸಬೇಕು. ಆದರೆ ಇಂದು ಸಾಕಷ್ಟು ಶಾಲಾ ಕಟ್ಟಡಗಳು, ಶಿಕ್ಷಕರು, ಪುಸ್ತಕ, ಹಣ ಮುಂತಾದವು ಇಲ್ಲದೆ ಈ ಕಾರ್ಯಕ್ರಮ ಕೇವಲ ಸರಕಾರದ ಪುಸ್ತಕದಲ್ಲಿ ಮಾತ್ರ ಇದೆ. ಇದರಿಂದ ಅವರ ಶಿಕ್ಷಣ ಅಷ್ಟೇ ಅಲ್ಲ ಇತರ ಕಲ್ಯಾಣ ಕಾರ್ಯಗಳೂ ಕುಂಠಿತವಾಗಿವೆ. ಜೊತೆಗೆ ಪ್ರತಿ ಊರಿಗೂ ಒಂದು, ಸಾಧ್ಯವಾದರೆ ಅದರ ಜನಸಂಖ್ಯೆಯಂತೆ ಹೆಚ್ಚು ಬಾಲವಾಡಿಗಳನ್ನು ತೆಗೆಯಬೇಕು. ಈ ಬಾಲವಾಡಿಗಳಿಗೆ ಎಲ್ಲಾ ಮಕ್ಕಳನ್ನು ಕಡ್ಡಾಯವಾಗಿ ತಂದು ಇಲ್ಲಿಯೇ ಅವರ ಸ್ನಾನ,

ಊಟ, ವಿದ್ಯೆ ಮುಂತಾದವುಗಳಿಗೆ ವ್ಯವಸ್ಥೆ ಮಾಡಬೇಕು. ಈ ವಯಸ್ಸಿನ ಮಕ್ಕಳಿಗೆ ವೈದ್ಯಕೀಯ ಸವಲತ್ತು ಕಡ್ಡಾಯವಾಗಿ ದೊರಕಬೇಕು. ಆಗ ಮಾತ್ರ ತಂದೆತಾಯಿಗಳು ಅವರ ಆರೋಗ್ಯದ ಬಗ್ಗೆ ತಿಳಿದವರಲ್ಲವಾದರೂ ಮತ್ತು ಬಡವರಿದ್ದರೂ ಇವು ಮಕ್ಕಳಿಗೆ ಸಿಗುತ್ತವೆ.

ಬಡ ತಂದೆತಾಯಂದಿರು ಹೊಲಗೆಲಸಕ್ಕೆ ಹೋದಾಗ, ಅವರ ಮಕ್ಕಳು ರೋಗದಿಂದ ನರಳುತ್ತಿರುವಾಗ ಇವರನ್ನು ನೋಡಿಕೊಳ್ಳಲು ಸೂಕ್ತ ತರಬೇತಿ ಹೊಂದಿದ ಶಿಕ್ಷಕರು ಮತ್ತು ವೈದ್ಯಕೀಯ ಕಾರ್ಯಕರ್ತರನ್ನು ನೇಮಿಸಬೇಕು. ಆಗ ಮಾತ್ರ ತಂದೆತಾಯಿಗಳು ತಮ್ಮ ಕೆಲಸವನ್ನು ಸರಿಯಾಗಿ, ಮನಸ್ಸಿಟ್ಟು ಮಾಡಬಲ್ಲರು ಮತ್ತು ಇವರಿಗೂ ಮಾನಸಿಕವಾದ ತೊಂದರೆ ತಪ್ಪುತ್ತದೆ.

ಈ ಎಲ್ಲಾ ಅವಕಾಶಗಳನ್ನು ಉಪಯೋಗಿಸಿಕೊಂಡು ನಮ್ಮ ಭಾವೀ ಪ್ರಜೆಗಳಾದ ಮಕ್ಕಳು ಉತ್ತಮವಾಗಿ ಮುಂಬರುವರು. ಇಂತಹ ಒಂದು ಸಮಗ್ರ ಕಾರ್ಯಕ್ರಮದಿಂದ ಮಕ್ಕಳ, ದೇಶದ ಹಾಗೂ ಭಾವೀ ಜನಾಂಗದ ಕಲ್ಯಾಣವಾಗುತ್ತದೆ. ಆರೋಗ್ಯವಂತ ಮತ್ತು ಸುಶಿಕ್ಷಿತ ಮಕ್ಕಳೇ ರಾಷ್ಟ್ರದ ಆಸ್ತಿ. ಈ ಬಗ್ಗೆ ಅದರಲ್ಲೂ ಮುಂದಿನ ಸಮಾಜಕ್ಕೆ ಮಕ್ಕಳನ್ನು ನೀಡುತ್ತಿರುವ ಗ್ರಾಮೀಣ ಸಮಾಜದತ್ತ ಸರಕಾರ ಸರಿಯಾದ ಗಮನಹರಿಸಬೇಕು. ಏಕೆಂದರೆ ಆಧುನಿಕತೆ, ಹೆಚ್ಚಿನ ಜೀವನ ವೆಚ್ಚ, ನಗರೀಕರಣದ ಪ್ರಭಾವ ಇವು ನಗರವಾಸಿಗಳ ಮೇಲೆ ಮಹತ್ವವಾದ ಪರಿಣಾಮ ಬೀರಿ ಅವರು ತಮ್ಮ ಕುಟುಂಬದ ಗಾತ್ರವನ್ನು ಗಣನೀಯವಾಗಿ ಕಡಿಮೆ ಮಾಡಿಕೊಳ್ಳುವಂತೆ ಮಾಡಿವೆ. ಅಲ್ಲದೆ ಆಧುನಿಕ ಸಮಾಜದಲ್ಲಿ ಸಾಮಾನ್ಯವಾಗಿರುವ ಗುಪ್ತರೋಗಗಳು ಮುಂತಾದವು ಈ ಸಮಾಜದಲ್ಲಿ ಸಂತಾನ ಶಕ್ತಿಯನ್ನು ಕಳೆದಿವೆ ಅಥವಾ ಕುಂಠಿತ ಮಾಡಿವೆ. ಹೀಗೆ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕೆಡಿಸಿಕೊಂಡಿರುವ ನಗರದ ಕುಟುಂಬ ಸಮಾಜಕ್ಕೆ ಆರೋಗ್ಯವಂತ ಮಕ್ಕಳನ್ನು ನೀಡಲಾರದಾಗಿದೆ. ಈಗ ಈ ಹೊಣೆ ಗ್ರಾಮೀಣ ಸಮಾಜದ ಮೇಲಿದೆ. ಸರಕಾರ ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ತನ್ನ ಮುಖ್ಯ ಹಾಗೂ ಅತ್ಯವಶ್ಯಕ ಕಾರ್ಯಗಳಲ್ಲಿ ಇದನ್ನು ಸೇರಿಸಿಕೊಂಡು ಅತ್ಯಂತ ಹೆಚ್ಚಿನ ಆಸ್ಥೆಯಿಂದ ನಿರ್ವಹಣೆ ಮಾಡಬೇಕು. ಇಲ್ಲದಿದ್ದರೆ ಆಧುನಿಕ ವಿಜ್ಞಾನ ಮತ್ತು ತಾಂತ್ರಿಕತೆ ತಂದಿರುವ ಸುಖ ಸಂಪತ್ತುಗಳನ್ನು ಅನುಭವಿಸಲು ಭವಿಷ್ಯದಲ್ಲಿ ಆರೋಗ್ಯವಂತ ಜನರೇ ಇಲ್ಲದಂತಾಗಬಹುದು.

★★★★

ಲೇಖನ - ೫

ಗ್ರಾಮೀಣ ಮಗುವಿನ ಪೋಷಣೆ-ವ್ಯಕ್ತಿತ್ವ

೧೯ನೇ ಶತಮಾನದ ಆದಿಭಾಗದಿಂದಲೂ ಅನೇಕ ಸಾಮಾಜಿಕ ಶಾಸ್ತ್ರಜ್ಞರು ಮಕ್ಕಳ ದೈಹಿಕ ಮತ್ತು ಬೌದ್ಧಿಕ ಬೆಳವಣಿಗೆಯನ್ನು ವೈಜ್ಞಾನಿಕವಾಗಿ ಅಭ್ಯಾಸ ಮಾಡುತ್ತಾ ಬಂದಿದ್ದಾರೆ. ಇವರಲ್ಲಿ ಮಾನವಶಾಸ್ತ್ರಜ್ಞರು ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ವಿಶೇಷವಾಗಿ ಭೌತಿಕ ಮತ್ತು ಸಾಂಸ್ಕೃತಿಕ ವಾತಾವರಣ ಮುಂತಾದವುಗಳ ಪಾತ್ರಗಳನ್ನು ಅಭ್ಯಾಸ ಮಾಡಿದ್ದಾರೆ. ೧೯೨೦ ಮತ್ತು ೧೯೩೦ ರ ದಶಕದಲ್ಲಿ ಇವರು ತಮ್ಮ ಸಂಶೋಧನೆಗಳಲ್ಲಿ ಮಗುವಿನ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಸಾಮಾಜಿಕ ಸಂಸ್ಥೆಗಳ ಪಾತ್ರ ಮತ್ತು ಪ್ರಭಾವವನ್ನು ಕೂಲಂಕಷವಾಗಿ ವಿಶ್ಲೇಷಿಸುತ್ತಾ ಇವು ಮಗುವಿನ ನಡವಳಿಕೆಯ ಮೇಲೆ ತಂದ ಪರಿಣಾಮಗಳನ್ನು ಒತ್ತಿ ಹೇಳಿದ್ದಾರೆ. ಮುಂದೆ ೧೯೪೦ ದಶಕದಲ್ಲಿ ಮಗುವಿನ ಮಾನಸಿಕ ಬೆಳವಣಿಗೆಯಲ್ಲಿ ಭಾವನಾತ್ಮಕತೆಯ(Emotion) ಪಾತ್ರಕ್ಕೆ ಹೆಚ್ಚಿನ ಗಮನ ನೀಡಲಾಯಿತು. ಇದೇ ರೀತಿ ೧೯೫೦ರ ದಶಕದಲ್ಲಿ ಮಾನವನ ನಡವಳಿಕೆಗಳ ಹಿಂದೆ ಇರುವ ಪ್ರಚೋದನೆಗಳನ್ನು ಗಮನದಲ್ಲಿಟ್ಟುಕೊಂಡು ಮಗುವಿನ ವ್ಯಕ್ತಿತ್ವದ ಬೆಳವಣಿಗೆಯನ್ನು ಅಭ್ಯಾಸ ಮಾಡಲಾಯಿತು. ಈ ಅಧ್ಯಯನಗಳ ಮೂಲಕ ಕುಟುಂಬ ಮತ್ತು ಸಮುದಾಯಗಳು ಮಗುವಿನ ಅನಿಸಿಕೆಗಳ ಮತ್ತು ನಡವಳಿಕೆಗಳ ಮೇಲೆ ತರುವ ಪರಿಣಾಮಗಳನ್ನು ಅಭ್ಯಾಸ ಮಾಡಲು ಅನುಕೂಲವಾಯಿತು. ೧೯೬೦ರ ದಶಕದಿಂದ ಮಗುವಿನ ಸರ್ವಾಂಗೀಣ ಬೆಳವಣಿಗೆಯಲ್ಲಿ ಸಂಸ್ಕೃತಿಯ ಪಾತ್ರದ ಬಗ್ಗೆ ಹೆಚ್ಚು ಅಭ್ಯಾಸಗಳು ನಡೆದವು(ಲಿಂಟನ್, ೧೯೪೫). ಹೀಗೆ ಬಹುಹಿಂದಿನಿಂದಲೂ ಮಾನವಶಾಸ್ತ್ರಜ್ಞರು, ಮನೋವಿಜ್ಞಾನಿಗಳು, ವೈದ್ಯರು ಮತ್ತು ಆಹಾರ ಪೋಷಕಾಂಶ ವಿಜ್ಞಾನಿಗಳು ಮಗುವಿನ ಬೆಳವಣಿಗೆಯ ಅನೇಕ ಮುಖಗಳನ್ನು ಅಭ್ಯಾಸ ಮಾಡಿದ್ದಾರೆ.

ಮಕ್ಕಳ ಬಗೆಗೆ ಮುಖ್ಯವಾಗಿ ಮೂರು ಬಗೆಯ ಅಧ್ಯಯನಗಳು ನಡೆದಿರುವುದನ್ನು ಕಾಣಬಹುದು. ಮೊದಲನೆಯದಾಗಿ, ಫ್ರಾಯ್ಡ್‌ರವರು ಮತ್ತು ಅವರ ನಂತರ ಅವರ ಅಭ್ಯಾಸ ಮಾರ್ಗದಲ್ಲೇ ಮುಂದುವರೆದ ಅಧ್ಯಯನಗಳು. ಫ್ರಾಯ್ಡ್‌ರವರು ತಮ್ಮ ಅನೇಕ ಕೃತಿಯಲ್ಲಿ ವಿಶೇಷವಾಗಿ "ಟೋಟೆಂ ಅಂಡ್ ಟ್ಯಾಬು" (Totem and Taboo, ೧೯೬೩) ಎಂಬ ಕೃತಿಯಲ್ಲಿ ಮಕ್ಕಳ ಸ್ಥಾನಮಾನ, ಬೆಳವಣಿಗೆ ಮುಂತಾದವುಗಳ ಬಗೆಗೆ ಮಹತ್ತರವಾದ ವಿಚಾರಗಳನ್ನು ನೀಡಿದ್ದಾರೆ. ಮನೋವಿಜ್ಞಾನಿಯಾದ ಫ್ರಾಯ್ಡ್‌ರ ವಾದದಂತೆ ಎಲ್ಲಾ

ಜೀವಿಗಳ ಚಟುವಟಿಕೆಗಳು ಅದರ ದೈಹಿಕ ತೃಷೆಯನ್ನು ಅವಲಂಬಿಸಿರುತ್ತವೆ. ಅವರ ಅಭಿಪ್ರಾಯದಲ್ಲಿ ತಾಯಿ ಮಗುವಿಗೆ ಮೊಲೆ ಉಣಿಸುವುದು ಕೂಡ ಕೇವಲ ಮಗುವಿನ ಅವಶ್ಯಕತೆಗೆ ಮಾತ್ರವಲ್ಲ ಇದರಿಂದ ಅವಳಿಗೆ ಸಿಗುವ ಸಂತೋಷಕ್ಕಾಗಿ ಕೂಡ. ಇವರ ವಾದಸರಣಿಗೆ ಸೇರಿದ ವೈಟಿಂಗ್ ಮತ್ತು ಚೈಲ್ಡ್ (೧೯೫೩), ವೈಟಿಂಗ್ (೧೯೬೩) ಎಂಬುವವರು ಒಂದು ಮಗುವಿನ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗೆ ಮಾನವನ ಮೂಲ ಸಂಸ್ಥೆಗಳು(Primary Institutions) ಮತ್ತು ಅದನ್ನು ಬೆಳೆಸುವ ವ್ಯವಸ್ಥೆ(Maintenance System) ಹೇಗೆ ನೆರವಾಗುತ್ತವೆ ಎಂದು ವಿವರಿಸಿದ್ದಾರೆ ಮತ್ತು ಆ ಸಮಾಜದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ರಚನೆಯನ್ನು ಇಡಿಯಾಗಿ ಹೇಗೆ ಬಳಸಿಕೊಂಡಿದೆ ಎಂದೂ ತಿಳಿಸಿದ್ದಾರೆ. ಅಂದರೆ ಒಂದು ಸಮಾಜದ ವ್ಯವಸ್ಥೆಯಲ್ಲಿಯ ತೊಡರುಗಳು, ಪದ್ಧತಿಗಳು ಮಗುವಿನ ಹಿರಿಯರ ನಂಬಿಕೆಗಳನ್ನು, ನಡವಳಿಕೆಗಳನ್ನು ಹೇಗೆ ರೂಪಿಸುತ್ತವೆ, ಮುಂದೆ ಇವು ಅವರು ಪಾಲನೆ-ಪೋಷಣೆ ಮಾಡುವ ಮಕ್ಕಳ ಮೇಲೆ ಯಾವ ಪರಿಣಾಮ ಬೀರುತ್ತವೆ ಎಂದೂ ತಿಳಿಸಿದ್ದಾರೆ. ಸಮಾಜ ತನ್ನ ಬಾಹ್ಯ ಪರಿಸರದಂತೆ ತನ್ನ ಧರ್ಮ, ಸಾಮಾಜಿಕ ರಚನೆ, ನಡಾವಳಿಯ ರೀತಿ ನೀತಿ ಮುಂತಾದವನ್ನು ರೂಪಿಸಿಕೊಂಡಿದ್ದು, ಇವು ತಿರುಗಿ ಸದಸ್ಯರ ವ್ಯಕ್ತಿತ್ವ ಮತ್ತು ನಡವಳಿಕೆಗಳನ್ನು ರೂಪಿಸುತ್ತವೆ. ಹೀಗಾಗಿ ತಂದೆತಾಯಿಗಳಲ್ಲಿಯ ವಿಚಾರಗಳು ಮಕ್ಕಳ ಪಾಲನೆ-ಪೋಷಣೆ ಮಾಡುವಲ್ಲಿ, ಅವರ ವ್ಯಕ್ತಿತ್ವ ರೂಪಿಸುವಲ್ಲಿ ನೆರವಾಗುತ್ತವೆ. ಈ ವ್ಯಕ್ತಿತ್ವವು ಅವರ ನಡವಳಿಕೆಯಲ್ಲಿ, ಅಂದರೆ ಅವರ ಆಟ, ಪಾಠ, ಮನರಂಜನೆ, ಕಲ್ಪನೆ ಮುಂತಾದವುಗಳಲ್ಲಿ ವ್ಯಕ್ತವಾಗುತ್ತದೆ. ಹೀಗೆ ಸಮಾಜ ಮಗುವಿನ ವ್ಯಕ್ತಿತ್ವದ ಬೆಳವಣಿಗೆಯನ್ನು ನಿಯಂತ್ರಿಸುತ್ತದೆ. ಈ ಆಧಾರದಿಂದ ವೈಟಿಂಗ್ ರವರು ತಮ್ಮ ವಿದ್ವತ್ ಪೂರ್ಣವಾದ ಸಿಕ್ಸ್ ಕಲ್ಚರ್ಸ್ (Six Cultures, ೧೯೬೩) ಎಂಬ ಕೃತಿಯಲ್ಲಿ ಮಗುವಿನ ಪಾಲನೆ ಪೋಷಣೆಯಲ್ಲಿ ಅನುಸರಿಸುವ ವಿಚಾರಗಳು ಅದರ ವ್ಯಕ್ತಿತ್ವ ರೂಪಗೊಳ್ಳುವುದರಲ್ಲಿ ನೆರವಾಗುತ್ತದೆ ಎಂದು ವಿವರಿಸಿದ್ದಾರೆ. ಹಿಚ್‌ಕಾಕ್ (೧೯೬೩)ಮುಂತಾದವರು ಮಗುವಿನ ಶೌಚ ಮುಂತಾದ ಸ್ವಚ್ಛತಾ ಕಾರ್ಯದಲ್ಲಿ ತರಬೇತಿ, ಆಹಾರ ಪದ್ಧತಿ, ವಸ್ತ್ರ-ವಡವೆ ಧರಿಸುವ, ಮಲಗುವ ರೀತಿಗಳು, ವ್ಯವಸ್ಥೆ ಮುಂತಾದವುಗಳ ಬಗೆಗೂ ಬರೆದಿದ್ದಾರೆ. ಈ ಅಭ್ಯಾಸಗಳು ಪ್ರಪಂಚದ ವಿವಿಧ ಸಮಾಜ-ಸಂಸ್ಕೃತಿಗಳಲ್ಲಿ ಮಕ್ಕಳನ್ನು ಬೆಳೆಸುವ ವಿಧಾನಗಳನ್ನು ತಿಳಿಯಲು ಸಹಾಯವಾಗಿವೆ.

ಮಗುವಿನ ವ್ಯಕ್ತಿತ್ವದ ಬೆಳವಣಿಗೆಯನ್ನು ಕ್ರಿಯಾವಾದದ ರೀತಿಯಲ್ಲಿ (Functional Approach) ಯೂ ಅಭ್ಯಾಸ ಮಾಡಲಾಗಿದೆ. ಈ ವಾದದ ಪಿತೃಪುರುಷರಾದ ಮಲಿನೋವಾಸ್ಕಿಯವರು (೧೯೩೧, ೧೯೩೭), ಶಾಂತ ಮಹಾಸಾಗರದ ಪಲೋನೇಷಿಯಾದ ಮತ್ತು ಮೆಲನೇಷಿಯಾದ ದ್ವೀಪ ನಿವಾಸಿಗಳಲ್ಲಿ ನಡೆಸಿದ ತನ್ನ

ಲೇಖನ - ೫

ಗ್ರಾಮೀಣ ಮಗುವಿನ ಪೋಷಣೆ-ವ್ಯಕ್ತಿತ್ವ

೧೯ನೇ ಶತಮಾನದ ಆದಿಭಾಗದಿಂದಲೂ ಅನೇಕ ಸಾಮಾಜಿಕ ಶಾಸ್ತ್ರಜ್ಞರು ಮಕ್ಕಳ ದೈಹಿಕ ಮತ್ತು ಬೌದ್ಧಿಕ ಬೆಳವಣಿಗೆಯನ್ನು ವೈಜ್ಞಾನಿಕವಾಗಿ ಅಭ್ಯಾಸ ಮಾಡುತ್ತಾ ಬಂದಿದ್ದಾರೆ. ಇವರಲ್ಲಿ ಮಾನವಶಾಸ್ತ್ರಜ್ಞರು ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ವಿಶೇಷವಾಗಿ ಭೌತಿಕ ಮತ್ತು ಸಾಂಸ್ಕೃತಿಕ ವಾತಾವರಣ ಮುಂತಾದವುಗಳ ಪಾತ್ರಗಳನ್ನು ಅಭ್ಯಾಸ ಮಾಡಿದ್ದಾರೆ. ೧೯೨೦ ಮತ್ತು ೧೯೩೦ ರ ದಶಕದಲ್ಲಿ ಇವರು ತಮ್ಮ ಸಂಶೋಧನೆಗಳಲ್ಲಿ ಮಗುವಿನ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಸಾಮಾಜಿಕ ಸಂಸ್ಥೆಗಳ ಪಾತ್ರ ಮತ್ತು ಪ್ರಭಾವವನ್ನು ಕೂಲಂಕಷವಾಗಿ ವಿಶ್ಲೇಷಿಸುತ್ತಾ ಇವು ಮಗುವಿನ ನಡವಳಿಕೆಯ ಮೇಲೆ ತಂದ ಪರಿಣಾಮಗಳನ್ನು ಒತ್ತಿ ಹೇಳಿದ್ದಾರೆ. ಮುಂದೆ ೧೯೪೦ ದಶಕದಲ್ಲಿ ಮಗುವಿನ ಮಾನಸಿಕ ಬೆಳವಣಿಗೆಯಲ್ಲಿ ಭಾವನಾತ್ಮಕತೆಯ(Emotion) ಪಾತ್ರಕ್ಕೆ ಹೆಚ್ಚಿನ ಗಮನ ನೀಡಲಾಯಿತು. ಇದೇ ರೀತಿ ೧೯೫೦ರ ದಶಕದಲ್ಲಿ ಮಾನವನ ನಡವಳಿಕೆಗಳ ಹಿಂದೆ ಇರುವ ಪ್ರಚೋದನೆಗಳನ್ನು ಗಮನದಲ್ಲಿಟ್ಟುಕೊಂಡು ಮಗುವಿನ ವ್ಯಕ್ತಿತ್ವದ ಬೆಳವಣಿಗೆಯನ್ನು ಅಭ್ಯಾಸ ಮಾಡಲಾಯಿತು. ಈ ಅಧ್ಯಯನಗಳ ಮೂಲಕ ಕುಟುಂಬ ಮತ್ತು ಸಮುದಾಯಗಳು ಮಗುವಿನ ಅನಿಸಿಕೆಗಳ ಮತ್ತು ನಡವಳಿಕೆಗಳ ಮೇಲೆ ತರುವ ಪರಿಣಾಮಗಳನ್ನು ಅಭ್ಯಾಸ ಮಾಡಲು ಅನುಕೂಲವಾಯಿತು. ೧೯೬೦ರ ದಶಕದಿಂದ ಮಗುವಿನ ಸರ್ವಾಂಗೀಣ ಬೆಳವಣಿಗೆಯಲ್ಲಿ ಸಂಸ್ಕೃತಿಯ ಪಾತ್ರದ ಬಗ್ಗೆ ಹೆಚ್ಚು ಅಭ್ಯಾಸಗಳು ನಡೆದವು(ಲಿಂಟನ್, ೧೯೪೫). ಹೀಗೆ ಬಹುಹಿಂದಿನಿಂದಲೂ ಮಾನವಶಾಸ್ತ್ರಜ್ಞರು, ಮನೋವಿಜ್ಞಾನಿಗಳು, ವೈದ್ಯರು ಮತ್ತು ಆಹಾರ ಪೋಷಕಾಂಶ ವಿಜ್ಞಾನಿಗಳು ಮಗುವಿನ ಬೆಳವಣಿಗೆಯ ಅನೇಕ ಮುಖಗಳನ್ನು ಅಭ್ಯಾಸ ಮಾಡಿದ್ದಾರೆ.

ಮಕ್ಕಳ ಬಗೆಗೆ ಮುಖ್ಯವಾಗಿ ಮೂರು ಬಗೆಯ ಅಧ್ಯಯನಗಳು ನಡೆದಿರುವುದನ್ನು ಕಾಣಬಹುದು. ಮೊದಲನೆಯದಾಗಿ, ಫ್ರ್ಯಾಯ್ಡ್‌ರವರು ಮತ್ತು ಅವರ ನಂತರ ಅವರ ಅಭ್ಯಾಸ ಮಾರ್ಗದಲ್ಲೇ ಮುಂದುವರೆದ ಅಧ್ಯಯನಗಳು. ಫ್ರ್ಯಾಯ್ಡ್‌ರವರು ತಮ್ಮ ಅನೇಕ ಕೃತಿಯಲ್ಲಿ ವಿಶೇಷವಾಗಿ "ಟೋಟಂ ಅಂಡ್ ಟ್ಯಾಬು" (Totem and Taboo, ೧೯೬೩) ಎಂಬ ಕೃತಿಯಲ್ಲಿ ಮಕ್ಕಳ ಸ್ಥಾನಮಾನ, ಬೆಳವಣಿಗೆ ಮುಂತಾದವುಗಳ ಬಗೆಗೆ ಮಹತ್ತರವಾದ ವಿಚಾರಗಳನ್ನು ನೀಡಿದ್ದಾರೆ. ಮನೋವಿಜ್ಞಾನಿಯಾದ ಫ್ರ್ಯಾಯ್ಡ್‌ರ ವಾದದಂತೆ ಎಲ್ಲಾ

ಇದೇ ರೀತಿ ಮಕ್ಕಳು ಹುಟ್ಟಿ ಬೆಳೆದ ಬಾಹ್ಯ ವಾತಾವರಣಕ್ಕೆ ಅನುಗುಣವಾಗಿ ಅವುಗಳ ನಡವಳಿಕೆಗಳು ಭಿನ್ನವಾಗುತ್ತದೆ. ಈ ಭಿನ್ನತೆಗೆ ತಕ್ಕಂತೆ ಅವುಗಳ ಮನೋವಿಕಾಸತೆ ಮತ್ತು ವ್ಯಕ್ತಿತ್ವವೂ ಬದಲಾಗುತ್ತದೆ. ಮಗು ತನ್ನದು ಮತ್ತು ಅನ್ಯರದು ಅಥವಾ ಹೊರಗಿನ ಎಂಬ ಎರಡು ಬಗೆಯ ಪರಿಸರವನ್ನು ಹೊಂದಿರುತ್ತದೆ. ತನಗೆ ತಾನೇ ಇದ್ದಾಗ ವ್ಯಕ್ತಿಯೊಬ್ಬ ಏನು ಮಾಡುತ್ತಾನೆ, ಯಾವ ರೀತಿಯಲ್ಲಿ ತನ್ನ ಚಟುವಟಿಕೆಗಳನ್ನು ರೂಪಿಸಿಕೊಳ್ಳುತ್ತಾನೆ ಎಂಬುವು ಅವನು ಬೆಳೆದ ಪರಿಸರದ ಹಿನ್ನೆಲೆ ಮತ್ತು ರೀತಿಯಲ್ಲಿರುತ್ತದೆ. ಹೀಗಾಗಿ ಒಂದು ಮಗುವನ್ನು ಇವನೊಬ್ಬ ವಿಚಾರಶೀಲ, ಭಾವನಾಶೀಲ ಮತ್ತು ಕಾರ್ಯಶೀಲ ವ್ಯಕ್ತಿ ಎಂದೂ, ಅದು ದೈಹಿಕವಾಗಿ ಮಾತ್ರವಲ್ಲ, ಮಾನಸಿಕವಾಗಿ ಬೆಳಯುತ್ತಿರುವ ಮತ್ತು ಬದಲಾಗುತ್ತಿರುವ ವ್ಯಕ್ತಿ ಎಂದೂ ಗಣಿಸಿ ವಯಸ್ಕರು ಅದರೊಡನೆ ವ್ಯವಹರಿಸಬೇಕು. ಇದು ತಿಳಿಯದೆ ಮಗುವನ್ನು ಮುಗ್ಧ ಮೂಢ, ಮರುಳ ಮುಂತಾಗಿ ತಿಳಿದುಕೊಂಡರೆ ನಡೆಸಿಕೊಂಡರೆ ಅದರ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಸಮಸ್ಯೆಗಳು, ಕುಂದು-ಕೊರತೆಗಳು ಬರುತ್ತವೆ.

ಮಗುವಿನ ವ್ಯಕ್ತಿತ್ವದ ಬೆಳವಣಿಗೆಗೆ ಅದರ ಕುಟುಂಬದ ವ್ಯವಸ್ಥೆಯೂ ಮುಖ್ಯ. ಅದು ಬಹುಪತ್ನಿ ಅಥವಾ ಬಹುಪತಿತ್ವದ ಬಗೆಯದು ಇರಬಹುದು, ಸದಸ್ಯರ ಸಂಖ್ಯೆಯಲ್ಲಿ ಸಣ್ಣವು ಅಥವಾ ಬೃಹತ್ ಇರಬಹುದು, ಮೂಲ ಅಥವಾ ಸಂಯುಕ್ತ ಕುಟುಂಬಗಳೇ ಇರಬಹುದು. ಕುಟುಂಬದಲ್ಲಿ ಅಜ್ಜ-ಅಜ್ಜಿಯರು, ಇತರೆ ಸಂಬಂಧಿಕರು ಇರಬಹುದು, ಇಲ್ಲದಿರಬಹುದು. ಅದು ಗ್ರಾಮೀಣ ಅಥವಾ ನಗರ ಪ್ರದೇಶದಲ್ಲಿ ವಾಸವಾಗಿರುವವರ ಕುಟುಂಬವಾಗಿರಬಹುದು. ಈ ಹಿನ್ನೆಲೆ ಮತ್ತು ಅದರ ಪ್ರಭಾವದಿಂದಲೂ ಮಗುವಿನ ವ್ಯಕ್ತಿತ್ವದ ಬೆಳವಣಿಗೆ ಭಿನ್ನವಾಗುತ್ತದೆ. ಆದ್ದರಿಂದ ವ್ಯಕ್ತಿಗಳ ನಡವಳಿಕೆ, ವ್ಯಕ್ತಿತ್ವ ಮುಂತಾದವನ್ನು ಅಭ್ಯಾಸ ಮಾಡುವ ಸಂಶೋಧಕರು ಬಾಲ್ಯದಲ್ಲಿ ತಾನೇ ಹೊಂದಿದ್ದ ಕುಟುಂಬದ ಹಿನ್ನೆಲೆಯನ್ನು, ಸದ್ಯ ತಾನು ಅಭ್ಯಾಸ ಮಾಡುತ್ತಿರುವ ಸನ್ನಿವೇಶದೊಡನೆ ತುಲನೆ ಮಾಡಬಹುದು.

ಯಾವುದೇ ಸಂಸ್ಕೃತಿಯನ್ನು ತೆಗೆದುಕೊಂಡರೂ ಅದರಲ್ಲಿ ಮಗು ಹುಟ್ಟುವುದಕ್ಕೆ ಮುನ್ನ, ಹುಟ್ಟಿದ ನಂತರ ಮತ್ತು ಅದು ಬೆಳೆದಂತೆ ಹೀಗೆ ಅದಕ್ಕೆ ಅನೇಕ ವಿಧಿಕಾರ್ಯಗಳನ್ನು ಆಚರಿಸಲಾಗುವುದು. ಅಲ್ಲದೆ ಹುಟ್ಟು, ಸಾವು, ಹೆರಿಗೆ ಮುಂತಾದವುಗಳ ಬಗ್ಗೆಯೂ ಈ ಸಮಾಜ-ಸಂಸ್ಕೃತಿಗಳಲ್ಲಿ ವಿಭಿನ್ನ ನಂಬಿಕೆಗಳಿರುತ್ತವೆ. ಒಂದು ಮಗು ಹುಟ್ಟುವುದಕ್ಕೆ ಮುಂಚೆಯೇ ಅದು ತನ್ನ ತಂದೆತಾಯಿಗಳಿಂದ, ನಂತರ ತಾನೇ ಅನೇಕ ಸ್ಥಾನಮಾನಗಳನ್ನು ಪಡೆದಿರುತ್ತದೆ ಅಥವಾ ಗಳಿಸುತ್ತದೆ. ಇದರಂತೆ ಒಂದು ಮಗುವಿನ ಜನನದಿಂದ ತಂದೆತಾಯಿಗಳ, ಅವರ ತಂದೆ-ತಾಯಿಗಳ ಸ್ಥಾನ-ಮಾನಗಳು, ಬದಲಾಗುತ್ತವೆ. ಇಲ್ಲಿಯವರೆಗೆ ಕೇವಲ ಗಂಡ-ಹೆಂಡಿರಿದ್ದವರು ಒಂದು ಮಗುವಿನ ಬರುವಿನಿಂದ ತಾವು ತಂದೆ-ತಾಯಿಗಳಾಗಿ, ತಮ್ಮ ತಂದೆತಾಯಿಗಳನ್ನು ಅಜ್ಜ-ಅಜ್ಜಿಯರನ್ನಾಗಿ ಮಾಡುತ್ತಾರೆ. ಇವೂ

ಸಂಶೋಧನೆಗಳ ಆಧಾರದಿಂದ ಈ ಸಮಾಜಗಳಲ್ಲಿ ಗರ್ಭಧಾರಣೆ, ಜನನ, ಕುಟುಂಬ ವ್ಯವಸ್ಥೆ, ಲೈಂಗಿಕ ಸಂಬಂಧಗಳು ಮುಂತಾದ ವಿಚಾರಗಳನ್ನು ಮಗುವಿನ ಜೀವನಕ್ಕೆ ಹೆಣೆದು ಅರ್ಥಪೂರ್ಣವಾಗಿ ವಿವರಿಸಿದ್ದಾರೆ. ಕ್ರಿಯಾವಾದಿಗಳ ವಿವರಣೆಯಂತೆ ಮಗುವಿನ ಬಗೆಗೆ ಇರುವ ಎನೆಲ್ಲಾ ನಂಬಿಕೆ, ಆಚರಣೆ ಹಾಗೂ ವಿಧಿಕಾರ್ಯಗಳಿಗೆ ತಮ್ಮದೆ ಆದ ಒಂದು ಕ್ರಿಯೆ ಇದ್ದು ಅವುಗಳ ಆಚರಣೆಯಿಂದ ಮಗುವಿಗೆ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಅನುಕೂಲವಾಗುತ್ತದೆ ಎಂದಿದ್ದಾರೆ. ಉದಾಹರಣೆಗೆ ಮಗುವಿನ ಮೇಲಿನ ಅನೇಕ ನಂಬಿಕೆಗಳು ಹಾಗೂ ಅದಕ್ಕೆ ಆಚರಿಸುವ ನಾಮಕರಣ, ಮುಂಜಿ ಮುಂತಾದ ವಿಧಿಕಾರ್ಯಗಳು ಅದರ ಸಾಮಾಜಿಕ ಹಾಗೂ ವಯೋ ಸ್ಥಾನಮಾನವನ್ನು ತೋರಿಸಿ, ಇವು ಮಗುವಿನ ಮಾನಸಿಕ ಬೆಳವಣಿಗೆಯನ್ನು ಹೇಗೆ ಪ್ರಭಾವಿಸುತ್ತವೆ ಎಂದು ತೋರಿಸಿದ್ದಾರೆ.

ವಿಧಿಕಾರ್ಯಗಳ ಅಭ್ಯಾಸದಿಂದಲೂ ಮಾನವಶಾಸ್ತ್ರಜ್ಞರು ಮಗುವಿನ ವ್ಯಕ್ತಿತ್ವದ ಬೆಳವಣಿಗೆಯನ್ನು ಅಭ್ಯಾಸ ಮಾಡಿದ್ದಾರೆ. ಉದಾಹರಣೆಗೆ ಒಂದು ಸಂಸ್ಕೃತಿಯಲ್ಲಿ ಸೃಷ್ಟಿಯಾದ ಕಲಾಕೃತಿಗಳು, ಆಚರಿಸಲ್ಪಡುವ ವಿಧಿಕಾರ್ಯಗಳು ಮತ್ತು ಮಗುವಿಗೆ ಬೌದ್ಧಿಕ ವಿಕಾಸ ಇವು ಹೇಗೆ ಒಂದಕ್ಕೊಂದು ಹೆಣೆದುಕೊಂಡಿವೆ ಎಂದು ತಿಳಿಸಿದ್ದಾರೆ. ಈ ಮಾರ್ಗದಲ್ಲಿ ಅಧ್ಯಯನ ಮಾಡಿದವರಲ್ಲಿ ಮಾರ್ಗರೆಟ್ ಮೀಡ್ ಮುಂತಾದವರು ಪ್ರಮುಖರು. ಇವರು ತಮ್ಮ "ಕಮಿಂಗ್ ಆಫ್ ಏಜ್ ಇನ್ ಸೋಮೋಅ"(Coming of age in Somoa) ಎಂಬ ಪುಸ್ತಕದಲ್ಲಿ (೧೯೫೨) ಶಾಂತ ಮಹಾಸಾಗರದ ಸೋಮೋಅ ದ್ವೀಪದ ನಿವಾಸಿಗಳು ತಮ್ಮ ತರುಣಿಯರಿಗೆ ಕಾಲಕಾಲಕ್ಕೆ ಆಚರಿಸುವ ವಿಧಿಕಾರ್ಯಗಳಿಂದ ಹೇಗೆ ತಮ್ಮ ಕಳ್ಳುಬಳ್ಳಿ, ಸಮಾಜ-ಸಂಸ್ಕೃತಿ, ಸಮುದಾಯ ಜೀವನ, ಕೌಟುಂಬಿಕ ಜೀವನ ಮುಂತಾದವುಗಳನ್ನೂ ತಿಳಿದುಕೊಳ್ಳಲು ಅವಕಾಶ ಮಾಡಿಕೊಡುತ್ತಾರೆ ಎಂದು ವಿವರಿಸಿದ್ದಾರೆ.

ಮಾನವಶಾಸ್ತ್ರಜ್ಞರು ಸಾಂಸ್ಕೃತಿಕ ಮೌಲ್ಯಗಳನ್ನು , ಭಾವನೆಗಳನ್ನು ಮತ್ತು ಯೋಚನಾಲಹರಿಗಳನ್ನೂ ಅಭ್ಯಾಸ ಮಾಡಿ ಇವು ಮಗುವಿನ ದೈಹಿಕ ಹಾಗೂ ಬೌದ್ಧಿಕ ಬೆಳವಣಿಗೆಯನ್ನು ಹೇಗೆ ಪ್ರಭಾವಿಸುತ್ತವೆ ಎಂದು ತೋರಿಸಿದ್ದಾರೆ. ಮುಖ್ಯವಾಗಿ ಸಾಂಸ್ಕೃತಿಕ ಮಾನವಶಾಸ್ತ್ರಜ್ಞರು, ಇವು ಮಗುವಿನ ಭಾವನೆಗಳನ್ನು ಪ್ರಭಾವಗೊಳಿಸುವುದರಲ್ಲಿ ಯಾವ ಪಾತ್ರ ವಹಿಸುತ್ತವೆ ಎಂದೂ ತಿಳಿಸಿದ್ದಾರೆ. ಇವರ ನಂಬಿಕೆಯಂತೆ ಒಂದು ಮಗು ನಿರ್ದಿಷ್ಟವಾದ ತನ್ನ ಸಾಮಾಜಿಕ-ಸಾಂಸ್ಕೃತಿಕ ಸೆಳೆತಗಳಿಗೆ ಸಿಕ್ಕ ಒಂದು ಜೀವಿ. ಅದು ಬೆಳೆದಂತೆ ಅದರ ಜೀವನದಲ್ಲಿ ಅನೇಕ ಮಹತ್ತರವಾದ ಮತ್ತು ಅರ್ಥಪೂರ್ಣವಾದ ಘಟನೆಗಳು ಸಂಭವಿಸುತ್ತವೆ. ಇದರಿಂದ ಮಗುವಿನಲ್ಲಿ ಕೇವಲ ದೈಹಿಕ ಬದಲಾವಣೆಗಳು ಮಾತ್ರ ಬಾರದೆ ಬೌದ್ಧಿಕ ಬದಲಾವಣೆಗಳೂ ಬರುತ್ತವೆ ಎಂಬುದು ಇವರ ವಾದ.

ನೋಡುವಂತಿಲ್ಲ. ಇದೇ ರೀತಿ ಆಕೆ ಪಾಲಿಸಬೇಕಾದ ಕೆಲವೊಂದು ನೇಮಗಳೆಂದರೆ ಲಘುವಾಗಿ ಉಂಡುಟ್ಟು, ಲಘು ಕೆಲಸಕಾರ್ಯಗಳನ್ನು ಮಾಡುತ್ತಾ, ಸದಾ ನಗುನಗುತ್ತಿರಬೇಕು. ಸಾಧ್ಯವಾದರೆ ಪುರಾಣ-ಪುಣ್ಯ ಕಥೆಗಳಲ್ಲಿ ಬರುವ ವೀರಬಾಲಕರ ಸಾಹಸದ ಕತೆಗಳನ್ನು ಮತ್ತು ಭಜನೆಗಳನ್ನು ಕೇಳಬೇಕು. ಇದರಿಂದಾಗಿ ಮುಂದೆ ಹುಟ್ಟುವ ಮಗುವಿನಲ್ಲಿ ದೈಹಿಕವಾಗಿ, ಮಾನಸಿಕವಾಗಿ ಯಾವ ಕುಂದುಕೊರತೆಗಳೂ ಇರದೆ ಆರೋಗ್ಯವಾಗಿರುತ್ತದೆ ಮತ್ತು ಧೈರ್ಯಶಾಲಿಯಾಗುತ್ತದೆ ಎಂಬ ನಂಬಿಕೆ ಇದೆ.

ಎಲ್ಲಾ ಸಮಾಜಗಳಲ್ಲಿಯೂ ಗರ್ಭಧಾರಣೆಗೆ ಸಂಬಂಧಿಸಿದಂತೆ ಒಂದು ವಿಧಿ ಕ್ರಿಯೆಯನ್ನು ಆಚರಿಸುತ್ತಾರೆ. ಇದನ್ನು ಸೀಮಂತ ಕಾರ್ಯ ಮುಂತಾದ ಹೆಸರುಗಳಿಂದ ಕರೆದರೂ, ಇದನ್ನು ಆಚರಿಸುವ ಅವಧಿ ಸಮಾಜದಿಂದ ಸಮಾಜಕ್ಕೆ ಭಿನ್ನವಾದರೂ, ಉದ್ದೇಶಗಳು ಒಂದೇ ಆಗಿವೆ. ಕೆಲವೊಂದು ಆದಿವಾಸಿಗಳು ಆಚರಿಸುವ ಈ ವಿಧಿಯನ್ನು ಅಭ್ಯಾಸ ಮಾಡಿದರೆ ಇದರ ನಿಜ ಉದ್ದೇಶ ತಿಳಿಯುತ್ತದೆ. ಉದಾಹರಣೆಗೆ, ಬಹುಪತ್ನಿತ್ವಪದ್ಧತಿ ಹೊಂದಿರುವ ನೀಲಗಿರಿಯ ತೋಡರಲ್ಲಿ ಇದನ್ನು ಗರ್ಭದಲ್ಲಿರುವ ಮಗುವಿಗೆ ಬಿಲ್ಲು-ಬಾಣ ನೀಡುವ ವಿಧಿಕಾರ್ಯವೆಂದು ಕರೆಯುತ್ತಾರೆ. ಆಕೆಯಲ್ಲಿ ರೂಪ ತಾಳುತ್ತಿರುವ ಮಗುವಿನ ನಿಜವಾದ ತಂದೆ ಅಥವಾ ತಂದೆ ಎನಿಸಿಕೊಳ್ಳ ಬಯಸುವ ಆಕೆಯ ಗಂಡಂದಿರಲ್ಲಿ ಒಬ್ಬನು ಈ ವಿಧಿಯನ್ನು ಏರ್ಪಡಿಸುತ್ತಾನೆ. ಇದೇ ರೀತಿ ಪುರುಷತ್ವಪ್ರಧಾನವಾದ ಕೆಲವು ಆದಿವಾಸಿ ಸಮಾಜಗಳಲ್ಲಿ ಮಗು ತನ್ನದೆಂದು ಸಮಾಜಕ್ಕೆ ಸಾಬೀತುಪಡಿಸಲು, ತಂದೆ ಅಥವಾ ಅವನ ಕುಟುಂಬದವರು, ಈ ವಿಧಿಯನ್ನು ಆಚರಿಸಬೇಕು. ಯಾವುದಾದರೂ ಕಾರಣಕ್ಕೆ ಗಂಡನ ಕಡೆಯವರು ಈ ಕಾರ್ಯವನ್ನು ಆಚರಿಸಲು ತಡಮಾಡಿದರೆ ಅವರ ಹೆಸರಿನಲ್ಲಿ ಇತರೆ ಸಂಬಂಧಿಕರು ಆಚರಿಸುತ್ತಾರೆ. ಇಲ್ಲದಿದ್ದರೆ ಆ ಮಗುವಿನ ಪಿತೃತ್ವದ ಬಗೆಗೆ ತಪ್ಪು ಅಭಿಪ್ರಾಯ ಬರುತ್ತದೆ.

ಸೀಮಂತ ಕಾರ್ಯವನ್ನು ದಂಪತಿಗಳ ಮೊದಲ ಮಗುವಿಗೆ, ಸಾಮಾನ್ಯವಾಗಿ ಅದಕ್ಕೆ ಏಳನೆಯ ತಿಂಗಳು ತುಂಬುತ್ತಿದ್ದಂತೆ, ಆಚರಿಸುವರು. ಈ ವೇಳೆಗೆ ಗರ್ಭಪಾತವಾಗುವ ಸಂಭವಗಳು ಕಡಿಮೆ ಅಥವಾ ಆಗುವುದು ಶಕ್ಯವಿಲ್ಲ ಎಂಬುವುದೆ ಇದಕ್ಕೆ ಕಾರಣವಿರುತ್ತದೆ. ತಾಯಿಯಾಗುವವಳು ಕೆಲವೊಂದು ಭಾರದ ಚಟುವಟಿಕೆಗಳಿಂದ ದೂರವಿರುವುದು ಮತ್ತು ತನ್ನ ನಡಾವಳಿಗಳನ್ನು ತಿದ್ದಿಕೊಳ್ಳುವುದು ಈ ವಿಧಿಕಾರ್ಯದ ಆಚರಣೆಯಿಂದ ಪ್ರಾರಂಭವಾಗುತ್ತದೆ.

ಮೊದಲ ಹೆರಿಗೆ ಸಾಮಾನ್ಯವಾಗಿ ತೌರು ಮನೆಯಲ್ಲಿ ಆಗುವುದರಿಂದ ಈ ನಂತರ ಆಕೆಯನ್ನು ಅಲ್ಲಿಗೆ ಕಳುಹಿಸಿಕೊಡುತ್ತಾರೆ. ಇಲ್ಲಿ ಕೂಡ ಸ್ನೇಹಸಂಬಂಧವುಳ್ಳ ಸಂಬಂಧಿಕರು ಮತ್ತು ನೆರೆಹೊರೆಯವರು ಆಕೆಯನ್ನು ತಮ್ಮ ಮನೆಗಳಿಗೆ ಆಹ್ವಾನಿಸಿ ಉತ್ತಮ ಊಟ-ತಿಂಡಿ

ಹುಟ್ಟಿಕೊಳ್ಳುತ್ತವೆ. ಕುಟುಂಬಕ್ಕೆ, ಕಳ್ಳುಬಳ್ಳಿಗೆ ಸೇರ್ಪಡೆಯಾದ ಈ ಹೊಸ ಸದಸ್ಯನಿಂದಾಗಿ ಅವರು ಆಸ್ತಿಪಾಸ್ತಿ ಸ್ಥಾನಮಾನ, ವಿವಾಹ ಸಂಬಂಧಗಳು ಮುಂತಾದವುಗಳಲ್ಲಿ ಮತ್ತೊಮ್ಮೆ ಮರು ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ.

ಸಂಪ್ರದಾಯಸ್ಥ ಸಮಾಜದಲ್ಲಿ ಮಕ್ಕಳಿಲ್ಲದವರ ಅಂದರೆ ಬಂಜೆಯರಾದ ದಂಪತಿಗಳ, ವಿಶೇಷವಾಗಿ ಹೆಂಡತಿಯ ಬಾಳು ಗೋಳಿನದಾಗುತ್ತದೆ. ಈ ಬಂಜೆತನಕ್ಕೆ ಅವರು ಪೂರ್ವ ಜನ್ಮದಲ್ಲಿ ಅಥವಾ ಇದೇ ಜನ್ಮದಲ್ಲಿ ಮಾಡಿರಬಹುದಾದ ಪಾಪಗಳೇ ಕಾರಣವೆಂದು ಹೀಯಾಳಿಸಲ್ಪಡುತ್ತಾರೆ. ದಂಪತಿಗಳನ್ನು ಮುಖ್ಯವಾಗಿ ಸ್ತ್ರೀಯರನ್ನು ಮಕ್ಕಳಿಗೆ ಸಂಬಂಧಪಟ್ಟಂತೆ ಆಚರಿಸುವ ಯಾವ ವಿಧಿಕಾರ್ಯಗಳಿಗೂ ಆಹ್ವಾನಿಸುವುದಿಲ್ಲ. ಅವರಲ್ಲಿರುವ ಕೆಟ್ಟ ಭಾವನೆ ಅಥವಾ ದುಷ್ಟಶಕ್ತಿಗಳೇ ಅವರ ಬಂಜೆತನಕ್ಕೆ ಕಾರಣವೆಂದು ನಂಬಿ ಇತರರು ತಮ್ಮ ಮಕ್ಕಳನ್ನು ಮುಟ್ಟಲು, ಕೆಲವರು ಕಣ್ಣಿಂದ ನೋಡಲೂ ಬಿಡುವುದಿಲ್ಲ. ಹೀಗೆ ಸಮಾಜದ ನಿಂದನೆಗೆ, ಬಹಿಷ್ಕಾರಕ್ಕೆ ಗುರಿಯಾದ ದಂಪತಿಗಳಿಗೆ ಒಂದು ಮಗುವಾದರೆ ಅವರ ಸಾಮಾಜಿಕ ಅಂತಸ್ತು, ಸಂಬಂಧಗಳೇ ಬದಲಾಗುತ್ತವೆ. ಇದೇ ರೀತಿ ಒಂದು ಮಗುವಿನ ಬರುವಿಕೆಯಿಂದ ದಂಪತಿಗಳ ವ್ಯಕ್ತಿತ್ವದಲ್ಲಿಯೂ ಮಹತ್ತರವಾದ ಬದಲಾವಣೆಗಳಾಗುತ್ತವೆ. ಇಲ್ಲಿಯವರೆಗೆ ಉಂಡುಟ್ಟು "ಗೂಳಿಗಳಂತಿದ್ದ" ಇವರು ತಮ್ಮ ರೀತಿ-ನೀತಿಗಳಲ್ಲಿ, ನಡವಳಿಕೆಯಲ್ಲಿ ಬದಲಾವಣೆ ತಂದುಕೊಳ್ಳಬೇಕಾಗುತ್ತದೆ. ಕೇವಲ ಪ್ರೌಢವಯಸ್ಕರ ಒಡನಾಟದಲ್ಲಿದ್ದ ಇವರು ಇಲ್ಲಿಂದ ಮುಂದೆ ಮಕ್ಕಳ ಪ್ರಪಂಚಕ್ಕೆ ಹೊಂದಿಕೊಳ್ಳಬೇಕಾಗುತ್ತದೆ.

ಆಯಾ ಸಂಸ್ಕೃತಿಗಳಿಗೆ ತಕ್ಕಂತೆ, ಗರ್ಭಧಾರಣೆಯ ಬಗ್ಗೆಯೂ ಅನೇಕ ಕಲ್ಪನೆಗಳಿರುತ್ತವೆ. ಸ್ತ್ರೀ ಪುರುಷರ ಮಿಲನದಿಂದ ಗರ್ಭಧಾರಣವಾಗುವುದೆಂದು ತಿಳಿದಿದ್ದರೂ, ಇದಕ್ಕೆ ಕೆಲವೊಂದು ಶಕ್ತಿಗಳು ಅಥವಾ ಪಿತೃಗಳು ಮತ್ತೊಮ್ಮೆ ಕುಟುಂಬದಲ್ಲಿ ಹುಟ್ಟಿ ಬರುವುದು ಕಾರಣವೆಂದು ನಂಬುತ್ತಾರೆ. ಹೀಗಾಗಿ ತಮ್ಮ ಗರ್ಭದ ಬಗೆಗೆ ಹೆಚ್ಚಿನ ಗೌರವ ಹಾಗೂ ಪ್ರೀತಿ ಉಳ್ಳವರಾಗಿರುತ್ತಾರೆ. ಜೊತೆಗೆ ಅನೇಕ ನೇಮ-ನಿಷೇಧಗಳನ್ನು ಪಾಲಿಸುತ್ತಾರೆ. ಉದಾಹರಣೆಗೆ ಗರ್ಭಿಣಿಯರು ನಡುರಾತ್ರಿ ಮತ್ತು ನಡುಹಗಲಿನಲ್ಲಿ, ಗ್ರಹಣಕಾಲದಲ್ಲಿ ಅಮವಾಸ್ಯೆ ದಿನಗಳಲ್ಲಿ, ಮನೆಯಿಂದ ಹೊರಹೋಗುವಂತಿಲ್ಲ. ತನ್ನ ಊಟ, ತಿಂಡಿಗಳಲ್ಲಿ, ಕೆಲಸ-ಕಾರ್ಯದಲ್ಲಿಯೂ ಆಕೆ ಕೆಲವೊಂದು ನಿಯಂತ್ರಣ, ನಿಯಮ ತಂದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಆಕೆ ಜೋಡಿ ಬಾಳೆಹಣ್ಣು, ಗಟ್ಟಿ ಆಹಾರ ಪದಾರ್ಥಗಳನ್ನು ತಿನ್ನುವಂತಿಲ್ಲ, ಭಾರವಾದ ವಸ್ತುಗಳನ್ನು ಎತ್ತುವಂತಿಲ್ಲ, ತರಕಾರಿ ಹಣ್ಣು ಮುಂತಾದವನ್ನು ಕತ್ತರಿಸುವಂತಿಲ್ಲ, ಮೆಟ್ಟಿಲು ಹತ್ತುವಂತಿಲ್ಲ, ಸಾವಿನ ಮತ್ತು ಹೆರಿಗೆ

ವೇಳೆ ಹೆರಿಗೆ ತಡವಾದರೆ ತಮಗೆ ತಿಳಿದ ನಾಟಿ ವೈದ್ಯೋಪಚಾರಗಳನ್ನು ಮಾಡುವುದು, ದೇವರಿಗೆ ಹರಕೆ ಮಾಡಿಕೊಳ್ಳುವುದು ಸಾಮಾನ್ಯ.

ಮಗು ಹುಟ್ಟಿದ ವೇಳೆಯ ಆಧಾರದ ಮೇಲೆ ಅದು ಮುಂದೆ ಇಂತಹದ್ದೇ ನಡಾವಳಿಕೆಯದಾಗುತ್ತದೆ ಎಂದು ಜಾನಪದಿಗಳು ನಂಬುತ್ತಾರೆ. ಒಂದು ಮಗು ಬೆಳಗಿನ ಜಾವ ಹುಟ್ಟಿದರೆ ದುಡಿಮೆಗಾರ, ಮಧ್ಯಾಹ್ನದಲ್ಲಿ ಹುಟ್ಟಿದರೆ ಬಿಸಿಲಿನಂತೆ ಸಿಟ್ಟಿನವ, ಸಂಜೆಯ ವೇಳೆಯಲ್ಲಿ ಹುಟ್ಟಿದರೆ ಮೈಗಳ್ಳ, ಮಧ್ಯರಾತ್ರಿ ಹುಟ್ಟಿದರೆ ಸೋಮಾರಿ, ಆಲಸಿಯೂ ಆಗುತ್ತಾನೆಂದು ನಂಬುವರು. ಇದು ಎಷ್ಟರ ಮಟ್ಟಿಗೆ ನಿಜವೆಂಬುದನ್ನು ಮತ್ತು ಇಂತಹ ನಂಬಿಕೆಗಳು ಮಗುವಿನ ವ್ಯಕ್ತಿತ್ವದ ಮೇಲೆ ಯಾವ ಬಗೆಯ ಪರಿಣಾಮ ಬೀರುತ್ತವೆಂಬುದನ್ನು ಸೂಕ್ತ ಸಂಶೋಧನೆಯಿಂದ ತಿಳಿಯಬೇಕಾಗಿದೆ. ಆದರೆ ಒಬ್ಬ ಸಿಟ್ಟಿನವನಾದರೆ, ಹಟಮಾರಿಯಾದರೆ ಅವನು ಇಂತಹ ವೇಳೆಯಲ್ಲಿ ಹುಟ್ಟಿದ್ದೇ ಕಾರಣವೆಂದು ನಂಬಿ, ಉಳಿದವರು ಅವನಿಂದ ದೂರವಿರುತ್ತಾರೆ. ಇಂತಹ ಸ್ವಭಾವ ಬೆಳೆಸಿಕೊಂಡ ವ್ಯಕ್ತಿ ಇದನ್ನೇ ಸೂಕ್ತ ನಡವಳಿಕೆ ಎಂದು ತಿಳಿದು ಅದೇ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾನೆ.

ಒಂದು ಮಗು ಹುಟ್ಟುತ್ತಿದ್ದಂತೆ ಅದು ತನ್ನ ತಂದೆತಾಯಿಗಳ ಧರ್ಮಕ್ಕೆ ಸೇರಿಹೋಗುವುದಿಲ್ಲ. ಅದನ್ನು ಆಯಾ ಧಾರ್ಮಿಕ ಸಂಪ್ರದಾಯಕ್ಕೆ ಅನುಗುಣವಾಗಿ ಆದಷ್ಟು ಜಾಗ್ರತೆ ತಮ್ಮಲ್ಲಿ ಸೇರಿಸಿಕೊಳ್ಳಬೇಕು. ಮಡಿ ಮೈಲಿಗೆಯ ನೇಮದಲ್ಲಿ ಹೆಚ್ಚಿನ ನಂಬಿಕೆಯುಳ್ಳ ವೈದಿಕರು ಈ ವಿಧಿಯನ್ನು ಆದಷ್ಟು ಬೇಗ ಸಾಮಾನ್ಯವಾಗಿ ಮಗು ಹುಟ್ಟಿದ ಮೂರನೇ ದಿನದಂದು ಆಚರಿಸಬಹುದು. ಈ ಸಂದರ್ಭದಲ್ಲಿ ಹೆರಿಗೆಯಿಂದ ಬಂದ ಮೈಲಿಗೆ ಸ್ಥಿತಿಯಿಂದ ಮನೆ ಮತ್ತು ಮನೆಯವರನ್ನು ಹೊರತರಲು ಒಂದು ಶುದ್ಧಿ ಕಾರ್ಯವನ್ನು ಮತ್ತು ಮಗುವಿಗೆ ಒಂದು ಹೆಸರು ನೀಡುವ ಕಾರ್ಯವನ್ನು ಆಚರಿಸಲಾಗುವುದು. ಆಗ ತಮ್ಮಲ್ಲಿ ಹೊಸ ಸದಸ್ಯನೊಬ್ಬ ಹುಟ್ಟಿದ ಸಂತೋಷವನ್ನು ವ್ಯಕ್ತಪಡಿಸಲು ಕುಟುಂಬವು ನೆಂಟರಿಷ್ಟರಿಗೆ ಒಂದು ಔತಣ ನೀಡುತ್ತದೆ. ಈ ಆಚರಣೆಯು, ಆಹ್ವಾನಿತರಿಗೆ ತಾಯಿ ಮತ್ತು ಮಗುವನ್ನು ನೋಡುವ ಮತ್ತು ಮಗುವಿಗೆ ಹೊಸ ಬಟ್ಟೆ ಅಥವಾ ಹಣದ ಕೊಡಿಗೆ ನೀಡುವ ಅವಕಾಶವನ್ನು ತರುತ್ತದೆ.

ಶಿಷ್ಟ ಸಂಪ್ರದಾಯದಲ್ಲಿ ಮಗುವಿಗೆ ಒಂದು ಹೆಸರು ನೀಡುವವರು ಪುರೋಹಿತರು. ಜಾನಪದ ಸಮಾಜದಲ್ಲಿ ಪುರೋಹಿತ ವರ್ಗವೆಂಬುದಿಲ್ಲವಾದ್ದರಿಂದ ಅವರಲ್ಲಿ ಹಿರಿಯರು ಈ ಕಾರ್ಯ ನೆರವೇರಿಸುತ್ತಾರೆ. ಸಾಮಾನ್ಯವಾಗಿ ಮನೆದೇವರ, ಇಷ್ಟದೇವರ, ಅಜ್ಜ-ಅಜ್ಜಿಯರ ಅಥವಾ ಆತ್ಮೀಯ ಸ್ನೇಹಿತರ ಹೆಸರುಗಳಲ್ಲಿ ಒಂದನ್ನು, ಮಗುವಿಗೆ ಇಡಲು ನಿರ್ಣಯಿಸಬಹುದು. ಕೆಲವೊಮ್ಮೆ ಒಂದು ಉದ್ದೇಶದಿಂದ ಅದಕ್ಕೆ ತಕ್ಕ ಹೆಸರನ್ನು ಸೂಚಿಸಬಹುದು. ಉದಾಹರಣೆಗೆ, ಮಗು ಯಾರಿಂದಾದರೂ ಆಸ್ತಿಯನ್ನು

ದಾನವಾಗಿ ಪಡೆಯುವುದಿದ್ದರೆ ಇದನ್ನು ಸೂಚಿಸಲು ಅದಕ್ಕೆ ದಾನಪ್ಪನೆಂದೂ, ಹುಟ್ಟಿದ ತಮ್ಮ ಎಲ್ಲಾ ಮಕ್ಕಳು ಚಿಕ್ಕವಯಸ್ಸಿನಲ್ಲೇ ಸಾಯುತ್ತಿದ್ದರೆ ಇದು ಯಾವುದೋ ದುಷ್ಟ ಶಕ್ತಿಯ ಕಾಟವೆಂದು ನಂಬಿ ಇದನ್ನು ತಪ್ಪಿಸಲು ವಡಕಪ್ಪ, ಮುರುಡಪ್ಪ ಹೀಗೆ ಯಾವುದಾದರೂ "ಸೊಟ್ಟ" ಹೆಸರು ಇಡಬಹುದು. ದಂಪತಿಗಳಿಗೆ ಒಂದರ ಮೇಲೊಂದರಂತೆ ಕೇವಲ ಹೆಣ್ಣು ಮಕ್ಕಳೇ ಹುಟ್ಟುತ್ತಿದ್ದರೆ ಇದನ್ನು ತಪ್ಪಿಸಲು "ಸ" ಕಾರದಿಂದ ಪ್ರಾರಂಭವಾಗುವ ಹೆಸರುಗಳನ್ನೇ ಇಡುವುದರಿಂದ ಇದನ್ನು ತಪ್ಪಿಸಬಹುದೆಂದು ನಂಬುವರು. ಮಗು ಮುಂದೆ ಸೋದರಿಕೆಯಲ್ಲಿ, ಆತ್ಮೀಯ ಸ್ನೇಹಿತರಲ್ಲಿ ಮದುವೆಯಾಗುವುದಿದ್ದರೆ ಈ ವಚನ ಅಥವಾ ಒಡಂಬಡಿಕೆಗೆ ಸಾಕ್ಷಿಯಾಗಿ ಮಗುವಿಗೆ ಅದರ ಭಾವಿ ಜೀವನ ಸಂಗಾತಿಯ ಹೆಸರಿಗೆ ಸರಿಹೋಗುವಂತೆ ಅಂದರೆ ಬಸಪ್ಪ-ಬಸವ್ವ ಸಿದ್ದಪ್ಪ-ಸಿದ್ದವ್ವ ಹೀಗೆ ಹೆಸರು ಕೊಡುತ್ತಾರೆ. ಇದರಿಂದ ಮಗುವಿಗೆ ಇಡುವ ಹೆಸರು ಅದರ ವ್ಯಕ್ತಿತ್ವದ ಬೆಳವಣಿಗೆಯ ಮೇಲೆ ಎಂತಹ ಪರಿಣಾಮ ಬೀರುತ್ತದೆ ಎಂಬುದನ್ನು ಅಭ್ಯಾಸ ಮಾಡಿ ತಿಳಿಯಬಹುದು.

ಶಿಶು ಅವಸ್ಥೆಯಲ್ಲಿ ಮಕ್ಕಳಿಗೆ ಬರುವ ರೋಗಗಳಿಗೆ ಅಥವಾ ಸಾವಿಗೆ ಅನೇಕ ಗ್ರಹಗಳು, ದುಷ್ಟ ಶಕ್ತಿಗಳು ಕಾರಣವೆಂದು ಜಾನಪದರು ನಂಬುತ್ತಾರೆ. ಆದರೆ ಕೆಲವು ರೋಗಗಳು ಅನುವಂಶಿಯವಿದ್ದು, ಉಳಿದವು ಅನಾರೋಗ್ಯಕರವಾದ ವಾತಾವರಣದಿಂದ ಮತ್ತು ಮಕ್ಕಳನ್ನು ಬೆಳಸುವವರು ಅಜ್ಞಾನದಿಂದ ಬರುತ್ತವೆಂಬುದು ಅವರಿಗೆ ತಿಳಿಯದು. ಜಾನಪದ ಹಿನ್ನೆಲೆಯ ಇವರಿಗೆ ರೋಗಗಳು ಹೇಗೆ ಬರುತ್ತವೆ ಎಂಬುದಕ್ಕೆ ತಮ್ಮವೇ ಆದ ಕೆಲವು ನಂಬಿಕೆಗಳಿರುತ್ತವೆ. ಉದಾಹರಣೆಗೆ, ಮುನಿದ ದೈವಗಳು ಮತ್ತು ಪಿತೃಗಳು, ದುಷ್ಟ ಶಕ್ತಿಗಳು, ಮಾಯ-ಮಾಟಗಾರರು ರೋಗ ತರುತ್ತಾರೆ ಎಂದು ನಂಬುತ್ತಾರೆ. ಹೀಗಾಗಿ ಯಾರಿಗಾದರೂ ರೋಗ ಬಂದರೆ ಇದನ್ನು ತಂದಿರಬಹುದಾದ ಆ ಶಕ್ತಿಯನ್ನು ಮೊದಲು ಗುರುತಿಸಿ ಅದನ್ನು ಹರಕೆ, ಪೂಜೆ, ಆಹುತಿ, ಪ್ರಾರ್ಥನೆ ಮುಂತಾದವುಗಳಿಂದ ಒಲಿಸಿಕೊಂಡು ಮತ್ತೆ ಆರೋಗ್ಯ ಪಡೆಯಲು ಪ್ರಯತ್ನಿಸುತ್ತಾರೆ. ಮಡಿ-ಮೈಲಿಗೆ ನಿಯಮಗಳನ್ನು ಉಲ್ಲಂಘಿಸುವುದರಿಂದ, ದೈವಗಳಿಗೆ ಅಗೌರವ ತೋರುವುದರಿಂದ, ರೋಗಗಳು ಬರುತ್ತವೆ ಎಂದೂ ನಂಬುವರು. ಆದ್ದರಿಂದ ಚಿಕ್ಕಮಕ್ಕಳಿರುವ ಮನೆಗಳಲ್ಲಿ ಹೆಚ್ಚಿನ ನೇಮ-ನಿಷೇಧಗಳನ್ನು ಪಾಲಿಸುವರು ಮತ್ತು ಮಗುವಿಗೆ ಹಾಲುಣಿಸುವಾಗ ಯಾರೂ ಮನೆಯೊಳಗೆ ಬರದಂತೆ, ಗಲಾಟೆ ಕೂಡ ಮಾಡದಂತೆ ಎಚ್ಚರಿಕೆ ವಹಿಸುವರು.

ಸಾಮಾನ್ಯವಾಗಿ ಮಗುವಿಗೆ ಆಹಾರ ನೀಡುವಲ್ಲಿ ಯಾವ ಅಳತೆ ಇತಿಮಿತಿಗಳಿಲ್ಲ, ಮಗು ಅತ್ತಾಗಲೆಲ್ಲ ಅದು ಉಂಡು ತೃಪ್ತಿಗೊಂಡು ಕುಡಿಯುವದನ್ನು ಬಿಡುವವರೆಗೂ ಹಾಲು ಕುಡಿಸುತ್ತಾರೆ. ಆದರೆ ತಾವು ನೀಡಿದ ಹಾಲು ಹೆಚ್ಚಾಯಿತೆ ಅಥವಾ ಕಡಿಮೆಯಾಯಿತೆ ಎಂಬುದಾಗಲೀ, ಮಗು ಅಳುವುದು ಆಹಾರ ಅಥವಾ ಮತ್ತಾವುದಾದರೂ ಕಾರಣಕ್ಕೋ

ಎಂಬುದಾಗಲಿ ಇವರಿಗೆ ತಿಳಿಯದು. ಪೌಷ್ಟಿಕ ಆಹಾರ, ಅನ್ನಾಂಗಗಳು ಇವುಗಳ ಬಗೆಗೆ ಇವರಿಗೆ ತಿಳಿಯದಾದರೂ ಸಾಂಪ್ರದಾಯಕವಾಗಿ ಬಂದ ರೀತಿಯಲ್ಲಿ ಮಕ್ಕಳಿಗೆ, ಬಾಣಂತಿಗೆ ಸೂಕ್ತ ಊಟ ಉಪಚಾರಗಳನ್ನು ಮಾಡುವರು. ಹೀಗಾಗಿ ಅನ್ನಾಂಗಗಳ ಕೊರತೆಯಿಂದ, ರಕ್ತ ಹೀನತೆಯಿಂದ ಅನೇಕ ಮಕ್ಕಳು ಕುರುಡಾಗುತ್ತವೆ, ಬುದ್ಧಿ ಬೆಳವಣಿಗೆಯಲ್ಲಿ ಕುಂಠಿತವಾಗುತ್ತವೆ ಅಥವಾ ಬಾಲ್ಯದಲ್ಲೇ ಮಡಿಯುತ್ತವೆ.

ಮಗು ಹುಟ್ಟಿದ ಮೂರು ದಿನದಲ್ಲಿ ತಾಯಿಯ ಎದೆಯಲ್ಲಿ ಹಾಲು ಬರುತ್ತದೆ ಎಂದು ನಂಬಿಕೆ. ಇದು ಒಂದೆರಡು ದಿನ ತಡವಾಗಬಹುದು. ಇನ್ನೂ ತಡವಾದರೆ ಇದಕ್ಕೆ ಸೂಕ್ತ ಗಿಡಮೂಲಿಕೆಗಳ ಔಷಧಿ ಅಥವಾ ಕೋಳಿ, ಕುರಿ ಮಾಂಸ ಮತ್ತು ಎಲುಬನ್ನು ಕುದಿಸಿದ ರಸವನ್ನು ಬಾಣಂತಿಗೆ ಕುಡಿಸುತ್ತಾರೆ. ತಾಯಿಯಲ್ಲಿ ಹಾಲು ಬರುವವರೆಗೆ ಮಗುವಿಗೆ ಯಾವುದಾದರೂ ಸಾಕು ಪ್ರಾಣಿಯ ಹಾಲಲ್ಲಿ ಹತ್ತಿ ಅಥವಾ ಬಟ್ಟೆಯ ತುಂಡನ್ನು ಅದ್ದಿ ಅದನ್ನು ಮಗು ಚೀಪುವಂತೆ ಅದರ ಬಾಯಲ್ಲಿಡುತ್ತಾರೆ. ಮುಂದೆ ತಾಯಿಯಲ್ಲಿ ಹಾಲು ಬಂದಾಗ ಅದನ್ನೇ ಕುಡಿಯಲು ಪ್ರಾರಂಭಿಸುತ್ತದೆ. ಕೆಲವು ತಾಯಂದಿರಲ್ಲಿ ಹೆಚ್ಚಿಗೆ ಅಥವಾ ಸಾಕಷ್ಟು ಹಾಲು ಬಂದರೆ ಉಳಿದವರಲ್ಲಿ ಕಡಿಮೆ ಬರುತ್ತದೆ. ಹಾಲು ಕಡಿಮೆಯಾದಾಗಲೂ ಮಗುವಿಗೆ ಯಾವುದಾದರೂ ಸಾಕುಪ್ರಾಣಿಯ ಹಾಲನ್ನು ನೀಡುತ್ತಾರೆ. ಎದೆಹಾಲು ಹೆಚ್ಚಾದಾಗ ಮಗು ಕುಡಿದ ನಂತರವೂ ಹೊರಚೆಲ್ಲಬಹುದು. ಎದೆಹಾಲು ಅಪರೂಪದ ವಸ್ತುವಾದ್ದರಿಂದ ಅದನ್ನು ಎಲ್ಲೆಂದರಲ್ಲಿ ಚೆಲ್ಲದೆ ಒಂದು ಪಾತ್ರೆ ಅಥವಾ ತೆಂಗಿನ ಚಿಪ್ಪಿನಲ್ಲಿ ಬೂದಿ ತುಂಬಿಟ್ಟುಕೊಂಡು, ಅದು ಹೆಚ್ಚು ಬಂದಾಗಲೆಲ್ಲಾ ಅದರ ಮೇಲೆ ಕರೆಯುತ್ತಾರೆ.

ಮಗುವಿಗೆ ಯಾವ ವಯಸ್ಸಿನವರೆಗೆ ಎದೆಹಾಲು ಉಣಿಸಬೇಕು, ಕಿರಿಯ ವಯಸ್ಸಿನಲ್ಲೇ ಹಾಲುಣಿಸುವದನ್ನು ಬಿಡಿಸುವುದರಿಂದ ತಾಯಿ ಮತ್ತು ಮಗುವಿನ ಮೇಲೆ ಆಗುವ ಮಾನಸಿಕ ಪರಿಣಾಮಗಳಾವು ಮುಂತಾದವುಗಳ ಬಗ್ಗೆಯೂ ಅನೇಕ ನಂಬಿಕೆಗಳಿವೆ ಮತ್ತು ಮಾನವಶಾಸ್ತ್ರಜ್ಞರು ಇವುಗಳನ್ನು ಅಭ್ಯಾಸ ಮಾಡಿದ್ದಾರೆ. ಕೆಲವೊಂದು ತಾಯಂದಿರು ಮಗು ಬೇಡ ಎನ್ನುವ ವಯಸ್ಸಿನವರೆಗೂ ಎದೆಹಾಲು ಕೊಡಬೇಕು ಎಂದರೆ, ಉಳಿದವರು ತಾಯಿ ಮತ್ತೆ ಬಸಿರಿಯಾಗುವವರೆಗೆ ಕುಡಿಸಬಹುದೆಂದರು. ಎಂಟು ತಿಂಗಳಿಂದ ಒಂದು ವರ್ಷ ವಯಸ್ಸಿನವರೆಗೆ ತಾಯಿ ಹಾಲು ಕುಡಿಸುವುದು ಸಾಮಾನ್ಯ ಮತ್ತು ಸೂಕ್ತವೆಂದು ಗ್ರಾಮಸ್ಥರು ತಿಳಿದಿದ್ದಾರೆ.

ತಾಯಿ ಎದೆ ಹಾಲುಣಿಸುವುದನ್ನು ನಿಲ್ಲಿಸಿದ ನಂತರ ಭೌತಿಕವಾಗಿ ಎದೆಯ ಬಿಗಿತದಿಂದ ಮತ್ತು ಮಾನಸಿಕವಾಗಿ, ಆಕೆಗೆ ಕೆಲವೊಂದು ತೊಂದರೆಗಳಾಗುತ್ತವೆ. ಇದೇ ರೀತಿ ಹಾಲುಣಿಸಲು ಬಿಡಿಸಿದ ಮಗುವಿನಲ್ಲೂ ವಿಶೇಷವಾದ ಮಾನಸಿಕ ತೊಂದರೆಗಳು ಪ್ರಾರಂಭವಾಗುತ್ತವೆ. ಹೀಗಾಗಿ ಕೆಲವೊಂದು ಉಪಾಯ ಮಾಡಿ ಎದೆ ಹಾಲುಣಿಸುವುದನ್ನು

ಬಿಡಿಸುತ್ತಾರೆ. ಕೆಲವರು ಮೊಲೆಯ ತೊಟ್ಟಿಗೆ ಯಾವುದಾದರೂ ಅಸಹ್ಯ ವಾಸನೆ ಅಥವಾ ಅರುಚಿ ತರುವ ಎಣ್ಣೆ ಅಥವಾ ಲೇಹ್ಯವನ್ನು ಲೇಪನ ಮಾಡಿ ಮಗುವಿಗೆ ಹಾಲು ಕುಡಿಯದಂತೆ ಮಾಡುತ್ತಾರೆ. ಇದರಿಂದ ಮಗ ತಾಯಿಯ ಹಾಲುಣ್ಣುವುದು ಬೇಕೆಂದು ಹಟ ಮಾಡುವುದು ತಪ್ಪುತ್ತದೆ. ಕೆಲವೊಮ್ಮೆ ತಾಯಿಯ ಹಾಲುಣ್ಣಬೇಕೆಂದು ಹಟಮಾಡುವ ಮಗುವಿಗೆ ಬೇರೆ ಏನಾದರೂ ಸಿಹಿ ತಿಂಡಿ ನೀಡಿ ಅಥವಾ ಬೇರೊಂದು ಊರಲ್ಲಿರುವ ಅಜ್ಜ-ಅಜ್ಜಿಯರ ಮನೆಗೆ ಕಳುಹಿಸಿ, ಅದರ ಗಮನವನ್ನು ಬೇರೊಂದೆಡೆ ಸೆಳೆಯುವುದರಿಂದಲೂ ಬಿಡಿಸುತ್ತಾರೆ. ಹೀಗೆ ಮಗುವಿಗೆ ಮಾನಸಿಕವಾಗಿ ತೊಂದರೆಯಾಗದಂತೆ ಬಿಡಿಸದಿದ್ದರೆ ಅದು ಊಟ-ನಿದ್ರೆ ಬಿಟ್ಟು ತೊಳಲಾಟಕ್ಕೆ ಗುರಿಯಾಗಿ ಅಳುವುದು, ಹಟ ಮಾಡುವುದು, ಮಾತು ಬಿಡುವುದು ಮುಂತಾದ ತೊಂದರೆ ಅನುಭವಿಸಬಹುದು. ಇಂತಹ ತೊಂದರೆಗಳು ಮುಂದೆ ಅದರ ವ್ಯಕ್ತಿತ್ವದ ಬೆಳವಣಿಗೆಗೆ ಅಡ್ಡಿ ತರುತ್ತವೆ.

ಗ್ರಾಮೀಣ ಹಾಗೂ ಜಾನಪದ ಸಮಾಜಗಳಲ್ಲಿ ಮಕ್ಕಳಿಗೇ ಎಂದು ಪ್ರತ್ಯೇಕ ಆಹಾರ ತಯಾರಿಸುವುದಿಲ್ಲ. ಹಿರಿಯರು ಯಾರಾದರೂ ಊಟ ಮಾಡುವಾಗ ಅವರೊಂದಿಗೆ ಮಕ್ಕಳೂ ಕೂಡುತ್ತಾರೆ. ಈ ಹಿರಿಯರು ತಾವು ಉಣ್ಣುವ ಆಹಾರವನ್ನು ಸ್ವಲ್ಪ ಸ್ವಲ್ಪವಾಗಿ, ಮೆತ್ತಗೆ ಮಾಡಿ, ಮಕ್ಕಳಿಗೂ ತಿನ್ನಿಸಬಹುದು. ಅದು ಕಾರವೆನಿಸಿ ಮಕ್ಕಳು ಊಟ ಬಿಡಬಹುದು. ಕೆಲಸಕ್ಕೆ ಹೊರಹೋಗುವ ತಾಯಂದಿರು ಇದಕ್ಕೆ ಅವಕಾಶ ಕೊಡದೆ, ಅವು ಮುಖ-ಮೈ ಹಾಗೂ ಬಟ್ಟೆ ಕೊಳೆ ಮಾಡಿಕೊಳ್ಳುವುದನ್ನು ತಪ್ಪಿಸಲು ತಾವೇ ಈ ಆಹಾರ ತಿನ್ನಿಸಬಹುದು. ಕಾಲಕ್ರಮೇಣ ಮಗು ದೊಡ್ಡದಾದಂತೆ ಅದಕ್ಕೆ ಪ್ರತ್ಯೇಕವಾಗಿ, ಉಣ್ಣಲು ಕೊಡುವುದರಿಂದ ಅದು ತಾನೇ ಉಣ್ಣಲು ಕಲಿಯುತ್ತದೆ. ಸರಿಯಾಗಿ ಕುಳಿತು, ಕಾಲು-ಕೈ, ಮೈ ಮೇಲೆ ಚೆಲ್ಲಿಕೊಳ್ಳದಂತೆ, ಬಲಗೈಯಿಂದ ತಿನ್ನುವುದನ್ನು ಕಲಿಸಲು ತಾಯಂದಿರು ಶ್ರಮಿಸಬೇಕಾಗುತ್ತದೆ.

ಮಕ್ಕಳಿಗೆ ಮಲ-ಮೂತ್ರ ವಿಸರ್ಜನೆಗೆ ಹಾಗೂ ಸ್ನಾನ, ಸ್ವಚ್ಛತೆ ಮುಂತಾದವುಗಳ ತರಬೇತಿ ನೀಡುವ ಬಗೆಗಳೂ ಮಾನವಶಾಸ್ತ್ರಜ್ಞರ ಗಮನ ಸೆಳೆದಿವೆ. ಮಗು ಕೈಗೂಸಾಗಿದ್ದಾಗ, ಅದರ ಜೈವಿಕ ಕ್ರಿಯೆಗಳ ಮೇಲೆ ಸಾಂಸ್ಕೃತಿಕ ನಿಯಂತ್ರಣವಿಲ್ಲದಾಗಿ ಎಲ್ಲೆಂದರಲ್ಲಿ, ಬೇಕೆನಿಸಿದಾಗ, ಮಲಮೂತ್ರ ಮಾಡಿಬಿಡುತ್ತದೆ. ಹೀಗೆ ಬಟ್ಟೆ ತೊಡಿಸುವ ಆಧಾರದಿಂದಲೂ ಮಕ್ಕಳನ್ನು ಒಂದು ಮತ್ತು ಎರಡು ತುಂಡು ಬಟ್ಟೆ ಉಡುವ ಮಕ್ಕಳೆಂದು ಗುಂಪು ಮಾಡುತ್ತಾರೆ. ಮಗು ದೊಡ್ಡದಾದಂತೆ, ಅದಕ್ಕೆ ತನ್ನ ದೈಹಿಕ ಕ್ರಿಯೆಗಳ ಮೇಲೆ ನಿಯಂತ್ರಣ ಬಂದಂತೆ, ಅದು ಎಲ್ಲಿ, ಯಾವಾಗ, ಹೇಗೆ ಮಲಮೂತ್ರ ಮಾಡಬೇಕೆಂದು ತಿಳಿಸಿಕೊಡಲಾಗುವುದು. ಅನೇಕ ಸಮಾಜಗಳಲ್ಲಿ ಆರೋಗ್ಯ, ನೈರ್ಮಲ್ಯದ ಮಾಹಿತಿ ಇಲ್ಲದಿದ್ದರೂ ಮಾಯ-ಮಾಟದ, ದೇವರುಗಳ, ಮಡಿ-ಮೈಲಿಗೆಯ ಹೆದರಿಕೆಯಿಂದ, ಮಲಮೂತ್ರಗಳನ್ನು ದೂರ ಹಾಗೂ

ನಿಗದಿತ ಸ್ಥಳದಲ್ಲೇ ವಿಸರ್ಜಿಸುತ್ತಾರೆ. ಆರ್ಥಿಕವಾಗಿ ಹಿಂದುಳಿದ ಆದರೆ ಆಧುನಿಕತೆಯ ನೆರಳಲ್ಲಿರುವ ಸಮಾಜಗಳು ತಮ್ಮ ನಂಬಿಕೆಗಳಲ್ಲಿ, ಧರ್ಮದಲ್ಲಿ ಬದಲಾವಣೆ ತಂದುಕೊಂಡಿರುವುದರಿಂದ ಮಡಿ ಮೈಲಿಗೆ ಅಥವಾ ಮಾಯ-ಮಾಟದಲ್ಲಿ ನಂಬಿಕೆ ಕಳೆದುಕೊಂಡಿವೆ. ಹೀಗಾಗಿ ನೈರ್ಮಲ್ಯದ ಕಡೆ ಹೆಚ್ಚಿನ ಗಮನ ಕೊಡುತ್ತಿಲ್ಲವಾದ್ದರಿಂದ ಆರೋಗ್ಯಕ್ಕೆ ಸಂಬಂಧಿಸಿದಂತೆ ಅನೇಕ-ತೊಂದರೆಗಳೂ ಬಂದಿವೆ. ಇವರಲ್ಲಿ ಮುಲಮೂತ್ರ ಮಾಡಲು ನಿಗದಿತ ಸ್ಥಳ ಇಲ್ಲವಾದ್ದರಿಂದ ಮತ್ತು ತಮ್ಮ ಪೂರ್ವದ ನೇಮ ನಡವಳಿಕೆಗಳನ್ನು ಕಳೆದುಕೊಂಡಿರುವುದರಿಂದ, ಅವರು ಎಲ್ಲೆಂದರಲ್ಲಿ ವಿಸರ್ಜನೆ ಮಾಡಿಬಿಡುತ್ತಾರೆ. ಮಕ್ಕಳು ದೂರ ಹೋಗಲು ಹೆದರಿ ಮನೆಯ ಮುಂದಿನ ಅಥವಾ ಪಕ್ಕದ ಜಾಗದಲ್ಲಿ ಕೂತು ಬಿಡುತ್ತಾರೆ. ಹೀಗೆ ಮಲಮೂತ್ರ ವಿಸರ್ಜನೆಯ ಬಗ್ಗೆ ಮಕ್ಕಳು ಹಿರಿಯರಿಂದ, ತಪ್ಪು ತಿಳುವಳಿಕೆ ಪಡೆಯುತ್ತಾರೆ.

ಇದೇ ರೀತಿ ಹಲ್ಲು, ಕೈ-ಕಾಲು, ಮೈ, ತಲೆಗೂದಲು ತೊಳೆದುಕೊಳ್ಳುವುದು, ತಲೆ ಬಾಚಿಕೊಳ್ಳುವುದು, ಉಗುರು ಕತ್ತರಿಸಿಕೊಳ್ಳುವುದು, ಬಟ್ಟೆ, ಹಾಸಿಗೆ-ಹೊದಿಕೆ, ಒಳ ಉಡುಪು ಬದಲಾಯಿಸುವುದು ಮುಂತಾದವುಗಳ ಬಗ್ಗೆಯೂ ತಂದೆತಾಯಂದಿರು ಕಲಿಸಿಕೊಡಬೇಕು. ಅವರ ಆರ್ಥಿಕ ಅನುಕೂಲತೆ, ವಿದ್ಯಾ ಮಟ್ಟ, ತಿಳುವಳಿಕೆ ಮುಂತಾದವು ಇಲ್ಲಿ ಗಮನಿಸಬೇಕಾದ ವಿಷಯಗಳು. ಹಿರಿಯರಲ್ಲೇ ಈ ವಿಚಾರಗಳ ಕಡೆಗೆ ಆಸ್ಥೆ ಇಲ್ಲದಿದ್ದರೆ, ತಿಳುವಳಿಕೆ ಇಲ್ಲದಿದ್ದರೆ ಅವರು ತಮ್ಮ ಮಕ್ಕಳಿಗೆ ತಿಳಿಯ ಹೇಳಲಾರರು. ಹೀಗೆ ಆರೋಗ್ಯ ಮತ್ತು ನೈರ್ಮಲ್ಯದ ರಂಗದಲ್ಲಿಯೂ ಕುಟುಂಬ ಮತ್ತು ಸಮಾಜ ತಮ್ಮ ಸದಸ್ಯರ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ನೆರವಾಗುತ್ತಾರೆ.

ಕೊನೆಯದಾಗಿ ಮಗು ಎಲ್ಲಿ ಯಾರ ಜೊತೆಗೆ ಮಲಗುತ್ತದೆ ಎಂಬುದೂ ಅಭ್ಯಾಸ ಯೋಗ್ಯವಾದ ವಿಷಯ. ಇನ್ನೂ ಕೈಗೂಸಾಗಿದ್ದಾಗ ಯಾವಾಗಲೂ ಯಾರಾದರೊಬ್ಬ ಹಿರಿಯರಿಂದ ಪಾಲಿಸಿಕೊಂಡ ಮಗು ಮುಂದೆ ಬೆಳೆದಂತೆ, ಒಂಟಿಯಾಗಿರಲು ಕಲಿಯುತ್ತದೆ. ತಾಯಿ ಹೊರಗೆ ದುಡಿಯಲು ಹೋಗುವುದಿದ್ದರೆ ಕೆಲವಾರು ಗಂಟೆಗಳ ಕಾಲವಾದರೂ ಮಗು ಆಕೆಯನ್ನು ಕಾಣದೆ ಇರಬೇಕಾಗುತ್ತದೆ. ಆಗ ಯಾರಾದರೂ ಸೂಕ್ತ ಹಿರಿಯ ವ್ಯಕ್ತಿ ಮಗುವಿನ ಪಾಲನೆ ಪೋಷಣೆಯ ಹೊಣೆಯನ್ನು ಹೊರುತ್ತಾರೆ. ಇವರು ಸಾಮಾನ್ಯವಾಗಿ ಮಗುವಿನ ಅಜ್ಜಿ, ಅತ್ತೆ, ಅಕ್ಕ ಮುಂತಾದವರಿದ್ದು ಅವರು ಮಗುವನ್ನು ಪ್ರೀತಿಯಿಂದ ನೋಡಿಕೊಳ್ಳಬಹುದು. ಇಂತಹ ಸಂಬಂಧಿಕರಿಲ್ಲದ ಮಕ್ಕಳಿಗೆ ತೊಂದರೆಯಾಗುತ್ತದೆ. ಮಗು ಇನ್ನೂ ಚಿಕ್ಕದಿದ್ದು ಅದಕ್ಕೆ ತನ್ನ ತಾಯಿ ತನ್ನಿಂದ ದೂರುವಿರುವುದು ತಿಳಿಯುವಷ್ಟು ಪ್ರಜ್ಞೆ ಇಲ್ಲದಿರುವಾಗ ಇಂತಹ ಸಮಸ್ಯೆ ಬರುವುದಿಲ್ಲ. ಮುಂದೆ ತಿಳುವಳಿಕೆ ಬಂದಂತೆ ಅದಕ್ಕೆ ಮಾನಸಿಕ ತೊಳಲಾಟ ಪ್ರಾರಂಭವಾಗಬಹುದು. ರಾತ್ರಿ ತಾಯಿಯ ಮಗ್ಗಲಲ್ಲೇ ಮಲಗುತ್ತಿದ್ದ

7

ಮಗುವನ್ನು ಅದು ಬೆಳೆದಂತೆ ದೂರ ಮಲಗಲು ಹೇಳಬಹುದು. ಇದಕ್ಕೆ ಅನೇಕ ಕಾರಣಗಳಿರುತ್ತವೆ. ಮೊದಲನೆಯದಾಗಿ ತಂದೆತಾಯಿಗಳೇ ಮಗುವನ್ನು ಬೇರೆ ಮಲಗಿಸಬಹುದು ಅಥವಾ ಈ ವೇಳೆಗೆ ತಾಯಿಗೆ ಮತ್ತೊಂದು ಮಗುವಾಗಬಹುದು. ಆಗ ತನ್ನವರಿಂದ ದೂರವಾದ ಮಗು ಭಯದಿಂದ ಮಾನಸಿಕ ತೊಂದರೆಗೀಡಾಗಿ ಹಟ ಮಾಡಬಹುದು.

ಇನ್ನೂ ಶಾಲೆಗೆ ಹೋಗದ ಮಗು ಮನೆಯವರ, ನಂತರ ನೆರೆಹೊರೆಯವರ ಸಂಪರ್ಕದಲ್ಲಿ ಮಾತ್ರ ಇರುತ್ತದೆ. ಅನೇಕ ಸಮಾಜಗಳಲ್ಲಿ ಇವರು ಕೇವಲ ಅದರ ಕೊಲ, ಉಪಜಾತಿ ಅಥವಾ ಜಾತಿ ಗುಂಪಿಗೆ ಸೇರಿದವರಾಗಿರುತ್ತಾರೆ. ಇವರೆಲ್ಲರೂ ಮಗು ಇರುವಲ್ಲಿಗೇ ಬರುವುದರ ಮೂಲಕ ಅದರ ಸಂಪರ್ಕಕ್ಕೆ ಬಂದಿರುತ್ತಾರೆ. ಏಕೆಂದರೆ ಆಗ ಮಗು ಇನ್ನೂ ನಡೆದಾಡುವ ಸ್ಥಿತಿಯಲ್ಲಿರುವುದಿಲ್ಲ. ಇಂತಹ ಅಶಕ್ತ ಅಸಹಾಯಕ ಮಗು ಮಲಗಿಸಿದಲ್ಲಿಯೇ ಒಂದೆಡೆ ಬೆನ್ನ ಮೇಲೆ ಮಲಗಿರುತ್ತದೆ. ಅದಕ್ಕೆ ನೆಟ್ಟಗೆ ಕೂಡಲು ಸೊಂಟದಲ್ಲಿ ಮತ್ತು ತಲೆ ಎತ್ತಲು ಶಿರದಲ್ಲಿ ಶಕ್ತಿ ಇರುವುದಿಲ್ಲ. ಹೀಗಾಗಿ ಅದು ಮಲಗಿಸಿದಲ್ಲಿಯೇ ಇರುತ್ತದೆ ಮತ್ತು ಅದರ ರಕ್ಷಣೆಯ ದೃಷ್ಟಿಯಿಂದ ತೊಟ್ಟಿಲಲ್ಲಿ ಅಥವಾ ಜೋಲಿಯಲ್ಲಿಟ್ಟು ಮಲಗಿಸಿರುತ್ತಾರೆ. ಕಣ್ಣಲ್ಲಿ ಧೂಳು ಬೀಳದಂತೆ, ನೊಣ ಮುಂತಾದ ಕ್ರಿಮಿ-ಕೀಟಗಳು ತೊಂದರೆ ಕೊಡದಂತೆ ಸುತ್ತಲೂ ಬಟ್ಟೆ ಕಟ್ಟುತ್ತಾರೆ. ನಾಲ್ಕಾರು ತಿಂಗಳು ತುಂಬುತ್ತಿದ್ದಂತೆ ಅದು ಮಗ್ಗಲಾಗಲು ಪ್ರಯತ್ನಿಸುತ್ತದೆ. ಹೀಗೆ ಮಗು ಮಗುಚಿಕೊಳ್ಳುವುದನ್ನು ಹೆಮ್ಮೆಯಿಂದ ನೋಡುತ್ತಿರುವ ಅದರ ಹಿರಿಯರು ಅದನ್ನು ಮತ್ತೆ ಬೆನ್ನ ಮೇಲೆ ಮಲಗಿಸುತ್ತಾರೆ. ಮಗು ಮತ್ತೆ ಪ್ರಯತ್ನಿಸುತ್ತದೆ ಮತ್ತು ಹಿರಿಯರು ಮತ್ತೆ ಬೆನ್ನ ಮೇಲೆ ಮಲಗಿಸುತ್ತಾರೆ. ಈ ಕ್ರಿಯೆ ಒಂದು ಕ್ರೀಡೆಯಾಗಿ ಕೆಲವಾರು ವಾರದವರೆಗೆ ನಡೆಯುತ್ತದೆ. ಹಿರಿಯರು ಹೀಗೆ ಅದನ್ನು ಬೆನ್ನು ಅಡಿಯಾಗಿ ಮಲಗಿಸದಿದ್ದರೆ ತನ್ನ ಕೈಯಲ್ಲಿ ಶಕ್ತಿ ಸಾಲದೆ ಮಗು ಮುಖ ಅಡಿಯಾಗಿ ಮೆತ್ತನೆಯ ಹಾಸಿಗೆಯಲ್ಲಿ ಮಲಗಿ ಉಸಿರು ಕಟ್ಟುಬಹುದು.

ಸುಮಾರು ಏಳು ತಿಂಗಳಲ್ಲಿ ಆರೋಗ್ಯವಂತ ಮಗುವೊಂದು ಮಗುಚಿ, ಅಂಬೆಗಾಲಿಟ್ಟು ಅಥವಾ ತೆವಳುತ್ತಾ ಮುಂದೆ ಹೋಗುತ್ತದೆ. ಈ ಹಂತದಲ್ಲಿ ಮಗು ಒಂದೆಡೆ ನಿಲ್ಲದೆ ಹರಿದಾಡುವುದರಿಂದ, ಕೈಗೆ ಸಿಕ್ಕದ್ದನ್ನು ಮುಟ್ಟಲು, ತಿನ್ನಲು ಪ್ರಯತ್ನಿಸುವುದರಿಂದ, ಎಲ್ಲರೂ ಅದನ್ನು ಬಹು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾರೆ. ಮುಂದೆ ಒಂಬತ್ತು ಹತ್ತು ತಿಂಗಳಲ್ಲಿ ಅದು ಕೂಡಲು ಪ್ರಾರಂಭಿಸಿದ ನಂತರ, ಕಟ್ಟೆ, ಕಂಬ ಹಿಡಿದುಕೊಂಡು ಎದ್ದು ನಿಲ್ಲಲು ಪ್ರಾರಂಭಿಸುತ್ತದೆ. ಒಂದು ವರ್ಷದಲ್ಲಿ ಅದು ಸ್ವತಃ ತಾನೇ ನಡೆದಾಡಲು ಕಲಿಯುತ್ತದೆ.

ಮಕ್ಕಳನ್ನು ಅವರ ವಯಸ್ಸಿನ ಆಧಾರದ ಮೇಲೆ ಮತ್ತು ಕುಟುಂಬದಿಂದ ಹೊರಗಿನವರೊಡನೆ ಸಂಪರ್ಕ ಹೊಂದಿರುವ ಆಧಾರದ ಮೇಲೆ, ಶಾಲಾ ವಯಸ್ಸಿಗಿಂತ

ಚಿಕ್ಕವರು ಮತ್ತು ಶಾಲೆಗೆ ಹೋಗುವವರು ಎಂದು ಎರಡು ಗುಂಪು ಮಾಡಬಹುದು. ಒಂದು ಮಗು ಬೆಳೆದಂತೆ, ಮೊದಲು ತಾಯಿ, ಸೋದರಿಯರು, ಸೋದರರು, ತಂದೆ, ಹೀಗೆ ಕ್ರಮೇಣವಾಗಿ ಕುಟುಂಬದ ಇತರೆ ಸದಸ್ಯರೊಂದಿಗೆ ಸಂಬಂಧ ಬೆಳೆಸಿಕೊಡುವರು. ಮಗು ಅವರನ್ನು ಗುರುತಿಸುವುದರ ಜೊತೆಗೆ ಅವರನ್ನು ಸೂಕ್ತ ಕರೆಪದಗಳನ್ನು ಬಳಸಿ ಕರೆಯುವುದನ್ನು ಕಲಿಸುವರು. ಮೊದಮೊದಲು ಈ ಕರೆಪದಗಳನ್ನು ಬಳಸುವಲ್ಲಿ ಮಗು ತಪ್ಪು ಮಾಡಿದರೆ ಸಾಮ; ದಾನ, ಭೇದ ನಂತರ ದಂಡದ ಮಾರ್ಗದಲ್ಲಿ ಪ್ರತಿಕ್ರಿಯೆ ನೀಡಿ ಅದನ್ನು ತಿದ್ದುತ್ತಾರೆ. ಇದೇ ರೀತಿ ಮಕ್ಕಳಿಗೆ ಮಾತಾಡುವುದನ್ನೂ ಕಲಿಸುವರು. ಮೊದಲು ತೊದಲುನುಡಿಯಿಂದ ಒಂದೆರಡು ಮಾತಾಡಿದರೂ ಅದನ್ನೇ ದೊಡ್ಡ ವಿಷಯವೆಂದು ಗಣಿಸಿ ಹಿರಿಯರು ಮಗುವಿಗೆ ಹೆಚ್ಚು ಹೆಚ್ಚು ಮಾತಾಡುವಂತೆ, ಸ್ಪಷ್ಟವಾಗಿ ಪದಗಳನ್ನು ಉಚ್ಚರಿಸುವಂತೆ ಪ್ರಚೋದಿಸುವರು.

ಮಗು ಮೊದಲ ಬಾರಿಗೆ ತಲಬಾಗಿಲು ಹೊಸಲನ್ನು ತನಗೆ ತಾನೇ ದಾಟಿದ್ದನ್ನು ಗುರುತಿಸಲು ಆ ಹೊಸಲಿಗೆ ಪೂಜೆ ಮಾಡಿ ತೆಂಗಿನಕಾಯಿ ಒಡೆದು, ಆ ಕೊಬ್ಬರಿಯನ್ನು ಓಣೆಯಲ್ಲಿ ಮಕ್ಕಳಿಗೆ ಹಂಚುತ್ತಾರೆ. ಇದರ ಉದ್ದೇಶವೆಂದರೆ ಅಂದಿನಿಂದ ಮಗು ಕುಟುಂಬದಿಂದ ಹೊರಗಿನವರೊಡನೆ ಸಂಬಂಧ ಹೊಂದಲು ಪ್ರಾರಂಭಿಸಿತು ಎಂದು ನೆರಹೊರೆಯವರಿಗೆ ತಿಳಿಸುವುದು. ಆಗ ಮಗು ಆಟಕ್ಕೆ ಒಡನಾಟಕ್ಕೆ ನೆರೆಹೊರೆಯ ಓರಿಗೆಯವರನ್ನು ತನ್ನ ವಯೋಮಾನ ಮತ್ತು ಲಿಂಗಕ್ಕೆ ಅನುಗುಣವಾಗಿ ಆರಿಸಿಕೊಂಡು ಗುಂಪು ಕಟ್ಟಿಕೊಂಡು ಗದ್ದಲ, ಗಲಾಟೆ, ಜಗಳ ಮಾಡುತ್ತಾ ಈ ಸೀಮಿತ ಪ್ರದೇಶದಲ್ಲಿ ಆಡುತ್ತಿರುತ್ತದೆ. ಆಗ ಜೊತೆಯಾದವರು ಸಾಮಾನ್ಯವಾಗಿ ಬಾಲ್ಯ ಸ್ನೇಹಿತರಾಗಿ ಇಡೀ ಜೀವಮಾನವೆಲ್ಲಾ ಆತ್ಮೀಯರಾಗಿ ಮುಂದುವರೆಯುತ್ತಾರೆ.

ಹಸಿವಾದಾಗ ಅಥವಾ ಕರೆದಾಗ ಬಂದು ತಿಂದುಟ್ಟು ಸದಾ ಆಡುತ್ತಾ ತಿರುಗುವ ಈ ವಯಸ್ಸಿನ ಮಕ್ಕಳಿಗೆ ಜೀವನದಲ್ಲಿ ಯಾವ ಚಿಂತೆ, ಅಡೆತಡೆಗಳಿರುವುದಿಲ್ಲವಾದರೂ ಅವರು ತಮ್ಮ ಮನೆಯ ಅಂಗಣ, ಓಣೆಯನ್ನು ಬಿಟ್ಟು ಹೊರಹೋಗುವಂತಿಲ್ಲ ಮತ್ತು ಹೋಗಿರುವುದಿಲ್ಲ. ಅಲ್ಲದೆ ಇದು ಮಗುವಿನ ಆರೋಗ್ಯ ಮತ್ತು ರಕ್ಷಣೆಯ ದೃಷ್ಟಿಯಿಂದ ಬಹು ಅಪಾಯದ ಕಾಲ. ತಮ್ಮ ಮರುಳುತನದಿಂದಾಗಿ ಈ ವಯಸ್ಸಿನ ಮಕ್ಕಳು ಎಲ್ಲೆಂದರಲ್ಲಿ ತಿನ್ನುವದು, ನೀರು ಕುಡಿಯುವುದು, ನೀರಲ್ಲಿ ಬೀಳುವುದು, ಗಿಡಮರ ಹತ್ತಿ ಬೀಳುವುದು ಮಾಡುವ ಸಂಭವಗಳು ಹೆಚ್ಚು. ಜೊತೆಗೆ ಕಣ್ಣು, ಕಿವಿಯಲ್ಲಿ ಏನಾದರೂ ಕಡ್ಡಿ, ಕಾಲು ಹಾಕಿಕೊಳ್ಳುವುದು, ಹಣ್ಣು-ಕಾಯಿ ಇರುವ ಮರಗಿಡಕ್ಕೆ ಕಲ್ಲು ಬೀರಿ, ತಲೆ-ಮೈ ಮೇಲೆ ಗಾಯ ಮಾಡಿಕೊಳ್ಳುವುದು ಸಹಜ ಮತ್ತು ಸಾಮಾನ್ಯ. ಆದ್ದರಿಂದ ಹಿರಿಯರು ಈ ವಯಸ್ಸಿನ ಮಕ್ಕಳನ್ನು ಅತ್ಯಂತ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾರೆ.

ಗ್ರಾಮೀಣ ಮತ್ತು ಜಾನಪದ ಸಮಾಜಕ್ಕೆ ಸೇರಿದ ಮಕ್ಕಳು ಐದು-ಆರನೇ ವಯಸ್ಸಿಗೆ ಬರುವಲ್ಲಿ ತಮ್ಮ ಕುಟುಂಬದ ಆರ್ಥಿಕ ಚಟುವಟಿಕೆಯಲ್ಲಿ ಭಾಗವಹಿಸಲು ಪ್ರಾರಂಭಿಸುತ್ತಾರೆ. ಇವು ದನ, ಹೊಲ, ಕಣ ಕಾಯುವುದು,ನೇಯ್ಯುವುದು, ಹೆಣೆಯುವುದು, ನೀರು, ಕಟ್ಟಿಗೆ ತರುವುದು ಮುಂತಾದ ಲಘುವಾದ ಕೆಲಸಗಳಿರುತ್ತವೆ. ಆಧುನಿಕತೆಯ ನೆರಳಲ್ಲಿರುವ ಸಮಾಜ ಈ ವಯಸ್ಸಿಗೆ ಅವನನ್ನು ಶಾಲೆಗೆ ಕಳುಹಿಸುವ ಏರ್ಪಾಡು ಮಾಡಬಹುದು. ತನ್ನ ಮನೆಯ, ನೆರೆಹೊರೆಯ ಮೋಜಿನ ವಾತಾವರಣವನ್ನು ಬಿಟ್ಟು ಶಾಲೆ ಎಂಬ ನಾಲ್ಕು ಗೋಡೆಯೊಳಗಿನ ಜೀವನಕ್ಕೆ ಹೊಂದಿಕೊಳ್ಳುವುದು ಮಗುವಿಗೆ ಮೊದಮೊದಲು ತೊಂದರೆಯಾಗಬಹುದು. ಅಲ್ಲಿ ಸಿಗಬಹುದಾದ ಶಿಕ್ಷೆ ಮತ್ತು ಕಟ್ಟುನಿಟ್ಟಿನ ಜೀವನದಿಂದಾಗಿ ಶಾಲೆ ಅವನಿಗೆ ಬೇಸರಿಕೆ ತರಬಹುದು. ಕೆಲವೊಮ್ಮೆ ಹೊರಗಿನ ಜೀವನದ ಮೋಹ ಹೆಚ್ಚಾದರೆ ಅಥವಾ ತಂದೆ-ತಾಯಿಗಳ ಬೇಜವಾಬ್ದಾರಿತನದಿಂದಾಗಿ ಅವರು ಶಾಲೆ ತಪ್ಪಿಸಿ ತಿರುಗಾಡಿ, ಕೊನೆಗೆ ಓದಿಗೆ ಶರಣು ಹೊಡೆಯಬಹುದು. ಆದರೆ ಈ ವೇಳೆಗೆ ಮಕ್ಕಳು ಶ್ರದ್ಧೆಯಿಂದ ಹೊಲಮನೆ ಕೆಲಸಕ್ಕೆ ಅಥವಾ ಶಾಲೆಗೆ ಹೋಗುವದರಿಂದ ಅವರ ಊಟ, ತಿಂಡಿ, ಒಡನಾಟ ಮುಂತಾದವುಗಳಲ್ಲಿ ಒಂದು ಬಗೆಯ ಕ್ರಮ ಬರುತ್ತದೆ. ಹೀಗಾಗಿ ಈ ವಯಸ್ಸಿನ ಮಕ್ಕಳು ಒಂದು ಕ್ಷಣ ಹಿರಿಯರ ಕಣ್ಣೆದುರಿಗೆ ಇಲ್ಲದಿದ್ದರೂ ಇದು ಅವರ ಗಮನಕ್ಕೆ ಬರುವುದರಿಂದ ಅವರು ಇಲ್ಲದ ಜಗಳ, ಅಪಾಯಗಳಿಂದ ಪಾರಾಗುತ್ತಾರೆ.

ಅವಿಭಕ್ತ ಕುಟುಂಬದಿಂದ ಬಂದ ಮಗು ತನ್ನ ಅನೇಕ ಬಂಧುಗಳೊಡಗಿನ ಒಡನಾಟದಿಂದಾಗಿ ತನ್ನಲ್ಲಿ ವಿಶಾಲ ಹಾಗೂ ಸಹಕಾರ ಮನೋಭಾವನೆಯನ್ನು ಬೆಳೆಸಿಕೊಳ್ಳುತ್ತದೆ. ಇದೇ ರೀತಿ ವೃದ್ಧರಿಂದ ಪಾಲನೆ-ಪೋಷಣೆ ಹೊಂದಿದ ಮಗು ಅವರ ಬಗ್ಗೆ ಗೌರವ ಭಾವನೆ ಹೊಂದಿ ಬೆಳೆಯುತ್ತದೆ. ಸಿಡುಕಿನ, ಸಂಕುಚಿತ, ಈರ್ಷೆ, ಭೇಧಭಾವ, ದೈವಭಕ್ತಿ, ಸಹಕಾರ, ಪರೋಪಕಾರ ಭಾವನೆ, ಮಾಯ ಮಾಟದಲ್ಲಿ, ದೆವ್ವ ಮುಂತಾದ ದುಷ್ಟಶಕ್ತಿಗಳಲ್ಲಿ ನಂಬಿಕೆಯುಳ್ಳ ಹಿರಿಯರಿಂದ ಬೆಳೆಸಲ್ಪಟ್ಟ ಮಕ್ಕಳು ತಾವೂ ಇದೇ ಗುಣಗಳನ್ನು ಬೆಳಸಿಕೊಳ್ಳುತ್ತಾರೆ. ಆದ್ದರಿಂದ ಒಂದು ಮಗುವಿನ ವ್ಯಕ್ತಿತ್ವದ ಹಿನ್ನೆಲೆಯನ್ನು ಅರಿಯಬೇಕಾದರೆ ಅದು ಬೆಳೆದ ಸನ್ನಿವೇಶ, ಪ್ರದೇಶ, ಸಂಸ್ಕೃತಿ ಮುಂತಾದವುಗಳ ಜೊತೆಗೆ ಅದನ್ನು ಬೆಳೆಸಿದ ಹಿರಿಯರ ವ್ಯಕ್ತಿತ್ವವನ್ನು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ. ಹೀಗೆ ಸಮಾಜ-ಸಂಸ್ಕೃತಿಗಳು ಮಗುವೊಂದಕ್ಕೆ ಅದು ಹುಟ್ಟಿದಂದಿನಿಂದ ಹೇಗೆ ಪ್ರಭಾವ ಬೀರುತ್ತವೆ ಎಂದು ಮಾನವಶಾಸ್ತ್ರಜ್ಞರು ಅಭ್ಯಾಸ ಮಾಡಿದ್ದಾರೆ.

ಗ್ರಂಥಋಣ

1. Freud, S, **Totem and Taboo**. London : Routledge, 1950.
2. .... **Primer of Freudian Psycology** : London : Allen G. 1956.
3. Malinowski, B, **Sex and Repression in Savage Society**, London : Routledge, 1929.
4. .... **Crime and Custom in Savage Society,** London : Routledge, 1932.
5. Mead, M. **Coming of age in Somoa : Psycho logical study of Primitive Youth of Western Civilization.** New York : New American Library 1952.
6. Mead, M. and Wolfenstine, M. **Childhood in Contemporary Culture**, 1955.
7. Whiting, B.B.(Ed) **Six Cultures : Studies in Child Rear ing.** Laboratory of Human Development, Harvard University, John Wiley and Fous, Inc, 1963.

೮. ಗುರುಮೂರ್ತಿ, ಕೆ. ಜಿ, ಗ್ರಾಮೀಣ ಮಗು. ಮಾನವಿಕ ಭಾರತಿ : ೨ : ೧ ೧೯೭೮.

★★★★

ಲೇಖನ - ೬

ಗ್ರಾಮೀಣ ಮಹಿಳೆ

ಯಾವುದೇ ಸಮಾಜಕ್ಕೆ, ಸಂಸ್ಕೃತಿಗೆ ಮಹಿಳೆಯರ ಕೊಡುಗೆ ಅಪಾರ. ಸಮಾಜದ ಜನಸಂಖ್ಯೆಯ ಅರ್ಧದಷ್ಟಾಗುವ ಮಹಿಳೆಯರು ಅನಾದಿಕಾಲದಿಂದಲೂ ಮಾನವ ಸಂಸ್ಕೃತಿಯ ಬೆಳವಣಿಗೆಯಲ್ಲಿ ಪುರುಷನಿಗೆ ಜೊತೆಗಾತಿಯಾಗಿ, ಸಹಕಾರಿಯಾಗಿ ಬಂದಿದ್ದಾರೆ. ಪುರುಷ ಮನೆಯಿಂದ ಹೊರಗೆ ನಿಂತು ಕುಟುಂಬಕ್ಕೆ ದುಡಿದರೆ, ಅದರ ರಕ್ಷಣೆ ಮಾಡಿದರೆ, ಮನೆಯಲ್ಲಿದ್ದು ಸಂಸಾರವನ್ನು ನಡೆಸುವ, ಮಕ್ಕಳನ್ನು ಪಾಲಿಸುವ ಕಾರ್ಯ ಎಲ್ಲಾ ಕಾಲದಲ್ಲೂ ಮಹಿಳೆಗೇ ಸೇರಿದ್ದು. ಅನಾದಿಕಾಲದಿಂದ ಮಹಿಳೆ ಅನೇಕ ಬಗೆಯ ಶೋಷಣೆಗೆ, ಅನಾದರಣೆಗೆ, ಕೀಳರಿಮೆಗೆ ಹೆಸರಾಗಿದ್ದಾಳೆ. ಮಾನವನ ಇತಿಹಾಸದ ಪುಟಗಳನ್ನು ನೋಡಿದಾಗ ಸಮಾಜ-ಸಂಸ್ಕೃತಿಗೆ, ಕಾಲಕಾಲಕ್ಕೆ ತಕ್ಕಂತೆ, ಆಕೆಯ ಸ್ಥಾನಮಾನಗಳೂ ಬದಲಾಗುತ್ತಾ ಬಂದಿವೆ. ಇಂದಿನ ಸಮಾಜದಲ್ಲಿಯೂ ಆಕೆಯ ಪ್ರಜ್ಞೆ, ವಿದ್ಯಾಮಟ್ಟ, ವಾಸಸ್ಥಳ ಮುಂತಾದವನ್ನು ಗಣನೆಗೆ ತೆಗೆದುಕೊಂಡು ಆಕೆಯನ್ನು ಆಧುನಿಕ, ಹಿಂದುಳಿದ, ಗ್ರಾಮೀಣ, ನಗರ, ಔದ್ಯೋಗಿಕ ಮುಂತಾಗಿ ಅನೇಕ ಬಗೆ ಮಾಡಿ ವಿಂಗಡಿಸಬಹುದು. ಇವರಲ್ಲಿ ಗ್ರಾಮೀಣ ಮಹಿಳೆಯನ್ನು ನಾವಿಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ.

ಗ್ರಾಮೀಣ ಸಮಾಜವು ಅನೇಕ ವಿಧದಲ್ಲಿ ಜಾನಪದ ಸಮಾಜವನ್ನು ಹೋಲುತ್ತದೆ. ಇಲ್ಲಿಯ ಜನ ಸಂಪ್ರದಾಯಸ್ಥರು, ಆಧುನಿಕ ಜಗತ್ತಿನಿಂದ ದೂರ ಉಳಿದವರು, ಪ್ರಮುಖವಾಗಿ ವ್ಯವಸಾಯ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸಗಳಲ್ಲಿ ತೊಡಗಿದವರು. ನಗರಗಳಿಂದ, ಆಧುನಿಕತೆಯ ಕಕ್ಷೆಯಿಂದ, ವಿದ್ಯೆ ಮುಂತಾದ ಸೌಲಭ್ಯಗಳಿಂದ ದೂರವಿರುವ ಗ್ರಾಮೀಣ ಸಮಾಜಕ್ಕೆ ಅವರದೇ ಆದ ಅನುಕೂಲತೆಗಳು, ಅನಾನುಕೂಲತೆಗಳಿವೆ. ಒಂದು ರೀತಿಯಲ್ಲಿ ಹೇಳುವುದಾದರೆ ಇಂದು ಅವರಿಗೆ ಆದ ಅನುಕೂಲತೆಗಳಿಗಿಂತ ಅನಾನುಕೂಲತೆಗಳೇ ಹೆಚ್ಚು ಎನ್ನಬಹುದು. ಗ್ರಾಮಸ್ಥರಿಗೆ ಈಗಾಗಲೇ ಇರುವ ಅನೇಕ ತೊಂದರೆಗಳ ಜೊತೆಗೆ ನಗರೀಕರಣ ಮತ್ತು ಆಧುನಿಕತೆಗಳು ಇನ್ನೂ ಕೆಲವು ತೊಂದರೆಗಳನ್ನು ತಂದಿವೆ. ಗ್ರಾಮೀಣ ಸಮಾಜದ ಒಂದು ಅಂಗವಾದ ಮಹಿಳೆಯೂ ಇವಕ್ಕೆ ಹೊರತಾಗಿಲ್ಲ. ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕೆಂದರೆ ಗ್ರಾಮ ಜೀವನದಲ್ಲಿ ಸುಖ-ಸಂತೋಷಗಳಿದ್ದರೆ ಅವು ಪುರುಷರಿಗೆ; ತೊಂದರೆಗಳೆಲ್ಲವೂ ಮಹಿಳೆಯರಿಗೆ ಹೋಗುವುದರಿಂದ ಅವರ ಅನೇಕ ತೊಂದರೆಗಳು, ಸಮಸ್ಯೆಗಳು ನಾವು ತಿಳಿದಿರುವುದಕ್ಕಿಂತಲೂ ಹೆಚ್ಚಿನವು, ಆಳವಾದವು. ಇಂದು ನಮ್ಮ

ಸರಕಾರ ತಂದಿರುವ ಅನೇಕ ಅಭಿವೃದ್ಧಿ ಕಾರ್ಯಗಳಾವೂ ಆಕೆಯ ಸ್ಥಿತಿಯನ್ನು ಉತ್ತಮಪಡಿಸಿಲ್ಲವೆಂದು ಹೇಳಬಹುದು.

ವಿದ್ಯೆ, ಹೆಚ್ಚಿನ ಪ್ರಜ್ಞೆ, ನಾಗರೀಕತೆಯ ಸೋಂಕು ಇಲ್ಲದ ಗ್ರಾಮೀಣ ಮಹಿಳೆ ಕೆಲವೊಂದು ವಿಧದಲ್ಲಿ ಸುಖಿ ಎನ್ನಬಹುದು. ಏಕೆಂದರೆ ಆಕೆಗಾಗುವ ಅನೇಕ ತೊಂದರೆಗಳು ದೈಹಿಕವಾದವು ಮತ್ತು ತನ್ನೆಲ್ಲಾ ತೊಂದರೆಗಳಿಗೆ ತನ್ನ ಹಣೆಯಬರಹವೇ ಕಾರಣವೆಂದು ಬಗೆದು ಜೀವನ ಸಾಗಿಸುತ್ತಿದ್ದಾಳೆ. ಇದರಿಂದ ಇಂದು ಆಧುನಿಕ, ವಿದ್ಯಾವಂತ ಮಹಿಳೆಗಿರುವಂತೆ ಆಕೆಗೆ ಹೆಚ್ಚಿನ ಮಾನಸಿಕ ತೊಳಲಾಟಗಳಿಲ್ಲ. ಹೊರಜಗತ್ತಿನ ಬಿಸಿ ಅಷ್ಟಾಗಿ ತಟ್ಟಿಲ್ಲವಾದ್ದರಿಂದ ಆಕೆ ಇನ್ನೂ ಮಾನಸಿಕವಾಗಿ ಸುಖಿ. ಇತ್ತೀಚೆಗೆ ಅನೇಕ ರಂಗಗಳಲ್ಲಿ, ಈಕೆಗೆ ಅಲ್ಪಸ್ವಲ್ಪ ಆಧುನಿಕತೆಯ ಬಿಸಿ ಮುಟ್ಟಿದೆ ಎನ್ನಬಹುದು. ಗ್ರಾಮಗಳು ಹೊರಜಗತ್ತಿನೊಂದಿಗೆ ಹೆಚ್ಚು ಹೆಚ್ಚು ಸಂಪರ್ಕ ಪಡೆದಂತೆ ಹೊಸ ಹೊಸ ವಿಷಯಗಳು ಅವುಗಳನ್ನು ಮುತ್ತಿ ಅಲ್ಲಿಯ ಜನಜೀವನವನ್ನು ಬದಲಾಯಿಸುತ್ತಿವೆ. ಆದರೂ ಇಂದಿಗೂ ಗ್ರಾಮೀಣ ಮಹಿಳೆ ಹೊರಜಗತ್ತಿನ ದೃಷ್ಟಿಯಲ್ಲಿ ಗಾಣದೆತ್ತಿನಂತೆ, ಇನ್ನೊಬ್ಬರನ್ನು ಆಶ್ರಯಿಸಿ, ತೊತ್ತಾಗಿ ಬಾಳುವ ಜೀವಿ ಎಂದು ವರ್ಣಿಸಲ್ಪಟ್ಟಿದ್ದಾಳೆ.

ಗ್ರಾಮೀಣ ಮಹಿಳೆ ನಗರದ ತನ್ನ ಸೋದರಿಯರಿಗಿಂತ ಅನೇಕ ವಿಧದಲ್ಲಿ ಬೇರೆಯೇ ಇದ್ದಾಳೆ. ಮೊದಲನೆಯದಾಗಿ, ಆಕೆ ಇನ್ನೂ ಸಂಪ್ರದಾಯದ ನೆರಳಲ್ಲಿದ್ದಾಳೆ. ಎರಡನೆಯದಾಗಿ, ಆಕೆ ಗ್ರಾಮೀಣ ವೃತ್ತಿಗಳಾದ ವ್ಯವಸಾಯ, ಪಶುಪಾಲನೆ, ಕುಶಲಕಲೆಗಳು ಮುಂತಾದವುಗಳಲ್ಲಿ ತೊಡಗಿರುತ್ತಾಳೆ. ಮೂರನೆಯದಾಗಿ, ಈಕೆ ಅವಿದ್ಯಾವಂತೆಯಾದ್ದರಿಂದ ಆಕೆಯಲ್ಲಿ ಆರೋಗ್ಯ, ನೈರ್ಮಲ್ಯಗಳ ಬಗೆಗೆ ಗ್ರಾಮೀಣ ಮೌಲ್ಯಗಳು, ನಂಬಿಕೆಗಳು, ತುಂಬಿವೆ. ನಾಲ್ಕನೆಯದಾಗಿ, ಆಕೆಗೆ ಸರಕಾರ ನೀಡಿರುವ ಸವಲತ್ತುಗಳು ಮತ್ತು ಹಕ್ಕುಗಳು ಮತ್ತು ಸ್ಥಾನಮಾನಗಳು ತಿಳಿಯದಾದ್ದರಿಂದ ತನ್ನ ಅನ್ನಕ್ಕೆ, ಸಂರಕ್ಷಣೆಗೆ ಮತ್ತು ಘನತೆ ಗೌರವಕ್ಕೆ ತನ್ನ ಕುಟುಂಬದವರ ಮೇಲೆ ಸಂಪೂರ್ಣವಾಗಿ ಅವಲಂಬಿಯಾಗಿದ್ದಾಳೆ. ಜಾನಪದ ಸಂಸ್ಕೃತಿಯ ಪ್ರಭಾವದಲ್ಲಿರುವ ಗ್ರಾಮೀಣ ಸಮಾಜ ಇನ್ನೂ ಹಳತು-ಹೊಸತುಗಳ ನಡುವೆ ಸಿಕ್ಕಿದೆ. ಸಮಾಜದ ಹಿರಿಯ ತಲೆಮಾರಿನವರು ಹಳತನ್ನು ಕಾಯ್ದಿಡಬೇಕೆಂದು ಶ್ರಮಿಸುತ್ತಿದ್ದರೆ ಕಿರಿಯರು ಅವನ್ನು ಬಿಟ್ಟು ಹೊಸದು, ನಗರದ್ದು ಮತ್ತು ಆಧುನಿಕವಾದುದನ್ನು ಹೊಂದಬೇಕೆನ್ನುತ್ತಿದ್ದಾರೆ.

ಹೀಗಾಗಿ ಗ್ರಾಮೀಣ ಸಮಾಜದ ಈ ಎರಡೂ ವಯೋವರ್ಗಗಳ ನಡುವೆ ಘರ್ಷಣೆ ಪ್ರಾರಂಭವಾಗಿದೆ. ಆದರೆ ಇವರಲ್ಲಿ ಹೆಚ್ಚಿನ ತೊಂದರೆ ಅನುಭವಿಸುತ್ತಿರುವವಳು ಮಹಿಳೆ. ಪುರುಷ ಪ್ರಧಾನವಾದ ಭಾರತೀಯ ಸಮಾಜದಲ್ಲಿ ಸ್ತ್ರೀಯರಿಗೆ ಅಷ್ಟಾಗಿ ಪ್ರಾಮುಖ್ಯತೆ ಇಲ್ಲ. ಅದರಲ್ಲೂ ಗ್ರಾಮೀಣ ಸಮಾಜದಲ್ಲಿ ಆಕೆಗೆ ಅನೇಕ ತೊಂದರೆಗಳಿವೆ.

ಅವರಿಗೆ ಸಂಬಂಧಿಸಿದ ಅನೇಕ ಪ್ರಮುಖ ವಿಷಯಗಳಾದ ವಿವಾಹ, ಶಿಕ್ಷಣ ಮುಂತಾದವುಗಳ ಬಗೆಗೂ ಅವರಿಗೆ ಸ್ವಾತಂತ್ರ್ಯವಿರುವುದಿಲ್ಲ. ಸಾಮಾಜಿಕವಾಗಿಯೂ ಅವರಿಗೆಂದು ಮೀಸಲಿಟ್ಟ ಸ್ಥಾನ-ಮಾನಗಳೂ ಸಿಗದಾಗಿವೆ.

ದರ್ಪಪೂರ್ಣ ತಂದೆ-ತಾಯಿಗಳು ಅಥವಾ ದುಷ್ಟನಾದ ಗಂಡನನ್ನು ಪಡೆದು ತೊಂದರೆ ಅನುಭವಿಸುತ್ತಿರುವ ಸ್ತ್ರೀಯರು ಇರುವಂತೆ ಪ್ರೀತಿಪಾತ್ರರಾದವರನ್ನು ಪಡೆದವರು, ಅತ್ಯಂತ ಸಮರ್ಥರಾಗಿ ತಮ್ಮ ಕುಟುಂಬದ ಹೊಣೆಯನ್ನು ನಿರ್ವಹಿಸಿದವರ ಉದಾಹರಣೆಗಳೂ ಇವೆ. ದಕ್ಷನಾದ ಗಂಡನಿದ್ದಾಗ ಅಂಜಿ ನಡೆವ ಹೆಂಡತಿಯಾಗಿ, ಅವನು ಅಂಗವಿಕಲ ಅಥವಾ ದುರಾತ್ಮನಾದಾಗ, ಅಕಾಲ ಮರಣಕ್ಕೆ ಗುರಿಯಾದಾಗ, ಆಕೆ ತಾನೇ ನಿಂತು ಮನೆತನದ ವ್ಯವಹಾರವನ್ನು ದಕ್ಷ ರೀತಿಯಲ್ಲಿ ನಡೆಸಿದ್ದ ಉದಾಹರಣೆಗಳೂ ಇವೆ. ಅನೇಕ ಮಕ್ಕಳನ್ನು ಪಡೆದು ತನ್ನ ಗಂಡನ ವಂಶವನ್ನು ಬೆಳಿಸಿದಾಗ ಆಕೆಗೆ ಸಿಗುವ ಗೌರವಕ್ಕಿಂತ ಬಂಜೆಯಾಗಿ, ಈ ಕಾರಣಕ್ಕೆ ಓರಗಿತ್ತಿಯನ್ನು ತಂದಾಗ, ಅನುಭವಿಸುವ ತೊಂದರೆಗಳೂ ಇವೆ. ಮಗಳಾಗಿ ಪಡೆಯುವ ಪ್ರೀತಿಗಿಂತ ತಾಯಿಯಾಗಿ ಪಡೆಯುವ ತೊಂದರೆಗಳು ಅನೇಕ, ಅತ್ತೆಯಾಗಿ ಪಡೆಯುವ ಘನತೆ-ಗೌರವಕ್ಕಿಂತ ಸೊಸೆಯಾಗಿ ಅನುಭವಿಸುವ ಬವಣೆಗಳು ಹೆಚ್ಚು. ಹೀಗೆ ಮಗಳಾಗಿ, ಸತಿಯಾಗಿ, ತಾಯಿಯಾಗಿ, ಅತ್ತೆಯಾಗಿ, ಅಜ್ಜಿಯಾಗಿ ಸ್ತ್ರೀ ಪಡೆಯುವ ಆದರಣೆ ಮತ್ತು ಅನಾದರಣೆಗಳು ವಿಭಿನ್ನವಾಗಿವೆ. ಕೆಲವು ಆಕೆಯನ್ನು ಚಿಂತೆಯಲ್ಲಿ ಬೇಯುವಂತೆ ಮಾಡಿದರೆ ಉಳಿದವು ಪ್ರೀತಿಯ ಕಡಲಲ್ಲಿ ಮೀಯಿಸಿವೆ. ಆದರೆ ಕಷ್ಟ ಬಂದಾಗ ಕುಗ್ಗದೆ, ಸುಖ ಬಂದಾಗ ಹಿಗ್ಗದೆ ತನ್ನ ಸ್ಥಾನವನ್ನು ಗ್ರಾಮೀಣ ಮಹಿಳೆ ಉಳಿಸಿಕೊಂಡು ಬಂದಿದ್ದಾಳೆ.

ಪುರುಷ ಪ್ರಧಾನವಾದ ಭಾರತೀಯ ಕುಟುಂಬದಲ್ಲಿ ಸ್ತ್ರೀಗೆ ಯಾವಾಗಲೂ ಮಾವ-ಅತ್ತೆ, ಗಂಡ, ಮಕ್ಕಳು ಇವರ ನಂತರದ ಐದನೆಯ ಸ್ಥಾನ. ಈ ಭೇದವನ್ನು ಹೆಣ್ಣಿನ ಜೀವನದ ಎಲ್ಲಾ ರಂಗಗಳಲ್ಲಿಯೂ ಕಾಣಬಹುದು. ಇದು ಆಕೆಗೆ ಹುಟ್ಟಿದಂದಿನಿಂದಲೇ ಪ್ರಾರಂಭವಾಗುತ್ತದೆ. ಗ್ರಾಮೀಣ ಸಮಾಜದಲ್ಲಿ ತಮ್ಮ ಮೊದಲ ಮಗು ಗಂಡಾಗಬೇಕೆಂಬ ಬಯಕೆ ಎಲ್ಲರಿಗೂ ಇರುತ್ತದೆ. ಗಂಡೇ ಹುಟ್ಟಿದರೆ ಇದನ್ನು ಪ್ರಕಟಿಸಲು ತಟ್ಟೆಯೊಂದನ್ನು ಢಣಢಣ ಎಂದು ಬಾರಿಸುತ್ತಾರೆ; ನಂತರ ಗ್ರಾಮದಲ್ಲಿ ಸಿಹಿ ಹಂಚುತ್ತಾರೆ. ಅದರಲ್ಲೂ ಹಿರಿಯ ಕೂಸು ಗಂಡಾದರೆ ಆ ದಂಪತಿಗಳಿಗೆ ಅತೀವ ಸಂತೋಷ ಮತ್ತು ಸಂಭ್ರಮ. ಅನೇಕ ಸಂದರ್ಭಗಳಲ್ಲಿ ಇದು ದಂಪತಿಗಳಿಗೆ ವಿಶೇಷ ಸ್ಥಾನ-ಮಾನ ತರುವ ವಿಷಯವೂ ಆಗಿರುತ್ತದೆ. ಸಾಮಾನ್ಯವಾಗಿ ಬೆಳೆದು ದೊಡ್ಡವನಾಗಿ ತನ್ನನ್ನು ಸಂಸಾರದ ಹೊಣೆಗಳಿಂದ ಬಿಡಿಸುತ್ತಾನೆಂದು ತಂದೆಯ ಬಯಕೆಯಾದರೆ; ಸೊಸೆಯನ್ನು ತಂದು ತನ್ನ ಮೇಲಿರುವ ಸಂಸಾರದ ಭಾರ ಇಳಿಸುತ್ತಾನೆಂದು ತಾಯಿಯ ಆಸೆಗಳೇ ಇದಕ್ಕೆ ಕಾರಣ. ಸಾಮಾನ್ಯವಾಗಿ ಮೊದಲ ಹೆರಿಗೆ

ತೌರಿನಲ್ಲಾಗುವುದರಿಂದ ಅಲ್ಲಿಂದ ಈ ಗಂಡು ಮಗು ಹುಟ್ಟಿದ ಸುದ್ದಿ ತಂದ ಆಯಗಾರನಿಗೆ, ಸ್ವಲ್ಪ ಹೆಚ್ಚು ದವಸ-ಧಾನ್ಯ ಜೊತೆಗೆ ಬಟ್ಟೆ ಕೊಡುವುದು ವಾಡಿಕೆ. ಸ್ಥಿತಿವಂತರು ಇವುಗಳ ಜೊತೆಗೆ ತಾಮ್ರ ಅಥವಾ ಹಿತ್ತಾಳೆಯ ಪಾತ್ರೆ-ತಟ್ಟೆ ಕೊಡುವುದೂ ವಾಡಿಕೆ. ತಾಯಿ-ಮಗನನ್ನು ನೋಡಲು ಗಂಡನ ಮನೆಯವರು ಕೂಡಲೇ ಹೋಗುತ್ತಾರೆ. ಮಗುವಿನ ನಾಮಕರಣವೂ ಹೆಚ್ಚಿನ ಆಡಂಬರದಿಂದ ನಡೆಯುತ್ತದೆ. ಗಂಡುಮಗುವನ್ನು ಹೆತ್ತ ತಾಯಿಗೆ ಎಲ್ಲರೂ ಪ್ರೀತಿ, ಆದರ ತೋರಿಸುತ್ತಾರೆ ಮತ್ತು ಒಡವೆ-ವಸ್ತ್ರಗಳನ್ನು ಕೊಡುತ್ತಾರೆ.

ಈ ಎಲ್ಲಾ ಸಡಗರಗಳು ಹೆಣ್ಣು ಹೆತ್ತವಳಿಗಾಗುವುದಿಲ್ಲ. ಮೊದಲನೆಯ ಮಗು ಹೆಣ್ಣಾದರೆ ಮೂಗು ಮುರಿಯುವ ಸಮಾಜ ಎರಡನೆಯ ಮಗುವೂ ಹೆಣ್ಣಾದರೆ ಆಕೆಯಲ್ಲಿ ಇನ್ನೂ ಹೆಚ್ಚಿನ ಅನಾದರಣೆ ನಡೆಸುತ್ತದೆ. ಮಗುವಿನ ನಾಮಕರಣ ಮುಂತಾದವನ್ನು ಮುಂದಕ್ಕೆ ಹಾಕುತ್ತಾರೆ ಮತ್ತು ನಂತರ ಆಡಂಬರವಿಲ್ಲದೆ ಆಚರಿಸುತ್ತಾರೆ. ಮುಂದೆ ಹೆಣ್ಣು ಮಕ್ಕಳು ಹುಟ್ಟುವುದು ನಿಲ್ಲಲೆಂದು ಮಗುವಿಗೆ ನಾಮಕರಣ ಮಾಡುವಾಗ ಹೆಣ್ಣು ಹುಟ್ಟುವುದು ಸಾಕು ಎಂದು "ಸ" ಕಾರದಿಂದಲೇ ಬರುವ ಹೆಸರುಗಳನ್ನೇ ಇಡುತ್ತಾರೆ. ಹೀಗೆ ಹುಟ್ಟುತ್ತಲೇ ವಿರೋಧ ಕಟ್ಟಿಕೊಂಡು ಹೆಣ್ಣು ಹುಟ್ಟುತ್ತಾಳೆ. ಇಲ್ಲಿ ಒಂದು ಸೋಜಿಗದ ಸಂಗತಿ ಎಂದರೆ ಗಂಡಸರಿಗಿಂತ ಹೆಂಗಸರಾದ ಅತ್ತೆ ಹಾಗೂ ಓರಗಿತ್ತಿಯರು ಹೆಣ್ಣು ಹಡೆದವಳನ್ನು ಕೀಳಾಗಿ ಕಾಣುತ್ತಾರೆ.

ಹೀಗೆ ಹುಟ್ಟಿದಂದಿನಿಂದಲೇ ಬೇಡವಾದ ಮಗಳು ಮುಂದೆ ತನ್ನ ಕಿಶೋರ ವಯಸ್ಸಿನವರೆಗೂ ಇದೇ ತರಹದ ಅನಾದರಣೆಗೆ ಗುರಿಯಾಗುತ್ತಾಳೆ. ಊಟ, ಬಟ್ಟೆ, ಓದು, ಪ್ರಾಮುಖ್ಯತೆ ಇವುಗಳಲ್ಲಿ ಗಂಡುಮಕ್ಕಳಿಗೆ ಪ್ರಾಧಾನ್ಯವಿದ್ದು ಈಕೆ ಎಲ್ಲದರಲ್ಲೂ ಕೊನೆಗೆ ಬರುತ್ತಾಳೆ. ಇನ್ನೂ ಕಿಶೋರ ವಯಸ್ಸಿನಲ್ಲಿರುವಾಗಲೇ ಆಕೆಯ ಮೇಲೆ ಸಂಸಾರದ ಹೊಣೆಗಳು ಬೀಳುತ್ತವೆ. ಕುಟುಂಬವು ಮಧ್ಯಮ ಅಥವಾ ಬಡವರ್ಗಕ್ಕೆ ಸೇರಿದ್ದರೆ ಈಕೆ ತನ್ನ ತಂದೆ-ತಾಯಂದಿರ ನೆರವಿಗೆ ಬರಬೇಕಾಗುತ್ತದೆ. ಮನೆಗೆಲಸದಲ್ಲಿ ನೆರವಾಗುವುದು, ತಾಯಿ ಹೊಲಗೆಲಸಕ್ಕೆ ಹೋದಾಗ ತಮ್ಮ-ತಂಗಿಯರನ್ನು ನೋಡಿಕೊಳ್ಳುವುದು ಹೀಗೆ ಹತ್ತಾರು ಹೊಣೆಗಳು ಆಕೆಯ ಪಾಲಿಗೆ ಬರುತ್ತವೆ. ಅದೇ ವಯಸ್ಸಿನ ಹುಡುಗರು ಇನ್ನೂ ಸಣ್ಣವರು-ಎನ್ನುವ ರೀತಿಯಲ್ಲಿ ಯಾವ ಜವಾಬ್ದಾರಿಗಳೂ ಇಲ್ಲದೆ ಆಡಿಕೊಂಡಿರುವಾಗ ಹುಡುಗಿಗೆ ಅನೇಕ ಜವಾಬ್ದಾರಿಗಳು ಬೀಳುತ್ತವೆ.

ಮುಂದೆ ಸ್ವಲ್ಪ ದೊಡ್ಡವಳಾಗುತ್ತಿದ್ದಂತೆ ಆಗಲೇ ವಿವಾಹದ ಮಾತುಗಳು ಪ್ರಾರಂಭವಾಗುತ್ತವೆ. ಇಲ್ಲಿ ಆಕೆಯ ಬೌದ್ಧಿಕ ಮತ್ತು ಶಾರೀರಿಕ ಬೆಳವಣಿಗೆಗೆ ಮಹತ್ವವಿಲ್ಲ. ಆಕೆ ಆದಷ್ಟು ಸಣ್ಣವಯಸ್ಸಿನಲ್ಲಿರುವಾಗಲೇ ವಿವಾಹ ಮಾಡಿಬಿಡುವುದು ಹಿಂದಿನಿಂದ ಬಂದ ಪದ್ಧತಿ. ಅನೇಕ ವೇಳೆ, ಸೋದರಿಕೆಯ ವಿವಾಹ ಪದ್ಧತಿಯಿಂದಾಗಿ, ಆಕೆ ಹುಟ್ಟಿದಾಗಲೇ

ಇಂತಹವರಿಗೆ ಕೊಡುವುದೆಂದು ಮಾತಾಗಿರುತ್ತದೆ. ಇಲ್ಲಿ ಬೇಡವಾಗಿ ಅಲ್ಲಿ ಬೇಕಾಗುವುದರಿಂದ ಆಕೆಯ ವಿವಾಹ ಬೇಗನೇ ಮುಗಿದು ಬಿಡುತ್ತದೆ. ಮದುವೆಯಾದ ನಂತರ ಮಕ್ಕಳು ಹುಟ್ಟುವುದು, ಅವರ ಪಾಲನೆ-ಪೋಷಣೆ - ಹೀಗೆ ಆಕೆಯ ಜೀವನಕ್ರಮ ಪ್ರಾರಂಭವಾಗುತ್ತದೆ. ಅನೇಕ ವೇಳೆ ಗಂಡನಮನೆ ಆಕೆಗೆ ಸುಖ-ಸಂತೋಷಗಳ ತಾಣವಾಗದೆ ತೊಂದರೆಯದಾಗಬಹುದು. ಹಳ್ಳಿಗಾಡಿನಲ್ಲಿ ಸೋದರಿಕೆ ಸಂಬಂಧಗಳು ಹೆಚ್ಚಿದ್ದರೂ ವ್ಯಕ್ತಿತ್ವಗಳ ಹೊಂದಾಣಿಕೆ ಇಲ್ಲದೆ ಅಥವಾ ಅತ್ತೆ ಮಾವ ಇವರಲ್ಲಿ ಯಾರಾದರೊಬ್ಬರಿಗೆ ಈಕೆ ಸೊಸೆಯಾಗಿ ಬರುವುದು ಬೇಕಿಲ್ಲದಿದ್ದರೆ, ತೊಂದರೆಗಳು ಪ್ರಾರಂಭವಾಗುತ್ತವೆ. ಆಕೆ ಮಾಡುವ ಎಲ್ಲಾ ಕೆಲಸದಲ್ಲಿಯೂ ತಪ್ಪು ಹುಡುಕುತ್ತಾರೆ. ಆಗ ಹೆಣ್ಣಿಗೆ ಹೆಣ್ಣೇ ಮುಳ್ಳಾಗುತ್ತಾಳೆ. ಆಕೆಗೆ ತನ್ನ ಮನೆಯೇ ನರಕವಾಗುತ್ತದೆ.

ಅನೇಕ ಸಂದರ್ಭಗಳಲ್ಲಿ ಗಂಡನಾದವರು ಪ್ರೀತಿ ವಿಶ್ವಾಸಗಳಿಂದಿರುವುದಿಲ್ಲ. ಅವನೇನಾದರೂ ಪರಸ್ತ್ರೀಲಂಪಟನಾಗಿದ್ದರೆ, ಜೂಜುಕೋರನಾಗಿದ್ದರೆ ಅಥವಾ ಆಲಸಿಯಾಗಿದ್ದರೆ ಆಕೆಗೆ ತೊಂದರೆಗಳ ಜೊತೆಗೆ ಅವನ ಈ ಎಲ್ಲಾ ವ್ಯವಹಾರಕ್ಕೂ ಆಕೆಯೂ ಸಮಾಜದಲ್ಲಿ ತಲೆ ತಗ್ಗಿಸಬೇಕಾಗುತ್ತದೆ. ಆಗಲೂ ಸಮಾಜ ಈಕೆಯನ್ನೇ ಹಿಯಾಳಿಸಿ ತಪ್ಪನ್ನು ಈಕೆಯ ಮೇಲೆ ಹಾಕುತ್ತದೆ. ಈ ವ್ಯಥೆಯ ಜೊತೆಗೆ ಮನೆತನದ ಗೌರವ ಕಾಪಾಡಲು, ಮನೆತನವನ್ನು ಸರಿಯಾಗಿ ತೂಗಿಸಿಕೊಂಡು ಹೋಗಲು, ತಾನೇ ಮನೆತನದ ಕಸುಬನ್ನು ನಿಭಾಯಿಸಿಕೊಂಡು ಹೋಗಬೇಕಾಗುತ್ತದೆ. ಅನೇಕ ವೇಳೆ ತಾನು ಕಷ್ಟಪಟ್ಟು ದುಡಿದರೂ ಅದರಿಂದ ಬರುವ ಆದಾಯ, ಆನಂದವನ್ನು ಪಡೆಯುವವರು ಗಂಡ ಅಥವಾ ಬೇರೆಯವರಿರುತ್ತಾರೆ. ಹೀಗಾಗಿ ಇತರರು ಸಂತೋಷವಾಗಿರುವುದನ್ನೆ ನೋಡಿಕೊಂಡು ಈಕೆ ಸಂತೋಷ ಪಡಬೇಕಾಗುತ್ತದೆ. ಮುಂದೆ ಮಕ್ಕಳ ಮದುವೆ-ಮುಂಜಿಗಳಿಗೆ ತಾನೇ ಓಡಾಡಿ, ಸೋದರಿಕೆಯಲ್ಲಿ ಸಂಬಂಧ ಹುಡುಕಿ ತರಬೇಕಾಗುತ್ತದೆ. ಇದಾದ ನಂತರವೂ ಆಕೆಯ ಮಕ್ಕಳು ಆಕೆಗೆ ಅಭಾರಿಯಾಗಿದ್ದು, ಗೌರವದಿಂದ ನೋಡಿಕೊಂಡರೆ ಪುಣ್ಯ. ಅನೇಕ ವೇಳೆ ಇಲ್ಲಿಯೂ ಆಕೆಗೆ ಸುಖವಿರುವುದಿಲ್ಲ. ಮನೆಗೆ ಸೊಸೆ ಬಂದ ನಂತರ ಈಕೆಯ ಸ್ಥಾನ ಮತ್ತೂ ಸಡಿಲವಾಗುತ್ತದೆ. ಇಳಿವಯಸ್ಸಿನಲ್ಲಿ ಶಕ್ತಿ, ಆರೋಗ್ಯ, ಕಣ್ಣಿನ ದೃಷ್ಟಿಗಳನ್ನು ಕಳೆದುಕೊಂಡ ಈಕೆ ಮಕ್ಕಳ, ಸೊಸೆಯ ಆದರ-ಗೌರವವನ್ನು ಕಳೆದುಕೊಂಡರೆ, ಪರರ ಹಂಗಿನಲ್ಲಿ ಜೀವಿಸಬೇಕಾಗುತ್ತದೆ. ಬಂದ ಸೊಸೆ ಸೋದರಿಕೆಯವಳಲ್ಲದಿದ್ದರೆ, ಗೌರವದಿಂದ ಕಾಣದಿದ್ದರೆ ಕಾಲಕಾಲಕ್ಕೆ ಸರಿಯಾಗಿ ಅನ್ನ-ಆಹಾರಗಳಿಲ್ಲದೆ ಕೊರಗಿ ನರಳಬೇಕಾಗುತ್ತದೆ. ಹೀಗೆ ಹುಟ್ಟಿನಿಂದ ಸಾಯುವವರೆಗೂ ಕಷ್ಟಗಳನ್ನೇ ಉಂಡು ಕಣ್ಣೀರಿನಲ್ಲಿ ಕೈ ತೊಳೆದು ಕೊನೆಗೊಂದು ದಿನ ಮಣ್ಣಾಗುವವಳು ಗ್ರಾಮೀಣ ಮಹಿಳೆ.

ಆದರೆ ಎಲ್ಲಾ ಗ್ರಾಮೀಣ ಮಹಿಳೆಯರ ಬಾಳು ಗೋಳಿನದಾಗಿರುವುದಿಲ್ಲ. ಅಲ್ಲದೆ ಎಲ್ಲಾ ಗಂಡಂದಿರು, ಅತ್ತೆಯರೂ ಕೆಟ್ಟವರಿರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಇವೆಲ್ಲವೂ ಆಕೆಯ ಮನೋಭಾವಕ್ಕೆ, ವ್ಯಕ್ತಿತ್ವಕ್ಕೆ ತಕ್ಕಂತೆ ಸಂಭವಿಸುತ್ತವೆ. ಕೆಲವೊಮ್ಮೆ ಆಕೆ ಬೆಳೆದ ಸನ್ನಿವೇಶವೂ ಇದಕ್ಕೆ ಕಾರಣವಿರುತ್ತದೆ. ಕೆಟ್ಟ ಸನ್ನಿವೇಶದಲ್ಲಿ ಬೆಳೆದ ಸೊಸೆ ತನ್ನ ಸುಖದ ಜೊತೆಗೆ ತಾನು ಕಾಲಿಟ್ಟ ಮನೆಯ ಸುಖ ಮತ್ತು ನೆಮ್ಮದಿಗೂ ಮಾರಿಯಾಗಿ ಅಲ್ಲಿ ಎಲ್ಲರ ಸುಖವನ್ನೂ ಬಲಿ ತೆಗೆದುಕೊಳ್ಳಬಹುದು ಅಥವಾ ಸನ್ನಿವೇಶಕ್ಕೆ ತಕ್ಕಂತೆ ಹೊಂದಿಕೊಂಡು ತಾನು ಬಂದ ಮನೆತನವನ್ನೇ ಉದ್ದಾರ ಮಾಡಿ, ಹುಟ್ಟಿ ಬಂದ ಮನೆಗೂ ಉತ್ತಮ ಹೆಸರು ತರಬಹುದು.

ಹೆಣ್ಣಿಗೆ ಜೀವನದ ಪ್ರತಿ ಹಂತದಲ್ಲಿಯೂ ಸೂಕ್ತ ಕರ್ತವ್ಯಗಳು, ಸ್ಥಾನಮಾನಗಳು ಇವೆ. ಇಂದಿಗೂ "ಹೆಣ್ಣು ಹುಟ್ಟಿದ ಮನೆ ತಣ್ಣಗೆ" ಎಂದು ಗ್ರಾಮಸ್ಥರು ಹೇಳುತ್ತಾರೆ, ನಂಬುತ್ತಾರೆ. ತಮ್ಮ ಕೊನೆಯ ಕಾಲದಲ್ಲಿ ಆಗುವವಳು ಹೆಣ್ಣಾದ ಮಗಳೇ; ಹೆಂಡತಿಯ ಹಿಂದೆ ಹೋಗುವ ಮಗನಲ್ಲವೆಂದೂ ಹೇಳುತ್ತಾರೆ. ಹೆಣ್ಣುಮಕ್ಕಳಿಲ್ಲದ ತಂದೆ-ತಾಯಿಗಳ, ಅದರಲ್ಲೂ ತಾಯಿಯ ಜೀವನ ಕಷ್ಟಕರ ಎಂದು ಹೇಳುತ್ತಾರೆ. ಅಲ್ಲದೆ ಮಗ ಮನೆಗೆ ಬೆಳಕಾದರೆ ಮಗಳು ಮನೆಗೆ ಅಂದ ಚೆಂದ ಎನ್ನುತ್ತಾರೆ. ಮಗಳನ್ನು ಕಳ್ಳುಬಳ್ಳಿಯ ಕುಡಿ ಎಂದು ಬಗೆದು ಉಳಿದ ಮನೆತನಗಳೂ ಬೆಳೆಯಲೆಂದು ತಮ್ಮ ಕರುಳಿನ ಕುಡಿಯನ್ನು "ಕತ್ತರಿಸಿ" ಕೊಡುತ್ತಾರೆ. ಕೊಟ್ಟವರಂತೆ ಈ ಕುಡಿಯನ್ನು ತೆಗೆದುಕೊಂಡವರೂ ಇಂತಹ ಭಾವನೆಯನ್ನೇ ಹೊಂದಿರುತ್ತಾರೆ. ಆದ್ದರಿಂದ ಹುಡುಗಿ ಇನ್ನೂ ಹುಟ್ಟುತ್ತಿದ್ದಂತೆಯೇ ಅಥವಾ ಇನ್ನೂ ಚಿಕ್ಕವಳಿರುವಾಗಲೇ ಆಕೆಯನ್ನು ಸೊಸೆಯಾಗಿ ತಂದುಕೊಳ್ಳಲು ಮನೆತನಗಳು ಸಿದ್ದವಿರುತ್ತವೆ. ಈಕೆ ಉತ್ತಮ ಮನೆತನದಲ್ಲಿ, ಉತ್ತಮರಲ್ಲಿ ಹುಟ್ಟಿದ್ದರಂತೂ ಆಕೆಯ ವಿವಾಹದ ಬಗೆಗೆ ಭವಿಷ್ಯದ ಬಗೆಗೆ ಆಕೆಯ ತಂದೆತಾಯಿಗಳು ಚಿಂತಿಸಬೇಕಾಗಿಲ್ಲ. ಇಷ್ಟಪಟ್ಟು ತಂದ ಸೊಸೆ ಸುಖವಾಗಿರಲೆಂದು ಆಕೆಯನ್ನು ಗಂಡನ ಮನೆಯವರೂ ಬಯಸುತ್ತಾರೆ. ಆದರೆ ಅನೇಕ ಕಾರಣಗಳಿಂದ ಗಂಡನ ಮನೆಯಲ್ಲಿ ಆಕೆಯ ಜೀವನ ಕಷ್ಟದಾಯಕವಾಗಬಹುದು.

ಇಂದು ಇಡೀ ಸಮಾಜದಲ್ಲಾಗಿರುವ ಬದಲಾವಣೆಯಿಂದಾಗಿ ಗ್ರಾಮೀಣ ಮಹಿಳೆಯೂ ಆಧುನಿಕತೆಯತ್ತ ನಡೆದಿದ್ದಾಳೆ. ಮೊದಲನೆಯದಾಗಿ, ಆಕೆ ಹೊರಜಗತ್ತಿನೊಂದಿಗೆ ಹೆಚ್ಚು ಹೆಚ್ಚಾಗಿ ಬೆರೆಯುವ ಅವಕಾಶ ಬಂದಿದೆ. ಇಂದು ಆಕೆ ವಿದ್ಯೆ ಪಡೆಯಲು ಅವಕಾಶಗಳಿವೆ. ಇದರಿಂದಾಗಿ ಆಕೆಯಲ್ಲಿ ತನ್ನತನ, ತನ್ನದೆ ವ್ಯಕ್ತಿತ್ವ, ತನ್ನ ಒಳಿತು ಮುಂತಾದವುಗಳ ಕಡೆ ಗಮನ ಕೊಡುವಷ್ಟು ಆಕೆ ಮುಂದುವರೆದಿದ್ದಾಳೆ. ಇದಕ್ಕೆ ಪೂರಕವಾಗಿ ಸರಕಾರ ಅಥವಾ ಸಮಾಜವೇ ತಂದಿರುವ ಅನೇಕ ಅನುಕೂಲತೆಗಳಿವೆ. ಇಂದು ವಿದ್ಯಾಭ್ಯಾಸವನ್ನು ಎಲ್ಲರಿಗೂ ಒದಗಿಸುವ ಸಲುವಾಗಿ ಸರಕಾರ ಪ್ರತಿ ಹಳ್ಳಿಗಳಲ್ಲಿಯೂ

ಶಾಲೆಗಳನ್ನು, ದೊಡ್ಡ ಊರುಗಳಲ್ಲಿ ಪ್ರೌಢಶಾಲೆಗಳನ್ನು, ಕಾಲೇಜುಗಳನ್ನು ತೆರೆದಿದೆ. ದೊಡ್ಡ ದೊಡ್ಡ ಊರುಗಳಲ್ಲಿ ಆಸ್ಪತ್ರೆಗಳನ್ನು ತೆಗೆದು ವೈದ್ಯಕೀಯ ಮತ್ತು ಸೂಲಗಿತ್ತಿಯರ ಸೌಲತ್ತುಗಳನ್ನು ನೀಡುತ್ತಿದೆ. ಇದರಿಂದಾಗಿ ಅನೇಕ ಗ್ರಾಮೀಣ ಮಹಿಳಿಯರ ಆರೋಗ್ಯಕ್ಕೆ ಸಂಬಂಧಪಟ್ಟ ತೊಂದರೆಗಳೂ ಸ್ವಲ್ಪಮಟ್ಟಿಗಾದರೂ ನಿವಾರಣೆಯಾಗಿವೆ.

ಇಂದಿಗೂ ಉಳಿದುಕೊಂಡು ಬಂದಿರುವ ಗ್ರಾಮೀಣ ಮಹಿಳೆಯರ ಸಮಸ್ಯೆಗಳೆಂದರೆ ಬಾಲ್ಯ ವಿವಾಹ, ಅನಕ್ಷರತೆ, ಅನಾರೋಗ್ಯ ಮತ್ತು ಆರ್ಥಿಕ ಪರಾವಲಂಬನೆ ಮುಂತಾದವು. ಹೊರಜಗತ್ತು ಎಷ್ಟೇ ಆಧುನಿಕತೆ ಹೊಂದಿದ್ದರೂ ಗ್ರಾಮೀಣ ಸಮಾಜ ಇನ್ನೂ ಸಂಪ್ರದಾಯದ ಹಿಡಿತದಲ್ಲಿದೆ. ಹೀಗಾಗಿ ಅನೇಕ ಕಾರಣಕ್ಕೆ ಗ್ರಾಮಸ್ಥರು ತಮ್ಮ ಮಕ್ಕಳನ್ನು ಆದಷ್ಟು ಜಾಗ್ರತೆ ವಿವಾಹ ಮಾಡಿಬಿಡುತ್ತಾರೆ. ಇವುಗಳೆಂದರೆ ಉತ್ತಮ ಸಂಬಂಧ ಸಿಕ್ಕಿದೆ, ಖರ್ಚು ಕಡಿಮೆಯಾಗುತ್ತದೆ, ಲೋಕನಿಂದನೆಯನ್ನು ತಪ್ಪಿಸಿಕೊಳ್ಳಬಹುದು ಎಂಬುವು. ಇದರಿಂದ ಗ್ರಾಮಸ್ಥರು ತಮ್ಮ ಮಕ್ಕಳಿಗೆ ವಿಶೇಷವಾಗಿ ಹೆಣ್ಣುಮಕ್ಕಳಿಗೆ ಚಿಕ್ಕವಯಸ್ಸಿನಲ್ಲೇ ಮದುವೆ ಮಾಡಿ ಮುಗಿಸಿ ಬಿಡುತ್ತಾರೆ. ಹೀಗಾಗಿ ಅವರು ಚಿಕ್ಕವಯಸ್ಸಿನಲ್ಲೇ ತಾಯಿಯಾಗಿ, ಸಂಸಾರದ ಭಾರ ಹೊತ್ತು ತನ್ನ ದೇಹ ಹಾಗೂ ಮಾನಸಿಕ ಆರೋಗ್ಯ ಕೆಡಿಸಿಕೊಳ್ಳುತ್ತಾಳೆ. ಅನೇಕ ಸಂದರ್ಭಗಳಲ್ಲಿ ಆಕೆ ಬಾಲವಿಧವೆಯೂ ಆಗಬಹುದು. ಇಲ್ಲವೆ ಮುದಿವಯಸ್ಸಿನ ಅಥವಾ ಕೆಟ್ಟ ಗಂಡನೊಂದಿಗೆ ಬಾಳಲಾರದೆ ಬಿಡುಗಡೆ ಪಡೆದು ತೌರಿಗೆ ಹಿಂತಿರುಗಬಹುದು. ಆಗಲೂ ಆಕೆ ಜೀವನ ಮಾಡಲು ಇತರರನ್ನು ಅವಲಂಬಿಸಬೇಕಾಗುತ್ತದೆ.

ಗ್ರಾಮೀಣ ಪ್ರದೇಶದಂತೆ ಗ್ರಾಮೀಣ ಮಹಿಳೆಯ ಆರೋಗ್ಯ ಇನ್ನೂ ಸುಧಾರಿಸಬೇಕಾಗಿದೆ. ಇದಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಅನಕ್ಷರತೆ, ಅನಾನುಕೂಲತೆ, ಮೂಢನಂಬಿಕೆ, ಬಡತನ ಮತ್ತು ಸೂಕ್ತ ಸಹಾಯವಿಲ್ಲದ್ದು ಇವು ಮುಖ್ಯವಾದವು. ಗ್ರಾಮೀಣ ಪ್ರದೇಶದಲ್ಲಿ ಅನೇಕ ಅನುಕೂಲತೆಗಳಿರುವುದಿಲ್ಲ. ಆಸ್ಪತ್ರೆ ಮುಂತಾದ ಅನುಕೂಲಕ್ಕೆ ಅವರು ಹತ್ತಿರದ ಪಟ್ಟಣಕ್ಕೆ ಹೋಗಬೇಕು. ಅಲ್ಲಿಗೆ ಹೋಗಲು ಸಾರಿಗೆಯ ಅನುಕೂಲತೆ ಇರುವುದಿಲ್ಲ. ವೆಚ್ಚಕ್ಕೆ ಅವರಲ್ಲಿ ನಗದು ಹಣವಿರುವುದಿಲ್ಲ. ಅನೇಕ ಸಂದರ್ಭದಲ್ಲಿ ಇವರಿಗೆ ಇನ್ನೂ ಮಾಯ-ಮಾಟದಲ್ಲಿ, ದೇವರು ಮುನಿಯುವುದರಲ್ಲಿ ನಂಬಿಕೆ ಹೆಚ್ಚು. ಆದ್ದರಿಂದ ಯಾರಿಗಾದರೂ ಕಾಯಿಲೆಯಾದರೆ ಇದು ಯಾವುದಾದರೂ ಭೂತ-ಪ್ರೇತದ ಚೇಷ್ಟೆ ಅಥವಾ ದೇವರಿತ್ತ ಶಿಕ್ಷೆ ಎಂದು ಬಗೆದು ಅವಕ್ಕೆ ಸೂಕ್ತಕ್ರಮಗಳನ್ನು ತೆಗೆದುಕೊಳ್ಳಲು ಮಂತ್ರವಾದಿಯ ಕಡೆ ಹೋಗುವರು. ದೇವರನ್ನು ಸಂತುಷ್ಟಪಡಿಸಲು ಆಹುತಿ ಮತ್ತು ಬಲಿ ನೀಡುವರು, ತೀರ್ಥಯಾತ್ರೆ ಮಾಡುವರು. ಇದೇ ಹಣದಲ್ಲಿ ವೈದ್ಯರಲ್ಲಿಗೆ ಹೋಗಿ, ಸೂಕ್ತ ಔಷಧೋಪಚಾರ ಮಾಡಿಕೊಂಡರೆ ಅದು ಬೇಗ ವಾಸಿಯಾಗಬಹುದು.

ಆದರೆ ಅವರಲ್ಲಿಯ ಮೂಢನಂಬಿಕೆಗಳಿಂದಾಗಿ ಅವರು ಹರಕೆ ತೆಗೆದುಕೊಳ್ಳುವುದು, ಕಾಣಿಕೆ ನೀಡುವುದು ಮುಂತಾದವನ್ನು ಮಾಡುತ್ತಾರೆ. ಇದೇ ರೀತಿ ಅನೇಕ ರೋಗಗಳ ಬಗೆಗೆ ಅವರಿಗೆ ಸರಿಯಾದ ಮಾಹಿತಿ ಇರುವುದಿಲ್ಲ. ಇವರ ನಂಬಿಕೆಯಂತೆ ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಸಂಬಂಧವೇ ಇರುವುದಿಲ್ಲ. ಆದ್ದರಿಂದ ಮೈ, ಬಟ್ಟೆ, ಮನೆ ಮತ್ತು ವಾತಾವರಣದ ಸ್ವಚ್ಛತೆಗೆ ಗಮನವನ್ನೇ ನೀಡುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿಯ ಮತ್ತೊಂದು ಸಮಸ್ಯೆ ಎಂದರೆ ಸ್ವಚ್ಛ ಮತ್ತು ಸತ್ವ ಆಹಾರದ ಕೊರತೆ. ಹಿಂದಿನ ಕಾಲದಲ್ಲಿ ಸಂಪ್ರದಾಯಿಕವಾದ ರೀತಿಯಲ್ಲಿ ಬಂದ ಆಹಾರಗಳು ಸೂಕ್ತ ಸತ್ವಗಳಿಂದ ಕೂಡಿರುತ್ತಿದ್ದವು. ಇಂದು ಆಧುನಿಕತೆಯ ಹೆಸರಿನಲ್ಲಿ ಇವನ್ನು ಕೈಬಿಡಲಾಗಿದೆ. ಹೆಚ್ಚು ಪಾಲಿಷ್ ಮಾಡಿದ ಸತ್ವರಹಿತ ಅನ್ನ ತಿಂದು ಗ್ರಾಮೀಣ ಜನ ಅದರಲ್ಲೂ ಮಕ್ಕಳು, ಹೆಚ್ಚಿನ ತೊಂದರೆಗೀಡಾಗಿದ್ದಾರೆ. ಅಲ್ಲದೆ ಬಾಣಂತಿಯಾಗಿದ್ದಾಗ, ಮಗುವಿಗೆ ಹಾಲುಣಿಸುವ ದಿನಗಳಲ್ಲಿ ಮಹಿಳೆಗೆ ಸೂಕ್ತ ಆಹಾರದ ಅವಶ್ಯಕತೆ ಇದೆ. ಇವು ಸಿಗದಾದ್ದರಿಂದ ಇಂದು ಗ್ರಾಮೀಣ ಮಹಿಳೆ ಅನಾರೋಗ್ಯ, ಅಶಕ್ತತೆ ಮುಂತಾದ ತೊಂದರೆಗಳಿಗೆ ಈಡಾಗಿದ್ದಾಳೆ.

ಕೊನೆಯದಾಗಿ ಗ್ರಾಮೀಣ ಮಹಿಳೆಗೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯರಂಗದಲ್ಲಿ ಇರುವ ಅವಕಾಶಗಳು ಕಡಿಮೆ. ಒಂದು ವಿಧದಲ್ಲಿ ಹೇಳುವುದಾದರೆ ಇವೆಲ್ಲವೂ ಇಡೀ ಗ್ರಾಮೀಣ ಸಮಾಜದ ಸಮಸ್ಯೆಗಳು. ಅದರಲ್ಲೂ ಮಹಿಳೆಯ ಸ್ಥಾನಮಾನ ಇನ್ನೂ ಹೆಚ್ಚಿನ ಶೋಚನೀಯ ಸ್ಥಿತಿಯಲ್ಲಿವೆ. ಗ್ರಾಮೀಣ ಮಹಿಳೆ ತನ್ನ ಸ್ವಂತ ಆಸೆ-ಆಕಾಂಕ್ಷೆಗಳಿಂದ, ಬುದ್ಧಿ ಚಾತುರ್ಯದಿಂದ ಯಾವುದಾದರೂ ಕೆಲಸ ಮಾಡಿದರೆ ಇದರಿಂದ ಹಣ, ಘನತೆ, ಗೌರವ ಪಡೆದರೆ, ಅವು ಆಕೆಗಿಂತ ಆಕೆಯ ಗಂಡನಿಗೆ ಅಥವಾ ಮನೆತನಕ್ಕೆ ಸೇರುತ್ತವೆ. ಗ್ರಾಮದಲ್ಲಿ ವ್ಯವಸಾಯವನ್ನು ಬಿಟ್ಟು ಉಳಿದ ಆರ್ಥಿಕ ಅವಕಾಶಗಳು ಕಡಿಮೆ. ಯಾರಾದರೂ ಮಹಿಳೆಯರು ಹಾಲು ಮಾರಿ, ಬುಟ್ಟಿ ಹೆಣೆದು, ಕುರಿ-ಕೋಳಿ ಸಾಕಿ, ಕೂಲಿ ಮಾಡಿ ಹೆಚ್ಚಿನ ಹಣ ಗಳಿಸಿದರೆ ಇದರಿಂದ ಆಕೆಗೆ ಲಾಭಕ್ಕಿಂತ ನಿರಾಶೆಯೇ ಹೆಚ್ಚು. ಏಕೆಂದರೆ ಆಕೆಯೇ ಇತರರ ಸೊತ್ತಾಗಿರುವಾಗ ಆಕೆಗೆ ಸೇರಿದ ವಸ್ತುಗಳೂ ಅವಳವಲ್ಲ. ಆಕೆ ಇವು ತನ್ನವೆಂಬುದನ್ನು ಮುಚ್ಚಿಟ್ಟು ನಂತರ ಕಳೆದುಕೊಂಡ ಸಂದರ್ಭಗಳು, ಅನುಭವಿಸಿದ ತೊಂದರೆಗಳು ಹೆಚ್ಚು. ಹೀಗಾಗಿ ಅನೇಕ ಮಹಿಳೆಯರಿಗೆ ಗಳಿಸುವ ಮನಸ್ಸು, ಕಾಲ ಮತ್ತು ಪರಿಣತೆ ಇದ್ದರೂ ಅವುಗಳನ್ನು ಯಾವ ಉಪಯುಕ್ತ ಚಟುವಟಿಕೆಯಲ್ಲಿ ತೊಡಗಿ ಅದರ ಲಾಭ ಪಡೆಯಬಯಸುವುದಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳು ಕಳೆದರೂ ಮಹಿಳೆಯ ರಾಜಕೀಯ ಹಾಗೂ ಸಾಮಾಜಿಕ ಸ್ಥಾನಮಾನ ಉತ್ತಮವಾಗಿಲ್ಲ. ಗ್ರಾಮದಲ್ಲಿ ಅಥವಾ ಹೊರಗೆ ನಡೆಯುವ ಯಾವ ಹಬ್ಬ ಜಾತ್ರೆಗಳಿಗೆ ಪ್ರೌಢವಯಸ್ಕರಾದ ಮಹಿಳೆಯರು

ಹೋಗುವಂತಿಲ್ಲ. ಉತ್ತಮರು ಎಂಬ ಕುಲ-ಮನೆತನಕ್ಕೆ ಸೇರಿದ ಮಹಿಳೆಯರಿಗೆ ನಿರ್ಬಂಧಗಳು ಇನ್ನೂ ಹೆಚ್ಚು. ಇದೇ ರೀತಿ ಯಾವುದೇ ಸಾರ್ವಜನಿಕ ಸಭೆ ಸಮಾರಂಭಗಳಿಗೆ ಹೋಗಿ ತನ್ನ ಬುದ್ಧಿ ಮಟ್ಟ ಹೆಚ್ಚಿಸಿಕೊಳ್ಳುವಂತಿಲ್ಲ. ರಾಜಕೀಯವಾಗಿ ಈಕೆಗೆ ಮತ ನೀಡುವ ಹಕ್ಕು ಇದ್ದರೂ ಆಕೆಯನ್ನು ನಿಯಂತ್ರಿಸುವವರು, ಪ್ರಭಾವಿಸುವವರು ಮಾತ್ರ ಆಕೆಯ ತಂದೆ, ಸೋದರ, ಗಂಡ ಅಥವಾ ಮಗ. ಹೀಗಾಗಿ ಅವರು ಹೇಳಿದವರಿಗೆ ಈಕೆ ಮತ ನೀಡಬೇಕಾಗುತ್ತದೆ. ಗ್ರಾಮಪಂಚಾಯಿತಿಗಳಲ್ಲಿ, ಸಂಘ-ಸಂಸ್ಥೆಗಳಲ್ಲಿ ಮಹಿಳಾ ಸದಸ್ಯೆಯರು ಇರಲೇಬೇಕೆಂಬ ಕಾನೂನು ಇರುವುದರಿಂದ ಇಂದು ಅನೇಕರು ಸದಸ್ಯರಿದ್ದಾರೆ. ಆದರೆ ಈ ಮಹಿಳೆಯರು ಕೂಡ ತಮ್ಮ ಹಕ್ಕನ್ನು ಚಲಾಯಿಸುವಂತಿಲ್ಲ. ಅನೇಕ ವೇಳೆ ಇಂತಹ ಸಾರ್ವಜನಿಕ ಸ್ಥಾನ-ಮಾನ ತರುವ ಸ್ಥಾನವನ್ನು ಅಲಂಕರಿಸಿದ ಮಹಿಳೆಯ ಸಾಮಾಜಿಕ ಸ್ಥಾನಮಾನ, ಶೀಲ ಮತ್ತು ನಡಾವಳಿಕೆಗಳ ಬಗೆಗೆ ಗ್ರಾಮಸ್ಥರಲ್ಲಿ ಉತ್ತಮ ಅಭಿಪ್ರಾಯ ಇರುವುದಿಲ್ಲ. ಆದ್ದರಿಂದ ಇಂದು ಇಂತಹ ವ್ಯಕ್ತಿಗಳು ಮಾತ್ರ ಈ ಸ್ಥಾನಗಳನ್ನು ಪಡೆಯಲು ಮುಂದೆ ಬರುತ್ತಾರೆ. ಹೀಗಾಗಿ ಅನೇಕ ಅವಕಾಶಗಳು, ನೆರವುಗಳು ಇದ್ದರೂ ಗ್ರಾಮೀಣ ಮಹಿಳೆ ಅವುಗಳನ್ನು ಪಡೆಯಲು ಮುಂದೆ ಬರುವುದಿಲ್ಲ, ಇದ್ದ ಅವಕಾಶಗಳನ್ನು ಬಳಸಿಕೊಂಡಿಲ್ಲ. ಹೀಗಾಗಿ ಗ್ರಾಮೀಣ ಮಹಿಳೆಯರ ಒಳಿತಿಗೆ ಸರಕಾರ ತಂದಿರುವ ಅನೇಕ ಅಭಿವೃದ್ಧಿ ಕಾರ್ಯಗಳು ಹೆಚ್ಚು ಫಲಕಾರಿಯಾಗಿಲ್ಲ.

★★★★

ಲೇಖನ - ೭

ಗ್ರಾಮೀಣ ವೃದ್ಧರು

ಒಂದು ಸಮಾಜ ಮತ್ತು ಸಂಸ್ಕೃತಿಯ ಉನ್ನತ ಮಟ್ಟವನ್ನು ಅವರಲ್ಲಿ ಮಕ್ಕಳಿಗೆ, ಸ್ತ್ರೀಯರಿಗೆ ಮತ್ತು ವೃದ್ಧರಿಗೆ ನೀಡಿರುವ ಗೌರವದಿಂದ, ಸ್ಥಾನಮಾನದಿಂದ ಅಳೆಯಬಹುದು. ಸಮಾಜ ಇವರಿಗೆ ನೀಡಿರುವ ರಕ್ಷಣೆಗಳು ಅವರ ಮೇಲಿನ ಕರುಣೆಯಿಂದಲ್ಲ, ಅವರು ಸಮಾಜ-ಸಂಸ್ಕೃತಿಗೆ ನೀಡಿರುವ ಕೊಡಿಗೆಯಿಂದ. ಅವರ ಅವಶ್ಯಕತೆಯನ್ನು, ವಯೋಸ್ಥಿತಿಯನ್ನು, ಪರಿಣತೆ, ಪರಿಪೂರ್ಣ ವ್ಯಕ್ತಿತ್ವ ಮುಂತಾದವನ್ನು ಗಮನದಲ್ಲಿಟ್ಟುಕೊಂಡು ಅವರನ್ನು ಘನತೆ ಗೌರವದಿಂದ ನಡೆಸಿಕೊಳ್ಳಲಾಗುತ್ತದೆ. ಇಂದು ಸಮಾಜದಲ್ಲಿ ಆಧುನಿಕತೆಗೆ ಮತ್ತು ವಿಶೇಷ ಪರಿಣತಿಗೆ ಹೆಚ್ಚಿನ ಮನ್ನಣೆ ಇರುವುದರಿಂದ ತರುಣ ಪೀಳಿಗೆ ವೃದ್ಧರ ಅಭಿಪ್ರಾಯಗಳನ್ನು ಹಳೆಯ ವಿಚಾರಗಳೆಂದು ಗಣಿಸುತ್ತಿದೆ. ಹೀಗಾಗಿ ಈ ಎರಡು ಗುಂಪುಗಳ ನಡುವೆ ಭಿನ್ನಾಭಿಪ್ರಾಯಗಳು ಮತ್ತು ಘರ್ಷಣೆಗಳು ಬಂದಿವೆ. ಆದರೆ ಎಲ್ಲಾ ಕಾಲದಲ್ಲಿಯೂ, ಸಮಾಜದಲ್ಲಿಯೂ, ಅದರಲ್ಲೂ ಜಾನಪದ ಸಂಸ್ಕೃತಿಯ ನೆರಳಿನಲ್ಲಿರುವ ಗ್ರಾಮೀಣ ಸಮಾಜದಲ್ಲಿ, ಹಿರಿಯ ತಲೆಮಾರಿನವರಿಗೆ ಹೆಚ್ಚಿನ ಆದ್ಯತೆ, ಗೌರವ ಮತ್ತು ಮನ್ನಣೆ ಇರುವುದನ್ನು ಕಾಣುತ್ತೇವೆ.

ಗ್ರಾಮೀಣ ಸಮಾಜದಲ್ಲಿ ಹಿರಿಯ ನಾಗರೀಕರಿಗೆ ಹೆಚ್ಚಿನ ಗೌರವ ನೀಡುವುದಕ್ಕೆ ಅನೇಕ ಕಾರಣಗಳಿವೆ. ಯೌವ್ವನದಲ್ಲಿ ಅವರು ತಮ್ಮ ಸ್ವಂತ ಕುಟುಂಬದ ಕಲ್ಯಾಣಕ್ಕೆ ದುಡಿಯುವುದರ ಜೊತೆಗೆ ಇಡೀ ಸಮಾಜದ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸಿ, ನಾಲ್ಕು ಜನರಿಗೆ ಬೇಕಾದವರಾಗಿ ಜೀವನ ಮಾಡಿರುತ್ತಾರೆ. ಗ್ರಾಮದ, ಗುಂಪಿನ ಮುಂದಾಳುಗಳಾಗಿ, ನ್ಯಾಯಪಂಚಾಯಿತಿಯ ಸದಸ್ಯರಾಗಿ ನೆರವಾಗುತ್ತಾರೆ. ಹೀಗಾಗಿ ಈ ಹಿರಿಯರು ನೀಡಿದ ನಿರ್ಣಯಗಳನ್ನು ಇತರೆ ಸದಸ್ಯರು ಸರ್ವವಿಧದಿಂದಲೂ ಮಾನ್ಯ ಮಾಡುತ್ತಿದ್ದರು. ಈ ಹಿರಿಯರೂ ಕೂಡ ಜನರು ತಮ್ಮಲ್ಲಿಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳಲು, ಅವರ ಕಷ್ಟನಷ್ಟ, ಸಾವು ನೋವುಗಳಲ್ಲಿ ನೆರವು ಮಾರ್ಗದರ್ಶನ ನೀಡಲು ಸದಾ ಸಿದ್ಧರಿರುತ್ತಿದ್ದರು. ಇದರಿಂದ ಸಮುದಾಯದಲ್ಲಿ ಘರ್ಷಣೆಗಳು ತಪ್ಪಿ ಪರಸ್ಪರರಲ್ಲಿ ಉತ್ತಮ ಸಂಬಂಧಗಳು ಏರ್ಪಡುತ್ತಿದ್ದವು.

ಗ್ರಾಮೀಣ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದರ ಜೊತೆಗೆ ಅದನ್ನು ಮುಂದಿನ ಪೀಳಿಗೆಗೆ ನೀಡುವಲ್ಲಿಯೂ ಈ ಹಿರಿಯರು ಮಹತ್ತರವಾದ ಪಾತ್ರ ವಹಿಸುತ್ತಿದ್ದರು. ಜಾನಪದ ಹಾಡು, ನೃತ್ಯ, ಕಲೆ, ವೈದ್ಯ, ಉಟೋಪಚಾರಗಳು ಇಂತಹ ಅನೇಕ ಉಪಯುಕ್ತ ವಿಚಾರಗಳನ್ನು ಕಿರಿಯ ಪೀಳಿಗೆಗೆ ಕಲಿಸಿಕೊಡುವಲ್ಲಿ ನೆರವಾಗುತ್ತಿದ್ದರು. ಇವು ಮಾತ್ರವಲ್ಲ ತಮ್ಮ ವೈಯಕ್ತಿಕ ಜೀವನದಲ್ಲೂ ಅವರು ಇತರರಿಗೆ ಆದರ್ಶಪ್ರಾಯರಾಗಿರುತ್ತಿದ್ದರು. ಹೀಗಾಗಿ ಅವರು ತಮ್ಮ ಗ್ರಾಮ ಸಮುದಾಯದ, ಜಾತಿಯ ಮತ್ತು ಕುಟುಂಬದ ಪ್ರತಿನಿಧಿಯಾಗಿ, ಮುಂದಾಳುಗಳಾಗಿ ದುಡಿಯುತ್ತಿದ್ದರು.

ಗ್ರಾಮೀಣ ಸಮಾಜ ಸಂಪ್ರದಾಯಸ್ಥ ಸಮಾಜ. ಅಲ್ಲಿಯ ಎಲ್ಲಾ ಸಂಬಂಧಗಳಿಗೆ ಮತ್ತು ಆಚರಣೆಗಳಿಗೆ ಸಂಪ್ರದಾಯದ ಕಟ್ಟುಪಾಡು ಹೆಚ್ಚು. ಹೀಗಾಗಿ ಯಾವುದೇ ಕೆಲಸಕಾರ್ಯವಿರಲಿ ಅಲ್ಲಿ ಹಿರಿಯರ ನೆರವು ಬೇಕು. ಇವರು ತಮ್ಮ ಆರೆಂಟು ದಶಕಗಳ ದೀರ್ಘಾವದಿಯ ಜೀವಿತಕಾಲದಲ್ಲಿ ಅನೇಕ ಕಷ್ಟನಷ್ಟಗಳನ್ನು ಉಂಡವರು. ಆದ್ದರಿಂದ ಇವರಿಗೆ ಸೈರಣೆ, ಅನುಭವ, ಮುಂದಾಲೋಚನೆ ಇರುತ್ತವೆ. ಸಮಯ-ಸಂದರ್ಭಕ್ಕೆ ಅನುಗುಣವಾಗಿ ಹೇಗೆ ವರ್ತಿಸಬೇಕೆಂಬ ಅನುಭವವೂ ಅವರಿಗೆ ಇರುತ್ತದೆ. ಉದಾಹರಣೆಗೆ ಮದುವೆ ಸಂಬಂಧಗಳನ್ನು ಕೂಡಿಸುವಂತಹ ಹಾಗೂ ನೆರವೇರಿಸುವಂತಹ ಸೂಕ್ಷ್ಮ ವಿಚಾರದಲ್ಲಿ, ಆಗ ಉದ್ಭವಿಸುವ ಅಡೆತಡೆಗಳನ್ನು ನಿವಾರಿಸುವಲ್ಲಿ ಈ ಹಿರಿಯರ ಪಾತ್ರ ಮಹತ್ತರವಾಗಿರುತ್ತಿದ್ದವು. ಎಲ್ಲಿ ಯಾರಲ್ಲಿ ಉತ್ತಮ ಹೆಣ್ಣುಗಂಡುಗಳಿವೆ, ಅವರ ಕೊಲಗೋತ್ರಗಳಾವು, ನಡವಳಿಕೆಗಳೇನು ಎಂಬುದನ್ನು ಚಾಚೂ ತಪ್ಪದೆ ವಿಚಾರಿಸುತ್ತಿದ್ದರು. ಕೊಡುಕೊಳ್ಳುವುದಕ್ಕೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನು ಚರ್ಚಿಸಲು ಎರಡೂ ಕುಟುಂಬದವರಲ್ಲಿಗೆ ಹತ್ತಾರು ಬಾರಿ ಹೋಗಿ ಬರಲು ಸಿದ್ದರಿರುತ್ತಿದ್ದರು. ಯಾವ ಸಂದರ್ಭದಲ್ಲಿ ಹೇಗೆ ಮಾತಾಡಿ, ನಡೆದುಕೊಂಡು ಜಾರಿಕೊಳ್ಳಬೇಕೆಂಬುದು ಇವರಿಗೆ ಗೊತ್ತಿರುತ್ತಿತ್ತು. ಶವಸಂಸ್ಕಾರದಂತಹ ದುಃಖದ ಸಂದರ್ಭದಲ್ಲಿ ಯಾವ ಭಾವನಾತ್ಮಕತೆಗೂ ಒಳಗಾಗದೆ ಎಲ್ಲಾ ಕೆಲಸಗಳನ್ನು ಸರಿಯಾಗಿ ನಡೆಸಿಕೊಂಡು ಹೋಗುತ್ತಿದ್ದರು. ಇವರು ಕುಟುಂಬದ ಹೊಣೆಗಳಿಂದ ನಿವೃತ್ತರಾಗಿರುವುದರಿಂದ ಇಂತಹ ಸಾರ್ವಜನಿಕ ಕೆಲಸಕ್ಕೆ ಅವರಲ್ಲಿ ಸಾಕಷ್ಟು ವಿರಾಮ ವೇಳೆಯೂ ಇರುತ್ತಿತ್ತು. ಇಂತಹ ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿರುತ್ತಿದ್ದುದರಿಂದ ಅವರಿಗೆ ಸಮುದಾಯದಲ್ಲಿ ಗೌರವಾನ್ವಿತ ಸ್ಥಾನ ಮತ್ತು ಪಾತ್ರಗಳು ಇರುತ್ತಿದ್ದವು. ಇಂದು ಔದ್ಯೋಗಿಕತೆ, ಆಧುನಿಕತೆ, ಪಾಶ್ಚಿಮಾತ್ಯ ಮಾದರಿಯ ಶಿಕ್ಷಣ ಮುಂತಾದವುಗಳಿಂದಾಗಿ ತರುಣರು ನೌಕರಿ ಹಿಡಿದು ಗ್ರಾಮದಿಂದ ಹೊರಗೆ ಹೋಗುತ್ತಿದ್ದಾರೆ. ಇದರಿಂದ ಕಳ್ಳುಬಳ್ಳಿ, ಜಾತಿ ಮತ್ತು ಸಮುದಾಯ ಸಂಬಂಧಗಳು

ಸಡಿಲವಾಗಿವೆ. ಹೀಗಾಗಿ ವೃದ್ಧರು ತಮ್ಮ ಉಪಯುಕ್ತ ಪಾತ್ರಗಳನ್ನು ಕಳೆದುಕೊಳ್ಳುತ್ತಿರುವುದರಿಂದ ಸಮಾಜ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ.

ವೃದ್ಧರಿಗೆ ಸಂಬಂಧಪಟ್ಟ ವಿಚಾರಗಳನ್ನು ಶಾಸ್ತ್ರೋಕ್ತವಾಗಿ ಅಭ್ಯಾಸ ಮಾಡಲು ವೃದ್ಧಾಪ್ಯ ಅಭ್ಯಾಸ ಶಾಸ್ತ್ರ (ಜೊರೋಂಟೋಲಜಿ) ಎಂಬ ಒಂದು ಪ್ರತ್ಯೇಕ ಅಭ್ಯಾಸ ವಿಷಯ ಹುಟ್ಟಿಬಂದಿದೆ. ಸಮಾಜದ ಮತ್ತು ಕುಟುಂಬದ ರಚನೆ, ಕಾರ್ಯಗಳು, ಬದಲಾಗುತ್ತಿರುವ ಸನ್ನಿವೇಶ ಮುಂತಾದವುಗಳನ್ನು ಶಾಸ್ತ್ರೋಕ್ತವಾಗಿ ಅಭ್ಯಾಸ ಮಾಡಿ ಸೂಕ್ತ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಈ ಶಾಸ್ತ್ರ ನೆರವಾಗಿದೆ. ವೃದ್ಧರ ಸಮಸ್ಯೆಗಳನ್ನು ಮತ್ತು ಅವುಗಳ ನಿವಾರಣೋಪಾಯಗಳನ್ನು ತನ್ನ ಅಭ್ಯಾಸ ವಿಷಯವನ್ನಾಗಿ ಪಡೆದ ಈ ಶಾಸ್ತ್ರವು ಪಾಶ್ಚಿಮಾತ್ಯ ದೇಶಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಬಳಕೆಯಾಗಿದೆ. ಇದಕ್ಕೆ ಆ ಸಮಾಜಗಳಲ್ಲಿ ವೃದ್ಧರಿಗೆ ಇರುವ ಗೌರವ ಆರೈಕೆಗಳೇ ಕಾರಣಗಳಿವೆ ಎಂಬುದು ಮಾತ್ರವಲ್ಲ, ಅಲ್ಲಿ ಸಮಾಜದ ಮೂಲ ಸಂಸ್ಥೆಗಳಾದ ಕುಟುಂಬ, ನೆರೆಹೊರೆ ಮುಂತಾದವು ಶಿಥಿಲವಾಗಿವೆ, ಇಲ್ಲವಾಗಿವೆ. ಹೀಗಾಗಿ ಅಮೇರಿಕಾ, ರಷ್ಯಾ, ಬ್ರಿಟನ್ ಮುಂತಾದ ದೇಶಗಳಲ್ಲಿ ವೃದ್ಧರಿಗೆಂದೇ ಪ್ರತ್ಯೇಕ ಆಶ್ರಯಧಾಮಗಳು, ಆಸ್ಪತ್ರೆಗಳು, ಮನರಂಜನಾ ಕೇಂದ್ರಗಳು, ಸಾರಿಗೆ ವ್ಯವಸ್ಥೆಗಳು ಇವೆ. ಇತ್ತೀಚೆಗೆ ಭಾರತದಂತಹ ಮುಂದುವರೆಯುತ್ತಿರುವ ಹಾಗೂ ಹಿಂದುಳಿದ ರಾಷ್ಟ್ರಗಳೂ ವೃದ್ಧರ ಮತ್ತು ವೃದ್ಧಾಪ್ಯದ ಸಮಸ್ಯೆಗಳ ಬಗೆಗೆ ಹೆಚ್ಚು ಗಮನ ಹರಿಸುತ್ತಿವೆ.

ವೃದ್ಧರ ಸಮಸ್ಯೆಗಳಿಗೆ ಮತ್ತು ಅವರು ವಾಸವಾಗಿರುವ ನಾಡಿನ ಸಾಮಾಜಿಕ, ಆರ್ಥಿಕ ಮತ್ತು ಔದ್ಯೋಗಿಕ ಅಭಿವೃದ್ಧಿಗೆ ನೇರ ಸಂಬಂಧವಿದೆ ಎನ್ನಬಹುದು. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳು ಸಂಪ್ರದಾಯಸ್ಥ ಸಮಾಜಗಳೂ ಹೌದು. ಇಲ್ಲಿ ಕುಟುಂಬ, ಕಳ್ಳುಬಳ್ಳಿ, ಜಾತಿ, ಸಮುದಾಯ, ಮುಂತಾದ ಸಂಸ್ಥೆಗಳಿಗೆ ಇನ್ನೂ ಹೆಚ್ಚಿನ ಆದ್ಯತೆ ಇದೆ. ವೃದ್ಧರು ತಮಗಾಗಿ ದುಡಿದವರು ಎಂದು ಕಿರಿಯ ಪೀಳಿಗೆಯವರು ಅವರನ್ನು ಗೌರವ-ಆದರಗಳಿಂದ ನೋಡಿಕೊಳ್ಳುತ್ತಿದ್ದಾರೆ. ಇದರಿಂದ ಕಿರಿಯ-ಹಿರಿಯ ತಲೆಮಾರುಗಳಲ್ಲಿ ಹೆಚ್ಚಿನ ಅನ್ಯೋನ್ಯತೆ ಇದೆ. ವೃದ್ಧಾಪ್ಯದಲ್ಲಿ ಅವರನ್ನು ರಕ್ಷಣೆ ಮಾಡುವುದು ನಮ್ಮ ಕರ್ತವ್ಯ ಮತ್ತು ಧರ್ಮವೆಂದು ಕಿರಿಯರು ತಿಳಿಯುತ್ತಾರೆ. ಇಲ್ಲಿ ಕೆಲವೊಂದು ಭೌತಿಕವಸ್ತುಗಳ ಮತ್ತು ಅನುಕೂಲತೆಗಳ ಕೊರತೆ ಇದ್ದರೂ, ಈ ಸಮಾಜದಲ್ಲಿಯ ವೃದ್ಧರು ಮಾನಸಿಕವಾಗಿ ಸುಖಿಗಳು. ಇದಕ್ಕೆ ವಿರುದ್ಧವಾಗಿ ಅನೇಕ ಮುಂದುವರೆದ ದೇಶಗಳಲ್ಲಿ ವೃದ್ಧರಿಗೆ ಸಾಕಷ್ಟು ಭೌತಿಕ ಅನುಕೂಲತೆಗಳು ಇದ್ದರೂ ಅವರು ತಮ್ಮವರಿಂದ ಅನಾದರಣೆಗೆ ಗುರಿಯಾಗಿರುವುದರಿಂದ ಮಾನಸಿಕವಾಗಿ ಸುಖಿಗಳಲ್ಲ. ಅಲ್ಲಿಯ ಸಾಮಾಜಿಕ ಸಂಬಂಧಗಳಲ್ಲಿ ಬದಲಾವಣೆ ತೀವ್ರಗತಿಯಿಂದ ಬಂದಿರುವುದು ಇದಕ್ಕೆ ಕಾರಣವಿದೆ.

ಇಂದು ಈಗಾಗಲೇ ಅನೇಕ ಕಲ್ಯಾಣ ಕಾರ್ಯಗಳ ಹೊರೆ ಹೊತ್ತಿರುವ ಸರಕಾರಕ್ಕೆ ವೃದ್ಧರ ಸಮಸ್ಯೆ ಎಂಬ ಹೆಚ್ಚಿನ ಹೊರೆಯೂ ಸೇರಿಕೊಂಡಿದೆ. ಈ ಕಾರ್ಯವನ್ನು ಅದು ಕೈಗೆತ್ತಿಕೊಳ್ಳಬೇಕೆ ಅಥವಾ ಬೇಡವೇ ಎಂದು ವಾದ ಮಾಡುತ್ತಿದ್ದ ಕಾಲ ಒಂದಿತ್ತು. ಏಕೆಂದರೆ ಈಗಾಗಲೇ ಶಿಶುಗಳ, ಬಾಲ-ಬಾಲಕಿಯರ, ತರುಣರ, ಕುಟುಂಬದ, ವಿಧವೆಯರ, ಅಂಗವಿಕಲರ, ಮಾನಸಿಕ ರೋಗಿಗಳ, ಕೂಲಿಕಾರರ ಹೀಗೆ ಇನ್ನೂ ಅನೇಕ ಅಶಕ್ತ ಗುಂಪುಗಳ ಕಲ್ಯಾಣಕಾರ್ಯದ ಹೊರೆ ಹೊತ್ತ ಸರಕಾರಕ್ಕೆ ಮತ್ತಷ್ಟು ಭಾರ ಏರುವುದು ಅಂದಿನ ಕೆಲವು ಸಮಾಜ ಕಾರ್ಯಕರ್ತರಿಗೆ ಸರಿಕಾಣಲಿಲ್ಲ. ಕೆಲವರು ವೃದ್ಧರು ತಮ್ಮ ತಾರುಣ್ಯದಲ್ಲಿ ಗಳಿಸಿ ಉಳಿಸಿದ ಹಣದಿಂದ ಜೀವನ ಮಾಡಲೆಂದರೆ ಇತರರು ಅವರು ತಮ್ಮ ಮಕ್ಕಳ ರಕ್ಷಣೆಯಲ್ಲಿರಬಹುದೆಂದರು. ಇನ್ನೂ ಕೆಲವರು ರಾಷ್ಟ್ರದ ಆರ್ಥಿಕ ಮತ್ತು ಸಾಂಸ್ಕೃತಿಕ ಏಳಿಗೆಗೆ ನೆರವಾಗುವ ಸ್ಥಿತಿಯಲ್ಲಿಲ್ಲದ ಇವರ ಮೇಲೆ ಖರ್ಚು ಮಾಡದೆ ಇದೇ ಹಣವನ್ನು ಮತ್ತಾವುದಾದರೂ ಉಪಯುಕ್ತ ಗುಂಪಿನ ಮೇಲೆ ಸರಕಾರ ಖರ್ಚು ಮಾಡಬೇಕೆಂದು ವಾದಿಸಿದ್ದರು.

ಇದಕ್ಕೆ ವಿರುದ್ಧವಾಗಿ ಕೆಲವರು ತಮ್ಮ ತಾರುಣ್ಯದಲ್ಲಿ ಸಮಾಜಕ್ಕೆ ದುಡಿದು ಈ ಸ್ಥಿತಿಗೆ ಮುಟ್ಟಿರುವ ವೃದ್ಧರ ಹೊಣೆ ಸಮಾಜದ ಕರ್ತವ್ಯ, ಇದು ಅವರಿಗೆ ನಾವು ತೋರಿಸುವ ಗೌರವ ಎಂದರು. ನಂತರ ವೃದ್ಧರ ಕಲ್ಯಾಣ ಸಮಾಜದ ಕರ್ತವ್ಯವೆಂದು ನಿರ್ಣಯವಾದ ಮೇಲೆ, ಸರಕಾರ ಅದನ್ನು ಕೈಗೆತ್ತಿಕೊಂಡ ಮೇಲೆ, ವೃದ್ಧಾಪ್ಯಕ್ಕೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳಿವೆ ಮತ್ತು ಇವು ಅನೇಕ ತೆರನಾಗಿವೆ ಎಂದು ಕಂಡುಕೊಂಡರು. ಇವು ಮುಖ್ಯವಾಗಿ ಅಸಹಾಯಕತೆ, ಅನಾರೋಗ್ಯ, ಸೂಕ್ತ ಆರೈಕೆ ಇಲ್ಲದ್ದು, ಅಂಗವಿಕಲತೆ, ಮಾನಸಿಕ ತೊಂದರೆಗಳಾದ ಭಯ, ಒಂಟಿತನ ಮುಂತಾದವಿವೆ ಎಂದು ಕಂಡುಕೊಂಡರು. ಜೊತೆಗೆ ವೃದ್ಧರನ್ನು ಸಂಪ್ರದಾಯಸ್ಥರು, ಅಶಕ್ತರು, ಅನುಪಯುಕ್ತರು, ಅವಲಂಬಿಗಳು ಹೀಗೆ ಅನೇಕ ಗುಣಪದಗಳನ್ನು ಬಳಸಿ ಮೂಲೆ ಗುಂಪು ಮಾಡಲಾಗಿದೆ ಎಂದೂ ತಿಳಿದರು. ಮುಂದೆ ಅವರ ಈ ಸ್ಥಿತಿಗೆ ಸಾಮಾಜಿಕ ಕಾರಣಗಳೂ ಇವೆ ಎಂಬ ಅಭಿಪ್ರಾಯವೂ ಬಂದಿತು. ಹೀಗಾಗಿ ಇಂದು ವೃದ್ಧರು ಅನುಪಯುಕ್ತರಲ್ಲ, ಇವರಲ್ಲಿರುವ ಪರಿಣತಿಯನ್ನು, ಅನುಭವವನ್ನು ಸರಿಯಾಗಿ ಗುರುತಿಸಿ ಬಳಸಿಕೊಳ್ಳದೆ ಇರುವುದು ಸಮಾಜದ ತಪ್ಪು ಎಂದು ಸಮಾಜಕ್ಕೆ ಮನವರಿಕೆ ಮಾಡಿಕೊಡಬೇಕಾಗಿದೆ. ಜೊತೆಗೆ ಈ ಅನುಭವ ಮತ್ತು ಪರಿಣತಿಯನ್ನು ಗ್ರಾಮೀಣ ಸಮಾಜದ ಒಳಿತಿಗೆ ಹೇಗೆ ಬಳಸಿಕೊಳ್ಳಬಹುದೆಂಬುದನ್ನು ಅರಿಯಬೇಕಾಗಿದೆ.

ಇಂದು ಗ್ರಾಮೀಣ ವೃದ್ಧರು ಅನುಭವಿಸುತ್ತಿರುವ ಅನೇಕ ಸಮಸ್ಯೆಗಳು ಕೇವಲ ಅವರಿಗೆ ಮಾತ್ರ ಸೀಮಿತವಾಗಿರದೆ ಇಡೀ ಗ್ರಾಮೀಣ ಸಮಾಜವನ್ನು ಆವರಿಸಿಕೊಂಡಿವೆ. ಆದ್ದರಿಂದ ಗ್ರಾಮಗಳನ್ನು ಅಭಿವೃದ್ಧಿ ಪಡಿಸಿದರೆ ವೃದ್ಧರ ಸಮಸ್ಯೆಗಳು ತಮ್ಮಷ್ಟಕ್ಕೆ ತಾವು

ನಿವಾರಣೆಯಾಗುತ್ತವೆ ಎಂಬ ವಾದವೂ ಇದೆ. ಆದರೆ ಕೆಲವೊಂದು ಕಾರಣದಿಂದ ಈ ಕೆಲಸ ಅಷ್ಟು ಸುಲಭವಲ್ಲ. ಉದಾಹರಣೆಗೆ ಗ್ರಾಮೀಣ ವೈದ್ಯಕೀಯ ಸೌಲಭ್ಯಗಳಿಗೆ ಸಂಬಂಧಿಸಿದ ವಿಚಾರಗಳನ್ನೇ ತೆಗೆದುಕೊಂಡರೆ ಇಲ್ಲಿ ಅನಕ್ಷರತೆ ಹಾಗೂ ಸಾಂಪ್ರದಾಯಕತೆ ಎದ್ದು ಕಾಣುತ್ತದೆ. ಅಲ್ಲಿಯ ಹೆಚ್ಚಿನ ಜನರಲ್ಲಿ ಆರೋಗ್ಯ ಮತ್ತು ನೈರ್ಮಲ್ಯದ ಬಗೆಗೆ ಸೂಕ್ತ ಪರಿಜ್ಞಾನವಿಲ್ಲ. ಹೀಗಾಗಿ ಗ್ರಾಮಸ್ಥರು ಸುಲಭವಾಗಿ ರೋಗಸ್ಥರಾಗುತ್ತಾರೆ. ಅನೇಕರು ಚಿಕ್ಕವಯಸ್ಸಿನಲ್ಲೇ ವಿವಾಹವಾಗಿ ಸಂಸಾರದ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದರಿಂದ ಮಧ್ಯ ವಯಸ್ಸಿಗೆ ಬರುವುದರಲ್ಲೇ ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಳೆದುಕೊಳ್ಳುತ್ತಾರೆ. ಸ್ಥಳೀಯವಾಗಿ ವೈದ್ಯಕೀಯ ಸವಲತ್ತುಗಳು ಲಭ್ಯವಿಲ್ಲದ ಕಾರಣ ಸಕಾಲದಲ್ಲಿ ಸೂಕ್ತ ಉಪಚಾರವಿಲ್ಲದೆ ತೊಂದರೆಗೊಳಗಾಗುತ್ತಾರೆ. ವೃದ್ಧಾಪ್ಯದಿಂದಾಗಿ ಆರ್ಥಿಕ ಚಟುವಟಿಕೆಯಿಂದ ನಿವೃತ್ತರಾಗಿರುವುದರಿಂದ ಸಕಾಲಕ್ಕೆ ಅವರಿಗೆ ಹಣವೂ ದೊರೆಯುವುದಿಲ್ಲ. ಇವೆಲ್ಲವೂ ಅವರ ಆರೋಗ್ಯದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತವೆ.

ಗ್ರಾಮೀಣ ಜನರಿಗೆ ನಗರವಾಸಿಗಳಂತೆ, ನಿವೃತ್ತಿ ಜೀವನ ಮತ್ತು ವೇತನವೆಂಬುದಿಲ್ಲ. ವಯೋಗುಣಕ್ಕೆ ಅನುಗುಣವಾಗಿ ಹೊಲಮನೆಗಳಲ್ಲಿ ಅವರು ಯಾವುದಾದರೊಂದು ಕೆಲಸ ಮಾಡುತ್ತಿರುತ್ತಾರೆ. ಯೌವ್ವನದಲ್ಲಿ ಮಾಡಿದಂತೆ ಶ್ರಮದ ಕೆಲಸವಲ್ಲದಿದ್ದರೂ ಹೊಲ-ಕಣದಲ್ಲಿ, ತೋಟದಲ್ಲಿ ಫಸಲು ಕಾಯುವುದು, ಹೊಲಗದ್ದೆಗಳಿಗೆ ನೀರು ಹಾಯಿಸುವುದು, ದನಕರುಗಳನ್ನು ಕಾಯುವುದು ಹೀಗೆ ಕೆಲವಾರು ಹಗುರಾದ ಕೆಲಸಗಳಿರುತ್ತವೆ. ಒಂದು ವಿಧದಲ್ಲಿ ಹೆಚ್ಚಿನ ಜವಾಬ್ದಾರಿ ಹಾಗೂ ಶ್ರಮರಹಿತವಾದ ಇಂತಹ ಕೆಲಸದಲ್ಲಿ ತೊಡಗುವುದರಿಂದ ವೃದ್ಧರು ಆರ್ಥಿಕವಾಗಿ ನೆರವಾಗುವುದರ ಜೊತೆಗೆ ತಮ್ಮ ಕಾಲಕ್ಷೇಪಕ್ಕೂ ಮಾರ್ಗ ಮಾಡಿಕೊಳ್ಳುತ್ತಿದ್ದರು.

ಗ್ರಾಮೀಣ ಸಮಾಜದಲ್ಲಿ ವೃದ್ಧರನ್ನು ಕಾಡುವ ಸಮಸ್ಯೆಗಳೆಂದರೆ ಮನರಂಜನೆಗೆ ಹಾಗೂ ಕಾಲಕ್ಷೇಪಕ್ಕೆ ಸೂಕ್ತ ಅನುಕೂಲತೆಗಳಿಲ್ಲದಿರುವುದು ಮತ್ತು ಒಂಟಿತನ. ಅಲ್ಲದೆ ಹಿರಿಯ ತಲೆಮಾರಿನ ಬಹುತೇಕ ಗ್ರಾಮಸ್ಥರು ಅವಿದ್ಯಾವಂತರು. ಹೀಗಾಗಿ ವೃತ್ತಪತ್ರಿಕೆ, ಕತೆ ಕಾದಂಬರಿ ಪುಸ್ತಕಗಳನ್ನು ಓದಿ ಕಾಲ ಕಳೆಯುವಂತೆಯೂ ಇಲ್ಲ. ಗ್ರಾಮಗಳಲ್ಲಿ ಹೆಚ್ಚಿನ ಸಭೆ ಸಮಾರಂಭಗಳು, ಸಾಂಸ್ಕೃತಿಕ ಚಟುವಟಿಕೆಗಳೂ ಇರುವುದಿಲ್ಲ. ಹೆಚ್ಚೆಂದರೆ ಸಮವಯಸ್ಕರೊಡನೆ ಯಾವುದಾದರೂ ಗುಡಿ ಅಥವಾ ಕಟ್ಟೆಯಲ್ಲಿ ಕುಳಿತು ಹರಟ ಬಹುದು. ಆದರೆ ಇತ್ತೀಚೆಗೆ ಗ್ರಾಮೀಣ ಸಮುದಾಯಗಳಲ್ಲಿ ಪರಸ್ಪರರಲ್ಲಿ ಸಾಮರಸ್ಯ ಇಲ್ಲದಾಗಿದೆಯಾದ್ದರಿಂದ ಗ್ರಾಮಸ್ಥರು ಹೀಗೆ ಬೆರೆಯುವುದೂ ವಿರಳವಾಗಿದೆ. ಹೀಗಾಗಿ ಗ್ರಾಮೀಣ ವೃದ್ಧರಿಗೆ ಉಪಯುಕ್ತವಾಗಿ ತಮ್ಮ ವಿರಾಮ ವೇಳೆಯನ್ನು ಕಳೆಯುವ ಅವಕಾಶಗಳಿಲ್ಲದಾಗಿದೆ. ಇದರಿಂದ ಅನೇಕರು ಮಾನಸಿಕವಾಗಿ ತೊಂದರೆಗೊಳಗಾಗಿದ್ದಾರೆ.

ಕೆಲವು ವೃದ್ಧರು ತಮ್ಮಲ್ಲಿರುವ ವಿಶೇಷ ಪರಿಣತಿಗಳಾದ ನಾಟಿ ವೈದ್ಯ, ಮಾಟ ಮಾಡುವುದು, ಪುರಾಣ ವಾಚನೆ ಮಾಡುವುದು, ಜಾನಪದ ಸಂಗೀತ, ನೃತ್ಯ, ನಾಟಕ ಮುಂತಾದವುಗಳಲ್ಲಿ ತೊಡಗುವ ಮೂಲಕ ಕಾಲಕ್ಷೇಪ ಮಾಡಬಹುದು. ಕೆಲವರು ಹೆಣ್ಣುಗಂಡು ಹುಡುಕಿ ಕೊಟ್ಟು ಲಗ್ನ ಮಾಡಿಸುವ ಕಾರ್ಯದಲ್ಲಿ ತೊಡಗಿ ತಮ್ಮವರಿಗೆ ನೆರವಾಗುವುದರ ಜೊತೆಗೆ ತಮ್ಮ ವಿರಾಮ ಕಾಲವನ್ನು ಉಪಯುಕ್ತವಾಗಿ ಕಳೆಯಬಹುದು. ಅನುಕೂಲತೆ ಇದ್ದರೆ ತೀರ್ಥಯಾತ್ರೆ, ಪ್ರವಾಸ ಹೋಗಬಹುದು. ಆದರೆ ಈ ಚಟುವಟಿಕೆಗಳಲ್ಲಿ ತೊಡಗಿದವರ ಸಂಖ್ಯೆ ಕಡಿಮೆ. ಇದಕ್ಕೆ ಸೂಕ್ತ ಲೋಕಜ್ಞಾನ, ಆರೋಗ್ಯ, ಹಣ, ಸರಿಯಾದ ಸಹಪಾಠಿಗಳು ಬೇಕಾಗುತ್ತದೆ.

ಗ್ರಾಮೀಣ ವೃದ್ಧರ ಮತ್ತೊಂದು ಸಮಸ್ಯೆ ಎಂದರೆ ಅವರು "ಅನಾಥರು" ಎಂಬ ಪ್ರಜ್ಞೆ ಹೊಂದಿರುವುದು. ಇಂದು ಸಾಮಾಜಿಕ ಬದಲಾವಣೆಯಿಂದಾಗಿ ಗ್ರಾಮದಲ್ಲಿ ಒಬ್ಬಿಬ್ಬರು ಮಕ್ಕಳನ್ನು ಬಿಟ್ಟು ಉಳಿದವರು ಹೊರಗೆ, ಕೆಲವೊಮ್ಮೆ ದೂರದ ಊರುಗಳಲ್ಲಿ ನೌಕರಿಯಲ್ಲಿರುತ್ತಾರೆ. ತಮ್ಮಲ್ಲಿಯ ಸ್ಥಳಾಭಾವ, ಆರ್ಥಿಕ ಅಡಚಣೆ ಮತ್ತು ವರದಕ್ಷಿಣೆ ಬೇಡುವುದರಿಂದ ಹಾಗೂ ವಿದ್ಯಾವಂತ ಮತ್ತು ನೌಕರಿಯಲ್ಲಿರುವ ಸೊಸೆಯಂದಿರನ್ನು ಸೋದರಿಕೆಯಿಂದ ಹೊರಗಿನಿಂದ ತರುವುದರಿಂದ, ಈ ಸೊಸೆಯರು ವೃದ್ಧ ಅತ್ತೆ ಮಾವಂದಿರನ್ನು ಪ್ರೀತಿ ವಿಶ್ವಾಸಗಳಿಂದ ಕಾಣಲಾರರು. ಅವರೊಡನೆ ಇರಲು ಹೋದರೂ ಅಲ್ಲಿಯ ಕ್ರಮವರಿತ, ತೀವ್ರಗತಿಯಿಂದ ಸಾಗುವ, ವ್ಯಕ್ತಿಗತವಲ್ಲದ ಜೀವನಕ್ಕೆ ಹೊಂದಿಕೊಳ್ಳಲಾರದೆ ಹೋಗಬಹುದು. ಆಗ ಅವರು ಹಳ್ಳಿಯಲ್ಲಿ ಇರುವ ಮಗನ ಮತ್ತು ಅವನ ಹೆಂಡತಿಯ ಆಶ್ರಯದಲ್ಲಿರಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ಗ್ರಾಮೀಣ ಸಮಾಜದಲ್ಲಿ ಕಳ್ಳು-ಬಳ್ಳಿ, ಜಾತಿ, ಸಮುದಾಯ ಸಂಬಂಧಗಳು ಉತ್ತಮವಾಗಿದ್ದಾಗ ಗ್ರಾಮಸ್ಥರು ಒಬ್ಬರಿಗೊಬ್ಬರು ನೆರವಿಗೆ ಬರುತ್ತಿದ್ದುದರಿಂದ, ವೃದ್ಧರಿಗೆ ಅಷ್ಟಾಗಿ ತೊಂದರೆ ಇರುತ್ತಿರಲಿಲ್ಲ. ಈಗೀಗ ಈ ಸಂಬಂಧಗಳೂ ನಶಿಸಿ ಹೋಗುತ್ತಿವೆ. ತಮ್ಮ ಮಕ್ಕಳಿಂದ ಹೆಚ್ಚಿನ ಬೆಂಬಲ ಮತ್ತು ಭರವಸೆ ಸಿಗದಾದಾಗ ಕೆಲವರು ಮಾನಸಿಕ ವೇದನೆಗೆ ಒಳಗಾಗುತ್ತಾರೆ. ಇದರಿಂದ ಅನೇಕ ವೃದ್ಧರು ಅನಾಥರಾದಂತೆ ಭಾವಿಸಿ ಮನೆಯಿಂದ ಹೊರ ಬಂದು ಅನಾಥಾಶ್ರಮದಲ್ಲಿರಲು ಅಥವಾ ಭಿಕ್ಷೆ ಬೇಡಲು ಪ್ರಾರಂಭಿಸಿದ್ದಾರೆ. ಹೀಗೆ ವೃದ್ಧರ ಸಮಸ್ಯೆ ಕೇವಲ ವೃದ್ಧಾಪ್ಯದ್ದಾಗಿರದೆ ಆರ್ಥಿಕ, ಸಾಮಾಜಿಕ ಹಾಗೂ ಮಾನಸಿಕವೂ ಹೌದು.

ಗ್ರಾಮೀಣ ಸಮಾಜ ಇನ್ನೂ ಜಾನಪದ ಸಂಸ್ಕೃತಿಯ ನೆರಳಲ್ಲಿದೆ. ಇಲ್ಲಿರುವ ಸಣ್ಣ ಪುಟ್ಟ ಅಧಿಕಾರಸ್ಥಾನಗಳಿಗೆ ಆಸೆ ಪಡುವವರಲ್ಲಿ ಒಂದು ಬಗೆಯ ಈರ್ಷೆ ಮತ್ತು ಹಗೆತನದ ಸಂಬಂಧಗಳಿರುತ್ತವೆ. ಈ ಅಭಾವ ಪರಿಸ್ಥಿತಿಯಿಂದಾಗಿ ವೃದ್ಧರು ತಮ್ಮ ಸ್ಥಾನಗಳನ್ನು ಕೊನೆಯವರೆಗೂ ಬಿಟ್ಟು ಕೊಡಲು ಸಿದ್ಧರಿರುವುದಿಲ್ಲ. ಇದಕ್ಕೆ ಸಂಪ್ರದಾಯದ ಬೆಂಬಲವೂ

ಇರುತ್ತದೆ. ಆದರೆ ಇಂದು ಆಧುನಿಕತೆಯ ನೆರಳು ಗ್ರಾಮಗಳಿಗೂ ಮುಟ್ಟಿ ಅಲ್ಲಿಯ ತರುಣರು ಹಳೆಯ ವಿಚಾರದ ಮತ್ತು ಮನೋಭಾವನೆಯ ವೃದ್ಧರಿಂದ ಅಧಿಕಾರ ಸ್ಥಾನಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಹೀಗಾಗಿ ಈ ಎರಡೂ ಗುಂಪುಗಳ ನಡುವೆ ಒಂದು ವಿಧದ ಪೈಪೋಟಿ ಪ್ರಾರಂಭವಾಗಿದೆ. ತರುಣ ಪೀಳಿಗೆ ವೃದ್ಧರ ವಿರುದ್ಧ ಅನೇಕ ಕತೆಗಳನ್ನು ಕಟ್ಟಿ, ಹೆಸರಿಟ್ಟು ಹೀಯಾಳಿಸುತ್ತಿದ್ದಾರೆ. ಇಂತಹ ಸನ್ನಿವೇಶಕ್ಕೆ ಹೊಂದಿಕೊಳ್ಳುವುದು ಅವರಿಗೆ ಸಮಸ್ಯೆಯಾಗಿದೆ. ಈ ಎರಡೂ ಗುಂಪುಗಳ ಯೋಚನಾಲಹರಿ ಬದಲಾಗುತ್ತಿರುವುದರಿಂದ ಇತ್ತೀಚೆಗೆ ಈ ಒಂದು ಅವಕಾಶವೂ ಕಳೆದುಹೋಗುತ್ತಿದೆ.

ಹೀಗೆ ಗ್ರಾಮೀಣ ವೃದ್ಧರ ಹಿನ್ನೆಲೆ ಮತ್ತು ಸಮಸ್ಯೆಗಳು ನಗರವಾಸಿಗಳಿಂದ ಭಿನ್ನವಾಗಿರುವುದರಿಂದ ಇವರನ್ನು ಒಂದು ಪ್ರತ್ಯೇಕ ಗುಂಪು ಎಂದು ಪರಿಗಣಿಸಿ ಅವರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಆಗ ಮಾತ್ರ ಸೂಕ್ತ ಪರಿಹಾರ ಹುಡುಕಲು ಸಾಧ್ಯ. ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ ಮತ್ತು ಕಲ್ಯಾಣ ರಾಜ್ಯದ ಅಂಗವಾಗಿ ಸರಕಾರ ಈಗಾಗಲೇ ಗ್ರಾಮೀಣ ವೃದ್ಧರಿಗೆ ವಿರಾಮವೇತನ ಮುಂತಾದ ಅನುಕೂಲತೆಗಳನ್ನೂ ನೀಡುತ್ತಿದೆ. ಆದರೆ ಅನೇಕ ರಾಜ್ಯಗಳು ಇದನ್ನು ಕೇವಲ ಹಿಂದುಳಿದ ಮತ್ತು ಆರ್ಥಿಕವಾಗಿ ಅಬಲರಾದ ಜಾತಿಯವರಿಗೆ ಮಾತ್ರ ನೀಡುತ್ತಿವೆ. ಇದು ಎಲ್ಲಾ ವರ್ಗದ ವೃದ್ಧರಿಗೂ ಸಲ್ಲುವಂತಾಗಬೇಕು.

ವೃದ್ಧರಿಗಾಗಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಅವಶ್ಯಕ ಅನುಕೂಲತೆಗಳಿರುವ ಆಶ್ರಯಧಾಮಗಳನ್ನು ತೆರೆಯಬೇಕು. ಸಾಧ್ಯವಾದ ಮಟ್ಟಿಗೆ ಇವು ವೃದ್ಧರ ಸಂಬಂಧಿಕರಿಗೆ ಹಾಗೂ ಅವರ ಊರುಗಳಿಗೆ ಹತ್ತಿರವಿದ್ದು ಅವರು ಆಗಾಗ ಬಂದು ತಮ್ಮ ಬಂಧುಗಳನ್ನು ನೋಡಿಕೊಂಡು ಹೋಗುವಂತಿರಬೇಕು. ಸೂಕ್ತ ಸಾರಿಗೆ ವ್ಯವಸ್ಥೆ ಮುಂತಾದ ಸಂಪರ್ಕದ ವ್ಯವಸ್ಥೆಗಳೂ ಇರಬೇಕು. ಎಲ್ಲಕ್ಕಿಂತ ಮಿಗಿಲಾಗಿ ಈ ಆಶ್ರಯಧಾಮಗಳ ಬಗೆಗೆ ಸಾರ್ವಜನಿಕರಲ್ಲಿ ಉತ್ತಮ ಅಭಿಪ್ರಾಯ ತರುವಂತಹ ಪ್ರಚಾರ ಮಾಡಬೇಕು. ಇವು ಅನಾಥರಿಗೆ, ಬಡವರಿಗೆ ಮಾತ್ರ ತೆರೆದ ಸಂಸ್ಥೆಗಳಲ್ಲ, ಅವಶ್ಯಕತೆ ಇರುವ ಎಲ್ಲಾ ವೃದ್ಧರು ಇಲ್ಲಿ ಬಂದಿರಬಹುದೆಂಬ ತಿಳುವಳಿಕೆ ನೀಡಬೇಕು. ಇಲ್ಲದಿದ್ದರೆ ಅಭಿಮಾನಿಗಳಾದ ವೃದ್ಧರು ತಮಗೆ ಎಷ್ಟೇ ತೊಂದರೆಗಳಿದ್ದರೂ, ಅವರು ನಿಜವಾಗಿಯೂ ಅನಾಥರಿದ್ದರೂ ವೃದ್ಧಾಶ್ರಮಕ್ಕೆ ಸೇರಲು ಒಪ್ಪದಿರಬಹುದು. ಇಂತಹ ಸಂಸ್ಥೆಗಳಲ್ಲಿ ತಮ್ಮ ವೃದ್ಧ ತಂದೆತಾಯಂದಿರನ್ನು ಇಡುವುದು ಅಗೌರವದ ವಿಚಾರವೆಂದು ಅವರ ಮಕ್ಕಳೂ ಭಾವಿಸಬಹುದು.

ಕೊನೆಯದಾಗಿ ವೃದ್ಧರ ಬಗೆಗೆ ಸಾರ್ವಜನಿಕರಲ್ಲಿ, ಜನಸಾಮಾನ್ಯರಲ್ಲಿ ಗೌರವ ಭಾವನೆ ಮೂಡಿಸುವಂತಹ ವಿಚಾರಗಳನ್ನು ಪ್ರಚಾರ ಮಾಡಬೇಕು. ವೃದ್ಧರಿಗೆ ಇಂದು ಕರುಣೆ, ಔದಾರ್ಯ ಅಥವಾ ಕುರುಡು ಪ್ರೀತಿಯಿಂದ ಕೆಲವೊಂದು ಸ್ಥಾನಮಾನಗಳನ್ನು ,

ಗೌರವಗಳನ್ನು ನೀಡಲಾಗಿದೆ. ಅವರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಸ್ವಾಭಾವಿಕವಾಗಿ ಈ ಭಾವನೆಗಳನ್ನು ತೋರಿಸುವಂತಾಗಬೇಕು. ಅವರ ಬಗೆಗೆ ಅದರಲ್ಲೂ ವೃದ್ಧೆಯರ ಬಗೆಗೆ, ಉತ್ತಮ ಅಭಿಪ್ರಾಯ ಮೂಡುವಂತೆ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಸದ್ಯ ಅವರ ಬಗೆಗೆ ಇರುವ ಕೆಟ್ಟ ಅಭಿಪ್ರಾಯಗಳನ್ನು, ಜಾನಪದದ ಮತ್ತಿತರ ಕತೆ, ಹಾಡು, ನಾಟಕಗಳನ್ನು ಬದಲಿಸಬೇಕು. ಬದಲಿಗೆ ಅವರು ಜೀವನದಲ್ಲಿ ಅನುಭವಿಗಳು, ಪ್ರೀತಿಪಾತ್ರರು, ದಯಾಳುಗಳು, ದೈವಭಕ್ತಿ ಉಳ್ಳವರು, ತಮ್ಮ ತಾರುಣ್ಯದಲ್ಲಿ ಸಮಾಜದ, ಕುಟುಂಬದ ಏಳ್ಗೆಗೆ ದುಡಿದವರು ಎನ್ನುವ ಗೌರವ ಭಾವನೆ ತರುವಂತಹ ಕತೆಗಳನ್ನು, ವಿಚಾರಗಳನ್ನು ಪ್ರಚಾರ ಮಾಡಬೇಕು. ಇದರಿಂದ ವೃದ್ಧರ ಬಗ್ಗೆ ಸಮಾಜದಲ್ಲಿ ಹೊಸ ವಾತಾವರಣವೇ ನಿರ್ಮಾಣವಾಗಿ ಅವರ ಸ್ಥಾನಮಾನಗಳು ಉತ್ತಮಗೊಳ್ಳುತ್ತವೆ. ಜೊತೆಗೆ ಇದರಿಂದ, ಹಿರಿಯ-ಕಿರಿಯ ಪೀಳಿಗೆಯ ನಡುವೆ ಸಂಬಂಧಗಳು ಉತ್ತಮಗೊಳ್ಳುತ್ತವೆ. ಅವರಿಂದ ಕೌಟುಂಬಿಕ ಜೀವನವೂ ಉತ್ತಮಗೊಳ್ಳುತ್ತದೆ.

★★★★

ಲೇಖನ - ೮

ಜೀತ, ಆಯ ಮತ್ತಿತರ ಪದ್ಧತಿಗಳು

ಬಹು ಹಿಂದಿನಿಂದಲೂ ಶ್ರಮಿಕರ ಗುಂಪುಗಳು ಆಡಳಿತಗಾರರ, ಯೋಜನೆಗಾರರ, ಸಂಶೋಧಕರ, ಕಲ್ಯಾಣ ಮತ್ತು ಅಭಿವೃದ್ಧಿ ತರಲು ದುಡಿಯುತ್ತಿರುವವರ ಅಭ್ಯಾಸದ ವಿಷಯಗಳಾಗಿವೆ. ರಾಷ್ಟ್ರದ ಉತ್ಪಾದನೆಯಲ್ಲಿಯ ಅವರ ಪಾತ್ರದಿಂದಾಗಿ ನಗರವಾಸಿಗಳು ಮತ್ತು ಸಂಘಟಿತರು ಆದ ಔದ್ಯೋಗಿಕ ರಂಗದಲ್ಲಿಯ ಶ್ರಮಿಕರಿಗೆ ಹೋಲಿಸಿದರೆ ನಾಡಿನ ಉದ್ದಗಲಕ್ಕೆ ಸಾವಿರಾರು ಗ್ರಾಮಗಳಲ್ಲಿ ಚದುರಿಹೋಗಿರುವ ಕೃಷಿ ಶ್ರಮಿಕರನ್ನು ಈ ತಜ್ಞರು ಅಷ್ಟಾಗಿ ಅಭ್ಯಾಸ ಮಾಡಿಲ್ಲ. ಕೆಲವು ಅಭ್ಯಾಸಗಳು ನಡೆದಿದ್ದರೂ ಇವು ನಗರದಲ್ಲಿಯ ಕಾರ್ಖಾನೆಗಳಿಗೆ ಬೇಕಾದ ಕಚ್ಚಾ ವಸ್ತುಗಳ ಉತ್ಪಾದನೆ, ರೈತರ ಚಳುವಳಿ, ಗ್ರಾಮೀಣ ಅಭಿವೃದ್ಧಿ ಮುಂತಾದ ವಿಷಯದಡಿ ಮತ್ತು ಈ ಸಂಶೋಧನೆಗಳಿಗೆ ಹಣ ನೀಡಿದವರ ಉದ್ದೇಶ ಮತ್ತು ಗುರಿಗಳಿಗೆ ಅನುಗುಣವಾಗಿ ಮತ್ತು ಅಪ್ರತ್ಯಕ್ಷವಾಗಿ ಮಾಡಲಾಗಿದೆ. ಉದಾಹರಣೆಗೆ ವಸಾಹತು ಆಡಳಿತ ಕಾಲದಲ್ಲಿ ಆಂಗ್ಲರು ತಾವು ಬೆಳೆಯಲಿದ್ದ ಕಾಫಿ, ಟೀ, ಇಂಡಿಗೋ ಮುಂತಾದ ತೋಟ ಮತ್ತು ಹೊಲಗಳಲ್ಲಿ ಕೆಲಸ ಮಾಡಲು ಗ್ರಾಮೀಣ ಪ್ರದೇಶದಿಂದ ಯಾವ ಋತುಗಳಲ್ಲಿ ಹೆಚ್ಚು ಅಥವಾ ಕಡಿಮೆ ಕೆಲಸಗಾರರು ಸಿಗುತ್ತಾರೆ. ಅವರ ಸ್ಥಾನ ಮಾನ ಮತ್ತು ಪಾತ್ರಗಳೇನು? - ಮುಂತಾದವುಗಳನ್ನು ಮಾತ್ರ ಅಭ್ಯಾಸ ಮಾಡಿದ್ದರು. ಇವರಲ್ಲಿ ಬೇಡನ್ ಪೌಲ್ (೧೮೯೬), ಪಾಂಡಿಯನ್ (೧೮೯೮), ಡಾರ್ಲಿಂಗ್ (೧೯೨೫) ಮುಂತಾದ ಪ್ರಪ್ರಥಮತರನ್ನು, ರೀಸ್ಲೆ (೧೮೯೧), ಥರ್ಸ್ಟನ್ (೧೯೦೯), ಹಟ್ಟನ್ (೧೯೪೨), ಮುಂತಾದ ನಾಗರೀಕ ಆಡಳಿತಾಧಿಕಾರಿಗಳನ್ನು, ವೈಜರ್ (೧೯೩೩), ಎಲ್ವಿನ್ (೧೯೫೫) ಮುಂತಾದ ಕ್ರೈಸ್ತಮತಪ್ರಚಾರಕರನ್ನು ಹೆಸರಿಸಬಹುದು. ವಸಾಹತು ಸರಕಾರದ ಅಂಗ ಸಂಸ್ಥೆಗಳಾದ ಭಾರತೀಯ ಜನಗಣತಿ ಹಾಗೂ ರಾಜ್ಯ ಮತ್ತು ಜಿಲ್ಲಾ ಮಟ್ಟದ ಗೆಜೆಟಿಯರ್‌ಗಳು ಗ್ರಾಮೀಣ ಪ್ರದೇಶದ ಮೇಲೆ ಸಾಕಷ್ಟು ಮಾಹಿತಿ ನೀಡಿರುವುದರಿಂದ ಅವುಗಳಲ್ಲಿಯೂ ಕೂಲಿಕಾರರ ಬಗ್ಗೆ ಸಾಕಷ್ಟು ಮಾಹಿತಿ ದೊರೆಯುತ್ತದೆ. ಸ್ವಾತಂತ್ರ್ಯ ಚಳುವಳಿಯ ಅಂಗವಾಗಿ ಸ್ಥಳೀಯರ ಸಮಸ್ಯೆಗಳನ್ನು ಅಭ್ಯಾಸ ಮಾಡಿದಾಗ ಕೂಲಿಕಾರರ ಮೇಲೂ ಅಭ್ಯಾಸಗಳು ನಡೆದವು. ಇಲ್ಲಿ ಮುಜುಮುದಾರ (೧೯೪೭), ದೇಸಾಯಿ (೧೯೫೧), ಎಲ್ವಿನ್ (೧೯೫೫) ಮುಂತಾದ ಭಾರತೀಯರ ಹಾಗೂ ವಿದೇಶಿಯರ ಸಂಶೋಧನೆಗಳನ್ನು ಹೆಸರಿಸಬಹುದು.

ಭಾರತ ಸ್ವಾತಂತ್ರ್ಯವಾದ ನಂತರ ಕಲ್ಯಾಣ ರಾಜ್ಯದ ಅನುಕೂಲತೆಗಳನ್ನು ಜನಸಾಮಾನ್ಯರಿಗೆ ತಲುಪುವಂತೆ ಮಾಡಲೂ ಸಂಶೋಧನೆ ನಡೆದಾಗ ಕೂಲಿಕಾರರನ್ನೂ ಅಭ್ಯಾಸ ಮಾಡಲಾಯಿತು. ಯೋಜನಾ ಆಯೋಗ, ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ, ಸಾಮಾಜಿಕ ಶಾಸ್ತ್ರೀಯ ಸಂಶೋಧನಾ ಪರಿಷತ್ತು ಮುಂತಾದ ಸಂಸ್ಥೆಗಳಿಂದ ಧನ ಸಹಾಯ ಪಡೆದು ಅನೇಕರು ಅಭ್ಯಾಸ ಪ್ರಾರಂಭಿಸಿದರು. ಇವರಲ್ಲಿ ದುಬೆ (೧೯೫೮), ಈಶ್ವರನ್ (೧೯೬೬, ೧೯೬೭), ವಿದ್ಯಾರ್ಥಿ (೧೯೬೭), ಬೇಯ್ಲಿ (೧೯೫೮), ಮೇಯರ್ (೧೯೬೦), ಬೀತೆ (೧೯೬೯), ಮುಜಾಮ್‌ದಾರ್ (೧೯೬೧), ಶ್ರೀನಿವಾಸ್ (೧೯೬೨), ಬೀಲ್ಸ್ (೧೯೬೨), ಮೆಕ್ಕಿಂ ಮೇರಿಯಟ್ (೧೯೬೨), ಪಾರ್ವತಮ್ಮ (೧೯೭೧) ಮುಂತಾದವರು ಪ್ರಮುಖರು. ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಶೈಕ್ಷಣಿಕ ಮತ್ತು ವೈಚಾರಿಕ ಸ್ವಾತಂತ್ರ್ಯವೂ ಲಭಿಸಿದ್ದರಿಂದ ಸ್ಥಳೀಯ ತಜ್ಞರಿಂದ ಇಂತಹ ಅನೇಕ ಅಭ್ಯಾಸಗಳು ಹೊರಬಂದವು. ಇದರಿಂದ ಗ್ರಾಮೀಣ ಸಾಮಾಜಿಕ ವಿಚಾರಗಳಂತೆ ಗ್ರಾಮೀಣ ಶ್ರಮಿಕರ ಮೇಲಿನ ಅಭ್ಯಾಸಗಳೂ ನಡೆದವು. ಸರಕಾರ ಬಡವರಿಗೆ, ಭೂರಹಿತ ಕೂಲಿಕಾರರಿಗೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ನಿಮ್ನ ವರ್ಗದ ಗುಂಪುಗಳಿಗೆ ಆದ್ಯತೆ ಮತ್ತು ವಿಶೇಷ ಸೌಲಭ್ಯಗಳನ್ನು ನೀಡಲು ಪ್ರಾರಂಭಿಸಿದ್ದರಿಂದ ಮತ್ತೆ ಈಗ ಗ್ರಾಮೀಣ ಕೂಲಿಕಾರರ ಅಭ್ಯಾಸಕ್ಕೆ ಪ್ರಾಮುಖ್ಯತೆ ಬಂದಂತಾಗಿದೆ.

೧೯೭೦ರ ದಶಕದಲ್ಲಿ ಸರಕಾರ ೨೦ ಅಂಶಗಳ ಕಾರ್ಯಕ್ರಮ ಜಾರಿಗೆ ತಂದಾಗ ಅನೇಕ ಬಗೆಯ ಕಾನೂನುಗಳನ್ನು ತಂದಿತು. ಉದಾಹರಣೆಗೆ ೧೯೭೮ರಲ್ಲಿ ಜೀತ ಮತ್ತು ಗ್ರಾಮೀಣ ಬಡವರ ಋಣ ಬಾಧೆಯನ್ನು ನಿವಾರಣೆ ಮಾಡಲು ಸುಗ್ರೀವಾಜ್ಞೆ ಹೊರಡಿಸಿತ್ತು. ಇದರಿಂದ ಜೀತಕ್ಕೆ ದುಡಿಸಿಕೊಳ್ಳುವವರಿಗೆ ದಂಡ ಅಥವಾ ಸೆರೆವಾಸ ಅಥವಾ ಈ ಎರಡೂ ಶಿಕ್ಷೆ ವಿಧಿಸಿ ದಂಡಿಸುವ ಕಾನೂನು ಜಾರಿಗೆ ಬಂದಿತು. ಆದರೆ, ಇದನ್ನು ತಕ್ಷಣದಿಂದ ಜಾರಿಗೆ ತಂದಿದ್ದರಿಂದ, ಅನೇಕರಿಗೆ ಮುಖ್ಯವಾಗಿ ರೈತರಿಗೆ ಮತ್ತು ಭೂರಹಿತ ಕೂಲಿಕಾರರಿಗೆ, ಅನೇಕ ಸಮಸ್ಯೆಗಳು ಬಂದವು. ಏಕೆಂದರೆ ಒಂದೆಡೆ, ಅನೇಕರಿಗೆ, ವಿಶೇಷವಾಗಿ ನಗರ ಹಿನ್ನೆಲೆಯಿಂದ ಬಂದವರಿಗೆ, ಈ ಜೀತ ಪದ್ಧತಿಯ ಬಗ್ಗೆ ಹೆಚ್ಚು ತಿಳಿದಿರಲಿಲ್ಲ. ಸಂಬಂಧಪಟ್ಟ ಸಾಹಿತ್ಯ ಸಮೀಕ್ಷೆ ಮಾಡಿದಾಗ ಸಿಕ್ಕಿದ್ದು ಸ್ವಲ್ಪ; ಅದೂ ತಪ್ಪು ತಪ್ಪು. ಜೊತೆಗೆ ಈ ಕಾನೂನನ್ನು ಬಿಗಿಯಾಗಿ ಜಾರಿಗೊಳಿಸಿದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ಗೊಂದಲವೇ ಏರ್ಪಟ್ಟಿತು.

ಎರಡನೆಯದಾಗಿ, ಕೆಲವು ಕಿಡಿಗೇಡಿಗಳು ರಾಜಕೀಯ ಉದ್ದೇಶದಿಂದ, ಗ್ರಾಮೀಣ ಜನಸಾಮಾನ್ಯರಲ್ಲಿ ಈ ಕಾನೂನಿನ ಬಗ್ಗೆ ಅಪಪ್ರಚಾರ ಮಾಡಿದ್ದರು. ಮೂರನೆಯದಾಗಿ, ಕೆಲವು ಅಧಿಕಾರಿಗಳು ಈ ಕಾನೂನು ಜಾರಿಗೊಳಿಸುವಲ್ಲಿ ಅತೀ ಉತ್ಸುಕತೆ ತೋರಿದ್ದರಿಂದಾಗಿ ಕೇವಲ ಜಮೀನ್ದಾರರಿಗೆ ಮಾತ್ರವಲ್ಲ ಶ್ರಮಿಕರಿಗೂ

ಸಮಸ್ಯೆಗಳು ಪ್ರಾರಂಭವಾದವು. ಭೂಮಾಲಿಕರು ಕಾನೂನಿಗೆ ಹೆದರಿ ತಮ್ಮಲ್ಲಿದ್ದ ಎಲ್ಲಾ ಬಗೆಯ ಆಳುಗಳನ್ನು ಕೆಲಸ ಬಿಡಿಸಿ ಕಳುಹಿಸಿಬಿಟ್ಟರು. ಇದರಿಂದ ಒಂದು ಕಡೆ ಹೊಲಕಣದಲ್ಲಿ ಕೆಲಸ ಮಾಡುವವರು ಇಲ್ಲದೆ ರೈತರ ಕೆಲಸ ಕೆಟ್ಟರೆ, ತಮ್ಮ ಆಶ್ರಯದಾತರಿಲ್ಲದೆ ಕೂಲಿಕಾರರು ಜೀವನ ಮಾಡುವುದು ಕಷ್ಟವಾಯಿತು. ಹೊಲದಲ್ಲಿ ದುಡಿಯುವುದು ಬಿಟ್ಟರೆ ಅವರಿಗೆ ಮತ್ತಾವ ಪರಿಣತೆಯೂ ಇರಲಿಲ್ಲ ಮತ್ತು ತಮ್ಮ ಜಮೀನ್ದಾರರನ್ನು ಬಿಟ್ಟರೆ ಮತ್ತೆ ಯಾರ ಸಂಪರ್ಕ, ಬೆಂಬಲ ಅವರಿಗೆ ಇರಲಿಲ್ಲ. ಇಂತಹ ಪರಿಸ್ಥಿತಿ ನಿರ್ಮಾಣವಾದಾಗ ಕೆಲವರು ಭಯಗೊಂಡು ಮಾನಸಿಕವಾಗಿ ತೊಂದರೆಗೀಡಾದರು. ಇದೆಲ್ಲದ್ದಕ್ಕೂ ಈ ಕಾನೂನನ್ನು ರೂಪಿಸಿದವರಿಗೆ, ಜಾರಿಗೊಳಿಸಿದವರಿಗೆ ಗ್ರಾಮೀಣ ಪರಿಸ್ಥಿತಿಯ ಪೂರ್ಣ ಮಾಹಿತಿ ಮತ್ತು ಮುಂದೆ ಬರಬಹುದಾದ ಸಮಸ್ಯೆಗಳ ಕಲ್ಪನೆ ಇಲ್ಲದಿರುವುದೇ ಕಾರಣವಿದ್ದಿತು.

ಇಂತಹ ಪರಿಸ್ಥಿತಿ ನಿರ್ಮಾಣವಾದುದಕ್ಕೆ ಭಾರತದ ಸಾಮಾಜಿಕ ಶಾಸ್ತ್ರಜ್ಞರೂ ಸ್ವಲ್ಪ ಮಟ್ಟಿಗೆ ಕಾರಣರಿದ್ದಾರೆ. ಏಕೆಂದರೆ ಅವರು ದೇಶದಲ್ಲಿ ಪ್ರಚಲಿತವಿರುವ ಶ್ರಮಿಕರ ಪ್ರಕಾರಗಳ ಹಾಗೂ ಗುಂಪುಗಳ ರಚನೆಯ, ಕಾರ್ಯದ ಹಾಗೂ ಪ್ರಾದೇಶಿಕ ಭಿನ್ನತೆಯ ಬಗ್ಗೆ ಒಂದು ಸಮಗ್ರವಾದ ಚಿತ್ರ ನೀಡಿರಲಿಲ್ಲ. ಒಂದು ವಿಧದಲ್ಲಿ ಇದರಲ್ಲಿ ಅವರದೂ ತಪ್ಪಿರಲಿಲ್ಲವೆನ್ನಬೇಕು. ಏಕೆಂದರೆ ಭಾರತದ ಸಾಮಾಜಿಕ ಪರಿಸ್ಥಿತಿಗಳು ಮತ್ತು ಸಮಸ್ಯೆಗಳು ಅನೇಕ. ಗ್ರಾಮೀಣ ಶ್ರಮಿಕರ ಗುಂಪುಗಳನ್ನು ನಿಯಂತ್ರಿಸಲು ಇದ್ದ ರೂಢಿ ಪದ್ಧತಿಗಳೂ ಅನೇಕ. ಇವೆಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು ಈ ಪ್ರಬಂಧದಲ್ಲಿ ಗ್ರಾಮೀಣ ಕರ್ನಾಟಕದ ಶ್ರಮಿಕರ ಗುಂಪುಗಳ ರಚನೆ, ಕಾರ್ಯ, ಅವರ ಮತ್ತು ಮಾಲಿಕರ ನಡುವಣ ಸಂಬಂಧಗಳ, ಹಕ್ಕುಗಳ, ಕರ್ತವ್ಯಗಳ ಬಗ್ಗೆ ವಿವರಿಸಿಲಾಗಿದೆ. ಈ ಮಾಹಿತಿಯಿಂದ ಕರ್ನಾಟಕದಲ್ಲಿ ಹಾಗೂ ಇತರೆಡೆ ಪ್ರಚಲಿತವಿರುವ ಶ್ರಮಿಕ ಗುಂಪುಗಳ ಒಂದು ತುಲನಾತ್ಮಕ ಚಿತ್ರ ಪಡೆಯಲು ಅನುಕೂಲವಾಗುತ್ತದೆ ಎಂದು ಭಾವಿಸಲಾಗಿದೆ.

ಒಂದೇ ಮಾತಿನಲ್ಲಿ ಹೇಳುವುದಾದರೆ ಜೀತ ಪದ್ಧತಿಯೂ ಸೇರಿದಂತೆ ಎಲ್ಲಾ ಶ್ರಮಿಕ ಸಂಬಂಧಗಳು ಒಂದಲ್ಲ ಒಂದು ಬಗೆಯ 'ಒಡಂಬಡಿಕೆಗಳು' ಎಂದು ಹೇಳಬಹುದು. ಏಕೆಂದರೆ ಶ್ರಮಿಕನಿಗೆ ಅಥವಾ ಅವನ ಹಿರಿಯರಿಗೆ ಈ ಒಡಂಬಡಿಕೆ ಮಾಡಿಕೊಳ್ಳಲು ಅಥವಾ ಅದರಿಂದ ಹೊರಬರಲು ಸ್ವಾತಂತ್ರ್ಯವಿದ್ದಿತು. ಈ ಹಕ್ಕನ್ನು ಒಂದು ಅಂಶವಾಗಿ ತೆಗೆದುಕೊಂಡು ಗ್ರಾಮಾಂತರ ಶ್ರಮಿಕರನ್ನು ಸಾಂಪ್ರದಾಯಕವಾಗಿ: (೧) ತಮಗೆ ಬೇಕಾದವರಿಗೆ ದುಡಿಯಲು ಸ್ವತಂತ್ರರಾದವರು ಮತ್ತು (೨) ಜೀತ ದುಡಿಯುವವರು ಎಂದು ಎರಡು ಬಗೆ ಮಾಡಬಹುದು. ಮೊದಲ ಬಗೆಯವರು ಬೇಕೆಂದಾಗ ತಾವು ತೆಗೆದುಕೊಂಡ ಹಣವನ್ನು ಭೂಮಾಲಿಕರಿಗೆ ಹಿಂತಿರುಗಿಸಿ, ತಾವು ಮಾಡಿಕೊಂಡ ಒಡಂಬಡಿಕೆಯಿಂದ ಹೊರ ಬರಬಹುದು. ಆದರೆ ಜೀತದಾಳಿಗೆ ಇದು ಸಾಧ್ಯವಿಲ್ಲ. ಇವನು ಕೂಡ ಈ ಒಡಂಬಡಿಕೆ

ಮಾಡಿಕೊಳ್ಳುವುದಕ್ಕೆ ಮುಂಚೆ ಸ್ವತಂತ್ರನಿದ್ದ ಮತ್ತು ತಾನು ತೆಗೆದುಕೊಂಡ ಹಣವನ್ನು ವಾಪಾಸು ಮಾಡಿದ ನಂತರ ಮತ್ತೆ ಸ್ವತಂತ್ರನಾಗಬಲ್ಲ. ಆದರೆ ಒಡಂಬಡಿಕೆಯ ನಿಯಮಗಳು ಅವನ ವಿರುದ್ಧ ಇವೆಯಾದ್ದರಿಂದ ಅವನು ಜೀತ ಪದ್ಧತಿಯ ಕಪಿಮುಷ್ಟಿಯಿಂದ ಹೊರಬರಲು ಸಾಧ್ಯವಾಗುವುದಿಲ್ಲ. ಆದರೆ ಒಬ್ಬ ದಯಾಳು ಯಜಮಾನ ಅವನನ್ನು ಋಣ ಮುಕ್ತನನ್ನಾಗಿ ಮಾಡಬಹುದು. ಈಗ ಸರಕಾರವೇ ಈ ಕೆಲಸ ಮಾಡಿದೆ.

ಇಂದು ಗ್ರಾಮೀಣ ಕರ್ನಾಟಕದಲ್ಲಿ, ವ್ಯವಸಾಯ ರಂಗದಲ್ಲಿ ದುಡಿಯುವ ಶ್ರಮಿಕರನ್ನು ಕೂಲಿ ಆಳು, ಸಂಬಳದಾಳು, ಜೀತದಾಳು, ಮುಯ್ಯಿ ಆಳು, ಕಟ್ಟಾಳು ಮುಂತಾದ ಹೆಸರಿನಿಂದ ಕರೆಯಲಾಗಿದೆ. ಆಂಗ್ಲ ಭಾಷೆಯಲ್ಲಿ ಕೂಲಿ ಆಳು, ದಿನಗೂಲಿ ಆಳು, ಒಡಂಬಡಿಕೆಯ ಮೇಲೆ ಕೆಲಸಕ್ಕೆ ಸೇರಿಕೊಂಡ ಆಳು, ಮುಯ್ಯಿ ಆಳು, ಕುಟುಂಬಕ್ಕೆ ಸಂಬಂಧಿಸಿದ ಆಳು, ಅರೆಕಾಲಿಕ ಆಳು, ಭೂರಹಿತ ಆಳು, ಜೀತದಾಳು, ಗುಲಾಮ – ಹೀಗೆ ಅನೇಕ ಪದಗಳಿದ್ದು ಇವು ಇನ್ನೂ ಸಾಕಷ್ಟು ಗೊಂದಲ ತಂದಿವೆ. ಆದರೆ ಕೂಲಂಕಷವಾಗಿ ಅಭ್ಯಾಸ ಮಾಡಿದರೆ ಕೂಲಿಕಾರರ ಇಷ್ಟೊಂದು ಬಗೆಗಳಿಲ್ಲವೆಂದು ತಿಳಿಯುತ್ತದೆ. ಅಲ್ಲದೆ ಈ ಪದಗಳು ಭಿನ್ನತೆಗಿಂತ ಪ್ರಾದೇಶಿಕತೆಯನ್ನು ಹೆಚ್ಚು ಬಿಂಬಿಸುವುದು ಕಂಡುಬರುತ್ತದೆ.

ನಾನು ಅಭ್ಯಾಸ ಮಾಡಿದ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ (೧) ಸಾಂಪ್ರದಾಯಕವಾಗಿ ಬಂದ ವಾರ್ಷಿಕ ಆಧಾರದ ಮೇಲೆ ದುಡಿಯುವ ಸಂಬಳದ ಆಳುಗಳು, (೨) ಕುಟುಂಬಕ್ಕೆ ಸಂಬಂಧಿಸಿದ ಆಯದ ಆಳುಗಳು, (೩) ಮುಯ್ಯಿ ಆಳುಗಳು ಮತ್ತು (೪) ದಿನಗೂಲಿ ಆಳುಗಳು – ಎಂಬ ನಾಲ್ಕು ಗುಂಪುಗಳಿರುವುದು ತಿಳಿದು ಬರುತ್ತದೆ. ಎರಡನೆಯ ಮತ್ತು ಮೂರನೆಯ ಬಗೆಯ ಆಳುಗಳಿಗೆ ಸಂಭಾವನೆ ಎಂದು ನಗದು ಏನೂ ಸಿಗುವುದಿಲ್ಲ. ಆಳುಗಳ ಅನ್ನ ಆಹಾರ ಹಾಗೂ ರಕ್ಷಣೆಯ ಭಾರ ಮಾತ್ರ ಮಾಲಿಕರ ಮೇಲಿರುತ್ತದೆ. ಹೀಗಾಗಿ ಇವರಿಬ್ಬರ ನಡುವೆ ಒಂದು ಬಗೆಯ ತಂದೆ ಮಕ್ಕಳ, ಯಜಮಾನ-ಆಶ್ರಿತರ ಬಗೆಯ ಸಂಬಂಧವಿರುತ್ತದೆ. ಕೆಲಸವಿದ್ದರೆ ಎಲ್ಲರೂ ಕೂಡಿ ದುಡಿಯುತ್ತಾರೆ, ಇಲ್ಲದಿದ್ದರೆ ಎಲ್ಲರೂ ಕೂಡಿ ಕಾಲಹರಣ ಮಾಡುತ್ತಾರೆ. ಎಲ್ಲರೂ ಜೊತೆಗೆ ಉಣ್ಣುತ್ತಾರೆ. ಮೂರನೆಯ ಬಗೆಯ ಆಳು ತಾನು ಅಥವಾ ತನ್ನ ಯಜಮಾನ ಪಡೆದ ಶ್ರಮವನ್ನು ಅದೇ ರೂಪದಲ್ಲಿ ಹಿಂತಿರುಗಿಸಲು ಬಂದವನು. ಅವನನ್ನು ದುಡಿಸಿಕೊಳ್ಳುವವರು ಇವನು ತಮ್ಮಲ್ಲಿ ದುಡಿಯುವಷ್ಟು ದಿನ ಊಟ, ವಸತಿ, ರಕ್ಷಣೆ ನೀಡುತ್ತಾರೆ.

ಈ ನಾಲ್ಕೂ ಬಗೆಯ ಕೂಲಿಕಾರರೂ ಬಂಧನದಿಂದ ಮುಕ್ತರಾದವರು, ಇತರಿಗಾಗಿ ದುಡಿಯುವವರು. ಈ ಎಲ್ಲಾ ಬಗೆಯ ಶ್ರಮಿಕರ ಮತ್ತು ಅವರನ್ನು ದುಡಿಸಿಕೊಳ್ಳುವವರ ಸಂಬಂಧ ಅವರು ವಾಸವಾಗಿರುವ ನಾಡು ಮತ್ತು ಸೇರಿದ ಧರ್ಮ, ಜಾತಿ ಅಥವಾ ಆಯ ಗುಂಪಿನ ಒಡಂಬಡಿಕೆಯಂತಿದ್ದು, ಇದು ಅವರ ಹಕ್ಕು, ಕರ್ತವ್ಯ ಹಾಗೂ

ಧರ್ಮವಾಗಿರುತ್ತದೆ. ಹೀಗಾಗಿ ಒಬ್ಬರು ಇನ್ನೊಬ್ಬರ ರಕ್ಷಣೆ, ಕಲ್ಯಾಣ, ನೆರವು, ಸಹಾಯ ನೀಡುವುದು – ಪಡೆಯುವುದು ಒಂದು ಸಂಪ್ರದಾಯವಾಗಿ ಬಂದಿರುತ್ತದೆ. ಇವರು ಹೀಗೆ ದುಡಿದುದಕ್ಕೆ ಇಂತಿಷ್ಟು ಎಂದು ಸಂಭಾವನೆ ಸಿಗುವುದಿಲ್ಲ; ಆದರೆ ಅವರ ಯಜಮಾನರೇ ಇವರ ಎಲ್ಲಾ ಅವಶ್ಯಕತೆಗಳನ್ನು ಪೂರೈಸುತ್ತಾರೆ.

ಹಿಂದೆ ಗ್ರಾಮಗಳಲ್ಲಿ ಪಾಳು ಭೂಮಿ ಯಥೇಚ್ಛವಾಗಿದ್ದಾಗ ವ್ಯವಸಾಯಗಾರರಾಗಬೇಕೆಂದು ಬಯಸಿದ ಕೆಲವು ಕುಟುಂಬಗಳು ಒಂದು ಫಲವತ್ತಾದ, ಸಮತಟ್ಟಾದ ಪ್ರದೇಶವನ್ನು ಆರಿಸಿಕೊಂಡು, ಅದರಲ್ಲಿಯ ಒಂದು ಎತ್ತರವಾದ ಜಾಗದಲ್ಲಿ ಮನೆಮಠ ಕಟ್ಟಿಕೊಂಡು, ಒಂದು ಊರನ್ನು ಹುಟ್ಟು ಹಾಕುತ್ತಿದ್ದರು. ಆಗ ಈ ವ್ಯವಸಾಯಗಾರರಿಗೆ ಅವರ ವೃತ್ತಿಯಲ್ಲಿ, ಸಮುದಾಯ ಜೀವನದಲ್ಲಿ ನೆರವಾಗಲು ಅನೇಕ ಕುಶಲಕಲಾ ಮತ್ತು ಸೇವಾ (ಜಾತಿ) ಗುಂಪುಗಳೂ ಬಂದು ನೆಲಸಿದರು. ಪರಸ್ಪರರು ಸದಾ ಮತ್ತು ತಕ್ಷಣ ನೆರವು ಪಡೆಯಲು ಒಡಂಬಡಿಕೆ ಮಾಡಿಕೊಂಡರು. ಇದೇ "ಆಯ ಪದ್ಧತಿ". ಹೀಗಾಗಿ ಕೆಲಸಗಾರರು ತಮ್ಮ ಆಯದ ಕುಳಗಳ ಕುಟುಂಬದ ಎಡಬಲದಲ್ಲೇ ವಾಸ ಮಾಡುವ ವ್ಯವಸ್ಥೆ ಮಾಡಿದರು ಮತ್ತು ಅವರಿಗೆ ಅವಶ್ಯಕವಾದ ಅನ್ನ ವಸತಿ, ದೈಹಿಕ, ನೈತಿಕ ಹಾಗೂ ಧಾರ್ಮಿಕ ಬೆಂಬಲ ಮತ್ತು ರಕ್ಷಣೆ ನೀಡುತ್ತಿದ್ದರು.

ಮೂಲದಲ್ಲಿ ವ್ಯವಸಾಯಗಾರರು ಆಹಾರ ಧಾನ್ಯಗಳನ್ನು ಮಾತ್ರ ಬೆಳೆಯುತ್ತಿದ್ದುದರಿಂದ ಎಲ್ಲರಿಗೂ ಸಾಕಷ್ಟು ಪ್ರಮಾಣದಲ್ಲಿ ಆಹಾರ ಸಿಗುತ್ತಿತ್ತು. ಹೀಗಾಗಿ ಮಾಲಿಕರಂತೆ ಆಶ್ರಿತರೂ ತಮಗೆ ಬೇಕಾದ ಅವಶ್ಯಕ ವಸ್ತುಗಳನ್ನು ಕುಟುಂಬದ ಉಗ್ರಾಣದಿಂದ ಪಡೆಯುತ್ತಿದ್ದರು. ಮನೆ ಮಕ್ಕಳಾದ ಇವರಿಗೆ ಪ್ರತಿಫಲವನ್ನು ಅಳತೆಮಾಡಿ ಕೊಡುವ ಪದ್ಧತಿ ಆಗ ಇರಲಿಲ್ಲ (ಈಶ್ವರನ್, ೧೯೬೬). ಹೀಗಾಗಿ ಅವರನ್ನು ಆಯದ ಮಕ್ಕಳು ಎಂದು ಕರೆದರು. ನಂತರ ವೃತ್ತಿಗುಂಪುಗಳು ಜಾತಿ ಗುಂಪುಗಳಾಗಿ ಪರಿಗಣಿಸಲ್ಪಟ್ಟಿದ್ದರಿಂದ ಆಯಾ ಜಾತಿಯ ಆಧಾರದ ಮೇಲೆ ರೈತ ಮಕ್ಕಳು, ಹೊಲೆ ಮಕ್ಕಳು ಮುಂತಾಗಿ ಕರೆಯಲ್ಪಟ್ಟರು. ಮುಂದೆ ರೈತರು ಆರ್ಥಿಕ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದಂದಿನಿಂದ ಶ್ರಮಕ್ಕೆ ತಕ್ಕಂತೆ ಅದರ ಬೆಲೆಯನ್ನು ಅಳತೆ ಮಾಡಿಕೊಡುವುದು (ಕಡ್ಡಾಯ) ಪ್ರಾರಂಭವಾಯಿತು.

ಆಯ ಕೂಟದ ನಿಯಮದಂತೆ (ವೈಜರ್ ೧೯೩೩, ಈಶ್ವರನ್ ೧೯೬೬) ಅದರ ಸದಸ್ಯರು ತಮ್ಮ ಆಯದ ಕುಳಗಳಿಗೆ ಮಾತ್ರ ಸೇವೆ, ನೆರವು ಮಾಡುತ್ತಿದ್ದರು. ತಮ್ಮ ವ್ಯವಸಾಯ ಕೆಲಸದಲ್ಲಿ ಮತ್ತು ಗೃಹಬಳಕೆಯಲ್ಲಿ ಬೇಕಾದ ಎಲ್ಲಾ ಸಲಕರಣೆಗಳನ್ನು ಮಾಡಿಕೊಡಲು ಆಯದ ಕುಳಗಳು ತಮ್ಮ ಬೇಡಿಕೆಯ ಜೊತೆಗೆ ಅದಕ್ಕೆ ಬೇಕಾದ ಮರ, ಮಣ್ಣು, ಕಬ್ಬಿಣ, ಚರ್ಮ ಮುಂತಾದ ಕಚ್ಚಾವಸ್ತುಗಳನ್ನೂ ಕೊಡುತ್ತಿದ್ದರು. ಹೀಗಾಗಿ ಅವರು ತಮ್ಮ ಕುಲ ಕೆಲಸ

ಮಾಡಿದರೆ ಅದು ತಮ್ಮ ಆಯದ ಕುಳಗಳಿಗೆ ಮಾತ್ರ ಮಾಡುತ್ತಿದ್ದರು. ಅವರು ಏನೂ ಕೆಲಸ ಮಾಡದಿದ್ದರೂ ಅವರಿಗೆ ಆಯ ಒಡಂಬಡಿಕೆಯಂತೆ ಅನ್ನ ವಸತಿಗಳು ಸಿಗುತ್ತಿದ್ದವು. ಮುಂದೆ ವ್ಯವಸಾಯಗಾರರು ವಾಣಿಜ್ಯ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದಾಗ ಆಯ ಒಡಂಬಡಿಕೆಯೊಳಗೆ ಬಾರದ ಕೆಲವು ಬಗೆಯ ಸಲಕರಣೆಗಳನ್ನು, ಸೇವೆಗಳನ್ನು ಮಾಡಲು ಇವರಲ್ಲೇ ಕೆಲವರು ಸ್ವತಂತ್ರರಾಗಿ ಬಂದು ಗ್ರಾಮದಲ್ಲಿ ಸೇರಿಕೊಂಡರು. ಇದರಿಂದ ವೃತ್ತಿಕೆಲಸಗಾರರಿಗೆ ಅವರ ಶ್ರಮಕ್ಕೆ ತಕ್ಕಂತೆ ಸಂಭಾವನೆ ನೀಡುವುದು ಪ್ರಾರಂಭವಾಯಿತು. ಉಳಿದ ವೇಳೆಯಲ್ಲಿ ಇವರೂ ಸಂಭಾವನೆ ಪಡೆದು ಇತರರಿಗೆ ದುಡಿಯಲು ಪ್ರಾರಂಭಿಸಿದರು. ಉದಾಹರಣೆಗೆ ವ್ಯವಸಾಯ ಕೆಲಸ ಅಂದರೆ ಕೊಯ್ಲು, ಕಣಸುಗ್ಗಿ, ತೂರುವುದು, ಕೇರುವುದು ಮಾಡುತ್ತಿದ್ದರು. ಈ ಕೆಲಸಗಳು ಹೆಚ್ಚು ಇದ್ದರೆ ಹೆಚ್ಚು ಶ್ರಮ ಮಾಡುತ್ತಿದ್ದರು. ಹೀಗಾಗಿ ಪೈರನ್ನು ಕೊಯ್ಲು ಮಾಡಿ ತಂದಾಗ ಒಂದು ಬಂಡಿ ಏರಿಗೆ ಇಂತಿಷ್ಟು ಎಂದು "ಬೆಂಕಿ" (ಬೆನಕನ) ಚೆವುಡು, ಧಾನ್ಯ ತೂರಿದಾಗ "ತನಿಗಾಳು" ಮಾಲಿಕನಿಗಾದರೆ, ಗಾಳಿಗೆ ಹಾರಿ ಅಥವಾ ಸಿಡಿದು ದೂರ ಹೊಟ್ಟಿನಲ್ಲಿ ಬಿದ್ದ ಕಾಳು "ಮುಂಕಟ್ಟು", ಸಂಭಾವನೆಯಾಗಿ ಆಯಗಾರನಿಗೆ ಸಿಗುತ್ತಿದ್ದವು.

ಧಾನ್ಯದ ರಾಶಿಯನ್ನು ಮನೆಗೆ ಸಾಗಿಸಿದ ನಂತರ ತಳದಲ್ಲಿ ನೆಲದ ಮೇಲೆ ಉಳಿಯುವ ಕಾಳು "ತಳಗಾಳು", ಕೆಲವು ಬಗೆಯ ಆಯಗಾರರಿಗೆ ಹೋಗುತ್ತಿದ್ದವು. ಪದ್ಧತಿಯಂತೆ ರಾಶಿಯನ್ನು ಕೈಯಿಂದ, ಬರಲು ಅಥವಾ ಕಸಬರಿಕೆಯಿಂದ ಗುಡಿಸಿ ತೆಗೆಯದೆ ಕೇವಲ ಬಿದರಿನ ಮೊರದಿಂದ ತುಂಬಿಕೊಳ್ಳುತ್ತಿದ್ದರು. ರಾಶಿ ದೊಡ್ಡದಿದೆ ಎಂದರೆ ಆಯದಾಳುಗಳು ಹೆಚ್ಚು ಕೆಲಸ ಮಾಡಿದ್ದಾರೆಂದರ್ಥ. ಅದರಂತೆ ಅವರಿಗೆ ಹೆಚ್ಚು ಸಂಭಾವನೆ ಸಿಗುತ್ತದೆ.[೧]

ಇತರೆ ಆಯಗಾರರಲ್ಲಿ ಕುಶಲಕರ್ಮಿಗಳಾದ ಬಡಗಿ, ಕಮ್ಮಾರ, ಕುಂಬಾರ, ಚರ್ಮಕಾರ ಮುಂತಾದವರಿಗೆ ಕುಟುಂಬ ಹೊಂದಿದ ಎತ್ತುಗಳ ಸಂಖ್ಯೆಯ ಆಧಾರದ ಮೇಲೆ ಇಂತಿಷ್ಟು ಎಂದು, ಸೇವಾ ವೃತ್ತಿಯವರಿಗೆ ಅಂದರೆ ಅಗಸ, ಕ್ಷೌರಿಕ, ಪುರೋಹಿತರು ಮುಂತಾದವರಿಗೆ ಒಂದು ಮದುವೆಯಾದ ಜೊತೆಗೆ ಒಂದೊಂದು ಆಯ ಎಂದು ನೀಡುತ್ತಿದ್ದರು. ಇದರಲ್ಲಿ ಅವರ ಚಿಕ್ಕವರಾದ ಮಕ್ಕಳು ಸೇರುತ್ತಿದ್ದರು. ಮದುವೆಯ ವಯಸ್ಸಾದವರಿಗೆ, ವಿಧವೆ ವಿಧುರರಿಗೆ ಅದರ ಅರ್ಧ ಅಂದರೆ "ತುಂಡಾಯ", ಕೊಡುತ್ತಾರೆ. ಆಯದ ಒಡಂಬಡಿಕೆಯಂತೆ ಎಲ್ಲಾ ಆಯಗಾರರು ತಮ್ಮ ಆಯದ ಕುಳದ ಕಡೆಗಿನ ಕೆಲಸ ಮುಗಿಸಿದ ನಂತರ ಮಾತ್ರ ಉಳಿದವರ ಕೆಲಸ ಅಥವಾ ಸೇವೆ ಮಾಡಬೇಕೆಂಬ, ತಮ್ಮ ಮೂಲದ ಊರು ಬಿಟ್ಟು ಹೋಗಬಾರದು ಎಂಬ ಕಟ್ಟು, ಕಾನೂನು ಇತ್ತು. ಹೀಗಾಗಿ ಇವರನ್ನು "ಕಟ್ಟಾಳು" (ಕಟ್ಟು-ಆಳು) ಎಂದು ಕರೆಯಲಾಗಿದೆ (ಅಂಬೇಕರ್, ೧೯೭೪:೧೫).

ಇದೇ ರೀತಿ ಆಯದ ಕುಳಗಳು ತಮ್ಮ ಹೊಲಮನೆಗಳಲ್ಲಿ ಏನಾದರೂ ಕೆಲಸವಿದ್ದರೆ ಅದನ್ನು ಕಡ್ಡಾಯವಾಗಿ ತಮ್ಮ ಸಾಂಪ್ರದಾಯಕವಾಗಿ ಬಂದ ಈ ಕಟ್ಟಾಳುಗಳಿಗೇ ನೀಡಬೇಕು ಎಂಬ ಒಂದು ಕಟ್ಟು ಕೂಡಾ ಇದೆ. ಹೀಗಾಗಿ ಹಿಂದಕ್ಕೆ ಕೆಲಸ (ಅನ್ನ)ವಿಲ್ಲ ಎಂದು ಯಾವ ಭಾರತೀಯ (ಹಿಂದೂ) ಶ್ರಮಿಕನೂ, ಕೆಲಸಗಾರರಿಲ್ಲ ಎಂದು ಭೂಮಾಲಿಕನೂ ಕಷ್ಟ-ನಷ್ಟ ಅನುಭವಿಸುತ್ತಿರಲಿಲ್ಲ.

ಮುಯ್ಯಿ ಆಳುಗಳು ಅಂದರೆ ತಮ್ಮ ಅಥವಾ ತಮ್ಮ ಶ್ರಮಿಕರ ಶ್ರಮವನ್ನು ಸೇವೆಗೆ ಅಥವಾ ಆಹಾರ ಧಾನ್ಯಕ್ಕೆ ತಮ್ಮತಮ್ಮಲ್ಲೇ ವಿನಿಮಯ ಮಾಡಿಕೊಳ್ಳುವವರು. ಒಂದು ಗ್ರಾಮದಲ್ಲಿಯ ಬಡಗಿ, ಕಮ್ಮಾರ, ಕುಂಬಾರ, ಚರ್ಮಕಾರ, ನೇಕಾರ ಮುಂತಾದ ಕುಶಲಕಲಾ ಕೆಲಸಗಾರರು ಮತ್ತು ಕ್ಷೌರಿಕ, ಅಗಸ, ಹೂಗಾರ ಮುಂತಾದ ಸೇವಾ ವೃತ್ತಿಯವರು, ತಮ್ಮ ತಮ್ಮಲ್ಲಿ ಯಾರಿಗಾದರೂ ನೆರವು ಬೇಕಾದಾಗ ತಾವು ತಾವೇ ಇದನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಅಂದರೆ ಹೀಗೆ ನೆರವಾದಾಗ ಈ ಶ್ರಮವನ್ನು ಮುಯ್ಯಿ ಎಂದು ತಿಳಿಯುತ್ತಾರೆ ಮತ್ತು ಶ್ರಮದ ರೂಪದಲ್ಲೆ ಹಿಂತಿರುಗಿಸುತ್ತಾರೆ. ಏಕೆಂದರೆ ಅವರು ವ್ಯವಸಾಯಗಾರರಲ್ಲವಾದ್ದರಿಂದ ಮತ್ತು ಇವರಲ್ಲಿ ಆಹಾರ ಧಾನ್ಯ ಇರುವುದಿಲ್ಲವಾದ್ದರಿಂದ ಹೀಗೆ ಸಂಭಾವನೆ ನೀಡುತ್ತಾರೆ.

ಇದೇ ರೀತಿ ಹಿಂದೆ ವ್ಯವಸಾಯ ಕೇವಲ ಒಕ್ಕಲಿಗರ (ಜೀವನ) ವೃತ್ತಿಯಾಗಿದ್ದಾಗ ಕುಶಲ ಕಲಾ ಮತ್ತು ಸೇವಾ ವೃತ್ತಿಯವರು ತಮ್ಮ ಪರಿಣತೆಗೆ ಅನುಗುಣವಾಗಿ ಅವರಿಗೆ ನೆರವು ನೀಡಿ ತಮ್ಮ ಆಹಾರ ಮತ್ತಿತರ ಅವಶ್ಯಕತೆಯನ್ನು ನೀಗಿಸಿಕೊಳ್ಳುತ್ತಿದ್ದರು. ನಂತರ ವ್ಯವಸಾಯ ಒಂದು ಜೀವನ ವೃತ್ತಿಯಾದಾಗ ಇತರರೂ ಆಯದ ಒಕ್ಕಲಿನಲ್ಲಿ ಸ್ಥಾನ ಪಡೆದರು. ಈ ಸ್ಥಾನ ಸಿಗದವರು ಅಥವಾ ಅದರಿಂದ ಸಾಕಷ್ಟು ಆಹಾರ ಗಳಿಸದಾದವರು ತಾವೂ ವ್ಯವಸಾಯಗಾರರಾಗಬೇಕು ಎಂಬ ಹಂಬಲ ಹೊಂದಿ, ಆಗ ಊರಲ್ಲಿ ಯಥೇಚ್ಛವಾಗಿದ್ದ ಪಾಳು ಭೂಮಿಯನ್ನು ವಸಾಹತು ಸರಕಾರದಿಂದ ಪಡೆದು ಉಳಲು ಪ್ರಾರಂಭಿಸಿದರು. ಇದರಿಂದಾಗಿ ಅಲ್ಲಿಯವರೆಗೆ ಕೇವಲ ಹೊಲ ಉಳುವವರು ಮತ್ತು ಅವರಿಗೆ ನೆರವಾಗುವವರು ಎಂಬ ಎರಡೇ ಗುಂಪುಗಳಿದ್ದವರು ಅನೇಕ ವೃತ್ತಿ ಗುಂಪುಗಳಾದರು. ಹೊಲ ಉಳುವವರು ಮತ್ತೆ ದೊಡ್ಡ ಮತ್ತು ಸಣ್ಣ ಹಿಡುವಳಿದಾರರು ಎಂದಾದರೆ ಉಳಿದವರು ಅಲ್ಪಸ್ವಲ್ಪ ಹೊಲ ಹೊಂದಿದ ಕೂಲಿಕಾರರು ಮತ್ತು ಕೇವಲ ಕೂಲಿಯ ಮೇಲೆ ಜೀವನ ಮಾಡುವ ಶ್ರಮಿಕರು ಎಂದು ಎರಡು ಗುಂಪಾದರು. ಅಂದರೆ ಇಂದಿನ ಸಣ್ಣ ಹಿಡುವಳಿದಾರರು ಮೂಲತಃ ಕುಶಲ ಅಥವಾ ಸೇವಾ ವೃತ್ತಿ ಗುಂಪುಗಳಿಗೆ ಸೇರಿದವರಿದ್ದರು. ತಮ್ಮ ವ್ಯವಸಾಯ ಕೆಲಸ ಮುಗಿದ ನಂತರ ಇತರರಿಗೆ ಕೂಲಿ ಅಥವಾ ಮುಯ್ಯಿ ಆಧಾರದ ಮೇಲೆ ತಮ್ಮ ಶ್ರಮವನ್ನು ನೀಡತೊಡಗಿದರು. ಮುಯ್ಯಿ ತೆಗೆದುಕೊಂಡವರು ಅವರು ಗಂಡಸರು, ಹೆಂಗಸರು,

ತರುಣರು ಹೀಗೆ ಯಾರೇ ಇರಲಿ ತಾವು ತೆಗೆದುಕೊಂಡ ಸೇವೆಯ ಆಧಾರದ ಮೇಲೆ ಅದನ್ನು ವಾಪಾಸು ಮಾಡುತ್ತಿದ್ದರು. ಇದು ಅತ್ಯಂತ ಅವಶ್ಯಕವಿತ್ತು. ಒಕ್ಕಲಿಗರು ಪ್ರಕೃತಿಯ ಮೇಲೆ ಪೂರ್ಣವಾಗಿ ಅವಲಂಬಿಗಳಿದ್ದು ಸಾಮಾನ್ಯವಾಗಿ ಬಿತ್ತನೆ, ಕೊಯ್ಲು, ಸುಗ್ಗಿ ಮುಂತಾದ ಕಾಲದಲ್ಲಿ ಅವರ ಮೇಲೆ ಕೆಲಸದ ಒತ್ತಡವಿರುತ್ತದೆ. ಜೊತೆಗೆ ಆಗ ಅವರಿಗೆ ಬೇಕಾದ ಶ್ರಮವನ್ನು ಧಾನ್ಯ ಅಥವಾ ಹಣ ಕೊಟ್ಟು ಪಡೆಯಲು ಅವರಿಗೆ ಅನುಕೂಲತೆ ಇರುವುದಿಲ್ಲ. ಹೀಗಾಗಿ ಹೊಲಮನೆಕಣಗಳಲ್ಲಿ ಅಕ್ಕಪಕ್ಕದ ಸಣ್ಣ ಹಿಡುವಳಿದಾರರು ಮುಯ್ಯಿ ಆಧಾರದ ಮೇಲೆ ಹೀಗೆ ಒಬ್ಬರಿಗೊಬ್ಬರು ನೆರವಾಗುತ್ತಾರೆ. ಒಂದೇ ವಂಶಕ್ಕೆ ಸೇರಿದ್ದರೆ, ಆತ್ಮೀಯರಿದ್ದರೆ ಕೂಡಾಡಿಯೂ ಈ ಕೆಲಸ ಮಾಡುತ್ತಾರೆ.

ಒಂದು ವಿಧದಲ್ಲಿ ಹೇಳುವುದಾದರೆ ಭಾರತಕ್ಕೆ ವ್ಯವಸಾಯಗಾರರಿಗೆ ಕೂಲಿಯಂತೆ ದುಡಿಯುವುದು ಹೊಸದು; ಬಹುಶಃ ಆಂಗ್ಲರ ವಸಾಹತು ಆಡಳಿತ ಆರಂಭವಾದಂದಿನಿಂದ ಅಸ್ತಿತ್ವಕ್ಕೆ ಬಂದದ್ದು - ಎಂದು ಹೇಳಬಹುದು.[೨]

ಅಂದಿನಿಂದ ಭಾರತದ ಗ್ರಾಮೀಣ ಪ್ರದೇಶದಲ್ಲಿ ಜಮೀನ್ದಾರರ ಮತ್ತು ಶ್ರಮಿಕರ ನಡುವಣ ಸಂಬಂಧಗಳು ಬದಲಾಗಲು ಪ್ರಾರಂಭಿಸಿದವು ಎನ್ನಬಹುದು. ಏಕೆಂದರೆ ಅಲ್ಲಿಯವರೆಗೆ ಕೇವಲ ತಮ್ಮ ಸ್ಥಳೀಯ ಆಶ್ರಯದಾತರಿಗೆ ಅದರಲ್ಲೂ ಅವಶ್ಯಕ ಆಹಾರ ಧಾನ್ಯಕ್ಕೆ ಹಾಗೂ ರಕ್ಷಣೆಗೆ ದುಡಿಯುತ್ತಿದ್ದ ಭೂರಹಿತ ಹಾಗೂ ಬಡ ಕಾರ್ಮಿಕರಿಗೆ ಇದರಿಂದ ಅನ್ನಕ್ಕೆ ಹೊಸದೊಂದು ಮಾರ್ಗವಾಯಿತು.

ಜೊತೆಗೆ ಮೊಟ್ಟ ಮೊದಲ ಬಾರಿಗೆ ಶ್ರಮಿಕರು, ಪ್ರಾದೇಶಿಕವಾಗಿ ವಲಸೆ ಅಥವಾ ಗುಳೆ ಹೋಗುವುದು ಪ್ರಾರಂಭವಾಯಿತು. ಹೀಗೆ ಸಾಂಪ್ರದಾಯಕವಾಗಿ ಬಂದ ಸಂಬಂಧ ಹಾಗೂ ಒಡಂಬಡಿಕೆಯಲ್ಲಿ ದುಡಿಯುವುದು, ಅನ್ನ ಗಳಿಸುವುದು ಅವರಲ್ಲಿ ಮತ್ತು ತಮ್ಮ ಊರಲ್ಲಿ ಇತರೆ ಜಾತಿ ಹಾಗೂ ವೃತ್ತಿ ಗುಂಪುಗಳ ನಡುವಿನ ಎಂದು ಹೊಸ ಬಗೆಯ ಸಂಬಂಧಗಳನ್ನು ತಂದಿತು. ಜೊತೆಗೆ ಈ ವೇಳೆಗೆ ಗ್ರಾಮಸ್ಥರೂ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದ್ದು ಅಲ್ಲಿಯ ಹೊಸ ಒಡಂಬಡಿಕೆಯಂತೆ ದುಡಿಯಲು ಶ್ರಮಿಕರು ಬೇಕಾಗಿದ್ದರು. ಈ ಅವಶ್ಯಕತೆಯನ್ನು ಇಲ್ಲಿಗೆ ಗುಳೆ ಬಂದ ಕೆಲಸಗಾರರು ತುಂಬಿದರು. ಇದರಿಂದ ಪುಕ್ಕಟ್ಟೆ ಅಥವಾ ಕೇವಲ ಅನ್ನ ರಕ್ಷಣೆಗೆ ಮತ್ತು ಮುಯ್ಯಿ ರೂಪದಲ್ಲಿ ಶ್ರಮ ವಿನಿಮಯ ಮಾಡಿಕೊಳ್ಳುವುದು ಬದಲಾದ್ದರಿಂದ ಕೇವಲ ಸಾಮಾಜಿಕ ಸಂಬಂಧ ತರುವ ಸಾಧನವಾಗಿದ್ದ ಶ್ರಮ ನಂತರ ಒಂದು ವಾಣಿಜ್ಯ ಸಾಧನವಾಗಿ ಪರಿಣಮಿಸಿತು.

ಹಣಕ್ಕೆ ಶ್ರಮವನ್ನು ಮಾರಿಕೊಳ್ಳವವರನ್ನು : (೧) ದಿನಗೂಲಿಯ ಆಳುಗಳು, (೨) ವಾರ, (೩) ತಿಂಗಳ ಮತ್ತು (೪) ವಾರ್ಷಿಕ ಅವಧಿಯ ಆಳುಗಳು - ಎಂದು ನಾಲ್ಕು ಬಗೆ ಮಾಡಬಹುದು. ಕೂಲಿಗಾಗಿ ಕೆಲಸ ಮಾಡುವವರು ಎಂದರೆ, ನಗದು ಸಂಭಾವನೆಗೆ

ದುಡಿಯುವವರು. ಈ ಕೆಲಸಗಾರರು ದಿನಕ್ಕೆ ಇಂತಿಷ್ಟು ಕೂಲಿಗೆ ಎಂದು ಒಂದು ನಿರ್ದಿಷ್ಟ ಕಾಲಾವಧಿಗೆ ಕೆಲಸ ಮಾಡಲು ನೇಮಕಗೊಂಡವರು. ಅವರ ಕೂಲಿ ಅಥವಾ ಅದರ ಕೆಲವಾಂಶವನ್ನು ಅಂದು ಬೆಳಿಗ್ಗೆ ಅಥವಾ ದಿನದ ಕೆಲಸ ಮುಗಿದ ಮೇಲೆ ಅವರಿಗೆ ಕೊಡಲಾಗುತ್ತಿತ್ತು. ವಾರ ಅಥವಾ ತಿಂಗಳ ಲೆಕ್ಕದಲ್ಲಿ ದುಡಿಯುವವರು ಆ ಅವಧಿಯಲ್ಲಿ ಒಮ್ಮೆ ತಮ್ಮ ಕೂಲಿ ಹಣವನ್ನು ಪಡೆದುಕೊಳ್ಳುತ್ತಾರೆ. ಇದರಿಂದ ಅವರಿಗೆ ಹಣ ಉಳಿತಾಯ ಮಾಡಲು ಅನುಕೂಲವಾಗುತ್ತದೆ. ಕೆಲವೊಮ್ಮೆ ಹಣದ ಅಡಚಣೆ ಇರುವ ಶ್ರಮಿಕನೊಬ್ಬ ಮುಂದೆ ಸುಗ್ಗಿಯಲ್ಲಿ ದುಡಿದು ತೀರಿಸುತ್ತೇನೆ ಎಂದು ಭೂಮಾಲಿಕರಿಗೆ ಹೇಳಿಕೊಂಡು ಮುಂಗಡವಾಗಿ ಹಣ ಪಡೆಯಬಹುದು. ಕೊಯ್ಲು, ಬಿತ್ತನೆ, ಸುಗ್ಗಿಯಲ್ಲಿ ಹೆಚ್ಚು ಜನ ಶ್ರಮಿಕರ ಅವಶ್ಯಕತೆ ಇರುವುದರಿಂದ ಭೂಮಾಲಿಕರೇ ಹೀಗೆ ಹಣ ಮುಂಗಡ ಕೊಡಲೊಪ್ಪುತ್ತಿದ್ದರು. ಆಗಲೂ ಅವನ ಸ್ಥಾನ ದಿನಗೂಲಿ ನೌಕರರಂತಿರುತ್ತದೆ. ಒಂದೇ ಬದಲಾವಣೆ ಎಂದರೆ ಇಲ್ಲಿ ಭೂಮಾಲಿಕ ಮತ್ತು ಕೂಲಿಕಾರ ಇಬ್ಬರಿಗೂ ಕೆಲವು ದಿನದ ಮಟ್ಟಿಗಾದರೂ ದುಡಿಯುವ ಕೈಗೇ ಮತ್ತು ಅನ್ನಕ್ಕೆ ಅಡಚಣೆ ಇಲ್ಲದಂತಾಗುತ್ತದೆ. ಜೊತೆಗೆ ಕೂಲಿಕಾರ ವಾರ ಅಥವಾ ತಿಂಗಳುಗಳವರೆಗೆ ಒಬ್ಬರಿಗೆ ದುಡಿಯುವುದರಿಂದ ಅವನಿಗೆ ತಾನು ಮಾಡುವ ಕೆಲಸದ ಬಗ್ಗೆ ಸಾಕಷ್ಟು ಮಾಹಿತಿ, ಪರಿಣತೆ ಇರುತ್ತದೆ ಮತ್ತು ಅವನು ಹಾಗೂ ಭೂಮಾಲಿಕರ ಸಂಬಂಧದಲ್ಲಿ ಹೆಚ್ಚಿನ ಹೊಂದಾಣಿಕೆ ಬಂದಿರುತ್ತದೆ.

ಒಂದು ರೈತಾಪಿ ಕುಟುಂಬದಲ್ಲಿ ವ್ಯವಸಾಯ ಹಾಗೂ ಮನೆಯ ಮತ್ತಿತ್ತರ ಕೆಲಸ ಮಾಡಲು ಮನೆಯವರು ಮತ್ತು ವಾರ್ಷಿಕ ಆಧಾರದ ಮೇಲೆ ನೇಮಿಸಿಕೊಂಡ ಸಂಬಳದ ಆಳುಗಳು ಇರುತ್ತಾರೆ. ಕೆಲವು ಋತುಗಳಲ್ಲಿ ಕೆಲವು ಬಗೆಯ ಕೆಲಸಗಳನ್ನು ಮಾಡಲು, ಉದಾಹರಣೆಗೆ ಬಿತ್ತನೆ, ಕಸಕಳೆ ತೆಗೆಯುವುದು ಕೊಯ್ಲು ಮಾಡುವುದು ಬಂದಾಗ ತಾತ್ಕಾಲಿಕವಾಗಿ ಅವಶ್ಯಕತೆ ಇರುವಷ್ಟು ಜನ ದಿನಗೂಲಿಯವರನ್ನು ನೇಮಿಸಿಕೊಳ್ಳುತ್ತಾರೆ. ಮಳೆಗಾಳಿಗೆ ಪೈರು ಹಾಳಾಗುವ ಮುನ್ನ ಹೀಗೆ ಹೆಚ್ಚು ಜನ ಕೂಲಿ ಆಳುಗಳನ್ನು ನೇಮಿಸಿಕೊಂಡು ಕೆಲಸ ಮುಗಿಸುತ್ತಾರೆ. ಈ ಕೆಲಸಗಳು ನಿರ್ದಿಷ್ಟ ವೇಳೆಯಲ್ಲಿ ನಡೆಯಬೇಕಾಗುತ್ತದೆಯಾದ್ದರಿಂದ ಹೀಗೆ ತಾತ್ಕಾಲಿಕವಾಗಿ ಹೆಚ್ಚು ಜನ ಆಳುಗಳನ್ನು ನೇಮಿಸಿಕೊಳ್ಳುತ್ತಾರೆ. ಆಳುಗಳು ಮುಂಜಾನೆ ತಮ್ಮ ಮನೆಯಲ್ಲೇ ಉಂಡು ವೇಳೆಗೆ ಸರಿಯಾಗಿ ಕೆಲಸದ ಸ್ಥಳಕ್ಕೆ ಬಂದು ಇತರರನ್ನು ಸೇರಿಕೊಳ್ಳುತ್ತಾರೆ. ದಿನದ ಕೆಲಸ ಮುಗಿದ ನಂತರ ಅಲ್ಲಿಂದಲೇ ತಮ್ಮ ತಮ್ಮ ಮನೆಗಳಿಗೆ ಹೋಗುತ್ತಾರೆ. ಇವರನ್ನು ನೇಮಿಸಿಕೊಂಡ ಕೆಲಸವನ್ನಲ್ಲದೆ ಮತ್ತಾವ ಕೆಲಸವನ್ನೂ ಇವರಿಗೆ ವಹಿಸಬರುವುದಿಲ್ಲ. ನಿಗದಿತ ಕೂಲಿ ಹಣದ ಜೊತೆಗೆ ಮಧ್ಯಾಹ್ನದ ಒಂದು ಲಘುವಾದ ಊಟಬಿಟ್ಟರೆ ಇವರಿಗೆ ಮತ್ತಾವ ಹೆಚ್ಚಿನ ಅನುಕೂಲತೆ ನೀಡುವುದಿಲ್ಲ. ಸಕಾರಣವಿದ್ದರೆ ಈ ನೌಕರರು ಮರುದಿನ ಕೆಲಸಕ್ಕೆ

ಬರಲಾಗುವುದಿಲ್ಲವೆಂದು ಹೇಳಬಹುದು. ಮುಂಗಡ ಹಣ ಪಡೆದಿದ್ದರೆ ಅದನ್ನು ಮುಂದೆ ಮತ್ತೆ ಎಂದಾದರೂ ಬಂದು ಕೆಲಸ ಮಾಡಿ ತೀರಿಸಲೂ ಬರುತ್ತದೆ.

ಇಂದು ಕರ್ನಾಟಕದ ಕೆಲವೊಂದು ಜಿಲ್ಲೆಗಳಲ್ಲಿ ನೀರಾವರಿ ಸೌಲಭ್ಯ ಬಂದಿದೆ. ಈ ಅನುಕೂಲತೆಯಿಂದ ಅಲ್ಲಿ ಎರಡೆರಡು ಬೆಳೆ ತೆಗೆಯುತ್ತಾರೆ. ಹೀಗಾಗಿ ಅಲ್ಲಿ ಹೆಚ್ಚು ಜನ ಕೆಲಸಗಾರರು ಬೇಕು. ಆಯಾ ಊರುಗಳಲ್ಲಿ ಸಾಕಷ್ಟು ಕೂಲಿ ಆಳುಗಳು ಸಿಗದಿದ್ದರೆ ಹೇಗೂ ಈ ನೀರಾವರಿ ಸೌಲಭ್ಯವಿಲ್ಲದ ಊರುಗಳಿಂದ ವಲಸೆ ಬಂದ ಕೂಲಿಕಾರರು ಇರುತ್ತಾರೆ. ಅವರನ್ನು ನೇಮಿಸಿಕೊಂಡು ತಮ್ಮಲ್ಲಿ ತ್ವರಿತವಾಗಿ ಆಗಬೇಕಾಗಿರುವ ಕೆಲಸವನ್ನು ಮಾಡಿಕೊಳ್ಳುತ್ತಾರೆ. ಹೀಗಾಗಿ ಕೂಲಿಕಾರರ ಮತ್ತು ಅವರು ಗುಳೆ ಬಂದು ನೆಲಸಿದ ಊರುಗಳಲ್ಲಿ ಸಾಕಷ್ಟು ಬದಲಾವಣೆಗಳು ಬಂದಿವೆ. ಈ ಕೂಲಿಕಾರರಲ್ಲಿ ಕೆಲವರು ತಮ್ಮ ಬಂಧು-ಬಾಂಧವರ ಮನೆ ಹಾಗೂ ಕಣಗಳಲ್ಲಿ ತಾತ್ಕಾಲಿಕವಾಗಿ ವಸತಿಗೆ ವ್ಯವಸ್ಥೆ ಮಾಡಿಕೊಂಡರೆ ಉಳಿದವರು ಯಾರದಾದರೂ ಭೂಮಾಲಿಕರ ಕಣ ಅಥವಾ ತೋಟದ ಮನೆಯಲ್ಲಿ ವಾಸಮಾಡುತ್ತಾರೆ. ಆಗ ಅವರು ಈ ಮಾಲಿಕನ ಮರ್ಜಿಯಲ್ಲಿರುವುದರಿಂದ ಅವರ ಕೆಲಸಕ್ಕೆ ಮೊದಲ ಆದ್ಯತೆ ನೀಡಬೇಕಾಗುತ್ತದೆ. ಇದು ಬಿಟ್ಟರೆ ಮತ್ತಾವ ಒತ್ತಡಗಳು, ಹೆಚ್ಚಿನ ಸಂಬಂಧಗಳು ಇರುವುದಿಲ್ಲ. ಇಂತಹ ಕೂಲಿಕಾರರನ್ನು ಮತ್ತು ಮುಂಗಡವಾಗಿ ಹಣ ಪಡೆದ ಮುಂಗೂಲಿಗಳನ್ನು "ಹಂಗಿನ ಆಳುಗಳು" ಎಂದು ಕರೆಯುತ್ತಾರೆ.

ಇನ್ನೂ ಒಂದು ಬಗೆಯ ಕೂಲಿಗಳೆಂದರೆ ಗುತ್ತಿಗೆ ಆಳುಗಳು. ಇಲ್ಲಿ ಸ್ನೇಹ ಹಾಗೂ ಆತ್ಮೀಯ ಸಂಬಂಧ ಹೊಂದಿದ ಕೆಲವೊಂದು ಕೂಲಿಕಾರರು ಜೊತೆಗೂಡಿ ನಾಟಿ, ಕೊಯ್ಲು, ಒಕ್ಕುವುದು ಮುಂತಾದ ವ್ಯವಸಾಯ ಕೆಲಸಗಳನ್ನು ಭೂಮಿಯ ವ್ಯಾಪ್ತಿ (ಎಕರೆ) ಅಥವಾ ಉತ್ಪನ್ನವಾದ ಧಾನ್ಯದ ಆಧಾರದ ಮೇಲೆ ಇಂತಿಷ್ಟು ಸಂಭಾವನೆಗೆ ಎಂದು ಒಪ್ಪಿಕೊಂಡು ಮಾಡುತ್ತಾರೆ. ಇತರೆ ಬಗೆಯ ಕೂಲಿಯವರು ಇಂತಿಷ್ಟು ಸಮಯ ಎಂದು ಕೆಲಸ ಮಾಡಿ ಸಂಭಾವನೆ ಪಡೆದರೆ ಇವರು ಇಂತಿಷ್ಟು ಕೆಲಸ ಎಂದು ಮಾಡಿ ಗುತ್ತಿಗೆ ಹಣ ಪಡೆಯುತ್ತಾರೆ. ಇಲ್ಲಿ ಅವರು ಮಾಡುವ ಕೆಲಸದ ಪ್ರಮಾಣ ಗಣನೆಯಾಗುವುದರಿಂದ ಅವರು ಬೆಳಿಗ್ಗೆ ಬೇಗ ಬಂದು ಅವಸರದಿಂದ ಕೆಲಸ ಮಾಡುತ್ತಾರೆ ಮತ್ತು ಸಂಜೆ ತಡವಾಗಿ ಮನೆಗೆ ಹೋಗುತ್ತಾರೆ. ಇವರ ಕೆಲಸದಲ್ಲಿ ಹೊಲಕಣದ ಮಾಲಿಕರು ಮೇಲ್ವಿಚಾರಣೆ ಮಾಡುವ ಅವಶ್ಯಕತೆಯಿಲ್ಲ. ಹೆಚ್ಚು ಕೆಲಸ ಮಾಡಿದರೆ ಕೂಲಿಕಾರರಿಗೆ ಹೆಚ್ಚು ಹಣ ಸಿಗುವುದರಿಂದ ಅವರೇ ತ್ವರಿತಗತಿಯಿಂದ ಕೆಲಸ ಮಾಡುತ್ತಾರೆ. ಆದರೆ ಮಾಲಿಕ ಅಲ್ಲಿದ್ದು ಗುತ್ತಿಗೆಯವರು ತಮ್ಮ ಅವಸರದಲ್ಲಿ ಪೈರು ಹಾಳು ಮಾಡದಂತೆ, ಕೆಲಸ ಕೆಡಿಸದಂತೆ ನೋಡಿಕೊಳ್ಳಬೇಕು.

ಹೀಗೆ ಹೆಚ್ಚು ಕೆಲಸ ಮಾಡುವುದರಿಂದ ಸ್ವಾಭಾವಿಕವಾಗಿ ಅವರಿಗೆ ಹೆಚ್ಚು ಸಂಭಾವನೆ ಸಿಗುತ್ತದೆ ಮತ್ತು ಅದನ್ನು ಗುಂಪಿನ ಎಲ್ಲರೂ ಸಮನಾಗಿ ಹಂಚಿಕೊಳ್ಳುತ್ತಾರೆ. ಆದರೆ

ರೈತರು ಕೆಲವೊಂದು ದಾಡಸಿ ಕೆಲಸಗಳಾದ ನೆಲ ಅಗಿಯುವುದು, ಮಣ್ಣು ಎತ್ತಿ ಹಾಕುವುದು ಮುಂತಾದವನ್ನು ಮಾತ್ರ ಗುತ್ತಿಗೆ ಆಧಾರದ ಮೇಲೆ ಮಾಡಿಸಿಕೊಳ್ಳುತ್ತಾರೆ; ಬಿತ್ತುವುದು, ನಾಟಿ, ಕಳೆ, ಕೊಯ್ಲು ಮುಂತಾದ ಸೂಕ್ಷ್ಮವಾದ ಕೆಲಸಗಳನ್ನು ಕೊಡುವುದಿಲ್ಲ (ಗುರುಮೂರ್ತಿ, ೧೯೭೬). ಕೆಲವೊಮ್ಮೆ ಕೆಲಸದ ಒತ್ತಡ ಹೆಚ್ಚಾದಾಗ, ಆಳುಗಳು ಸಿಗದಾದಾಗ, ಪೈರು ಮಳೆಗಾಳಿಗೆ ಸಿಕ್ಕು ಕೆಡುವ ಸಂಭವ ಬಂದಾಗ ಮಾತ್ರ ಈ ಬಗೆಯ ಕೆಲಸಗಳನ್ನು ಗುತ್ತಿಗೆ ಕೊಡುತ್ತಾರೆ.

ವಾರ್ಷಿಕ ಒಡಂಬಡಿಕೆಯ ಬಗೆಯ ಶ್ರಮಿಕರೆಂದರೆ ಸಂಬಳದ ಆಳುಗಳು. ಇವರನ್ನು ಹೊಲಕಣದಲ್ಲಿ ಕೆಲಸ ಮಾಡಲು, ದನಕರು ತೋಟ ಕಾಯಲು ನೇಮಿಸಿಕೊಳ್ಳಲಾಗುವುದು. ಈ ಸಂಬಳದ ಆಳುಗಳಿಗೆ ಮತ್ತು ಕೂಲಿ ಆಳುಗಳಿಗೆ ಇರುವ ವ್ಯತ್ಯಾಸವೆಂದರೆ ಕೂಲಿಕಾರರು ದಿನ, ವಾರ ಅಥವಾ ತಿಂಗಳ ಲೆಕ್ಕದಲ್ಲಿ ಅದರಲ್ಲೂ ದಿನದಲ್ಲಿ ಕೆಲವು ಗಂಟೆಗಳು ಮಾತ್ರ ದುಡಿಯಲು ಬರುತ್ತಾರೆ. ಸಂಬಳದ ಆಳುಗಳು ಪೂರಾ ಒಂದು ವರ್ಷ ವಾರ್ಷಿಕ ಸಂಬಳದ ಆಧಾರದ ಮೇಲೆ ದಿನದ ಇಪ್ಪತ್ತುನಾಲ್ಕು ಗಂಟೆ ದುಡಿಯಲು ನೇಮಸಿಕೊಂಡವರು. ಹೀಗಾಗಿ ಇಡೀ ದಿನ ಇವರು ತಮ್ಮ ಮಾಲಿಕರ ಮನೆಯಲ್ಲಿರುತ್ತಾರೆ ಮತ್ತು ಅಲ್ಲೆ ಉಂಡು ಅಲ್ಲೇ ಮಲಗುತ್ತಾರೆ. ಅದೇ ಊರಿಗೆ ಸೇರಿದವರಿದ್ದರೆ ವಿರಾಮ ಸಿಕ್ಕಾಗ ಸ್ವಲ್ಪ ಹೊತ್ತು ಮಾತ್ರ ತಮ್ಮ ಮನೆಗೆ ಹೋಗಿ ಬರಬಹುದು. ಮದುವೆಯಾದವರಿದ್ದರೆ, ದಿನದ ಎಲ್ಲಾ ಕೆಲಸ ಮುಗಿಸಿ, ಉಂಡು ಮಲಗಲು ತಮ್ಮ ಮನೆಗೆ ಹೋಗಬಹುದು. ಆದರೆ ಮರುದಿನ ಮುಂಜಾನೆ ಆದಷ್ಟು ಬೇಗ ಎದ್ದುಬಂದು ತಮ್ಮ ಕೆಲಸ ಪ್ರಾರಂಭಿಸಬೇಕು. ಈ ಆಳುಗಳಿಗೆ ರಜದ ದಿನವೆಂಬುದಿರುವುದಿಲ್ಲ. ಆದರೆ ಹಬ್ಬ ಹರಿದಿನದಂದು, ಅನುವು ಆಪತ್ತು ಬಂದಲ್ಲಿ, ತಮ್ಮ ಮನೆಗೆ ಹೋಗಿ ಬರಬಹುದು. ಇದಕ್ಕೂ ಹೆಚ್ಚು ದಿನ ಗೈರಾಜರಾದರೆ ಈ ದಿನಗಳನ್ನು "ಉಳಿದ ದಿನಗಳು" ಎಂದು ಲೆಕ್ಕ ಹಾಕಿ, ವರ್ಷದ ಅವಧಿ ಮುಗಿದ ನಂತರ ದುಡಿದು ತೀರಿಸಬೇಕು. ಇಲ್ಲದಿದ್ದರೆ ಈ ದಿನಗಳಿಗೆ, ನಷ್ಟ ತುಂಬಿಕೊಡಬೇಕಾಗುತ್ತದೆ. ಕಾರ್ಮಿಕ ಮುಂದಿನ ವರ್ಷವೂ ಅದೇ ಕುಟುಂಬದಲ್ಲಿ ಸಂಬಳಕ್ಕೆ ನಿಂತರೆ ಮಾಲಿಕ ಈ ದಿನಗಳನ್ನು "ಸೋಡಿ" ಬಿಡಬಹುದು.

ಸಂಬಳದ ಆಳುಗಳನ್ನು ಹೊಲ ಉಳಲು, ಹೊಲ, ತೋಟ, ದನ ಅಥವಾ ಕುರಿ ಮೇಕೆ ಕಾಯಲು ನೇಮಕಗೊಂಡವರು ಎಂದು ಭಾಗ ಮಾಡಬಹುದು. ಕೆಲಸದ ಒತ್ತಡ ಮತ್ತು ತುರ್ತು ಪರಿಸ್ಥಿತಿ ಬಂದಾಗ ಅವರ ಕೆಲಸಗಳು ಸ್ವಲ್ಪ ಹೆಚ್ಚು ಕಡಿಮೆ, ಅದಲು ಬದಲು ಆಗಬಹುದು. ಇನ್ನೂ ಒಂದು ವಿಧದಲ್ಲಿ ಅವರ ಜಾತಿಯ ಆಧಾರದ ಮೇಲೆ "ಒಳ ಆಳು" ಮತ್ತು "ಹೊರ ಆಳು" ಎಂದು ಎರಡು ಬಗೆ ಮಾಡಲಾಗುವುದು. ಒಳ ಆಳು ಅಂದರೆ ಯಜಮಾನನ ಜಾತಿಗೆ ಸೇರಿದವನು. ಇವನು ಹೊಲಕಣದ ಕೆಲಸದ ಜೊತೆಗೆ ಗೃಹಾಂತರ

ಕೆಲಸಗಳಾದ ದಿನಬಳಕೆಗೆ ನೀರು ತರುವುದು, ಜೋಳ ರಾಗಿ ಬೀಸುವುದು, ಹಾಲು ಕರೆಯುವುದು, ಹೊಲ-ಕಣಕ್ಕೆ ಬುತ್ತಿ ಒಯ್ಯುವುದು – ಹೀಗೆ ಮನೆಯವರು ಮಾಡುವ ಕೆಲಸಗಳನ್ನು ಇವರೂ ಮಾಡುತ್ತಾರೆ. ಹೊರ ಆಳು ಅಂದರೆ ಕೇವಲ ಮನೆಯಿಂದ ಹೊರಗಿನ ಕೆಲಸ ಮಾಡುವವ. ಇವರು ಮಾಲಿಕರ ಜಾತಿಗಿಂತ ಕೆಳಗಿನ ಜಾತಿಗೆ ಸೇರಿದವರು. ಇವರು ವ್ಯವಸಾಯ ಕೆಲಸದ ಜೊತೆಗೆ ಅಂಗಣ, ಕೊಟ್ಟಿಗೆ ಗುಡಿಸುವುದು, ಎತ್ತು ಮತ್ತು ದನಕರುಗಳಿಗೆ ಮೇವು ನೀರು ಹಾಕುವುದು, ಅವುಗಳ ಮೈ ತೊಳೆಯುವುದು, ಒಲೆಗೆ ಕಡ್ಡಿ ಕುಳ್ಳು, ಕಟ್ಟಿಗೆ ತರುವುದು, ದವಸ ಬೀಸುವುದು ಮಾಡುತ್ತಾರೆ.

"ಒಣ (ಸಂಬಳದ) ಆಳು" ಎಂಬ ಇನ್ನೂ ಒಂದು ಬಗೆಯ ಆಳುಗಳಿದ್ದಾರೆ. ಇವರು ತಾವು ಸಂಬಳ ದುಡಿವ ಕುಟುಂಬದಿಂದ ಅನ್ನ, ನೀರು ಮತ್ತಿತರ ಜೀವನ ಅವಶ್ಯಕತೆಗಳನ್ನು ಪಡೆಯದೆ ಕೇವಲ ಸಂಬಳವನ್ನು ಮಾತ್ರ ಪಡೆಯುತ್ತಾರೆ. ಇವರು ತಮ್ಮ ಮನೆಯಲ್ಲೇ ಉಣ್ಣುತ್ತಾರೆ, ತಮ್ಮ ಹಣದಿಂದ ಕೊಂಡು ತಂದ ವಸ್ತುಗಳಿಂದ ತಲಬು ಮಾಡುತ್ತಾರೆ ಮತ್ತು ಬಟ್ಟೆ ಚಪ್ಪಲಿ ಧರಿಸುತ್ತಾರಾದ್ದರಿಂದ ಇವರಿಗೆ ಹೆಚ್ಚು ಸಂಬಳ ನೀಡುತ್ತಾನೆ. ಕೆಲವೊಮ್ಮೆ ಮೇಲಿನ ಜಾತಿಯವರು ಕೆಳಗಿನ ಜಾತಿಯವರಲ್ಲಿ ಹೊಲ, ತೋಟ, ದನ ಕಾಯಲು ಅಥವಾ ಬೇಸಾಯವನ್ನೇ ಹೊಡೆಯಲು ಸಂಬಳ ಇರಬಹುದು. ಮಾಲಿಕ ವಿಧುರನಿದ್ದರೆ, ಹೆಂಡತಿ ರೋಗಿಷ್ಠೆ ಇದ್ದರೆ, ಪರ ಊರಿನಲ್ಲಿದ್ದರೆ ಅವರಿಂದ ಆಳುಗಳಿಗೆ ಊಟ-ತಿಂಡಿ ಕೊಡಲಾಗುವುದಿಲ್ಲ. ಇಂತವರಲ್ಲಿ ಕೆಲಸ ಮಾಡುವ ಆಳುಗಳು ತಮ್ಮ ಮನೆಯಲ್ಲೆ ಉಂಡು ಬಂದು ಇಲ್ಲಿ ಕೆಲಸ ಮಾಡಬೇಕು.

ತನ್ನ ಕೌಟುಂಬಿಕ ವೃತ್ತಿಗಳನ್ನು ನಿರ್ವಹಿಸಲು ಮನೆಯಲ್ಲಿ ಸಾಕಷ್ಟು ಜನ ಆರೋಗ್ಯವಂತ ಗಂಡು ಮಕ್ಕಳಿಲ್ಲದವರು ತಮಗೆ ಅನುಕೂಲವಾದಷ್ಟು ಜನ ಆಳುಗಳನ್ನು ವಾರ್ಷಿಕ ಆಧಾರದ ಮೇಲೆ ನೇಮಿಸಿಕೊಳ್ಳುತ್ತಾರೆ. ಇವರನ್ನು ಸಾಮಾನ್ಯವಾಗಿ ಒಂದು ವರ್ಷದ ಅವಧಿಗೆ ನೇಮಿಸಿಕೊಳ್ಳುತ್ತಾರೆ. ಈ ಆಳು ಮತ್ತು ಮಾಲಿಕನ ಸಂಬಂಧಗಳು, ಅವಶ್ಯಕತೆಗಳು ಹೊಂದಿಕೊಂಡರೆ ಅವರು ಕೆಲವಾರು ವರ್ಷಗಳವರೆಗೆ ಹೀಗೇ ಹೊಂದಿಕೊಂಡು ಹೋಗಬಹುದು. ಕೆಲವರು ಚಿಕ್ಕ ವಯಸ್ಸಿನಲ್ಲಿ ದನ ಕಾಯುವ (ಹುಡುಗ) ಆಳಾಗಿ ಸೇರಿಕೊಂಡು, ನಂತರ ನಾಲ್ಕಾರು ವರ್ಷ ವ್ಯವಸಾಯದ ಆಳಾಗಿ ದುಡಿದು ಕೊನೆಗೆ ವಯಸ್ಸಾದಂತೆ ಭಾರವಾದ ಕೆಲಸ ಮಾಡದಾದಾಗ, ಅದೇ ಮನೆಯಲ್ಲಿ ಹೊಲ-ತೋಟ ಕಾಯಲು – ಹೀಗೆ ಹತ್ತಿಪ್ಪತ್ತು ವರ್ಷ ಒಂದೇ ಮನೆತನಕ್ಕೆ ದುಡಿದ ಉದಾಹರಣೆಗಳೂ ಇವೆ. ಅವರ ವಯಸ್ಸು ಮತ್ತು ಪರಿಣತಿಗೆ ಅನುಗುಣವಾಗಿ ಸಂಬಳ ನಿರ್ಣಯವಾಗುತ್ತದೆ. ಪ್ರತಿವರ್ಷ ತಾವು ಮಾಡಿಕೊಂಡ ಈ ಒಡಂಬಡಿಕೆಗೆ ಆಧಾರವಾಗಿ ಮೇಲೆ ಒಂದು ಪತ್ರ ಕೂಡ ಬರೆಸಿಕೊಳ್ಳುತ್ತಾರೆ.[೩]

ಸಂಬಳದ ಆಳುಗಳು ಮತ್ತು ಅವರನ್ನು ನೇಮಿಸಿಕೊಂಡವರು ಒಂದೇ ಗ್ರಾಮ ಸಮುದಾಯದ ಸದಸ್ಯರಾದ್ದರಿಂದ ಮತ್ತು ಅವರ ಅವಶ್ಯಕತೆಗಳು ಮತ್ತು ಅನಿವಾರ್ಯತೆಗಳು ಒಂದೇ ಬಗೆಯಾಗಿರುತ್ತವೆಯಾದ್ದರಿಂದ ಅವರ ಸಂಬಂಧಗಳು ಉತ್ತಮವಿರುತ್ತವೆ. ಹೀಗಾಗಿ ಈ ಕೆಲಸಗಾರರಿಗೆ "ಆಳುಮಗ" ಎಂಬ ಹೆಸರೂ ಇದೆ. (ಆದರೆ ತಿಪ್ಪಶೆಟ್ಟಿ (೧೯೭೬:೨೦೭) ಯವರು ಹೇಳಿರುವಂತೆ ಇವರು "ಆಳುವ" ಮಕ್ಕಳಲ್ಲ). ವ್ಯವಸಾಯ ಕೆಲಸವನ್ನು ಆಳು ಮಕ್ಕಳು ಮತ್ತು ಮನೆಯವರು ಕೂಡಿಯೇ ಮಾಡುತ್ತಾರೆ, ಜೊತೆಗೆ ಉಣ್ಣುತ್ತಾರೆ ಮತ್ತು ಕೆಲಸವಿಲ್ಲದಿದ್ದರೆ ಎಲ್ಲರೂ ಕೂಡಿಯೇ ಕಾಲಕ್ಷೇಪ ಮಾಡುತ್ತಾರೆ. ಆಳುಮಕ್ಕಳಿಗೂ ಮನೆಯವರು ಉಣ್ಣುವುದನ್ನೇ ಮತ್ತು ಸಾಕಷ್ಟು ಬಡಿಸುತ್ತಾರೆ. ಹೊರ ಆಳುಗಳು ಅಡಿಗೆ ಮನೆ ಅಥವಾ ಊಟದ ಕೋಣೆಯಿಂದ ಹೊರಗೆ ಉಂಡರೆ ಒಳ ಆಳುಗಳು ಮತ್ತು ಮಾಲಿಕರು ಒಳಗೆ ಜೊತೆಗೆ ಕುಳಿತು ಉಣ್ಣುತ್ತಾರೆ.

ಹಬ್ಬ ಹರಿದಿನಗಳಂದು ನೆಂಟರಿಷ್ಟರು ಬಂದಾಗ ಮಾಡಿದ ವಿಶೇಷ ಅಡಿಗೆಯನ್ನು ಇವರಿಗೂ ಬಡಿಸುತ್ತಾರೆ. ಜೊತೆಗೆ ಈ ಆಳುಗಳು ಬೀಡಿ ಸೇದುವ, ಎಲೆ ಅಡಿಕೆ, ತಂಬಾಕು ತಿನ್ನುವ ತಲಬು ಮಾಡುತ್ತಿದ್ದರೆ ಅವರಿಗೆ ಇವುಗಳನ್ನೂ ದಿನಕ್ಕೆ ಇಂತಿಷ್ಟು ಎಂದು ಕೊಡುತ್ತಾರೆ. ದೊಡ್ಡ ಹಬ್ಬಗಳಾದ ಯುಗಾದಿ, ದೀಪಾವಳಿಗೆ ಮನೆಮಂದಿಗೆ ತಂದಂತೆ ಇವರಿಗೂ ವರ್ಷದಲ್ಲಿ ಎರಡು ಸಾರಿ ಅಂಗಿ, ಪಂಚೆ ಮತ್ತು ಪೇಟ ಅಥವಾ ಅಂಗವಸ್ತ್ರಹಾಗೂ ಒಂದು ಜೊತೆ ಚರ್ಮದ ಚಪ್ಪಲಿ ನೀಡುತ್ತಾರೆ. ಜಡ್ಡು, ಅನುವು-ಆಪತ್ತು ಬಂದರೆ ಅವರಿಗೆ ಆರೈಕೆ ಮಾಡುತ್ತಾರೆ.

ಒಬ್ಬ ವ್ಯಕ್ತಿ ಇನ್ನೊಬ್ಬರ ಮನೆಯಲ್ಲಿ ಸಂಬಳದ ಆಳಾಗಿ ದುಡಿಯುತ್ತಿದ್ದಾನೆ ಎಂದಾಕ್ಷಣ ಅವನು ಮುಂದೆ ಎಂದೂ ಸ್ವತಂತ್ರವಾಗಿ ಜೀವನ ಮಾಡುವುದಿಲ್ಲ ಮಾಡಬರುವುದಿಲ್ಲ ಎಂದಲ್ಲ. ಅನೇಕ ಸಂದರ್ಭಗಳಲ್ಲಿ ಹಿಂದೆ ಉತ್ತಮ ಸ್ಥಿತಿಯಲ್ಲಿದ್ದವರೂ ಹೀಗೆ ಸಂಬಳ ದುಡಿಯಲು ಬರಬಹುದು. ತಮ್ಮ ಅಡಚಣೆಯಿಂದಾಗಿ ಮತ್ತು ಎತ್ತು, ಹೊಲ, ಮನೆ ಕೊಳ್ಳಲು, ಆಸ್ಪತ್ರೆ ಅಥವಾ ಕೋರ್ಟ್ ಖರ್ಚಿಗೆ, ಸೋದರ-ಸೋದರಿಯರ ಮದುವೆಗೆ ಮಾಡಿದ ಸಾಲ ತೀರಿಸಲು ಅಥವಾ ಹಣ ಹೊಂದಿಸಲು ಹೀಗೆ ಸಂಬಳ ದುಡಿಯುತ್ತಿರಬಹುದು. ಕೆಲವರು ತಮ್ಮ ತಂದೆತಾಯಿಗಳು ಇಬ್ಬರೂ ಯಾವುದಾದರೂ ಸಾಂಕ್ರಾಮಿಕ ರೋಗಕ್ಕೆ ಗುರಿಯಾಗಿ ಸತ್ತಿದ್ದರೆ, ಮನೆಯಲ್ಲಿ ಅಡಿಗೆ ಮಾಡುವವರು ಯಾರೂ ಇಲ್ಲದಿದ್ದರೆ, ತಾವು ಬೆಳೆದು ದೊಡ್ಡವರಾಗಿ ಮದುವೆಯಾಗಿ ಹೆಂಡತಿ ಬರುವವರೆಗೆ, ಬಂಧು-ಬಳಗದವರ ಮತ್ತು ಜಾತಿಯ ಹಿರಿಯರ ಬುದ್ದಿವಾದದಂತೆ, ಯಾರದಾದರೂ ಒಂದು ಉತ್ತಮವಾದ ಕುಟುಂಬದಲ್ಲಿ ಕೆಲವಾರು ವರ್ಷ ಸಂಬಳವಿರುತ್ತಿದ್ದರು. ಇದರಿಂದ ಅವರ ಊಟಬಟ್ಟೆಯ ಖರ್ಚು ಹೊರಗೆ ಹೋಗುವುದರ ಜೊತೆಗೆ ಸಂಬಳದ ಹಣವೂ ಉಳಿತಾಯವಾಗುತ್ತಿತ್ತು. ಮುಂದೆ ಇದು ವ್ಯವಸಾಯದ ಉಪಕರಣಗಳು ಅಥವಾ ಎತ್ತುಗಳನ್ನು

ಕೊಳ್ಳಲು ಅನುಕೂಲವಾಗುತ್ತಿತ್ತು. ಕೆಲವು ಭೂಮಾಲಿಕರ ಕುಟುಂಬದಲ್ಲಿ ದುಡಿಯಲು ಯಾರೂ ಬೆಳೆದ ಗಂಡು ಮಕ್ಕಳಿಲ್ಲದಿದ್ದರೆ ಇಂತಹ ತರುಣರನ್ನು ಆರಿಸಿಕೊಂಡು ಅವರಿಗೆ ಪ್ರತಿವರ್ಷ ಸಂಬಳ ಎಂದು ಹಣ ಕೊಡುವುದರ ಬದಲಿಗೆ ಇಂತಿಷ್ಟು ವರ್ಷ ದುಡಿದರೆ ಇಂತಿಷ್ಟು ಎಕರೆ ಹೊಲ ಕೊಡುವುದಾಗಿ ಒಡಂಬಡಿಕೆ ಮಾಡಿಕೊಂಡು ದುಡಿಸಿಕೊಳ್ಳುತ್ತಿದ್ದರು. ಇಂತಹ ಆಳುಗಳನ್ನು ಕರಾರಿನ ಮೇಲೆ ದುಡಿಯಲು ಬಂದ, ಒಡಂಬಡಿಕೆ ಮಾಡಿಕೊಂಡ ಆಳುಗಳು ಎಂದು ಕರೆಯಲಾಗಿದೆ (ನೋಡಿ: ಎಪಿಸ್ಟಿನ್, ೧೯೬೨:೭೬).

"ಜೀತದ ಆಳು" ಬೇರೆ. ಇವರು ತಮ್ಮ ಹಿರಿಯರು ಮಾಡಿದ ಸಾಲದ ಬಡ್ಡಿಗೆ ದುಡಿಯುವವರು. ಇವರನ್ನು ರೈತರು ಮಾತ್ರವಲ್ಲ ತೋಟ, ಹೋಟೆಲ್ ಮತ್ತು ಗಣಿ ಮಾಲಿಕರು ಹೀಗೆ ಯಾರಾದರೂ ನೇಮಿಸಿಕೊಳ್ಳಬಹುದು. ಜೀತ ಮತ್ತು ಸಂಬಳದ ಆಳುಗಳಿಗೆ ಇರುವ ಭಿನ್ನತೆಗಳು ಅನೇಕ. ಮೊದಲನೆಯದಾಗಿ, ಸಂಬಳದಾಳು ತಾನೇ ಬಂದು ದುಡಿಯಲು ಸೇರಿಕೊಳ್ಳುತ್ತಾನೆ; ಜೀತದಾಳನ್ನು ಚಿಕ್ಕ ವಯಸ್ಸಿನಲ್ಲೇ ಅವನ ಪೋಷಕರು ತಂದು ಜೀತಕ್ಕೆ ಇಟ್ಟಿರುತ್ತಾರೆ. ಸಂಬಳದಾಳು ಯಾವಾಗ ಬೇಕಾದರೂ ತಾನು ಪಡೆದ ಹಣ ವಾಪಾಸು ಮಾಡಿ ಈ ಒಡಂಬಡಿಕೆಯಿಂದ ಹೊರಬರಬಲ್ಲ. ಆದರೆ ಜೀತದಾಳಿಗೆ ಈ ಸ್ವಾತಂತ್ರ್ಯವಿಲ್ಲ. ಅವನು ದುಡಿದೇ ಈ ಸಾಲವನ್ನು ತೀರಿಸಬೇಕು. ಆದರೆ ಅವನು ತೆಗೆದುಕೊಂಡ ಹಣಕ್ಕೆ ನಿಗದಿಯಾದ ಬಡ್ಡಿ ಅತೀ ಹೆಚ್ಚು ಮತ್ತು ಅದನ್ನು ಲೆಕ್ಕ ಹಾಕುವ ರೀತಿಯು ವಿಚಿತ್ರವಾಗಿರುತ್ತದೆ. ಹೀಗಾಗಿ ಅನೇಕರಿಗೆ ಈ ಸಾಲ ತೀರಿಸಲು ಸಾಧ್ಯವಾಗದೇ ಹೋಗುವುದರಿಂದ ಅವರು ಜೀತ ಪದ್ಧತಿಯ ಕಪಿ ಮುಷ್ಟಿಯಿಂದ ಹೊರಬರಲು ಸಾಧ್ಯವಾಗುವುದಿಲ್ಲ. ಜೀತದಾಳಿನ ಈ ಅಸಹಾಯಕ ಪರಿಸ್ಥಿತಿಯನ್ನು ಅರಿತ ಕೆಲವು ಮಾಲಿಕರು ಅವರನ್ನು ಸರಿಯಾಗಿ ನಡೆಸಿಕೊಳ್ಳದೇ ಇರಬಹುದು. ಅವನು ಮುಗ್ಧ ಮತ್ತು ಅಸಹಾಯಕನೂ ಇರುವುದರಿಂದ, ಅನೇಕ ವರ್ಷಗಳವರೆಗೆ ಕೆಲವೊಮ್ಮೆ ಜೀವನ ಪರ್ಯಂತ, ಕೇವಲ ಬಡ್ಡಿಗೆ ದುಡಿಯಬೇಕಾಗುತ್ತದೆ. ಆಗಲೂ ಅವನ ಸಾಲ ತೀರದೆ ಹೋದಾಗ ಅವನ ಮಕ್ಕಳು ಈ ಬಲೆಯಲ್ಲಿ ಬೀಳುವ ಸಂಭವಗಳೂ ಇರುತ್ತವೆ.

ಜೀತ ಒಂದು ಬಗೆಯ ಗುಲಾಮಗಿರಿ, ಆರ್ಥಿಕ ಮಾತ್ರವಲ್ಲ ಮಾನಸಿಕವಾದದ್ದು ಕೂಡ. ಒಬ್ಬ ಒಮ್ಮೆ ಜೀತಕ್ಕೆ ಸೇರಿದನೆಂದರೆ ಇದರಿಂದ ಹೊರ ಬರಲು ಪ್ರಯತ್ನಿಸುವುದಿಲ್ಲ. ಅವನ ಯಜಮಾನ ಕೋಪಗೊಳ್ಳಬಹುದೆಂದು ಹೆದರಿ ಯಾರೂ ಇತರರ ಜೀತದಾಳಿಗೆ ನೆರವಾಗಲು ಮುಂದೆ ಬರುವುದಿಲ್ಲ. ಜೀತದಾಳು ಮಾತ್ರವಲ್ಲ ಅವನ ಇಡೀ ಕುಟುಂಬ, ಜಾತಿ ಗುಂಪುಗಳು ಮಾಲಿಕರ ದಾಸ್ಯದಲ್ಲಿರುತ್ತವೆ. ಹೀಗಾಗಿ ಒಂದು ಪಕ್ಷ ಆಳು ನಡುವೆ ಮಡಿದರೆ ಅವನ ಕುಟುಂಬ ಮತ್ತೆ ಯಾರನ್ನಾದರೂ ಸೇವೆಗೆ ನೀಡಬೇಕು. ಮಾಲಿಕ ತನ್ನ

ಜೀತದ ಆಳಿನ ಮೇಲೆ ಅಥವಾ ಅವನ ಕುಟುಂಬದ ಕಡೆ ಸಿಟ್ಟು, ಸೆಡವು ತೋರಿಸಿದರೆ ಆಗ ಕುಟುಂಬ ಅವನನ್ನು ಸಂತುಷ್ಟಪಡಿಸಲು ಅನೇಕ ಮಾರ್ಗಗಳನ್ನು ಅನುಸರಿಸಬೇಕಾಗುತ್ತದೆ. ಅವರು ತಾವು ಬೆಳೆದ ಉತ್ತಮವಾದ ಹಣ್ಣು, ತರಕಾರಿ, ಮಾಂಸದ ಕೋಳಿ ಕುರಿ ಮುಂತಾದವುಗಳನ್ನು ಅವನಿಗೆ ಅರ್ಪಿಸಬೇಕಾಗುತ್ತದೆ. ಕೆಲವೊಮ್ಮೆ ಅವರ ಹೆಣ್ಣುಮಕ್ಕಳೂ ಇವರ ಭೋಗದ ವಸ್ತುಗಳಾಗುತ್ತಿದ್ದರು. ಅಸಹಾಯಕರಾದ್ದರಿಂದ ಜೀತದಾಳು ಇದೆಲ್ಲವನ್ನು ಸೈರಿಸಿಕೊಳ್ಳಬೇಕಾಗುತ್ತಿತ್ತು.

ಜೀತ ಪದ್ಧತಿಯಡಿ ಮಾಲಿಕ ತನ್ನ ಆಳಿನಿಂದ ತನಗೆ ಬೇಕಾದಾಗ ಮತ್ತು ಬೇಕಾದಂತೆ ದುಡಿಸಿಕೊಳ್ಳುವ ಹಕ್ಕು ಪಡೆದಿರುತ್ತಾನೆ. ತಾನು ಋಣದಲ್ಲಿರುವುದರಿಂದ ಆಳು ಕೂಡ ಇದು ತನ್ನ ಕರ್ತವ್ಯವೆಂದು ಭಾವಿಸುತ್ತಾನೆ. ಸಮಾಜ ಕೂಡ ಇದನ್ನು ಸಹಜವೆಂದು ಒಪ್ಪಿಕೊಳ್ಳುತ್ತದೆ. ಹೀಗಾಗಿ ಯಾರೂ ಅದರಲ್ಲೂ ಆಳು, ಇದನ್ನು ಪ್ರಶ್ನಿಸುವಂತಿಲ್ಲ. ಯಾರಾದರೂ ಪ್ರಶ್ನಿಸಿದರೆ ಇದು ಅನಾದಿಕಾಲದಿಂದ ನಡೆದುಕೊಂಡು ಬಂದ ಪದ್ಧತಿ ಇದ್ದು, ಇದನ್ನು ಉಲ್ಲಂಘಿಸಿದಂತಾಗಿ ಅವರಿಗೆ ಛೀಮಾರಿಹಾಕುತ್ತಿದ್ದರು. ಪರಿಸ್ಥಿತಿ ಹೀಗಿರುವಾಗ ಯಾರಾದರೂ ಜೀತದಾಳುಗಳು ಮಾಲಿಕರು ತಮ್ಮನ್ನು ಶೋಷಣೆ ಮಾಡುತ್ತಿದ್ದಾರೆ, ಕ್ರೂರವಾಗಿ ನಡೆಸಿಕೊಳ್ಳುತ್ತಾರೆ ಎಂದು ಫಿರ್ಯಾದು ತಂದರೆ ಇಲ್ಲಿ ಅವರಿಗೆ ನ್ಯಾಯ ದೊರೆಯುತ್ತಿರಲಿಲ್ಲ. ಏಕೆಂದರೆ ಗ್ರಾಮೀಣ ಪ್ರದೇಶದಲ್ಲಿಯ ಮುಖಂಡರೆಲ್ಲರೂ ಜೀತದಾಳುಗಳನ್ನು ದುಡಿಸಿಕೊಳ್ಳುವವರೇ ಆಗಿರುತ್ತಿದ್ದರು. ಈ ಎಲ್ಲಾ ಪರಿಸ್ಥಿತಿಗಳು, ಜೀತದಾಳುಗಳನ್ನು, ಅವರ ಕುಟುಂಬದವರನ್ನು ಶೋಷಿಸುವಂತೆ ಮಾಡಿದ್ದವು. ಸ್ವಾತಂತ್ರ್ಯ ಬಂದ ನಂತರ, ಹೊಸ ಕಾನೂನಿನನ್ವಯ, ಭಾರತದ ನಾಗರೀಕರೆಲ್ಲರೂ ಸರಿಸಮಾನರು ಮತ್ತು ರಾಜಕೀಯವಾಗಿ ಸ್ವತಂತ್ರರು. ಆದರೆ ಆರ್ಥಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವಾತಂತ್ರ್ಯ ಪ್ರಯೋಜನವಿಲ್ಲದ್ದು; ಇದ್ದೂ ಇಲ್ಲದಂತೆ. ಇದನ್ನು ಮನಗಂಡ ಸರಕಾರ ಎಲ್ಲರಿಗೂ ಸಾಮಾಜಿಕ ನ್ಯಾಯ ನೀಡುವ ಉದ್ದೇಶದಿಂದ ಈಗ ಜೀತ ಪದ್ಧತಿಯನ್ನು ನಿಷೇಧಿಸಿದೆ.

ಸಂಬಳ ದುಡಿಯುವುದರಿಂದ ಆಳಿಗೆ ಮತ್ತು ಅವನ ಕುಟುಂಬಕ್ಕೆ ಕೆಲವೊಂದು ಅನುಕೂಲತೆಗಳೂ ಇದ್ದವು ಎಂಬುದನ್ನು ಸಾಮಾಜಿಕ ಶಾಸ್ತ್ರಜ್ಞರು ಮತ್ತು ಸಮಾಜ ಸುಧಾರಕರು ಗಮನಿಸದೆ ಹೋಗಿದ್ದಾರೆ. ಇವುಗಳಲ್ಲಿ ಒಂದು ಆಳು ಮತ್ತು ಮಾಲಿಕನ ನಡುವೆ ಇದ್ದ ಉತ್ತಮ ಸಂಬಂಧಗಳು. ಕೆಲವೊಮ್ಮೆ ಇವು ಸ್ವಲ್ಪ ಕೆಟ್ಟಿದ್ದರೂ ಹಾರ್ಪರ್ (೧೯೬೮:೩೬) ವರ್ಣಿಸಿರುವಷ್ಟು ಕೆಟ್ಟಿರಲಿಲ್ಲ; ಮಧುರ ಸಂಬಂಧಗಳೂ ಇದ್ದವು. ಸ್ಥಳೀಯರಾರೂ ಕೆಟ್ಟವರಿರುತ್ತಿರಲಿಲ್ಲ. ಅವರೇನಿದ್ದರೂ ಹೊರಗಿನಿಂದ ಬಂದವರು. ಅಂದರೆ ಆ ಗ್ರಾಮೀಣ ಸಮುದಾಯಕ್ಕೆ ಹೊರಗಿಂದ ಬಂದು ಇಲ್ಲಿ ಹೊಲ, ತೋಟ, ಗಣಿ ನಡೆಸುತ್ತಿದ್ದವರು. ಅವರಿಗೆ ಹಣ ಮಾಡುವುದು ಬಿಟ್ಟರೆ ಇತರೆ ಯಾವ ಸ್ಥಳೀಯವಾದ ಸಂಬಂಧಗಳೂ ಇರುವುದಿಲ್ಲ.

ಆದ್ದರಿಂದ ಅವರು ತಮ್ಮ ಆಳುಗಳ ಮತ್ತು ಅವರ ಕುಟುಂಬಗಳ ಬಗೆಗೆ ಹೆಚ್ಚಿನ ಆಕ್ಕರೆ ತೋರಿಸಲಿಲ್ಲ. ಆದರೆ ಶ್ರಮಿಕರ ಮತ್ತು ಮಾಲಿಕರ ಸಂಬಂಧಗಳು ಕೊನೆಯ ಪಕ್ಷ ಕರ್ನಾಟಕದಲ್ಲಿ ಉತ್ತಮವಾಗಿದ್ದವು ಎನ್ನುವುದಕ್ಕಿಂತ ಕೆಟ್ಟಿರಲಿಲ್ಲ ಎನ್ನಬಹುದು.

ಒಬ್ಬ ಆಳಾಗಿ ದುಡಿಯಲು ಬಂದಿರಬಹುದು. ಆದರೆ ಗ್ರಾಮೀಣ ಸಮುದಾಯದಲ್ಲಿ ಪರಸ್ಪರರಲ್ಲಿ ನಿಕಟ ಸಂಬಂಧ ಹೊಂದಿದ ಭಾರತದ ಗ್ರಾಮಗಳಲ್ಲಿ ಯಾರೂ ಯಾರನ್ನೂ ಬಹಿರಂಗವಾಗಿ ಶೋಷಣೆ ಮಾಡಬರುವುದಿಲ್ಲ. ಏಕೆಂದರೆ ಆಳುಗಳಿಂದ ದುಡಿಸಿಕೊಳ್ಳುವುದೊಂದೇ ಜೀವನದ ಉದ್ದೇಶವಾಗಿರಲಿಲ್ಲ; ಜಾತಿ, ಮತಧರ್ಮ, ಮಾನವತೆ ಮುಂತಾದ ವಿಚಾರಗಳೂ ಇರುತ್ತಿದ್ದವು. ಅಲ್ಲದೆ ಪರಸ್ಪರರು ಉತ್ತಮ ಸಮುದಾಯ ಸಂಬಂಧ ಹೊಂದುವುದೂ ಅವಶ್ಯಕವಿತ್ತು ಮತ್ತು ಇವು ಆರ್ಥಿಕ ಲಾಭಕ್ಕಿಂತ ಹೆಚ್ಚು ಮಹತ್ವವಿರುತ್ತಿದ್ದವು. ಏಕೆಂದರೆ ಇವು ಜನಪದ ಸಾಮಾಜಿಕ, ಧಾರ್ಮಿಕ ಮತ್ತು ನೈತಿಕ ತಳಹದಿಯ ಮೇಲೆ ನಿಂತ ಮೌಲ್ಯಗಳಿರುತ್ತಿದ್ದವು. ಇವುಗಳನ್ನು ಗೌರವಿಸದಿದ್ದರೆ ಸಮುದಾಯ ಜೀವನ ಉತ್ತಮವಾಗಿರುವುದಿಲ್ಲ ಮತ್ತು ಇತರರಿಂದ ನಿಂದನೆಗಳೂ ಬರುತ್ತಿದ್ದವು. ಹೀಗಾಗಿ ಕೆಲವು ಆಳು ಮತ್ತು ಮಾಲಿಕರ ಸಂಬಂಧಗಳು ಎಷ್ಟು ಉತ್ತಮವಾಗಿದ್ದವೆಂದರೆ ಯಜಮಾನನ ಕುಟುಂಬದಲ್ಲಿ ವ್ಯವಸಾಯ ಕೆಲಸ ಮಾಡಲು ಯಾರೂ ಗಂಡುಮಕ್ಕಳಿಲ್ಲದಿದ್ದಲ್ಲಿ ಆಳು ಈ ಹೊಣೆಯನ್ನು ಪೂರ್ಣವಾಗಿ ಹೊತ್ತ ಉದಾಹರಣೆಗಳೂ ಇವೆ. ಮನೆಯ ಮಕ್ಕಳು ಒಂದು ನೆಲೆಗೆ ನಿಂತ ಮೇಲೆಯೇ ಈ ಆಳು ತನ್ನ ಹೊಣೆಯಿಂದ ಬಿಡುಗಡೆ ಹೊಂದುತ್ತಿದ್ದ. ಹತ್ತಾರು ವರ್ಷ ದುಡಿದ ಆಳಿಗೆ ಕುಟುಂಬ ಹೊಲ-ಮನೆ ನೀಡಿ ಸೂಕ್ತ ಮರ್ಯಾದೆ ಮಾಡಿ ಬೀಳ್ಕೊಟ್ಟ ಉದಾಹರಣೆಗಳೂ ಇವೆ. ಕೆಲವು ಆಳುಗಳು ಈ ಹಣವನ್ನು ತಮ್ಮ ಮಕ್ಕಳ ಓದು ಅಥವಾ ಮದುವೆಗೆ ಬಳಸಿಕೊಂಡ ಉದಾಹರಣೆಗಳೂ ಇವೆ.

ದಯಾಳುಗಳು ಹಾಗೂ ಉದಾರಿಗಳು ಆದ ಯಜಮಾನರನ್ನು ಆಳುಗಳು ಮತ್ತು ಅವರ ಕುಟುಂಬದವರು ಮಾತ್ರವಲ್ಲ ಗ್ರಾಮಸ್ಥರೂ ಮೆಚ್ಚುತ್ತಾರೆ, ಉದಾಹರಿಸುತ್ತಾರೆ. ಇದೇ ರೀತಿ ಕೆಟ್ಟವರನ್ನು ತೆಗಳುತ್ತಾರೆ. ಆಳುಗಳೂ ಅಂತಹ ಮಾಲಿಕರಿಂದ ದೂರವಿರುತ್ತಾರೆ. ಆದ್ದರಿಂದ ಆಳು ನಿಜವಾಗಿಯೂ ಆಲಸಿ, ಕೆಟ್ಟವ, ಕಳ್ಳ, ಸುಳ್ಳುಗಾರನಲ್ಲದಿದ್ದರೆ ಮಾಲಿಕನೂ ಅವನನ್ನು ದಂಡಿಸಬರುವುದಿಲ್ಲ, ನಿಂದಿಸ ಬರುವುದಿಲ್ಲ. ಎಲ್ಲಾ ವಿಧದಿಂದ ಉತ್ತಮರಾದ ಆಳುಗಳನ್ನು ಆಆಳು ಮಕ್ಕಳಿಂದುಱ, ಮಕ್ಕಳಂತೆ ಕುಟುಂಬಕ್ಕೆ ದುಡಿಯುವವರು ಎಂದು ಮೆಚ್ಚಿಕೊಳ್ಳುತ್ತಾರೆ, ಆದರಿಸುತ್ತಾರೆ. ಇಂತಹ ಆಳುಗಳು ಸ್ವಲ್ಪ ಹೆಚ್ಚು ಸಂಬಳ ಕೇಳಿದರೂ ಕೊಟ್ಟು ತಮ್ಮಲ್ಲೇ ಉಳಿಸಿಕೊಳ್ಳುತ್ತಾರೆ, ಅವರ ಉಳಿದ ದಿನಗಳನ್ನು ನೋಡಿ ಬಿಡುತ್ತಾರೆ, ತಾವು ಕೊಟ್ಟ ಹಾಸಿಗೆ ಹೊದಿಕೆಗಳನ್ನು ಆಳುಗಳಿಗೇ ಬಿಡುತ್ತಾರೆ. ಇದೇ ರೀತಿ ಕೆಲವು

ಆಳುಗಳೂ ತಮ್ಮನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಳ್ಳುವ, ದಕ್ಷರಾದ ಭೂಮಾಲಿಕರು ಸ್ವಲ್ಪ ಕಡಿಮೆ ಸಂಬಳ ನೀಡಿದರೂ, ಅವರಿಗೇ ದುಡಿಯ ಬಯಸುತ್ತಾರೆ.

ಇತ್ತೀಚೆಗೆ ಸ್ಥಳೀಯ ಮತ್ತು ಜಾತಿ ರಾಜಕಾರಣದಿಂದಾಗಿ, ಕುಟುಂಬಗಳು ಪೂರ್ವದ ತಮ್ಮ ಸಂಬಂಧಗಳನ್ನು ಮರೆತಿರುವುದರಿಂದ, ತಂದೆ-ಮಕ್ಕಳು ಅಥವಾ ಧಣಿ-ಆಶ್ರಯದಾತರಂತಿದ್ದ ಸಂಬಂಧಗಳು ಬದಲಾಗಿವೆ. ಹೀಗಾಗಿ ಮಾಲಿಕರು ಮತ್ತು ಆಳುಗಳು ಪರಸ್ಪರರಲ್ಲಿ ವ್ಯವಹಾರಿಕ ಬಗೆಯ ಸಂಬಂಧ ಹೊಂದಿದ್ದಾರೆ. ಆದರೂ ಒಬ್ಬರ ಕಡೆಗೆ ಇನ್ನೊಬ್ಬರು ಸಾಂಪ್ರದಾಯಕವಾಗಿ ಬಂದ ಸಂಬಂಧಗಳನ್ನು ಕೆಡಿಸಿಕೊಂಡಿಲ್ಲ. ಇಲ್ಲದಿದ್ದರೆ ಸಾರ್ವಜನಿಕ ನಿಂದನೆಗೆ ಗುರಿಯಾಗಬೇಕಾಗುತ್ತದೆ. ಮಾಲಿಕರು ಅಥವಾ ಆಳುಗಳು ಹೀಗೆ ಯಾರಾದರೂ ಒಬ್ಬರಿಗೊಬ್ಬರು ಬಹಿಷ್ಕಾರ ಹಾಕಬಹುದು. ವಿಷಯ ಈ ಮಟ್ಟ ಮುಟ್ಟಿದರೆ ಸಮುದಾಯದಲ್ಲಿ ಬದುಕುವುದು ಈ ಇಬ್ಬರಿಗೂ ಕಷ್ಟವಾಗುತ್ತದೆ. ಏಕೆಂದರೆ ಪ್ರತಿದಿನ ಆಳು ಕೆಲಸ ಹುಡುಕಿ ಅಥವಾ ಮಾಲಿಕ ಕೆಲಸಗಾರರನ್ನು ಹುಡುಕಿ ಬೇರೆ ಊರುಗಳಿಗೆ ಹೋಗಬರುವುದಿಲ್ಲ. ಅಲ್ಲದೆ ತಮ್ಮ ಜಗಳವನ್ನು ಈ ಮಟ್ಟಕ್ಕೆ ಒಯ್ದದ್ದಕ್ಕೆ ಇವರ ನೈತಿಕ ಮಟ್ಟ ಕುಸಿದಿದೆ ಎಂದು ಸಮುದಾಯದಲ್ಲಿ ನಗೆ ಪಾಟಲಿಗೀಡಾಗುತ್ತಾರೆ.

ಕೆಲವು ಮಾಲಿಕರು ಸದಾ ತಮ್ಮ ಆಳುಗಳ ಬೆನ್ನ ಹಿಂದೆ ನಿಂತು ದುಡಿಸಿಕೊಂಡಿದ್ದನ್ನು, ಅವರ ನಡೆ ನುಡಿಗಳನ್ನು ಬಿಗಿಯಾಗಿ ನಿಯಂತ್ರಿಸಿದ್ದನ್ನು ಇದು ಆಳುಗಳ ಒಳಿತಿಗೆ ಮಾಡಿದ್ದು ಎಂದು ಸಮರ್ಥಿಸಿಕೊಳ್ಳುತ್ತಾರೆ. ಒಂದು ವಿಧದಲ್ಲಿ ಇದು ನಿಜ ಮತ್ತು ಅನೇಕ ಕಾರಣಕ್ಕೆ ಅವಶ್ಯಕ ಕೂಡ. ಒಂದು, ಆಳುಗಳು ಅಥವಾ ಅವರ ಕುಟುಂಬದವರು ನಾವು ನಿಮ್ಮ ಮನೆಯಲ್ಲಿ ದುಡಿಯುತ್ತೇವೆ ಎಂದು ತಾವೇ ಭೂಮಾಲೀಕರ ಕಡೆ ಬಂದಿರುತ್ತಾರೆ. ಹೀಗಾಗಿ ಭೂಮಾಲೀಕರನ್ನು ದೂರಬರುವುದಿಲ್ಲ. ಎರಡನೆಯದಾಗಿ ಅನನುಭವಿಗಳು ಹಾಗೂ ವ್ಯವಸಾಯಗಾರಿ ಹಿನ್ನೆಲೆ ಇಲ್ಲದ ಕೆಲವು ಆಳುಗಳಿಗೆ ತಮ್ಮ ಜೀವನದ ಪ್ರಾರಂಭದ ಈ ವಯಸ್ಸಿನಲ್ಲಿ ಹೀಗೆ ಹಿಂದೆ ಬಿದ್ದು ಕೆಲಸ ಕಲಿಸದಿದ್ದರೆ ಮುಂದೆ ಅವರು "ಕಳ್ಳ" ಬೀಳುವ ಆಳುಗಳಾಗುತ್ತಾರೆ. ನಂತರ ಇವರನ್ನು ಯಾರೂ ಕೆಲಸಕ್ಕೆ ನೇಮಿಸಿಕೊಳ್ಳುವುದಿಲ್ಲ; ನೇಮಿಸಿಕೊಂಡರೂ ಕಡಿಮೆ ಸಂಬಳ ಕೊಡುತ್ತಾರೆ. ಇದರಿಂದ ಆಳುಗಳಿಗೆ ಮತ್ತು ಅವರ ಕುಟುಂಬಕ್ಕೆ ನಷ್ಟವಾಗುತ್ತದೆ. ಆದ್ದರಿಂದ ತರುಣ ಆಳುಗಳ ತಂದೆತಾಯಿಗಳು ತಮ್ಮ ಮಗನಿಗೆ ಸರಿಯಾಗಿ ಕೆಲಸ ಕಲಿಸಿ ಎಂದು ಕೇಳಿಕೊಳ್ಳುತ್ತಾರೆ. ಮೂರನೆಯದಾಗಿ ಮಾಲಿಕ ತನ್ನ ಆಳುಗಳಿಗೆ ಸರಿಯಾಗಿ ಕೆಲಸ ಕಲಿಸದಿದ್ದರೆ ಅಂದರೆ ಅವರನ್ನು ಸರಿಯಾಗಿ ದುಡಿಸಿಕೊಳ್ಳದಿದ್ದರೆ, ಮುಂದೆ ಇವನೇ ಅದಕ್ಷನೆಂದು ಕೆಟ್ಟ ಹೆಸರು ಪಡೆಯಬೇಕಾಗುತ್ತದೆ. ಏಕೆಂದರೆ ನಂತರ ಈ ಆಳುಗಳು ಬೇರೆ ಯಾರದಾದರೂ ಮನೆಯಲ್ಲಿ ದುಡಿಯಲು ಹೋದಾಗ ಅಲ್ಲಿ ಅವನಿಗೆ ಕೆಲಸ ಬರದಿದ್ದರೆ ಅವನೊಟ್ಟಿಗೆ ಅವನು ಹಿಂದೆ ಸಂಬಳ ದುಡಿದ

ಮನೆಯ ಮಾಲಿಕನಿಗೂ ಈ ಅಪವಾದ ಬರುತ್ತದೆ. ಬದಲಿಗೆ ಉತ್ತಮ ಹಾಗೂ ಪರಿಣಿತ ಆಳುಗಳನ್ನು ಹೆಚ್ಚು ಸಂಬಳ ಕೊಟ್ಟಾದರೂ ನೇಮಿಸಿಕೊಳ್ಳುತ್ತಾರೆ. ಹೀಗೆ ತಾಯಿ ತನ್ನ ಮಗಳಿಗೆ, ತಂದೆ ತನ್ನ ಮಗನಿಗೆ ಕೆಲಸ ಕಲಿಸಿದಂತೆ ಮಾಲಿಕನೂ ಹೊಸದಾಗಿ ತನ್ನಲ್ಲಿ ಸಂಬಳ ದುಡಿಯಲು ಬಂದ ಆಳುಗಳನ್ನು ದಂಡಿಸಿ ಕೆಲಸ ಕಲಿಸಿ ಲೋಕಾಪವಾದದಿಂದ ಪಾರಾಗುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಇಂದು ಉತ್ತಮ ಕೆಲಸಗಾರರು, ವ್ಯವಸಾಯಗಾರರು, ಪರಿಣಿತರು ಎಂದು ಹೆಸರಾದವರು ಹಿಂದೆ ಇಂತಹ ದಕ್ಷರಾದ ಭೂಮಾಲಿಕರ ಕೆಳಗೆ ಕೆಲಸ ಕಲಿತವರು. ಇವರು ತಮ್ಮ ಈ ಅಭಿವೃದ್ಧಿಗೆ ಪೂರ್ವದ ತಮ್ಮ ಮಾಲಿಕರನ್ನು ನೆನೆದಂತೆ ಕೆಲಸ ಕಲಿಯದವರು ತಮ್ಮ ದುರಾದೃಷ್ಟವನ್ನು ದೂರುತ್ತಾರೆ.

ಇಂದು ಜೀತದಾಳುಗಳ ವಿಮೋಚನಾ ಮತ್ತು ಗ್ರಾಮೀಣ ಬಡವರ ಋಣ ನಿವಾರಣಾ ಕಾನೂನಿಂದಾಗಿ ವಿಶೇಷವಾಗಿ ಕೂಲಿ, ಸಂಬಳ ದುಡಿಯುವವರು ತಮ್ಮ ಭವಿಷ್ಯದ ಬಗ್ಗೆ ಸ್ವಲ್ಪ ಗೊಂದಲಗೊಂಡಿದ್ದಾರೆ. ಏಕೆಂದರೆ ಕಾನೂನಿನ ಭಯದಿಂದಾಗಿ ಮಾಲಿಕರು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ. ಅಲ್ಲದೆ ಹೊಲಮನೆಯಲ್ಲಿ ದುಡಿಯುವುದು ಬಿಟ್ಟರೆ ಈ ಆಳುಗಳಿಗೆ ಬೇರೆ ಯಾವ ಕೆಲಸವೂ ಬರುವುದಿಲ್ಲ. ಬೇರೆ ಏನಾದರೂ ಮಾಡಲು ಅವರಲ್ಲಿ ಬಂಡವಾಳ ಹಾಗೂ ವ್ಯವಹಾರಿಕ ಪರಿಣತೆ ಕೂಡ ಇರುವುದಿಲ್ಲ. ಜೊತೆಗೆ ಅವರು ಆರ್ಥಿಕವಾಗಿ, ಸಾಮಾಜಿಕವಾಗಿ ಕೆಳಗಿನ ಜಾತಿಗೆ ಸೇರಿದವರು ಮತ್ತು ಭೂರಹಿತರು. ಮಿಗಿಲಾಗಿ ತಮ್ಮ ವಿಮೋಚನಾ ಚಳುವಳಿಯಿಂದಾಗಿ ಭೂಮಾಲಿಕರ ನಂಬಿಕೆ ಕಳೆದುಕೊಂಡವರು.

ಇಂದು ಸರಕಾರ ಬಡವರಿಗೆ, ಭೂರಹಿತರಿಗೆ ಮತ್ತು ಅವರ ಮಕ್ಕಳಿಗೆ ಅನೇಕ ಬಗೆಯ ನೆರವು ಮತ್ತು ರಿಯಾಯಿತಿಗಳನ್ನು ನೀಡುತ್ತಿದೆ. ಆದರೆ ಈ ನೆರವು ಫಲಾನುಭವಿಗಳ ಯಾವ ಖರ್ಚಿಗೂ ಸಾಲದು ಮತ್ತು ತುಂಬಾ ತಡವಾಗಿ ಮುಟ್ಟುತ್ತದೆ. ಮುಟ್ಟಿದರೂ ಪೂರ್ಣಫಲ ತಲುಪದು, ಅಧಿಕಾರಿ, ಪುಢಾರಿಗಳೇ ಅರ್ಧಫಲ ಲಪಟಾಯಿಸುತ್ತಾರೆ. ಸರಕಾರದ ಈ ಕಾನೂನಿನಿಂದ ಭೂಮಾಲಿಕರೂ ತೊಂದರೆಗೀಡಾಗಿದ್ದಾರೆ. ಪೂರ್ವದಲ್ಲಿ ಅವರು ತಮ್ಮ ವ್ಯವಸಾಯ ಕೆಲಸದಲ್ಲಿ ಹೀಗೆ ವರ್ಷದುದ್ದಕ್ಕೂ ಸೋವಿ ದರದಲ್ಲಿ ಮತ್ತು ಸ್ಥಳೀಯವಾಗಿ ಸಿಗುತ್ತಿದ್ದ ಆಳುಗಳನ್ನು ನಂಬಿಕೊಂಡಿದ್ದರು. ಇವರಿದ್ದಾರೆಂದು ಹೆಚ್ಚು ಹೆಚ್ಚು ಭೂಮಿ, ತೋಟ ಮಾಡಿದ್ದರು ಮತ್ತು ತಮ್ಮ ಮಕ್ಕಳನ್ನು ಶಾಲೆ-ಕಾಲೇಜು ಕಲಿಯಲು ಮತ್ತು ನೌಕರಿ ಮಾಡಲು ಕಳುಹಿಸುತ್ತಿದ್ದರು.

ಇಂದು ಜೀತದ ಆಳುಗಳು ಎಂಬುವವರಿಲ್ಲ, ವಾರ್ಷಿಕ ಮತ್ತು ತಿಂಗಳು ಲೆಕ್ಕದಲ್ಲಿ ದುಡಿಯಲೂ ಆಳುಗಳು ಸಿಗುವುದಿಲ್ಲ. ದಿನಗೂಲಿ ಆಳುಗಳಿಂದ ರೈತರಿಗೆ ಯಾವ ಅನುಕೂಲತೆಯೂ ಇಲ್ಲ. ರೈತರಿಗೆ ಹಗಲು ರಾತ್ರಿ, ಹೊಲಕಣಗಳಲ್ಲಿ ನಂಬಿಕೆಯಿಂದ

ದುಡಿಯಲು ಪರಿಣಿತರಾದ, ವಾರ್ಷಿಕ ಒಡಂಬಡಿಕೆಯ ಮೇಲೆ ದುಡಿಯುವ ಆಳುಗಳು ಬೇಕು. ಇವರು ಸಿಗದಾದಾಗ ನಾಲ್ಕಾರು ವರ್ಷ ಕಷ್ಟ ಅನುಭವಿಸಿ, ಈಗ ಹೆಚ್ಚು ದುಡಿಯುವ ಕೈಗಳನ್ನು ಬಯಸದ ತೆಂಗು, ಅಡಿಕೆ ತೋಟ ಮಾಡಲು ಪ್ರಾರಂಭಿಸಿದ್ದಾರೆ. ಕೆಲವರು ಟ್ರಾಕ್ಟರ್ ಕೊಂಡರೆ ಉಳಿದವರು ತಮ್ಮ ಹೊಲಗಳನ್ನು ಮಿಟ್ಟಾ, ಗೇಣಿ, ಲಾವಣಿ, ಗುತ್ತಿಗೆ ಕೊಟ್ಟಿದ್ದಾರೆ. ಇನ್ನೂ ಕೆಲವರು ತಮ್ಮ ಭೂಮಿಯನ್ನು ಪಾಳು ಬಿಟ್ಟಿದ್ದಾರೆ ಅಥವಾ ಸಿಕ್ಕಷ್ಟು ಬೆಲೆಗೆ ಮಾರಲು ಪ್ರಾರಂಭಿಸಿದ್ದಾರೆ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಅವಕಾಶಗಳು ಕಡಿಮೆಯಾಗಿ ಹೊರವಲಸೆ, ಸೂಳೆಗಾರಿಕೆ, ಕುಡಿತ ಮುಂತಾದ ಸಮಸ್ಯೆಗಳು ಪ್ರಾರಂಭವಾಗಿವೆ.

ಅಡಿ ಟಿಪ್ಪಣಿಗಳು

೧ ರೈತನಾದ ಆಯದ ಕುಳ ರಾಶಿಯನ್ನು ವಿಧಿವತ್ತಾಗಿ ಪೂಜೆ ಮಾಡಿ ರಾಶಿ ಹಬ್ಬ ಆಚರಿಸಿ ಆಯಗಾರರಿಗೆ, ಬಡಬಗ್ಗರಿಗೆ ಅನ್ನ ಸಂತರ್ಪಣೆ ಮಾಡಬೇಕು. ನಂತರ ರಾಶಿಯನ್ನು ಒಡೆದು ಗುಡಿಮಠಗಳಿಗೆ, ಪೂಜಾರಿ-ಪುರೋಹಿತರಿಗೆ ಮತ್ತು ಇತರೆ ಆಯಗಾರರಿಗೆ ಅವರವರ ಬಾಬ್ತುಗಳನ್ನು ಕೊಡಬೇಕು. ಉಳಿದುದನ್ನು ಮನೆಗೆ ಸಾಗಿಸಬೇಕು. ಈ ಧಾನ್ಯವನ್ನು ಚೀಲ ಅಥವಾ ಬುಟ್ಟಿಗಳಿಗೆ ತುಂಬುವಾಗ ಕೈ ಅಥವಾ ಬರಲು ಹಚ್ಚದೆ ಮೊರದಿಂದ ತೆಗೆದುಕೊಳ್ಳಬೇಕು. ತಳದಲ್ಲಿ ಹೀಗೆ ಉಳಿದದ್ದು ತಳಗಾಳು. ರಾಶಿ ದೊಡ್ಡದಿದ್ದರೆ ಇವು ಹೆಚ್ಚು ಸಿಗುತ್ತವೆ.

೨ ಹೊರಗಿಂದ ಬಂದ ಆಂಗ್ಲರು ಕೇವಲ ವಾಣಿಜ್ಯ ಆಸಕ್ತಿ ಹೊಂದಿದ್ದರಿಂದ ಸ್ಥಳೀಯ ಯಾವೊಂದು ಸಾಮಾಜಿಕ ಹಾಗೂ ಧಾರ್ಮಿಕ ಸಂಬಂಧಗಳಲ್ಲಿ ನೇರವಾಗಿ ಕೈ ಹಾಕಲಿಲ್ಲ. ಹೀಗಾಗಿ ತಾವು ಕೆಲಸಕ್ಕೆ ತೆಗೆದುಕೊಂಡ ಕೂಲಿಕಾರರಿಗೆ ಅವರು ಮಾಡಿದ ಶ್ರಮವನ್ನು ಗಣನೆಗೆ ತೆಗೆದುಕೊಂಡು ಕೂಲಿ, ಸಂಭಾವನೆ, ನೀಡಿ ಕೈತೊಳೆದುಕೊಂಡರು; ಅವರ ಸಾಮಾಜಿಕ, ಧಾರ್ಮಿಕ ವಿಚಾರಗಳ ಜವಾಬ್ದಾರಿ ತೆಗೆದುಕೊಳ್ಳಲಿಲ್ಲ. ಜೊತೆಗೆ ಭಾರತದ ಇತಿಹಾಸದಲ್ಲಿ ಬಹುಶಃ ಮೊದಲಬಾರಿಗೆ ಅವರಿಗೆ ಸಂಭಾವನೆಯನ್ನು ನಗದು ರೂಪದಲ್ಲಿ ಕೊಟ್ಟರು. ಆಂಗ್ಲರು ತಾವು ಬೆಳೆಸುತ್ತಿದ್ದ ವಾಣಿಜ್ಯ ಬೆಳೆಗಳ ಹೊಲ-ತೋಟಗಳಲ್ಲಿ ಮತ್ತು ಕಾಡು ಕಡಿಯುವಲ್ಲಿ, ನೆಲ ಅಗಿದು ರೈಲ್ವೇ ಹಾಗೂ ಮೋಟಾರು ರಸ್ತೆ ಮಾಡುವಲ್ಲಿ, ಗಣಿಗಳಿಂದ ಅದಿರು ತೆಗೆಯುವಲ್ಲಿ ಹಾಗೂ ಈ ಸರಕುಗಳನ್ನು ರೈಲ್ವೇ ನಿಲ್ದಾಣ ಹಾಗೂ ಹಡಗು ಕಟ್ಟೆಗೆ ಸಾಗಿಸುವಲ್ಲಿ, ಈ ಸ್ಥಳೀಯರನ್ನು ವರ್ಷದಲ್ಲಿ ಕೆಲವು

ವಾರ ಅಥವಾ ತಿಂಗಳು ನೇಮಿಸಿಕೊಂಡರು. ಅವರಿಗೂ ನಗದು ರೂಪದಲ್ಲಿ ಸಂಭಾವನೆ ನೀಡಿದರು.

[೩]ಇದು ಪೂರ್ವದ ಪದ್ಧತಿ. ಇಂದು ಆಳಾಗಿ ದುಡಿಸಿಕೊಳ್ಳುವುದು ಕಾನೂನು ಬಾಹಿರವಾಗಿರುವುದರಿಂದ ಆಳು ಪತ್ರದಲ್ಲಿ ತಾನು ಹಣ ಪಡೆದ ಉದ್ದೇಶ ಹೇಳುವಾಗ ಸಂಬಳ ಇದ್ದು ತೀರಿಸುತ್ತೇನೆ - ಎಂದು ಕಾಣಿಸದೆ ಈ ಹಣವನ್ನು ಮನೆತನದ ಅಡಚಣೆಗೆ ಪಡೆದಿರುತ್ತೇನೆ ಮತ್ತು ಹಣ ಮತ್ತು ಬಡ್ಡಿಯನ್ನು ನಗದಾಗಿ ವಾಪಾಸು ಕೊಡುತ್ತೇನೆ - ಎಂದು ಕಾಣಿಸುತ್ತಾರೆ.

[೪]ಇತ್ತೀಚೆಗೆ ಆಳುಗಳಿಗೆ ಊಟ ಉಪಚಾರ ನೀಡುವಲ್ಲಿ ಭೇದ ಪ್ರಾರಂಭವಾಗಿದೆ. ಮಾಲಿಕರು ತಾವು ಬಿಸಿ ಹಾಗೂ ಉತ್ತಮವಾದ ಆಹಾರ ಉಂಡರೆ ಆಳುಗಳಿಗೆ ಬೇರೆ ಬಗೆಯ ಊಟ ಹಾಕುವುದು ಪ್ರಾರಂಭಿಸಿದ್ದಾರೆ. ಜೊತೆಗೆ ಇಂದು ವ್ಯವಸಾಯಗಾರರ ಕುಟುಂಬದ ಕೆಲವು ಹೆಣ್ಣು ಗಂಡುಗಳು, ಸಂಪೂರ್ಣವಾಗಿ ವ್ಯವಸಾಯ ಕೆಲಸದಿಂದ ದೂರ ಉಳಿದಿದ್ದಾರೆ. ಕೆಲವರು ನೌಕರಿಯಲ್ಲಿದ್ದರೆ ಅವರ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಹೀಗಾಗಿ ಮನೆ ಮಂದಿ ಮತ್ತು ಕೆಲಸಗಾರರ ಊಟದ ವೇಳೆಯಲ್ಲಿ ಭಿನ್ನತೆ ಬಂದಿದೆ. ಇದರಂತೆ ಅಡಿಗೆಯೂ ಕೂಡ. ಮನೆಯವರು ಇಡ್ಲಿ, ದೋಸೆ, ವಡೆಯಂತಹ ತಿಂಡಿಯ ಮೇಲೆ ಬೆಳಗಿನ ಆಹಾರ ಮುಗಿಸಿದರೆ ವ್ಯವಸಾಯ ಕೆಲಸದಂತಹ ಗಟ್ಟಿ ಕೆಲಸ ಮಾಡುವ ಆಳುಗಳಿಗೆ ರಾಗಿ ಅಥವಾ ಜೋಳದ ರೊಟ್ಟಿ ಅಥವಾ ಮುದ್ದೆ ಬೇಕು. ಈಗ ಮಾಲಿಕರಿಂದ ಇಂತಹ ಊಟ ಸಿಗುವುದಿಲ್ಲವಾದ್ದರಿಂದ ಕೆಲವು ಆಳುಗಳು ಒಣಸಂಬಳದ ಆಧಾರದ ಮೇಲೆ ದುಡಿಯಲು ಬಯಸುತ್ತಾರೆ.

[೫]ತಮ್ಮ ಆಳುಮಕ್ಕಳಿಗೆ ಈ ಅನುಕೂಲತೆ ಒದಗಿಸದಿದ್ದರೆ, ಹೊತ್ತುಗೊತ್ತು ಇಲ್ಲದೆ ದುಡಿಸಿಕೊಂಡರೆ ಆಳುಗಳು ಮತ್ತು ಅವರ ಕುಟುಂಬದವರು ಅಸಮಾಧಾನಪಟ್ಟುಕೊಳ್ಳುತ್ತಾರೆ. ಜೊತೆಗೆ ಭೂಮಾಲಿಕರಿಗೆ ಸಮುದಾಯದಲ್ಲಿ ಅಪವಾದ ಬರುತ್ತದೆ. ಹೀಗಾಗಿ ಬರುವ ವರ್ಷಗಳಲ್ಲಿ ಉತ್ತಮ ಆಳುಗಳು ಯಾರೂ ಇವರಲ್ಲಿ ಸಂಬಳ ದುಡಿಯಲು ಒಪ್ಪದೇ ಹೋಗಬಹುದು.

ಗ್ರಂಥಋಣ

1. Ambekar, J.B. "Is Jeeta a form of slavary or contract labour." **Man in India**. 1974:54.
2. Bailey, P.G. **Caste and the Economic Fronties**. Oxford University Press, Bombay, 1958.
3. Bateille, Andre. **Caste, Class and Power : Changing patterns of stratification in a Tanjor village**. Oxford University Press, Bombay, 1969.
4. Beals, Alan. R. **Gopalpur : South Indian Village**. Horf, Princart and Klinston, New York, 1962.
5. Bedon Powell, B.H. **Indian Village Communities**, Longmons-Green and Com., London, 1896.
6. Darling, M.L. **The Punjab peasant in prospirity and debt**. Oxford University Press, London, 1925.
7. Desai, A.R. (ed) **Rural Sociology**. Asia, Bombay, 1951.
8. Dube, S.C. **India's changing village: Human factors in Community Development**. Routledge and Kegan Paul, London, 1958.
9. Elwin, Verrier. **The Religion of an Indian Tribe**. Oxford University Press, 1955.
10. Epistein, T.S. **Economic development and social change in South India**. Oxford University Press, Bombay, 1962.

11. Gurumurthy, K.G. **Kallapura : A South Indian Village**, Karnataka University Press, Dharwad, 1976.

12. Harper, Edward H. "Social consequences of an unsucessful low caste movement". In, Silverberg (Ed) **Social mobility in the caste system in India**. 1968.

13. Huttan, J.H. **Caste in India**. Oxford University Press, London. 1942.

14. Ishwaran, K. **Tradition and Economy in Village India**, Allied, Bombay, 1966.

15. .... **Shivapur : a South Indian Village**. E.J.Brill and Com. Leidan, 1967.

16. Lewis, Oscar. **Village life in Northern India: Studies in a Delhi Village**, university of Illinois, Illinois, 1958.

17. MacKin, Marriott. **Village India : Studies in Little Community**. Asia, Bombay, 1961.

18. Mayer, A.C. **Caste and Leadership in Central India** : Village and its region. Routledge, London, 1960.

19. Pandian, T.B. **Indian Village Folk : Their works and ways**, Elliot Stock, London, 1898.

20. Parvathamma, C. **Politics and Religion** (A study of histori cal intervention between socio-political relationships in a Mysore village), Sterling Publishers, New Delhi, 1971.

21. Risley, H. **Tribes and Castes of Bengal : Ethnographic Glossary.** Govt. Press, Calcuta. 1891.

22. Srinivas, M.N. **Caste in modern India and other essays**, Asia, Bombay, 1962.

23. Thurston, E. **Castes and Tribes of South India**, Government Press, Madras, 1909.

24. Tippasetty, Mahesh. "Jeeta-an analysis". **Socio-Economic Justice. - III**

25. Vidyarthi, L.P. **Conflict and Cohision in India,** Concept, New Delhi, 1967.

26. Wiser, W.H. **Hindu Jajmani System** : Socio-Economic system inter-relating members of a Hindu village community in service. Lucknow Publishing House, Lucknow, 1933.

★★★★

ಡಾ. ಕೆ. ಜಿ. ಗುರುಮೂರ್ತಿ



ಡಾ.ಕೆ.ಜಿ ಗುರುಮೂರ್ತಿಯವರು ನವೆಂಬರ್ ೧ನೇ ತಾರೀಖು ೧೯೩೮ ರಂದು ಕಂದಗಲ್ಲು ಗ್ರಾಮದ ಪಟೇಲರ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದರು, ಬಿ.ಎ. ಪದವಿಯನ್ನು ಶಿವಮೊಗ್ಗಾದ ಸಹ್ಯಾದ್ರಿ ಕಾಲೇಜಿನಲ್ಲಿ ಓದಿದರು. ಮುಂದೆ ೧೯೬೧ರಲ್ಲಿ ಎಂ.ಎ.ಪದವಿಗೆ ಓದಲು ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡಕ್ಕೆ ತೆರಳಿದರು.


೧೯೬೩ರಲ್ಲಿ ಯೋಜನಾ ಆಯೋಗದ ಪ್ರಾಜೆಕ್ಟ್ ಒಂದರಲ್ಲಿ ಕೆಲಸ ಪಡೆದರು.೧೯೬೪ ರಲ್ಲಿ ಉನ್ನತ ವಿದ್ಯಾಭ್ಯಾಸಕ್ಕೆ ಫಿಲಪೈನ್ಸ್ ದೇಶಕ್ಕೆ ಹೋಗಿ ಅಲ್ಲಿಂದ ಮತ್ತೊಂದು ಎಂ.ಎ. ಪದವಿ ಪಡೆದರು. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿ, ೧೯೭೦ರಲ್ಲಿ ಕೆನಡಾದ ವಿಂಡ್‌ಸರ್ ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ., ಪದವಿ ಪಡೆದರು. ನಂತರ ರೀಡರ್, ಪ್ರೊಫೆಸರ್ ಮತ್ತು ವಿಭಾಗದ ಮುಖ್ಯಸ್ಥರಾಗಿ ೧೯೯೮ರಲ್ಲಿ ೩೨ ವರ್ಷಗಳ ಸುದೀರ್ಘ ಸೇವೆಯ ನಂತರ ನಿವೃತ್ತರಾದರು.

ಡಾ. ಗುರುಮೂರ್ತಿಯವರು ತಾವೇ ಬರೆದ ೧೩ ಮತ್ತು ತಮ್ಮ ವಿದ್ಯಾಗುರುಗಳಾದ ಡಾ. ಈಶ್ವರನ್ನರ ಹೆಸರಿನಲ್ಲಿ ಒಂದು ಅಂತಾರಾಷ್ಟ್ರೀಯ ಮಟ್ಟದ ಪುಸ್ತಕ ಮಾಲೆ ಸ್ಥಾಪಿಸಿ, ಅದರ ಮುಖ್ಯ ಸಂಪಾದಕರಾಗಿ ಇನ್ನೂ ೧೭ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರ ಕೆಲವು ಪುಸ್ತಕಗಳು ಪಠ್ಯ ಪುಸ್ತಕಗಳಾಗಿ ಬಳಕೆಯಾಗುತ್ತಿವೆ. ೧೯೯೬ರಲ್ಲಿ ಇವರ ಒಂದು ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿದೆ.

ಜನಪದ ಸಮಾಜ, ಸಂಸ್ಕೃತಿ, ಮಹಿಳೆ, ವೃದ್ಧರು. ಟಿಬೇಟಿನ ನಿರಾಶ್ರಿತರು, ದೇವದಾಸಿ ಪದ್ಧತಿ, ತೀರ್ಥಕ್ಷೇತ್ರಗಳ ಅಧ್ಯಯನ – ಇವು ಗುರುಮೂರ್ತಿಯವರ ಸಂಶೋಧನಾ ಅಭಿರುಚಿಗಳು. ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್, ಅಕ್ಯಾಡಮಿಕ್ ಕೌನ್ಸಿಲ್ ಮತ್ತು ಸಿಂಡಿಕೇಟಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಡಾ. ಗುರುಮೂರ್ತಿಯವರು ಕನ್ನಡ ಮತ್ತು ಆಂಗ್ಲಭಾಷೆಗಳೆರಡರಲ್ಲೂ ಉತ್ತಮವಾಗಿ ಕೃತಿಗಳನ್ನು ರಚಿಸಬಲ್ಲರು.

ಬಿ. ಟಿ. ಲಕ್ಷ್ಮಣ್



ಬೆಂಗಳೂರು ತಿಮ್ಮಯ್ಯ ಲಕ್ಷ್ಮಣ್ ಅವರು ೧೯೩೫ರಲ್ಲಿ ಗ್ರಾಮೀಣ ಕುಟುಂಬವೊಂದರಲ್ಲಿ ಜನಿಸಿದವರು. ೧೯೫೮ರಲ್ಲಿ ಸಿವಿಲ್ ಇಂಜಿನಿಯರಿಂಗ್ ಪದವಿ ಹಾಗೂ ಮುಂದೆ ರೂರ್ಕಿ ವಿಶ್ವವಿದ್ಯಾಲಯದಿಂದ ಎಂ.ಇ.ಪದವಿ ಪಡೆದು ನಂತರ ಅಮೇರಿಕಾ ದೇಶಕ್ಕೆ ತೆರಳಿ ಡೆಲೆವರ್ ವಿಶ್ವವಿದ್ಯಾಲಯದಲ್ಲಿ ಮತ್ತೊಂದು ಎಂ.ಎಸ್.ಪದವಿ ಪಡೆದು ಡೆಲೆವರನ್‌ನ 'ಆರ್ಟೀಸಿಯನ್ ವಾಟರ್ ಕಂಪನಿ'ಯಲ್ಲಿ ಇಪ್ಪತ್ತೆರಡು ವರ್ಷಗಳ ಕಾಲ ಮುಖ್ಯ ಇಂಜಿನಿಯರ್ ಆಗಿ ಸಮರ್ಪಕ ಸೇವೆ ಸಲ್ಲಿಸಿದರು.

ಗ್ರಾಮೀಣ ಹಿನ್ನೆಲೆಯಿಂದ ಬಂದ ಲಕ್ಷ್ಮಣ್ ಅವರು ಗ್ರಾಮೀಣ ಜನತೆಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸಿಕೊಡುವ ಸಲುವಾಗಿ 'ಬಿ.ಟಿ.ಎಲ್. ಫೌಂಡೇಶನ್ ಫಾರ್ ಇಂಟರ್ ನ್ಯಾಷನಲ್ ಸರ್ವೀಸಸ್' ಮತ್ತು 'ಬಿ.ಟಿ.ಎಲ್. ಎಜ್ಯುಕೇಷನಲ್ ಟ್ರಸ್ಟ್ ಫಾರ್ ರೂರಲ್ ಡೆವಲಪ್‌ಮೆಂಟ್' ಎಂಬ ಸಂಸ್ಥೆಗಳನ್ನು ಭಾರತ ಹಾಗೂ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಸ್ಥಾಪಿಸುವುದರ ಮೂಲಕ ಆರೋಗ್ಯ, ಶಿಕ್ಷಣ ಹಾಗೂ ಸಮಾಜಸೇವಾ ಕ್ಷೇತ್ರಗಳಲ್ಲಿ ಅಭೂತಪೂರ್ವ ಕಾರ್ಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಮೈಸೂರಿನ ಕೆಸರೆ, ಬೆಂಗಳೂರಿನ ಬನಶಂಕರಿ ಹಾಗೂ ಬೊಮ್ಮಸಂದ್ರ ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಸುಮಾರು ಹದಿನೈದು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಶಿಕ್ಷಣಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಗ್ರಾಮೀಣ ಬಡವಿದ್ಯಾರ್ಥಿಗಳಿಗಾಗಿ ಕರ್ನಾಟಕ ಹಾಗೂ ಬೇರೆ ಬೇರೆ ವಿಶ್ವವಿದ್ಯಾಲಯಗಳ ಕಾಲೇಜುಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗಾಗಿ ದತ್ತಿನಿಧಿಗಳನ್ನು ಸ್ಥಾಪಿಸಿ ವಿದ್ಯಾರ್ಥಿ ವೇತನಗಳನ್ನು ನೀಡುತ್ತಿದ್ದಾರೆ.

ಈ ಎಲ್ಲಾ ಕೆಲಸಗಳಿಗಾಗಿ ಪ್ರಾರಂಭದಿಂದಲೂ ತಮ್ಮ ದುಡಿಮೆಯ ಅರ್ಧದಷ್ಟು ಹಣವನ್ನು ವಿನಿಯೋಗಿಸುವುದರ ಮೂಲಕ ಇದುವರೆಗೂ ೪.೫೦ ಕೋಟಿ ರೂಗಳಷ್ಟು ಕೊಡುಗೆ ನೀಡಿದ್ದಾರೆ.

ಇತ್ತೀಚೆಗೆ ಬಿ.ಟಿ.ಎಲ್. ಶಿಕ್ಷಣ ಸಂಸ್ಥೆಯ ಮೂಲಕ ಆನೇಕಲ್ ಹಾಗೂ ಮಾಗಡಿ ತಾಲ್ಲೂಕಿನ ಹತ್ತು ಗ್ರಾಮಗಳ ದತ್ತು ತೆಗೆದುಕೊಳ್ಳುವುದರ ಮೂಲಕ ಅವುಗಳ ಸರ್ವಾಂಗೀಣ ಅಭಿವೃದ್ಧಿಗೆ ಅನೇಕ ರಚನಾತ್ಮಕ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಶ್ರೀ ಲಕ್ಷ್ಮಣ್ ಅವರಿಗೆ ರಾಜ್ಯ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಗೌರವ ಪುರಸ್ಕಾರ ಹಾಗೂ ಪ್ರಶಸ್ತಿಗಳು ಸಂದಿವೆ. 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಅಮೇರಿಕಾದ ಜಫರ್‌ಸನ್ ಪ್ರಶಸ್ತಿ, ಡೆಲೆವರನ್‌ನ ವರ್ಷದ ಇಂಜಿನಿಯರ್ ಪ್ರಶಸ್ತಿ, ರೋಟರಿ ಇಂಟರ್‌ನ್ಯಾಷನಲ್‌ನ ಅತ್ಯುನ್ನತ ಪ್ರಶಸ್ತಿಯಾದ 'ಸರ್ವೀಸ್ ಎಬವ್ ಸೆಲ್ಫ್ ಅವಾರ್ಡ್' – ಇವು ಪ್ರಮುಖವಾದವುಗಳು.